ಬಿಸಿಲ
ಡಿಸೆಂಬರ್ 1998 ರೂ. 10
■ ವಾಣಿಜ್ಯ ■ ವಿಕಾಸ ■ ಮಾಹಿತಿ ■ ಸಂಪರ್ಕ
ಮಾಸಪತ್ರಿಕೆ



ನಿಮ್ಮ ಊರಿಗೂ ಬಂದಿದೆ

ಪಬ್!



ಫ್ಯಾಷನ್ ಕೋರ್ಸ್

SSLC ಪ್ರತಿಭಾ ಪರೀಕ್ಷೆ

ಒಂದು ಕೆಟ್ಟ ಸುದ್ದಿ!

'ಮನೆ' ಮಾಸಪತ್ರಿಕೆಯ ಬಿಡುಗಡೆ ಯಾವಾಗ
ಎಂದು ಕೇಳುತ್ತಿದ್ದ ಸಾವಿರಾರು ಓದುಗರಿಗೆ
ಒಂದು ಕೆಟ್ಟ ಸುದ್ದಿ:

'ಮನೆ' ಮಾಸಪತ್ರಿಕೆ ಹುಟ್ಟುವ ಮುಂಚೆಯೇ ಸತ್ತುಹೋಯ್ತು!

ಹಾಗೆಯೇ ನಿಮ್ಮೆಲ್ಲರಿಗೆ ಒಂದು ಸಂತಸದ ಸಮಾಚಾರ:
ಶೀಘ್ರದಲ್ಲೇ ಬಿಡುಗಡೆಯಾಗಲಿದೆ

'ಮನೆ' ವಾರಪತ್ರಿಕೆ

*ಹೌದು! ಬಹುಕಾಲ ನಿಮ್ಮೆಲ್ಲರ ಕುತೂಹಲ ಕೆರಳಿಸಿದ್ದ **'ಮನೆ'** ಮಾಸಪತ್ರಿಕೆಯ ಬದಲು **'ಮನೆ'** ವಾರಪತ್ರಿಕೆಯನ್ನು ನಿಮ್ಮ ಕೈಗಿರಿಸಲು ನಿರ್ಧರಿಸಿದ್ದೇವೆ. ಹೊಚ್ಚ ಹೊಸ ಮಾದರಿಯ ಈ ಪತ್ರಿಕೆ ಹೇಗಿರುತ್ತದೆ ಎಂದು ತಿಳಿಯುವ ತವಕ ನಿಮಗಿರುವುದು ಸಹಜ. ಆದರೆ ಅದರ ಸ್ವರೂಪವನ್ನು ಹೋಲಿಸಿ ಹೇಳಲು ಕನ್ನಡದಲ್ಲಿ ಅಂಥ ಇನ್ನೊಂದು ಪತ್ರಿಕೆಯೇ ಇಲ್ಲ! ಈ ಹಿಂದೆಯೇ ನಿಗದಿಪಡಿಸಿದಂತೆ ಕೇವಲ 2 ರೂಪಾಯಿಗೆ **'ಮನೆ'** ನಿಮ್ಮದಾಗಲಿದೆ. ಅಲ್ಲದೆ **'ಬದುಕು'** ಕೊಂಡವರಿಗೆ ಆ ವಾರದ **'ಮನೆ'** ಉಚಿತ.*

'ಮನೆ' ಬಿಡುಗಡೆ ದಿನಾಂಕಕ್ಕಾಗಿ
ಮುಂದಿನ ತಿಂಗಳ **'ಬದುಕು'** ನೋಡಿ.

ಬಿಸಿಲ ಬದುಕು

ಡಿಸೆಂಬರ್ 1998 ಸಂಪುಟ 2 ಸಂಚಿಕೆ 6

ಸಂಪಾದಕ
ಚಂದ್ರಕಾಂತ ವಡ್ಡು

ಉಪ ಸಂಪಾದಕರು
ಅರವಿಂದ ನಾವಡ, ರವಿಶಂಕರ್
ಎ.ಎಂ.ಸುರೇಶ್

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ಹೆಚ್.ಎಂ.ಪಿ. ಆರಾಧ್ಯ

ಅಕ್ಷರ ಜೋಡಣೆ
ನರೇಂದ್ರ ಪಾಟೀಲ, ಕೋಕಿಲ

ಮುಖಪುಟ ವಿನ್ಯಾಸ
ಹರಿಹರನ್

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ : 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager : 9622 738638 Printed at M.N.S.Enterprises, Bhattar ahalli, Old Madras Road, Bangalore - 49 Editor : Chandrakanta Vaddu

ಇಲ್ಲ, ಬೇಕು, ಬೇಡ.

ವರ್ಷಾಂತ್ಯದಲ್ಲಿ ನಿಂತು ಹಿಂತಿರುಗಿ ನೋಡಿದರೆ ಕಣ್ಣೆದುರು ಸುಳಿಯುವ ದೃಶ್ಯಾವಳಿ ಎಂತಹದು? ಈ ದಿಟ್ಟಿಸುವಿಕೆ ವೈಯಕ್ತಿಕ, ಸಾರ್ವತ್ರಿಕ ಹೀಗೆ ಎರಡು ನೆಲೆಗಳಲ್ಲಿ ನಡೆಯಬೇಕಾದುದು. ಕಳೆದ ಜನವರಿಯಿಂದ ಇಲ್ಲಿಯವರೆಗೆ ವೈಯಕ್ತಿಕ ಜೀವನ ಹೇಗೆ ಚಲಿಸಿತು ಏನೆಲ್ಲ ಏರಿಳಿತ ಕಂಡಿತು? ಹಾಗೆಯೇ ನಮ್ಮ ಸುತ್ತಲಿನ ಜಗತ್ತು ಹೆಜ್ಜೆ ಹಾಕಿದ ರೀತಿ ಹೇಗಿತ್ತು, ನೆನಪಿನ ಭಿತ್ತಿಯಲ್ಲಿ ಅಚ್ಚೊತ್ತಿದ ಘಟನೆಗಳಾವುವು? ಇಂಥ ಪ್ರಶ್ನೆಗಳನ್ನೆತ್ತಿಕೊಂಡು ಉತ್ತರ ಹುಡುಕಲು ಪ್ರಯತ್ನಿಸುವುದರಿಂದ ಹಲವು ಪ್ರಯೋಜನಗಳುಂಟು. ನಾಳಿನ ದಿನಗಳಲ್ಲಿ ನಾವು ಕಟ್ಟಲಿರುವ ಬದುಕಿಗೆ ನಿನ್ನೆಯ ಅನುಭವಗಳು ಗಟ್ಟಿ ಇಟ್ಟಿಗೆಗಳಾಗಿ ಒದಗಿಬರಲಿವೆ.

ಹಲವರ ಜೀವನದ ರೈಲು ಉದ್ದನೆ ಹಳಿಗುಂಟ ಸುಮ್ಮನೆ ಏಕತಾನವಾಗಿ ಹರಿದು ಬಂದಿರುತ್ತದೆ. ಅದು ಯಾವ ನಿಲ್ದಾಣದಲ್ಲೂ ನಿಲ್ಲದೆ, ವೈವಿಧ್ಯಮಯ ಅನುಭವಗಳನ್ನು ಹತ್ತಿಸಿಕೊಳ್ಳದೆ, ಪ್ರಯಾಣ ಮುಗಿಸಿದ ಸಂಗತಿಗಳನ್ನು ಅಲ್ಲಲ್ಲಿ ಇಳಿಸದೆ ಇದ್ದಂತೆಯೇ ಇದ್ದುಬಿಡುವುದನ್ನು ಗಮನಿಸಬಹುದು. ಇದರರ್ಥ, ಕಾಲ ತನ್ನ ಪಾಡಿಗೆ ತಾನು ನಡೆಯುತ್ತಿರುತ್ತದೆ; ಬದುಕು ಮಾತ್ರ ನೆಲ ಸ್ಪರ್ಶಿಸದ ಗಾಲಿಯಂತೆ ತಿರುಗುತ್ತಿರುತ್ತದೆ. ಇಂಥ ಚಕ್ರ ಎಷ್ಟು ತಿರುಗಿದರೇನು? ಒಂದು ಅಂಗುಲವೂ ಚಲಿಸದು.

ಲಂಗರು ಹಾಕಿದ ಹಡಗು ಸಮುದ್ರ ದಂಡೆಯಲ್ಲಿ ಸುರಕ್ಷಿತವಾಗಿರುತ್ತದೆ ಎಂಬುದು ನಿಜ. ಆದರೆ ಹಡಗು ನಿರ್ಮಿಸುವ ಉದ್ದೇಶ ಲಂಗರು ಹಾಕಿ ನಿಲ್ಲಿಸುವುದಲ್ಲ!

ಇದನ್ನೇ ವಾಣಿಜ್ಯ ವಲಯದಲ್ಲಿ 'ರಿಸ್ಕ್' ಎನ್ನುತ್ತಾರೆ. ಬೆಳೆಯಬೇಕೆನ್ನುವವರು ಈ 'ರಿಸ್ಕ್' ತೆಗೆದುಕೊಳ್ಳುವುದು ಅನಿವಾರ್ಯ. ಹಾಗೆಂದು ಬದುಕನ್ನೇ ಪಣಕ್ಕೊಡ್ಡಿ ಜೂಜಾಡಬೇಕೆಂದು ಭಾವಿಸಬೇಕಿಲ್ಲ. ಒಬ್ಬ ವ್ಯಕ್ತಿ ತೆಗೆದುಕೊಳ್ಳುವ 'ರಿಸ್ಕ್'ನ ಗಾತ್ರವನ್ನು ಸ್ವತಃ ಆತನೇ ನಿರ್ಧರಿಸಬಲ್ಲ. ಅದು ವ್ಯಕ್ತಿಯ ಅಂತರಂಗದ ಕನಸು ಮತ್ತು ಸುತ್ತಲಿನ ವಾಸ್ತವದ ಕಲಬೆರಕೆ.

ಉರುಳಿದ ವರ್ಷವನ್ನು ವೈಯಕ್ತಿಕ ನೆಲೆಯಾಚೆಗೆ ನಿಂತು ಅವಲೋಕಿಸಿದರೆ..... ಕೇಂದ್ರ ಸರ್ಕಾರದ ಚುಕ್ಕಾಣಿ ಹಿಡಿದ ಬಿಜೆಪಿ ಜನರಲ್ಲಿ ಭ್ರಮನಿರಸನ ಉಂಟು ಮಾಡಿದೆ. ಬಹುಶಃ ಇಷ್ಟೊಂದು ಅಲ್ಪ ಕಾಲದಲ್ಲಿ ಈ ಮಟ್ಟದ ಕೆಟ್ಟ ಹೆಸರು ಪಡೆದ ಸರ್ಕಾರ ಮತ್ತೊಂದು ಇರಲಾರದು. ಇಲ್ಲಿ 'ದಳ' ಸರ್ಕಾರ 'ಜಿಂದಲ್ ಆಸ್ಪತ್ರೆ'ಯಲ್ಲಿ ಚಿಕಿತ್ಸೆ ಪಡೆಯುತ್ತಿದೆ. ಅದರ ರೋಗ ವಾಸಿಯಾಗುವ ಯಾವ ಮುನ್ಸೂಚನೆಯೂ ಇಲ್ಲ. ಜಾಗತಿಕ ವಾತಾವರಣದಲ್ಲಿ ಹೊಸ ಹೊಸ ಸಮೀಕರಣಗಳು ಏರ್ಪಡುತ್ತಿವೆ. ವಿಜ್ಞಾನ ಬೆಳೆದಂತೆ 'ಏಡ್ಸ್' ನಂತಹ ಮಾರಿ ತನ್ನ ಕೋರೆ ಹಲ್ಲು ಪ್ರದರ್ಶಿಸುತ್ತ ಊರೂರು ಸುತ್ತುತ್ತಿದೆ. ಅದನ್ನು ಹದ್ದುಬಸ್ತಿನಲ್ಲಿ ಇಡುವ ಕಾರ್ಯಕ್ಕೆ ತೀವ್ರತೆ ಸಿಗುತ್ತಿಲ್ಲ.

ಹೀಗೆ ಏನೆಲ್ಲಾ 'ಇಲ್ಲ', 'ಬೇಕು', 'ಬೇಡ' ಗಳ ಸೂತ್ರಕ್ಕೊಳಪಟ್ಟ ನಮ್ಮ ಜೀವನವನ್ನು ಮುಂಬರುವ ಹೊಸ ವರ್ಷದ ಪ್ರವೇಶಕ್ಕೆ ಸಿದ್ಧಪಡಿಸಬೇಕಿದೆ.

- ಸಂಪಾದಕ

ಸರಸ ವಾರ್ತೆ

1930 ನೆನಪಿರಲೇಬೇಕಲ್ಲ. ಏನು ಅಂತ ತಿಳೀಲಿಲ್ವಾ, ಅದೇರಿ ಉಪ್ಪು-ದಂಡಿ- ಸತ್ಯಾಗ್ರಹ, ಗಾಂಧಿ-ಕೋಲು. ಈಗ ನೆನಪಾಗಿರಬೇಕು ಅಲ್ವಾ ಗುಜರಾತಿನ ದಂಡಿ ಅನ್ನೋ ಸ್ಥಳದಿಂದ 1930ರಲ್ಲಿ ಉಪ್ಪಿನ ಸತ್ಯಾಗ್ರಹ ಆರಂಭ ವಾಗಿತ್ತು. ಬ್ರಿಟಿಷರಿಗೆ ಬುದ್ಧಿ ಕಲಿಸಲು ಈ ದಂಡಿಯಲ್ಲಿ ಉಪ್ಪು ಶೇಖರಣೆ ಮಾಡಲಿಕ್ಕೆ ಶುರುಮಾಡಿದ್ರು. ಈಗ ಏನಾಗಿದೆ ಗೊತ್ತಾ, ಸತ್ಯಾಗ್ರಹ ಆರಂಭಿಸಿದ ಊರಿನಲ್ಲೇ ಉಪ್ಪಿಗೆ ಬರ ಅಂತೆ. ಬಹು ರಾಷ್ಟ್ರೀಯ ಕಂಪನಿಗಳ ಉಪ್ಪಿನ ರಾಶಿ ರಾಶಿಗಳು ಬಂದು ಬೀಳುತ್ತಿರುವಾಗ ನಮ್ಮ ಸ್ವದೇಶಿ ಕಲ್ಲು ಉಪ್ಪು ಯಾರಿಗೆ ಬೇಕು ಹೇಳಿ? ಬಹು ರಾಷ್ಟ್ರೀಯರ ಉಪ್ಪು ಬೆಳ್ಳಗೆ ನೋಡಲಿಕ್ಕೆ ಸುಂದರ. ನಮ್ಮ ಕಲ್ಲುಪ್ಪು ಕಪ್ಪು ಕಪ್ಪು. ಸರಕಾರ ಬೇರೆ ಅಯೋಡಿನ್ ಪೂರಿತ ಉಪ್ಪು ತಿನ್ನಬೇಕೂಂತ ತಾಕೀತು ಮಾಡಿದೆ. ಒಟ್ಟಿ ನಲ್ಲಿ ಸ್ವದೇಶಿ ಉಪ್ಪಿಗೆ ಸ್ವದೇಶಿ ಮಂತ್ರ ಪಠಿಸು ವವರಿಂದಲೇ ನಿಷೇಧ. ವಿದೇಶಿ ಉಪ್ಪೆಂದು ಅಲ್ಲಿನವರೆಲ್ಲ ತೆಳ್ಳಗೆ ಬೆಳ್ಳಗೆ ಒಂಥರಾ ಚೆಂದ ಅಂತ ನಮ್ಮ ಗಾಂಪನ ವಿಚಾರ ಲಹರಿ. ಅದಕ್ಕೆ ಅಲ್ವೇ ನಮ್ಮ ಮನೆಯವಳಿಗಿಂತ ನೆರೆಯಾಕೆ ಸ್ವಲ್ಪ ಚೆಂದಾನೇ ಅಂತಾ ಹೇಳೋದು.

❍

ಈರುಳ್ಳಿ, ನೀರುಳ್ಳಿ, ಉಳ್ಳಾಗಡ್ಡೆ ಹಿಂದಿಯಲ್ಲಿ ಪ್ಯಾಸ್ ಹೀಗೆಲ್ಲಾ ಕರೀತಾರಲ್ವೇನ್ರಿ ಈರುಳ್ಳಿಗೆ. ಈರುಳ್ಳಿ ಕಣ್ಣಲ್ಲಿ ನೀರು ಬರಿಸೋದು ತಿಳಿದದ್ದೇ. ಆದರೆ ಸಂತೋಷದ ಆನಂದಬಾಷ್ಪ ತರಿಸುತ್ತೆ ಅಂದ್ರೆ ನಿಜವಾಗಲೂ ಆಶ್ಚರ್ಯ ವಲ್ವೇ. ಆದರೂ ನಿಜ. ಚಂಡೀಗಢದಲ್ಲೊಂದು ಸಫಾರಿ ಸೂಟ್ ಶೋರೂಂನವರಲ್ಲಿ ಆನಂದ ಬಾಷ್ಪ ಹರಿದು - ಹರಿದು ಬತ್ತಿಹೋಗಿ ಈಗ ಈರುಳ್ಳಿ ಕೊಡಿ ಈರುಳ್ಳಿ ಕೊಡಿ ಅಂತಾ ಬಾಯಿ ಹರಿದು ಹೋಗುವ ಹಾಗೆ ಕಿರುಚಿಕೊಳ್ತಿದ್ದಾರಂತೆ. ಪ್ರತಿ ದಿನ 10 ರಿಂದ 12 ಸೂಟ್ ಸೇಲ್ ಆಗ್ತಿತ್ತು. ಸರಿ ಅಂಗಡಿ ಮಾಲೀಕ ಹೊಸ ಯೋಜನೆ ರೂಪಿಸಿದ. ಹೊರಗೊಂದು ಬೋರ್ಡ್ ತಗಲಿ ಹಾಕಿದನಂತೆ. 1 ಜೊತೆ ಸೂಟ್ ಬಟ್ಟೆಗೆ 1 ಕೆ.ಜಿ. ಈರುಳ್ಳಿ ಉಚಿತ ಅಂತ ಜಗಜ್ಜಾಹೀರು ಮಾಡಿದ್ದೇ ತಡ, ಗೃಹಿಣಿಯರೆಲ್ಲಾ ವ್ಯಾನಿಟಿ ಬ್ಯಾಗ್ ನೇತು ಹಾಕ್ಕೊಳ್ಳೋ ಜಾಗದಲ್ಲಿ ಕೈಚೀಲ ಹಾಕ್ಕೊಂಡು ಈ ಅಂಗಡಿ ಕಡೆ ದಾಪುಗಾಲು. ಈಗಲಂತೂ ದಿನಕ್ಕೆ 50 ರಿಂದ 60 ಸೂಟ್. ಎಷ್ಟು ದಿನ ನಡೆದೀತು ಹೇಳಿ. ಖಾಲಿಯಾಯ್ತು ಈರುಳ್ಳಿ. ಈಗ ಗೃಹಿಣಿಯರ ಖಾಲಿ ಚೀಲ- ಕ್ಯೂ-ಎಲ್ಲಾ ಖಾಲಿ ಖಾಲಿ. ಅದೇ ಜಾಗದಲ್ಲಿ ಮತ್ತೊಂದು ಬೋರ್ಡ್ ಇದೆಯಂತೆ. ಬನ್ನಿ ಬನ್ನಿ ಈರುಳ್ಳಿ ಇದ್ರೆ ಜೊತೆಗೆ ತನ್ನಿ. ನಮ್ಮ ಸೂಟಿನ ಜೊತೆಗೆ ಮಾರಿ ಕೊಡ್ತೇವೆ ಬನ್ನಿ ಬನ್ನಿ ಅಂತಾ. ನೋಡಿ ಈರುಳ್ಳಿ ಇದ್ರೆ ಹೊರಡಿ, ಹೊರಡಿ ತಡ ಮಾಡಬೇಡಿ.

❍

ಈ ಕಾಮೋತ್ತೇಜಕ ವಯಾಗ್ರಾ ನಮ್ಮ ರಾಜಕಾರಣಿಗಳ ಹಾಗೆ. ಸಾರ್ವಜನಿಕ ಮೂತ್ರ ಖಾನೆಯ ಆರಂಭದಿಂದ ಹಿಡಿದು ಸುಲಭ ಶೌಚಾಲಯದ ಶಂಕುಸ್ಥಾಪನೆವರೆಗೂ ಏನಾದ್ರೂ ಹೇಳಿಕೆ ಕೊಟ್ಟು ಸದಾ ಸುದ್ದಿಯಲ್ಲಿರ್ತಾರಲ್ಲ ಹಾಗೇ ಅಮೇರಿಕ, ಆಸ್ಟ್ರೇಲಿಯನ್ನರೆಲ್ಲ ಇದರ ಹಿಂಬಾಲ ಕರಾದದ್ದು. ಮಲೇಶಿಯಾದಲ್ಲಿ ಎಗ್ಗಿಲ್ಲದೆ ಪ್ರಚಾರ ಪಡೆದದ್ದು, ಸಣ್ಣ ಪುಟ್ಟ ದೇಶಗಳು ಜನಸಂಖ್ಯಾ ಅಸ್ತ್ರವನ್ನಾಗಿಸಿದ್ದು, ಕೊನೆಗೆ ವಾತ್ಸಾಯನ ನಾಡಿಗೂ ಕಾಲಿಟ್ಟದ್ದು, ಇದೆಲ್ಲಾ ಹಳೇ ಮಾತು. ಅಗಸನ ಕತ್ತೆ ಹುಲಿವೇಷ ಹಾಕಿ ಮೆರೆದ ಹಾಗೆ ನಕಲಿ ವಯಾಗ್ರಗಳು ಮಾರುಕಟ್ಟೆಯಲ್ಲಿ ನಲಿದಾಡಿದ್ದು, ಇದೆಲ್ಲಾ ಬಿಡಿ. ಈಗ ಈ ವಯಾಗ್ರಾ ಸುದ್ದಿಯಲ್ಲಿರೋದು ಭಾರತ ಸರಕಾರ ಅದನ್ನು ನಿಷೇಧ ಮಾಡಲಿಕ್ಕೆ ಹೊರಟಿದ್ದಕ್ಕೆ. ನಮ್ಮ ಜನಗಳಿಗೆ ಯಾಕಪ್ಪ ಇಂತಾ ಕೆಟ್ಟ ಬುದ್ಧಿ ಬಂತು ಅಂತಾ ಯೋಚಿಸ್ತೀರಾ? ಇಂದೂರ್‌ನಲ್ಲಿ ಇದನ್ನು ಸೇವಿಸಿ ಚಿರಯೌವ್ವ ನದ ಬದಲಿಗೆ ಚಿರನಿದ್ರೆಯ ನ್ನು ಅನುಭವಿಸಿದ್ದಕ್ಕೆ. ಅಲ್ಲಾರೀ, ಈಗಿನ ಆಹಾರದ ಲ್ಲಿ ಪೌಷ್ಟಿಕ ಅಂಶಾನೇ ಇಲ್ಲ. ಇನ್ನು ನವೋತ್ಸಾಹ ಎಲ್ಲಿಂದ ಬರಬೇಕು ಹೇಳಿ. ಅದಕ್ಕೆ ನವತರುಣರು 40 ದಾಟಿದ ಮೇಲೆ ನವೋಲ್ಲಾಸಕ್ಕೆ ಈ ಅಸ್ತ್ರ ಉಪಯೋಗವಾಗ್ತಿತ್ತಲ್ಲಾ ಅಂತ ನಮ್ಮ ಸ್ನೇಹಿತರ ಕೊರಗು. ಒಂದಂತೂ ಸತ್ಯ. ಪ್ರಪಂಚದಾದ್ಯಂತ ಇದರ ನಿಷೇಧ ಮಾಡಿದ್ದೇ ಆದಲ್ಲಿ ಪ್ರಪಂಚಕ್ಕೆ ನವೋತ್ಸಾಹ ನೀಡಿದ ವಯಾಗ್ರಾ ಜನ್ಮದಾತರ ಸ್ಟೋರಿ ಬರೀ ಗೋಳುರಿ.

❍

ಈ ಚಿತ್ರ ನೋಡಿ. ಥೂ ನಾಚಿಕೆಯೇ ಇಲ್ಲ ಈ ಜನಗಳಿಗೆ, ಹೇಗೆ ಬೆತ್ತಲೆಯಾಗಿವೆ ಚೂರು ಬಟ್ಟೆಯಿಲ್ಲದೆ ಅಂತ ಮೂಗು ಮುರಿಬೇಡಿ. ಇವರು ನಮ್ಮ ಚಂದ್ರಗುತ್ತಿಯಲ್ಲಿನ ಹಾಗೆ ದೇವರ ದರ್ಶನ ಪಡೆಯಲಿಕ್ಕೆ ತಮ್ಮ ಬೆತ್ತಲೆ ಮೈ ಪ್ರದರ್ಶನ ಮಾಡೋ ಮಂದಿಯಲ್ಲ. ಅಥವಾ ನಗ್ನನರ್ತನ ಮಾಡಲಿಕ್ಕೆ ತಯಾರಾದ ಕ್ಯಾಬರೆ ಮಂದೀನೂ ಅಲ್ಲ. ಇವರಿಗೆ ಪರಿಸರ, ಮರ, ಪ್ರಕೃತಿ, ನಿಸರ್ಗದ ಮೇಲೆ ಅಪಾರ ಕಾಳಜಿ. ತಮ್ಮ ಜೀವನ - ಜೀವ ಕೊಟ್ಟಾದ್ರೂ ಮರವನ್ನು ಉಳಿಸಬೇಕು ಅನ್ನೋ ಉದಾತ್ತ ಧ್ಯೇಯ. ಪರೋಪಕಾರಂ ಇದಂ ಶರೀರಂ ಅನ್ನೋ ಹಾಗೆ ಪರರ ಉಪಕಾರಕ್ಕೆ ಈ ದೇಹ. ಕ್ಯಾಲಿಫೋರ್ನಿಯಾದಲ್ಲಿ ಹದಿಹರೆಯದ 200 ಮರಗಳನ್ನು ಕತ್ತರಿಸಿ ಬಿಸಾಡೋಕೆ ಪ್ರಾರಂಭಿಸಿರುವುದಕ್ಕೆ, ಈ ಹದಿಹರೆಯದ ಜೋಡಿಯ ಬೆತ್ತಲೆ ಪ್ರದರ್ಶನದ ಪ್ರತಿಭಟನೆ.

ಮರ-ಮಾನವ ಇಬ್ಬರಿಗೂ ಜೀವವಿದೆ- ಜೀವನವಿದೆ ಎಂದು ಸಾರೋ ತವಕ- ಮರವನ್ನು ಅಪ್ಪಿಕೊಳ್ಳೋ ಮೂಲಕ. ಉತ್ತರಭಾರತದಲ್ಲಿ ಪರಿಸರ ಉಳಿಸಲು ಚಿಪ್ಕೊ ಚಳವಳಿ. ನಂತರ ಅದರ ಪ್ರತಿರೂಪ ಕರ್ನಾಟಕದಲ್ಲಿ ಅಪ್ಪಿಕೋ ಚಳವಳಿ. ಬಹುಶಃ ಇದರ ಮುಂದಿನ ಭಾಗ ಈ ಮರ ಅಪ್ಪಿಕೊಳ್ಳೋ ಬೆತ್ತಲೆ ಚಳವಳಿ ಇರಬಹುದೇ. ■





ಒಳನೋಟ

ನಿಮ್ಮ ಊರಿಗೂ ಬಂದಿದೆ ಏಡ್ಸ್

ಏಡ್ಸ್ ಎಂಬುದು ಯಾವುದೋ ದೇಶದ ಯಾರಿಗೋ ತಗುಲಿದ ರೋಗವಾಗಿ ಉಳಿದಿಲ್ಲ. ನಿಮ್ಮ ಊರನ್ನೂ ತಲುಪಿ ಮನೆ ಮನೆಯ ಬಾಗಿಲು ಬಡಿಯುತ್ತಿದೆ. ಅಷ್ಟೇ ಅಲ್ಲ, ನಿಮಗೇ ಗೊತ್ತಿಲ್ಲದಂತೆ ನೀವೂ ಏಡ್ಸ್‌ಗೆ ತುತ್ತಾಗಿರಬಹುದು!







ವಿದ್ಯೆ - ಉದ್ಯೋಗ



ಬ್ಯಾಡ್ಮಿಂಟನ್ ತಾರೆ

ಸ್ಥಿರ ಶೀರ್ಷಿಕೆಗಳು



ಬಾಗೂರು- ನವಿಲೆ

ಟಪಾಲು



ಮುಂದಿನ ಸಂಚಿಕೆಯಲ್ಲಿ

ಏಡ್ಸ್ ಎದುರಿಸುವುದು ಹೇಗೆ?	- ಡಾ. ಸಿ. ಆರ್. ಚಂದ್ರಶೇಖರ್
ತುಂಗಭದ್ರೆ: ವರವೋ? ಶಾಪವೋ?	- ಡಾ. ಶ್ರೀನಿವಾಸ ಹಾವನೂರ
ಹೆಣ್ಣು ಸಂತತಿಯ ವಿನಾಶ!	- ವೀರಮ್ಮ ಸಾವಿರಮಠ

ಖಾಯಂ ಖರೀದಿಗೆ ಪ್ರೇರಣೆ

- ಬಸವರಾಜ ಕರಕರೆಡ್ಡಿ, ಧಾರವಾಡ

ಮೊದಮೊದಲು ಅಲ್ಲೊಮ್ಮೆ ಇಲ್ಲೊಮ್ಮೆ ಅಲ್ಪಸ್ವಲ್ಪ ಕಣ್ಣಾಡಿಸಿದ್ದ ಈ 'ಬದುಕು' ಪತ್ರಿಕೆಯನ್ನು ಸ್ವತಃ ಕೊಂಡುಕೊಂಡು ಓದಿದ್ದು ನವೆಂಬರ್‌ನಲ್ಲೇ. ಇಷ್ಟೊಂದು ಸುಂದರ, ಅಪಾರ ಜ್ಞಾನನಿಧಿ ನೀಡುವ ಪತ್ರಿಕೆ ನನಗೆ ಇನ್ನು ಮುಂದೆ ಖಾಯಂ ಖರೀದಿಸಿ ಓದುವಂತೆ ಪ್ರೇರಣೆ ನೀಡಿದೆ.

ಸುಂದರ ಪತ್ರಿಕೆ

- ಉಮಾ ಶಶಿಧರ, ಹರಪನಹಳ್ಳಿ

ಜಾಹೀರಾತುಗಳ ಅಬ್ಬರವೇ ಕಂಡುಬರುವ ಈಗಿನ ವಾರಪತ್ರಿಕೆಗಳಿಗೆ ಹೋಲಿಸಿದರೆ 'ಬದುಕು' ಒಂದು ಸುಂದರ ಮಾಸಪತ್ರಿಕೆ. ಪ್ರತಿಯೊಂದು ಪುಟವೂ ಮಾಹಿತಿಪೂರ್ಣವಾಗಿದೆ.

ಜ್ಞಾನವೃದ್ಧಿ ಸಾಲು

- ಎಂ. ಟೀಪು, ಹನುಮಂತಾಪುರ

ನಾನೋರ್ವ ಪ್ರೌಢಶಾಲಾ ವಿದ್ಯಾರ್ಥಿಯಾದರೂ ನನ್ನ ಮೆಚ್ಚಿನ ಪತ್ರಿಕೆ 'ಬದುಕು' ತರಿಸುತ್ತಿದ್ದೇನೆ. ಈ ಪತ್ರಿಕೆಯ ಕೆಳ ಪುಟದಲ್ಲಿ ಚುಟುಕಾಗಿ ಜ್ಞಾನವೃದ್ಧಿ ಸಾಲುಗಳನ್ನು ಏಕೆ ಹಾಕಬಾರದು? ಇದರಿಂದ ನನ್ನಂತೆ ಇನ್ನಿತರ ವಿದ್ಯಾರ್ಥಿಗಳಿಗೂ ಅನುಕೂಲವಾಗುವುದಿಲ್ಲವೇ?

ತಿದ್ದುಪಡಿ

- ಮುಖ್ಯೋಪಾಧ್ಯಾಯರು, ಸೈನಿಕಶಾಲೆ, ಬಿಜಾಪುರ.

ನಮ್ಮ ಶಾಲೆ ಬಗ್ಗೆ ಅಕ್ಟೋಬರ್ 98ರ ಸಂಚಿಕೆಯಲ್ಲಿ ಲೇಖನ ಪ್ರಕಟಿಸಿದ್ದಕ್ಕೆ ಧನ್ಯವಾದಗಳು, ಹಾಗೆಯೇ ಲೇಖನದಲ್ಲಿ ನುಸುಳಿದ ಈ ಕೆಳಗಿನ ಎರಡು ತಪ್ಪುಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ. ಬಿಜಾಪುರ ಸೈನಿಕ ಶಾಲೆಯ ಹೆಡ್‌ಮಾಸ್ಟರ್ ಎ.ಕೆ.ಶರ್ಮಾ ಅವರು ಲೇಖನದಲ್ಲಿ ತಿಳಿಸಿದಂತೆ ಈ ಶಾಲೆಯ ಹಳೆಯ ವಿದ್ಯಾರ್ಥಿಯಲ್ಲ. ಅಲ್ಲದೆ ಪ್ರತಿವರ್ಷ 70-80 ವಿದ್ಯಾರ್ಥಿಗಳಿಗೆ ಪ್ರವೇಶ ಸಿಗುವುದು 6ನೇ ತರಗತಿಗೆ ಹೊರತು 7ನೇ ತರಗತಿಗಲ್ಲ.

ಕಂಪ್ಯೂಟರ್

- ಜಿ. ಈಶ್ವರಮ್ಮ, ಹೊಸ ಮೋಕಾ

ಮುರಳೀಧರ ಅವರ 'ನಿಮ್ಮ ಪ್ರತಿರೂಪ ಈ ಕಂಪ್ಯೂಟರ್!' ಲೇಖನ ಉಪಯುಕ್ತವಾಗಿತ್ತು. ಕ್ಲಾಸ್‌ರೂಂನ್ನು ತಪ್ಪದೇ ಪ್ರಕಟಿಸಿ. ನಗೆ ಹನಿಗಳನ್ನು ಕಳಿಸಬಹುದೇ?

ಪದಬಂಧ-9

- ಮೀನಾಕ್ಷಮ್ಮ, ದೊಣೆಹಳ್ಳಿ

ಪದಬಂಧ-9ರ ಸರಿಯುತ್ತರದಲ್ಲಿ ಎಡದಿಂದ ಬಲಕ್ಕೆ 23 ಹಾಗೂ ಮೇಲಿನಿಂದ ಕೆಳಕ್ಕೆ 13ರ ಸರಿಯುತ್ತರಗಳನ್ನು ಮುತ್ತು, ಕವಿಕೆ ಎಂದು ಕೊಟ್ಟಿರುವಿರಿ. ಆದರೆ ಅದು ಮತ್ತು, ಕವಿತೆ ಎಂದಿರಬೇಕಲ್ಲವೆ?

[**ಹೌದು.** -**ಸಂ**]

ಕನ್ನಡ ಕಾಣೆ?

- ಬಸವರಾಜ ಪಿ. ಮಟ್ಟಿ, ಆಳವಂಡಿ

ಕನ್ನಡ ಕಾಣೆಯಾಗುತ್ತಿದೆಯೇ ಎಂಬ ಲೇಖನ ತುಂಬಾ ಚೆನ್ನಾಗಿ ಮೂಡಿಬಂದಿದೆ. ರಾಜ್ಯೋತ್ಸವ ಸಂದರ್ಭದಲ್ಲಿ ಯುವ ಪೀಳಿಗೆಗೆ ಮಾತೃಭಾಷೆಯ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಲೇಖನ ಸಫಲವಾಗಿದೆ. ಇಂಥ ಲೇಖನಗಳು ಹೆಚ್ಚು ಮೂಡಿಬರಲಿ.

ಅವುಟ್‌ಲುಕ್ ಥರ

- ಪಿ. ಶ್ರೀಕಾಂತ್, ಬಳ್ಳಾರಿ

ಹೊಸತನದ ವಿನ್ಯಾಸದಿಂದ 'ಬದುಕು' ಚೆನ್ನಾಗಿ ಬರ್ತಿದೆ. 'ಅವುಟ್‌ಲುಕ್' ಪತ್ರಿಕೆ ಥರ ವಿನ್ಯಾಸ ಇದೆ. ವಿಶಿಷ್ಟವಾಗಿದೆ ಕೂಡಾ.

ಮಲೆನಾಡ ಗೀಸರ್

- ಚಂದ್ರಶೇಖರ ಪಾಟೀಲ್, ಮೋರಟಗಿ

'ಮಲೆನಾಡ ಗೀಸರ್' ಲೇಖನದಿಂದ ನಮಗೆ ಬಹಳ ಸಹಾಯವಾಯಿತು. ಈಗ ಅದೇ ತರಹದ 'ಗೀಸರ್'ನ್ನು ನಮ್ಮ ಮನೆಯಲ್ಲಿ ಅಳವಡಿಸಿದ್ದೇವೆ.

ಸಣ್ಣ ಕಥೆ ಬೇಕು

- ಭೂತಾಳಿ ಎಂ. ರಾವ್, ಆಳಂದ

ಪತ್ರಿಕೆಯ ಮುಖಪುಟ ಸ್ಪಷ್ಟವಾಗಿದೆ. ವಿಷಯಗಳು ವೈವಿಧ್ಯಮಯವಾಗಿವೆ. ಆದರೆ ಬೃಹತ್ ಗ್ರಂಥಗಳನ್ನು ಓದುವ ಸಹನೆ ಇಲ್ಲದ ಇಂದಿನ ಓದುಗರಿಗೆ ಒಂದು ಸಣ್ಣ ಕಥೆ ಒದಗಿಸಿದರೆ ಪತ್ರಿಕೆಗೆ ಇನ್ನೂ ಹೆಚ್ಚಿನ ಸೊಬಗು ಬರುತ್ತದೆ.

[**ನಿಮ್ಮ ಈ ಬೇಡಿಕೆ 'ಮನೆ' ವಾರ ಪತ್ರಿಕೆಯ ರೂಪದಲ್ಲಿ ಈಡೇರಲಿದೆ.** -**ಸಂ**]

ಚಾಕೋಲೇಟ್

-ಪಿ.ಎಚ್.ದಯಾನಂದ, ಹೊನ್ನಾವರ

'ಚಾಕೋಲೇಟ್ ಮತ್ತು ಆರೋಗ್ಯ''ದ ಬಗ್ಗೆ ನೀಡಿದ ಸಂಪೂರ್ಣ ಮಾಹಿತಿ ಉಪಯುಕ್ತ ವಾಗಿತ್ತು. ಡಾ. ಆರತಿ ವೆಂಕಟೇಶ್ ಅವರ ಲೇಖನ ಪ್ರಕಟಿಸಿದ್ದಕ್ಕೆ ನನ್ನ ಮಿತ್ರ 'ಬದುಕು' ಗೆ ಧನ್ಯವಾದಗಳು.

ತಾರಾಬದುಕು

-ನಿರಂಜನ ವಾಲಿಶೆಟ್ಟರ, ಹುಬ್ಬಳ್ಳಿ

'ತಾರಾಬದುಕು' ಇನ್ನೂ ಚೆನ್ನಾಗಿ ಆಕರ್ಷಕವಾಗಿ ಬರಲಿ.

ಅಪರೂಪದ ಪತ್ರಿಕೆ

-ಡಿ.ಎಸ್.ಚೌಗಲೆ, ಬೆಳಗಾವಿ

ಎಲ್ಲ ಬಗೆಯ ಲೇಖನಗಳ ಸಂಗ್ರಹವಿದೆ. ಕನ್ನಡದಲ್ಲಿ ಅಪರೂಪದ ಪತ್ರಿಕೆಯೇ ಸರಿ. ಆದರೆ ಕಥೆ, ಕಾವ್ಯ, ಹಾಸ್ಯಕಾದಂಬರಿ ಹೀಗೆ ಸಾಹಿತ್ಯಕವಾಗಿ ಬದುಕು ಬೆಳೆದರೆ ಅದರ ಅಂದ-ಚೆಂದ ಇನ್ನಷ್ಟು ಹೆಚ್ಚುವುದಲ್ಲವೇ?

ಹುಟ್ಟುಹಬ್ಬದ ಶುಭಾಶಯಗಳು

-ಎಸ್.ಕೊಟ್ರೇಶ್, ಜಿ.ಕೋಡಿಹಳ್ಳಿ

ನಮಗೆ 'ಬದುಕು'ತುಂಬಾ ಮೆಚ್ಚುಗೆ ಯಾಯಿತು. ಏಕೆಂದರೆ ಈ ಪತ್ರಿಕೆಯಲ್ಲಿ ಯಾವುದೇ ಕಳಪೆ ಅಥವಾ ನಿರುಪಯುಕ್ತ ವಿಷಯ ಇರುವುದಿಲ್ಲ. ಹಾಗಾಗಿಯೇ ಓದುಗರನ್ನು ಅಯಸ್ಕಾಂತದಂತೆ ಆಕರ್ಷಿಸುತ್ತಿದೆ. ಹುಟ್ಟುಬ್ಬದ ಶುಭಾಶಯ ಕೋರಲು ಒಂದು ಹೊಸ ಅಂಕಣ ಏಕೆ ತೆಗೆಯಬಾರದು?

[ವರ್ಗೀಕೃತ ಜಾಹೀರಾತಿನಲ್ಲಿ ಕೇವಲ ನೂರು ರೂಪಾಯಿಗೆ ಹುಟ್ಟುಹಬ್ಬದ ಶುಭಾಶಯ ಕೋರುವ ಅವಕಾಶ ಕಲ್ಪಿಸಿದ್ದೇವೆ. -ಸಂ]

ಅಶ್ವಿನಿ ದೇವತೆಗಳು

-ಟಿ.ಕೆ.ಗಂಗಾಧರ ಪತ್ತಾರ್, ಬಳ್ಳಾರಿ

'ಬಿಸಿಲ ಬದುಕು' ಸರ್ವಾಂಗ ಸುಂದರವಾಗಿ ಅತ್ಯಂತ ಆಕರ್ಷಣೀಯವಾಗಿ, ಸಂಗ್ರಹ ಯೋಗ್ಯ ವಾಗಿ ಬರುತ್ತಿದೆ. ನವೆಂಬರ್-98ರ ಸಂಚಿಕೆ ಪುಟ38ರಲ್ಲಿ ಪ್ರಕಟವಾದ ''ಕನ್ನಡ ಶಿಲ್ಪಿಗಳು'' ವಿದ್ಯಾರ್ಥಿಗಳಿಗೆ, ಸಾಹಿತ್ಯಾಸಕ್ತರಿಗೆ ತುಂಬಾ ಉಪಯುಕ್ತ. ಇದರಲ್ಲಿ ಒಂದೇ ಒಂದು ಲೋಪ ವಿದೆ. ಕ್ರ.ಸಂ.32 ''ಕನ್ನಡ ಸಾಹಿತ್ಯದ ಅಶ್ವಿನಿ ದೇವತೆ : ತಳುಕಿನ ವೆಂಕಣ್ಣಯ್ಯ.'' ಅಶ್ವಿನಿ ದೇವತೆ ಒಬ್ಬರೇ ಅಲ್ಲ; ಇದು 'ಜೋಡಿ'ಯ ಸಂಕೇತ. ಹಾಗೇ ಕನ್ನಡದ ಅಶ್ವಿನಿ ದೇವತೆಗಳೆಂದರೆ ತಳುಕಿನ ವೆಂಕಣ್ಣಯ್ಯ ಒಬ್ಬರೇ ಅಲ್ಲ, ಇದರ ಜೊತೆ ಸೇರಲೇಬೇಕಾದ ಹೆಸರು ಎ.ಆರ್. ಕೃಷ್ಣಶಾಸ್ತ್ರಿ. ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣ ಶಾಸ್ತ್ರಿ ಈ ಇಬ್ಬರನ್ನೂ ಕನ್ನಡ ಅಶ್ವಿನಿದೇವತೆಗಳು ಎಂದೇ ಕರೆಯುವುದು ರೂಢಿ. ಇದನ್ನು ಬೇಕಾದರೆ ಬಲ್ಲ ಮೂಲಗಳಿಂದ ದೃಢಪಡಿಸಿ ಕೊಂಡು ತಿದ್ದುಪಡಿ ಪ್ರಕಟಿಸಬಹುದು. ನನಗೆ ತಿಳಿದಂತೆ ಟಿ.ಎಸ್. ವೆಂಕಣ್ಣಯ್ಯನವರ ಹೆಸರಿನ ಜೊತೆ ಯಾವಾಗಲೂ ಎ.ಆರ್.ಕೃ. ಹೆಸರು ಇದ್ದೇ ಇರುತ್ತದೆ.

ಒಂದು ಅತ್ಯಂತ ಉಪಯುಕ್ತ ಮಾಸಿಕ ಪ್ರಕಟಿ ಸುತ್ತಿರುವುದಕ್ಕಾಗಿ ಕೃತಜ್ಞತಾಪೂರ್ವಕ ವಂದನೆಗಳು.

ಅರ್ಥ - ಅಪಾರ್ಥ

''ಏನೇ ಆದರೂ ಸರಿಯೇ. **ಅಮರಣಾಂತ** ಉಪವಾಸ ಕುಳಿತುಕೊಳ್ಳುತ್ತೇನೆ'' ಎನ್ನುತ್ತಿರುವ ಹುಬ್ಬಳ್ಳಿಯ ಮೂರು ಸಾವಿರ ಮಠದ ಹಿರಿಯ ಸ್ವಾಮಿ ಡಾ.ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು.

[*ಕನ್ನಡಪ್ರಭ,* 9.11.98] -ರಾಜೇಶ್ ಹೆಗ್ಡೆ, ಉಡುಪಿ.

ಜ.ಜಹಾಂಗೀರ್ ಕರಾಮತ್ ರಾಜಿನಾಮೆ ನೀಡಿದ್ದರಿಂದ ತೆರವಾದ **ಸ್ಥನಕ್ಕೆ** ಅಷ್ರಫ್ ಅವರಿಗೆ ಬಡ್ತಿ ನೀಡಲಾಗಿದೆ.

[*ಕನ್ನಡಪ್ರಭ,* 9.10.98] - ಡಿ.ಎಂ.ಬಸವರಾಜಯ್ಯ, ರಾಣೆಬೆನ್ನೂರು

ಜೋಗ ಪ್ರದೇಶದಲ್ಲಿ ಅಭಿವೃದ್ಧಿ ಸಮಾಜ ಸೇವಾ ಸಂಸ್ಥೆಯು ದಿನಾಂಕ **28.11.98**ರಂದು ಹೆನ್ನ ಪ್ರದೇಶದಲ್ಲಿ ಸ್ಥಾಪನೆಗೊಂಡಿತು.

[*ಕನ್ನಡ ಜನ ಅಂತರಂಗ,* 6.11.98] - ಶ್ರೀ ಹರ್ಷ ಕೆ.ಎಸ್., ಸಸರವಳ್ಳಿ

ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ ಕೋಟಾ ಗ್ರಾಮದಲ್ಲಿ ಇಂದು **ಸೇರಿದ** ಭಾರಿ ಮಳೆಯಿಂದಾಗಿ ಮನೆಯೊಂದು ಕುಸಿದು ಪರಿಣಾಮವಾಗಿ ಓರ್ವ ಮೃತಪಟ್ಟಿದ್ದಾನೆ.

[*ಗೋಕಾಕ ಟಾಯಿಮ್ಸ,* 1.11.98] -ಮಹಾಂತೇಶ ರಾಜಗೋಳಿ, ಯರಡಾಲ.

1961ರಲ್ಲಿ ಮೈಸೂರು ಜಿಲ್ಲೆ ಕಲ್ಲಹಳ್ಳಿಯಲ್ಲಿ ಜನಿಸಿದ ಶ್ರೀಯುತರು (ಚದುರಂಗ) ಕಾದಂಬರಿ, ನಾಟಕ, ಕಥೆ ಅನುವಾದ ಕ್ಷೇತ್ರದಲ್ಲಿ ಪ್ರಖ್ಯಾತರಾದರು.

[*ಸಂಯುಕ್ತ ಕರ್ನಾಟಕ,* 21.10.98] -ಮೆಹಬೂಬ ಹಾಲ್ಯಾಳ, ಹುನಗುಂದ.

ದಿ.3ರಿಂದ 5ರವರೆಗೆ ಐತಿಹಾಸಿಕ **ಹಂದಿ**ಯಲ್ಲಿ ನಡೆಯುವ ಉತ್ಸವಕ್ಕಾಗಿ ವೈವಿಧ್ಯಮಯ ಕಾರ್ಯಕ್ರಮ ರೂಪಿಸಿದ್ದು...... ಹಂಪಿ ಕನ್ನಡ ವಿ.ವಿ. ದಿಂದ ಪುಸ್ತಕಗಳ ಬಿಡುಗಡೆ, ಪ್ರದರ್ಶನ, ವಿಚಾರ ಸಂಕಿರಣ ನಡೆಯುವವು.

[*ಸಂಯುಕ್ತ ಕರ್ನಾಟಕ,* 2.11.98] -ಕೀರ್ತಿ ಲದವಾ, ಗದಗ.

ಜೋಧ್‌ಪುರ ಜಿಲ್ಲೆಯ ಮಥಾನಿಯಾ ಅರಣ್ಯದಲ್ಲಿ ಜಿಂಕೆ ಮತ್ತು ಕೃಷ್ಣಮೃಗಗಳನ್ನು ಬೇಟೆ ಮಾಡಿದ ಆಪಾದನೆ ಮೇಲೆ ಸಲ್ಮಾನ್ ಖಾನರನ್ನು ಬಂಧಿಸಿ **ಖಟ್ಲೆ**ಯಲ್ಲಿಡಲಾಗಿದೆ.

[*ಸುಧಾ, ಸಂಪಾದಕೀಯ* 1.11.98] - ಡಿ.ಸಿ.ವಾಲಿ, ಧಾರವಾಡ.



ನಿಮ್ಮ ಊರಿಗೂ ಬಂದಿದೆ ಏಡ್ಸ್!

ಏಡ್ಸ್ ಎಂಬುದು
ಯಾವುದೋ
ದೇಶದ ಯಾರಿಗೋ
ತಗುಲಿದ ರೋಗವಾಗಿ
ಉಳಿದಿಲ್ಲ.
ನಿಮ್ಮ ಊರನ್ನೂ
ತಲುಪಿ ಮನೆ ಮನೆಯ
ಬಾಗಿಲು ಬಡಿಯುತ್ತಿದೆ.
ಅಷ್ಟೇ ಅಲ್ಲ,
ನಿಮಗೇ ಗೊತ್ತಿಲ್ಲದಂತೆ
ನೀವೂ
ಏಡ್ಸ್‌ಗೆ
ತುತ್ತಾಗಿರಬಹುದು!

ನಿಮ್ಮ ಊರಿಗೂ ಬಂದಿದೆ ಏಡ್ಸ್

ಒಂದು ಸಿನಿಮಾ ಥೇಟರಿಗೆ ಹೋದರೆ ಪ್ರೇಕ್ಷರಲ್ಲಿ ಹತ್ತಾರು ಜನರಾದರೂ ಸೋಂಕಿಗೊಳಗಾಗಿರುತ್ತಾರೆ. ಯಾವುದೇ ಸಾರ್ವಜನಿಕ ಸ್ಥಳ ತೆಗೆದುಕೊಂಡರೆ ಅಲ್ಲಿ 4 ಜನರಾದರೂ ಹೆಚ್.ಐ.ವಿ. ಪಾಸಿಟಿವ್ ಇರುವವರು ಸಿಗುತ್ತಾರೆ. ಒಂದು ಕಾಲೇಜಿನ ಕ್ಲಾಸ್‌ರೂಂ ತೆಗೆದುಕೊಂಡರೆ ಅಲ್ಲಿ ವಿದ್ಯಾರ್ಥಿಗಳಲ್ಲಿ ಒಬ್ಬನಿಗಾದರೂ ಸೋಂಕು ತಗುಲಿರುತ್ತದೆ.

■ ಡಾ. ವಸುಂಧರಾ ಭೂಪತಿ

ಡಿಸೆಂಬರ್ ಒಂದನೆಯ ತಾರೀಖು ವಿಶ್ವ ಏಡ್ಸ್ ದಿನವನ್ನಾಗಿ ಆಚರಿಸಲಾಗುತ್ತದೆ. 2000 ಇಸವಿ ವೇಳೆಗೆ ಎಲ್ಲರಿಗೂ ಆರೋಗ್ಯ ಎಂಬ ಘೋಷಣೆ ಕೇಳಿಬರುತ್ತಿದೆ. ಆದರೆ ಮಾನವಕುಲವನ್ನು ಬಲಿ ತೆಗೆದುಕೊಳ್ಳುತ್ತಿರುವ ಏಡ್ಸ್‌ನ ಹಾವಳಿ ಮತ್ತೊಂದೆಡೆ ವ್ಯಾಪಕವಾಗಿ ಹರಡುತ್ತಿದೆ.

ಮೊಟ್ಟಮೊದಲು ಆಫ್ರಿಕಾ ಹಾಗೂ ಅಮೇರಿಕಾದ ಸಲಿಂಗಕಾಮಿಗಳಲ್ಲಿ 1981ರಲ್ಲಿ ಏಡ್ಸ್‌ನ್ನು ಗುರುತಿಸಲಾಯಿತು. 1983ರಲ್ಲಿ ಲುಕ್ ಮಾಂಟೆಗ್ನೇರ್ ಏಡ್ಸ್‌ಗೆ ಕಾರಣೀಭೂತವಾದ ವೈರಸ್‌ನ್ನು ಗುರುತಿಸಿದ. ನಂತರ ಅದಕ್ಕೆ ಹೆಚ್.ಐ.ವಿ. (Human Immuno Deficiency Virus) ಎಂದು ಹೆಸರಿಸಿದರು. ಮೊದಲಿಗೆ ಈ ವೈರಸ್‌ನ ಸೋಂಕುಂಟಾಗಿ ನಂತರವೇ ಏಡ್ಸ್ ಬರುತ್ತದೆ.

ಸಧ್ಯ ಪ್ರಪಂಚದಲ್ಲೇ ಭಾರತವು ಏಡ್ಸ್‌ನ ರಾಜಧಾನಿಯಾಗಿದೆ. ಈಗಾಗಲೇ 40 ಲಕ್ಷ ಜನರು ಇದರ ಸೋಂಕಿಗೀಡಾಗಿದ್ದಾರೆ. ಇತ್ತೀಚಿನ ವರದಿಯ ಪ್ರಕಾರ ನೂರು ಜನರಲ್ಲಿ ಒಬ್ಬರು ಹೆಚ್.ಐ.ವಿ. ಸೋಂಕು ಹೊಂದಿದ್ದಾರೆ. ರಾಷ್ಟ್ರ ಮಟ್ಟದ ಸಮೀಕ್ಷೆಯಿಂದ ವ್ಯಕ್ತವಾಗಿರುವ ಈ ಅಂಶ ಗಾಬರಿ ಹುಟ್ಟಿಸುವಂತಹದು. ಜಗತ್ತನ್ನೇ ನಡುಗಿಸಿರುವ ಈ ರೋಗದ ಸೋಂಕು ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ನೂರಕ್ಕೆ ಇಬ್ಬರಿಗಿಂತ ಹೆಚ್ಚು ಮಂದಿಗೆ ತಗುಲಿದೆ ಎಂದು ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ ಇತ್ತೀಚೆಗೆ ನಡೆಸಿದ ಸಮೀಕ್ಷೆಯಿಂದ ತಿಳಿದುಬಂದಿದೆ. ದೇಶದಲ್ಲಿ ಏಡ್ಸ್ ಸೋಂಕು ಪ್ರಮಾಣವು ಒಟ್ಟು ಜನಸಂಖ್ಯೆಯ ಶೇಕಡಾ 0.5 ರಷ್ಟು ಮೀರಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಇಂದಿನ ವಿಜ್ಞಾನ ಯುಗದಲ್ಲಿ ಸವಾಲಾಗಿರುವ ಈ ರೋಗದ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಹತ್ತು ವರ್ಷಗಳ ಹಿಂದೆಯೇ ಆರಂಭಿಸಿದ ನಿಯಂತ್ರಣ ಕಾರ್ಯ ಫಲಕಾರಿಯಾಗಿಲ್ಲ. ಮಹಾರಾಷ್ಟ್ರ ಮತ್ತು ಕರ್ನಾಟಕಗಳಲ್ಲಿ 2.4% ಮತ್ತು 2.3%, ಆಂಧ್ರಪ್ರದೇಶದಲ್ಲಿ 1.6%, ಮಣಿಪುರದಲ್ಲಿ 1.2% ಮತ್ತು ತಮಿಳುನಾಡಿನಲ್ಲಿ 1.1.% ಇದೆ. ಆದರೆ ಈ ವರದಿ ಕೇವಲ 40% ಜನಸಂಖ್ಯೆಯನ್ನು ಮಾತ್ರ ಒಳಗೊಂಡಿದೆ. ಅನಧಿಕೃತವಾಗಿ ಇನ್ನೆಷ್ಟು ಜನರು ಈ ಸೋಂಕಿಗೆ ಗುರಿಯಾಗಿರುವರೋ? ಭಾರತವು ಹೆಚ್.ಐ.ವಿ. ಸೋಂಕು ಹರಡಲು ಫಲವತ್ತಾದ ಭೂಮಿಯಾಗಿದೆ. ಇದಕ್ಕೆ ಕಾರಣವೆಂದರೆ ಜನರಿಗೆ ಶಿಕ್ಷಣವಿಲ್ಲದಿರುವುದು ಹಾಗೂ ಆರೋಗ್ಯ ರಕ್ಷಣೆಯ ಬಗ್ಗೆ ಕಾಳಜಿ ಇಲ್ಲದಿರುವುದು ಎಂದರೆ ತಪ್ಪಾಗಲಾರದು. ಒಂದು ಸಿನಿಮಾ ಥೇಟರಿಗೆ ಹೋದರೆ ಪ್ರೇಕ್ಷರಲ್ಲಿ ಹತ್ತಾರು ಜನರಾದರೂ ಸೋಂಕಿಗೊಳಗಾಗಿರುತ್ತಾರೆ. ಯಾವುದೇ ಸಾರ್ವಜನಿಕ ಸ್ಥಳ ತೆಗೆದುಕೊಂಡರೆ ಅಲ್ಲಿ 4 ಜನರಾದರೂ ಹೆಚ್.ಐ.ವಿ. ಪಾಸಿಟಿವ್ ಇರುವವರು ಸಿಗುತ್ತಾರೆ. ಒಂದು ಕಾಲೇಜಿನ ಕ್ಲಾಸ್‌ರೂಂ ತೆಗೆದುಕೊಂಡರೆ ಅಲ್ಲಿ ವಿದ್ಯಾರ್ಥಿಗಳಲ್ಲಿ ಒಬ್ಬನಿಗಾದರೂ ಸೋಂಕು ತಗುಲಿರುತ್ತದೆ.

ಈಗ ಏಡ್ಸ್ ವೇಶ್ಯಾಗೃಹ ಮತ್ತು ಮಾದಕ ವ್ಯಸನಿಗಳಿಗೆ ಮಾತ್ರ ಸೀಮಿತವಾಗಿಲ್ಲ. ನಾವು ಸುರಕ್ಷಿತ ಎಂದು ಭಾವಿಸಿಕೊಂಡಿರುವ ಗೃಹಿಣಿಯರ ಹಾಗೂ ವಿದ್ಯಾರ್ಥಿಗಳ ಮಧ್ಯೆಯೂ ಕಾಲಿಟ್ಟಿದೆ.

ಜನರಲ್ಲಿ ಈಗಲೂ ಈ ಕಾಯಿಲೆಯ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲ. ಕೆಲವು ದಿನಗಳ ಹಿಂದೆ ಶ್ರೀನಗರದಲ್ಲಿ ಗುಂಡೇಟಿಗೆ ಬಲಿಯಾದ ವಿದೇಶಿಯನೊಬ್ಬನಿಗೆ ಚಿಕಿತ್ಸೆಯನ್ನು ನಿರಾಕರಿಸಲಾಯಿತು. ಏಕೆಂದರೆ ಅವನು ಹೆಚ್.ಐ.ವಿ. ಸೋಂಕಿಗೊಳಗಾಗಿದ್ದ. ವೈದ್ಯರಲ್ಲಿ ಈ ರೀತಿಯ ಭಾವನೆಯಿದ್ದರೆ ರೋಗಿಗಳ ಗತಿಯೇನು? ಏಡ್ಸ್ ರೋಗ ಪೀಡಿತರಿಗೆ ಚಿಕಿತ್ಸೆ ನೀಡಲೆಂದೇ ಮೂವತ್ತು ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ. ಏಡ್ಸ್ ಸಮೀಕ್ಷಾ ಕೇಂದ್ರ ಹಾಗೂ ರಕ್ತದ ಸುರಕ್ಷತೆಗಾಗಿ ಹತ್ತು ವಲಯಗಳನ್ನು ಸ್ಥಾಪಿಸಲಾಗಿದೆ. ಇಷ್ಟಾದರೂ ತನ್ನ ಕಬಂಧ ಬಾಹುಗಳನ್ನು ಚಾಚುತ್ತಿರುವ ಈ ರೋಗದ ಬಗ್ಗೆ ಜನಜಾಗೃತಿ

ಸೋಂಕುಳ್ಳ ತಾಯಿಯಿಂದ ಮಕ್ಕಳಿಗೂ ಏಡ್ಸ್ ರೋಗದ ಬಳುವಳಿ ⇨





⇦ ಮುಂಬೈಯ ಒಂದು ಲಕ್ಷ ವೇಶ್ಯೆಯರಲ್ಲಿ ಅರ್ಧದಷ್ಟು ಜನ ಈಗಾಗಲೇ ಏಡ್ಸ್‌ಗೆ ತುತ್ತಾಗಿದ್ದಾರೆ.

ಮೂಡಿಸಲು ಸಾಧ್ಯವಾಗಿಲ್ಲ. ಸೀಮಿತವರ್ಗವನ್ನಷ್ಟೇ ಗುರಿಯಾಗಿಟ್ಟುಕೊಂಡು ಹಮ್ಮಿಕೊಳ್ಳುವ ಜಾಗೃತಿ ಕಾರ್ಯಕ್ರಮದಿಂದ ಪ್ರಯೋಜನವಾಗಲಾರದು. ಕೊಳಚೆ ಪ್ರದೇಶ ಹಾಗೂ ಹಿಂದುಳಿದ ಪ್ರದೇಶಗಳ ನಿವಾಸಿಗಳ ಜೀವನಮಟ್ಟ ಸುಧಾರಿಸುವ, ರೋಗದ ಬಗ್ಗೆ ಶಿಕ್ಷಣ ನೀಡುವ ಕಾರ್ಯಕ್ರಮದ ಅಗತ್ಯವಿದೆ. ಏಡ್ಸ್ ವಿರುದ್ಧ ಪರಿಣಾಮಕಾರಿ ಚುಚ್ಚುಮದ್ದನ್ನು ಅಭಿವೃದ್ಧಿಪಡಿಸುವ ಜಾಗತಿಕ ಪ್ರಯತ್ನದಲ್ಲಿ ಭಾರತವೂ ಪಾಲ್ಗೊಳ್ಳುತ್ತಿದೆ.

ವಿಶ್ವ ಆರೋಗ್ಯ ಸಂಸ್ಥೆ ವರದಿ ಮಾಡಿರುವಂತೆ 1993ರ ಮಧ್ಯದಲ್ಲಿ 13 ಮಿಲಿಯನ್ ವಯಸ್ಕರು ಹಾಗೂ ಒಂದು ಮಿಲಿಯನ್ ಮಕ್ಕಳು ವಿಶ್ವದೆಲ್ಲೆಡೆ ಹೆಚ್.ಐ.ವಿ. ಸೋಂಕಿಗೊಳಗಾಗಿದ್ದಾರೆ. ಆಫ್ರಿಕಾದಲ್ಲಿ 8 ಮಿಲಿಯನ್, ಉತ್ತರ ಅಮೆರಿಕಾ, ಲ್ಯಾಟಿನ್ ಅಮೆರಿಕಾದಲ್ಲಿ 2 ಮಿಲಿಯನ್, ಯುರೋಪ್‌ನಲ್ಲಿ ಅರ್ಧ ಮಿಲಿಯನ್, ದಕ್ಷಿಣ ಏಷ್ಯಾದಲ್ಲಿ 1.5 ಮಿಲಿಯನ್ ಜನರು ಸೋಂಕಿಗೊಳಗಾಗಿದ್ದಾರೆ.

2000 ಇಸವಿಯ ವೇಳೆಗೆ 30-40 ಮಿಲಿಯನ್ ಗಂಡಸರು, ಹೆಂಗಸರು ಹಾಗೂ ಮಕ್ಕಳು ಸೋಂಕಿಗೀಡಾಗಬಹುದು ಎಂದು ಅಂದಾಜು ಮಾಡಲಾಗಿದೆ. ಇದು ಪ್ರತಿವರ್ಷ ಮೂರು ನಾಲ್ಕು ಪಟ್ಟು ಹೆಚ್ಚುತ್ತಾ ಹೋಗುತ್ತದೆ. ಏಡ್ಸ್ ಬಂದ ನಂತರ ಸರಾಸರಿ ಜೀವನಾವಧಿ ಒಂದರಿಂದ ಮೂರುವರ್ಷಕಾಲ ಇರುತ್ತದೆ. ಕೆಲವು ದೇಶಗಳಲ್ಲಿ ಜೀವನಾವಧಿ ಒಂದು ವರ್ಷಕ್ಕಿಂತ ಕಡಿಮೆಯಿರುತ್ತದೆ. ಆದರೆ ಹೆಚ್.ಐ.ವಿ. ಸೋಂಕು ಕಂಡು ಬಂದ ಮೇಲೆ ಏಡ್ಸ್ ಬರುವುದಕ್ಕೆ 3 ರಿಂದ 12 ವರ್ಷ ಸಮಯ ತಗುಲುತ್ತದೆ.

ಸಾರ್ವಜನಿಕರಿಗೆ ಏಡ್ಸ್ ಬಗ್ಗೆ ಸಂಪೂರ್ಣ ತಿಳುವಳಿಕೆ ನೀಡಬೇಕು. ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆಗಳು, ಟಿ.ವಿ, ರೇಡಿಯೋ, ಪತ್ರಿಕೆಗಳ ಮೂಲಕ ಏಡ್ಸ್ ಬಗ್ಗೆ ವಿವರಣೆ ನೀಡಬೇಕು. ವೈದ್ಯರಿಗೆ, ಆರೋಗ್ಯ ಸಿಬ್ಬಂದಿವರ್ಗದವರಿಗೆ ತರಬೇತಿ ನೀಡಬೇಕು. ಪ್ರತಿಯೊಬ್ಬ ನಾಗರಿಕನೂ ಎಚ್ಚರಿಕೆ ವಹಿಸಿದಲ್ಲಿ ಏಡ್ಸ್‌ನ್ನು ಹರಡದಂತೆ ತಡೆಯಬಹುದು. ಅಲ್ಲದೇ ಈಗಾಗಲೇ ಏಡ್ಸ್/ಹೆಚ್.ಐ.ವಿ. ಪೀಡಿತರಿಗೆ ಎಲ್ಲರಂತೆ ಬದುಕಲು ಸಮಾಜದ ಎಲ್ಲರೂ ಅವಕಾಶ ಕಲ್ಪಿಸಬೇಕು. ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗದವರು ನಿರೋಧ್ (ಕಾಂಡಮ್) ಬಳಕೆಯ ಬಗ್ಗೆ ಹಳ್ಳಿಹಳ್ಳಿಗಳಲ್ಲಿ ತಿಳಿಸಬೇಕು. ಅದು ಕೇವಲ ಗರ್ಭನಿರೋಧಕ ಮಾತ್ರವಲ್ಲ ಲೈಂಗಿಕ ರೋಗಗಳು ಹಾಗೂ ಏಡ್ಸ್‌ನಿಂದಲೂ ದೂರವಿಡುತ್ತದೆ ಎಂಬುದನ್ನು ಜನರಿಗೆ ತಿಳಿಸಿ ಹೇಳಬೇಕು.

ಹೆಚ್.ಐ.ವಿ. ಹೀಗೆ ಬರುತ್ತದೆ



ಹೆಚ್.ಐ.ವಿ. ಸೋಂಕುಳ್ಳವರೊಂದಿಗೆ ಅಸುರಕ್ಷಿತ ಲೈಂಗಿಕ ಸಂಪರ್ಕ ಹೊಂದುವುದರಿಂದ.



ಹೆಚ್.ಐ.ವಿ ಸೋಂಕುಳ್ಳ ರಕ್ತಪೂರಣದಿಂದ (Blood transfusion)



ಹೆಚ್.ಐ.ವಿ. ಸೋಂಕುಳ್ಳ ತಾಯಿಯಿಂದ ಗರ್ಭದಲ್ಲಿರುವ ಮಗುವಿಗೂ ಸೋಂಕು ಹರಡುತ್ತದೆ.



ಸೋಂಕುಂಟಾದ ವ್ಯಕ್ತಿಗೆ ಉಪಯೋಗಿಸಿದ ಕ್ಷೌರದ ಬ್ಲೇಡನ್ನೇ ಇನ್ನಿತರರೂ ಉಪಯೋಗಿಸುವುದರಿಂದ ಸೋಂಕು ಹರಡುತ್ತದೆ.



ಸೋಂಕಿಗೊಳಗಾದವರು ಉಪಯೋಗಿಸಿದ ವೈದ್ಯಕೀಯ ಸಲಕರಣೆಗಳನ್ನೇ ಇತರರೂ ಉಪಯೋಗಿಸುವುದರಿಂದ.

ಮಾಡದ ಪಾಪಕ್ಕೆ ಬಲಿಯಾದ ಆಡುವ ಮಗು



ಹೆಚ್.ಐ.ವಿ. ಎಂದರೇನು?

ಇದು ಹ್ಯೂಮನ್ ಇಮ್ಯುನೋಡೆಫಿಷಿಯನ್ಸಿ ವೈರಸ್. ಒಬ್ಬ ವ್ಯಕ್ತಿ ಹೆಚ್.ಐ.ವಿ. ಸೋಂಕಿಗೊಳಗಾದರೆ ಅವನನ್ನು ಹೆಚ್.ಐ.ವಿ. ಪಾಸಿಟಿವ್ ವ್ಯಕ್ತಿ ಎಂದು ಪರಿಗಣಿಸಬೇಕು. ರಕ್ತ ಪರೀಕ್ಷೆಯಿಂದ ಮಾತ್ರ ಹೆಚ್.ಐ.ವಿ.ಯ ಇರುವಿಕೆ ತಿಳಿಯುತ್ತದೆ. ಹೆಚ್.ಐ.ವಿ. ಪಾಸಿಟಿವ್ ಬಂದ ತಕ್ಷಣ ಆ ವ್ಯಕ್ತಿ ಏಡ್ಸ್‌ನಿಂದ ನರಳುತ್ತಿದ್ದಾನೆ ಎಂದರ್ಥವಲ್ಲ. ಅಂತಹ ವ್ಯಕ್ತಿ ಯಾವುದೇ ಲಕ್ಷಣಗಳಿಲ್ಲದೇ 3 ರಿಂದ 12 ವರ್ಷ ಚೆನ್ನಾಗಿರಬಹುದು. ಏಡ್ಸ್ ಹೆಚ್.ಐ.ವಿ. ಸೋಂಕಿನ ಕೊನೆಯ ಘಟ್ಟವಾಗಿರುತ್ತದೆ.

ಏಡ್ಸ್ ಎಂದರೇನು?

ಏಡ್ಸ್ ಅಂದರೆ Acquired Immunodeficiency Syndrome. ಇದರಿಂದ ದೇಹದಲ್ಲಿ ರೋಗ ನಿರೋಧಕ ವ್ಯವಸ್ಥೆ ಕುಸಿಯುತ್ತದೆ. ಬೇರೆ ಬೇರೆ ಕಾಯಿಲೆಗಳ ಸೋಂಕಿಗೆ ದೇಹವು ತೆರೆದುಕೊಳ್ಳುತ್ತದೆ.

ಹೆಚ್.ಐ.ವಿ. ಲಕ್ಷಣ

ಹೆಚ್.ಐ.ವಿ. ದೇಹದೊಳಕ್ಕೆ ಪ್ರವೇಶಿಸಿದ ಒಂದು ವಾರದ ಬಳಿಕ ಜ್ವರ, ತಲೆನೋವು, ಮೈಕೈನೋವು ಉಂಟಾಗುತ್ತದೆ. ಈ ಲಕ್ಷಣಗಳು ಕೆಲವು ದಿನಗಳ ಬಳಿಕ ಕಡಿಮೆಯಾಗಿ ಬಿಡುತ್ತವೆ. ನಂತರ ಯಾವುದೇ ಲಕ್ಷಣವಿಲ್ಲದೇ 3 ರಿಂದ 12 ವರ್ಷಗಳವರೆಗೆ ಇರುತ್ತಾರೆ.

ಏಡ್ಸ್‌ನ ಲಕ್ಷಣ:

ಪ್ರಾರಂಭದಲ್ಲಿ ತಲೆಸುತ್ತು, ಜ್ವರ ಬರುವುದು, ತಿಂಗಳುಗಟ್ಟಲೇ ಭೇದಿಯಾಗುವುದು, ದೇಹದ ಎಲ್ಲೆಡೆ ಹಾಲ್ರಸಗ್ರಂಥಿಗಳ ಊತ ಕಂಡುಬರುವುದು. ದೇಹದ ರೋಗ ನಿರೋಧಕ ವ್ಯವಸ್ಥೆ ಕುಸಿದ ನಂತರ ಕ್ಯಾಂಡಿಡಿಯಾಸಿಸ್, ಕ್ಷಯ (T.B) ರೋಗ, ನ್ಯುಮೋನಿಯಾ, ಬ್ಯಾಕ್ಟೀರಿಯಾ ಸೋಂಕು, ಹರ್ಪಿಸ್ ಸಿಂಪ್ಲೆಕ್ಸ್ ಮೆನಿಂಜೈಟಿಸ್ ಹಾಗೂ ಕಪೋಸಾ ಸಾರ್ಕೋಮಾಗಳು ದೇಹಕ್ಕೆ ಲಗ್ಗೆಯಿಡುತ್ತವೆ.

ಹೆಚ್.ಐ.ವಿ. ಸೋಂಕು ಹೊಂದಿರುವವರು ನೋಡಲು ಆರೋಗ್ಯಕರವಾಗಿಯೇ ಇರುತ್ತಾರೆ. ತಾವು ಸೋಂಕಿಗೊಳಗಾಗಿದ್ದೇವೆಂದು ಅವರಿಗೆ ತಿಳಿದಿರುವುದಿಲ್ಲ. ಅಂತಹ ವ್ಯಕ್ತಿಗಳು ಇನ್ನಿತರ ಆರೋಗ್ಯವಂತರಿಗೂ ಹೆಚ್.ಐ.ವಿ.ಸೋಂಕನ್ನು ಹರಡುತ್ತ ಹೋಗುತ್ತಾರೆ. ಅವರು ರಕ್ತ, ವೀರ್ಯ, ಯೋನಿದ್ರವಗಳಿಂದ ಹೆಚ್.ಐ.ವಿ. ಸೋಂಕನ್ನು ಹರಡುತ್ತಾರೆ. ಮಾದಕ ವ್ಯಸನಿಗಳು, ಹಿಮೋಫಿಲಿಯಾ ರೋಗಿಗಳು, ಬಡತನದಿಂದ ಬಳಲುವವರು ಬಹುಬೇಗನೇ ಇದಕ್ಕೆ ಬಲಿಯಾಗುತ್ತಾರೆ.

ರಕ್ತದ ಉತ್ಪನ್ನಗಳಿಂದ ಏಡ್ಸ್ ?

ರಕ್ತದ ಉತ್ಪನ್ನಗಳು ಅಂದರೆ ರಕ್ತದಿಂದ ಬಂದವುಗಳು. ಕೆಂಪು ರಕ್ತ ಕಣಗಳು, ಪ್ಲೇಟ್‌ಲೆಟ್ಸ್, ಪ್ಲಾಸ್ಮಾ, ಆಲ್ಬುಮಿನ್, ಇಮ್ಯುನೋಗ್ಲೊಬುಲಿನ್. ಫ್ಯಾಕ್ಟರ್ 8 ಇವುಗಳನ್ನೆಲ್ಲ ಹಲವಾರು ವೈದ್ಯಕೀಯ ಚಿಕಿತ್ಸೆಯಲ್ಲಿ ಬಳಸಲಾಗುವುದು. ಹೆಚ್.ಐ.ವಿ. ಸೋಂಕಿಗೊಳಗಾದ ವ್ಯಕ್ತಿಯಿಂದ ಇವುಗಳನ್ನು ತೆಗೆದುಕೊಳ್ಳುವುದರಿಂದ ಆರೋಗ್ಯವಂತರಿಗೂ ಸೋಂಕುಂಟಾಗುತ್ತದೆ. ಆದ್ದರಿಂದ ಸ್ಕ್ರೀನಿಂಗ್‌ಗೆ ಒಳಪಟ್ಟ ರಕ್ತವನ್ನೇ ತೆಗೆದುಕೊಳ್ಳಬೇಕು.

ರಕ್ತ ಪರೀಕ್ಷೆಯಿಂದ ?

ಏಕೆಂದರೆ ರಕ್ತ ಪರೀಕ್ಷೆಗೆ ಉಪಯೋಗಿಸುವ ಉಪಕರಣಗಳನ್ನು ಸಂಸ್ಕರಿಸಿಯೇ ಉಪಯೋಗಿಸಲಾಗುವುದು (Sterile)

ಆದರೆ ನಮ್ಮ ಸುರಕ್ಷತೆಗಾಗಿ ರಕ್ತ ತೆಗೆಯಲು ಉಪಯೋಗಿಸಿ ಬಿಸಾಡುವ ಸಿರಿಂಜು, ಸೂಜಿಗಳನ್ನು (Disposable Syringe) ಉಪಯೋಗಿಸುವುದು ಒಳ್ಳೆಯದು. ಇಲ್ಲವೇ ಸಿರಿಂಜು, ಸೂಜಿಗಳು ಕುದಿಸಲ್ಪಟ್ಟದೆಯೋ ಇಲ್ಲವೋ ಗಮನಿಸಬೇಕು.

ಹಚ್ಚೆ ಹಾಕಿಸಿ ಕೊಳ್ಳುವುದರಿಂದ, ಕಿವಿ ಚುಚ್ಚಿಸಿ ಕೊಳ್ಳು ವುದರಿಂದ ಹಾಗೂ ಆಕ್ಯುಪಂಕ್ಚರ್‌ಗಳಿಂದ ಹೆಚ್.ಐ.ವಿ. ಹರಡುವುದೆ?



ಹೌದು. ಆದ್ದರಿಂದ ಹಚ್ಚೆ ಹಾಕಿಸಿಕೊಳ್ಳುವವರು, ಕಿವಿ ಚುಚ್ಚಿಸಿಕೊಳ್ಳುವವರು ಅಥವಾ ಆಕ್ಯುಪಂಕ್ಚರ್ ಚಿಕಿತ್ಸೆಗೆ ಒಳಗಾಗುವವರು ಸೂಜಿ ಅಥವಾ ಉಪಕರಣವು ಸಂಸ್ಕರಿಸಿದ್ದಾಗಿದೆಯೋ (Sterile) ಇಲ್ಲವೋ ಗಮನಿಸಬೇಕು.

ರಕ್ತದಾನ (Blood Donation) ದಿಂದ ಸೋಂಕು ಹರಡುತ್ತದೆಯೇ?

ಇಲ್ಲ. ರಕ್ತದಾನದಿಂದ ಸೋಂಕು ಖಂಡಿತ ಹರಡುವುದಿಲ್ಲ. ರಕ್ತದಾನ ಜೀವವನ್ನೇ ಉಳಿಸುವುದು.



⇦ ನಿಮಗಾಗಿ ಇಲ್ಲವೇ ನಿಮ್ಮ ಗೆಳೆಯರಿಗಾಗಿ, ನೀವು ಯಾವಾಗಲೂ ಕೆಲವು ನಿರೋಧ್‌ಗಳನ್ನು ನಿಮ್ಮ ಕಿಸೆಯಲ್ಲಿ ಇಟ್ಟಿರಬಹುದು.

ಸ್ತ್ರೀಯರಲ್ಲಿ ಮಾಸಿಕ ರಕ್ತಸ್ರಾವವು ಸೋಂಕು ಹರಡುವುದೇ?

ಹೌದು. ಸೋಂಕಿಗೊಳಗಾದ ಸ್ತ್ರೀಯೊಡನೆ ಮುಟ್ಟಿನ ಸಮಯದಲ್ಲಿ ಲೈಂಗಿಕ ಸಂಪರ್ಕ ಮಾಡುವುದರಿಂದ ಹೆಚ್.ಐ.ವಿ. ಸೋಂಕು ಹರಡುತ್ತದೆ.

ಸೊಳ್ಳೆ ಕಚ್ಚುವುದರಿಂದ ಸೋಂಕು ಹರಡಬಹುದೆ?

ಇಲ್ಲ. ಸೊಳ್ಳೆ ಕಚ್ಚುವುದರಿಂದ ಸೋಂಕು ಹರಡುವುದಿಲ್ಲ. ಸೊಳ್ಳೆಯ ಉದರದಲ್ಲಿ ಹೆಚ್.ಐ.ವಿ. ವೈರಸ್ ಬದುಕುಳಿಯಲಾರದು. ಈ ಕಾರಣದಿಂದ ಸೊಳ್ಳೆಗಳು ಸೋಂಕನ್ನು ಹರಡಲಾರವು ಎಂದು ಹೇಳಬಹುದು.

ಚುಂಬನದಿಂದ ಸೋಂಕು ಹರಡುತ್ತದೆಯೇ?

ಕೆನ್ನೆಯ ಮೇಲೆ, ತುಟಿಯ ಮೇಲೆ ಹಗುರವಾಗಿ ಚುಂಬಿಸುವುದರಿಂದ ಹೆಚ್.ಐ.ವಿ. ಸೋಂಕು ಹರಡುವುದಿಲ್ಲ. ಆದರೆ ದೀರ್ಘ ಚುಂಬನ ಕೊಡುವುದರಿಂದ ವ್ಯಕ್ತಿಯ ಬಾಯಿಯಲ್ಲಿನ ಲಾಲಾರಸದಲ್ಲಿ (Saliva) ಸ್ವಲ್ಪ ಮಟ್ಟಿಗೆ ವೈರಸ್‌ಗಳಿರುವುದರಿಂದ ಸೋಂಕು ಹರಡಬಹುದು. ಅಲ್ಲದೆ ವ್ಯಕ್ತಿಯ ಬಾಯಿಯಲ್ಲಿ ವಸಡುಗಳಿಂದ ರಕ್ತಸ್ರಾವವಾಗುತ್ತಿದ್ದರೆ, ಬಾಯಿ ಹುಣ್ಣಾಗಿದ್ದರೆ ಆದರಿಂದ ಹೆಚ್.ಐ.ವಿ. ಸೋಂಕುಂಟಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ.

ರೇಜರ್‌ಗಳನ್ನು ಬಳಸುವುದರಿಂದ ಸೋಂಕು ಹರಡಬಹುದೆ?

ಹೆಚ್.ಐ.ವಿ. ಸೋಂಕುಂಟಾದ ವ್ಯಕ್ತಿಯ ರೇಜರ್‌ಗಳನ್ನೇ ಆರೋಗ್ಯವಂತ ವ್ಯಕ್ತಿಯೂ ಉಪಯೋಗಿಸುವುದರಿಂದ ಸೋಂಕು ಹರಡುತ್ತದೆ.

ದಂತ ವೈದ್ಯರ ಬಳಿಗೆ ಚಿಕಿತ್ಸೆಗೆ ಹೋಗುವುದರಿಂದ ಸೋಂಕುಂಟಾಗಬಹುದೆ?

ದಂತ ಶಸ್ತ್ರಚಿಕಿತ್ಸೆಯಿಂದ ಹೆಚ್.ಐ.ವಿ. ಸೋಂಕುಂಟಾಗುವ ಸಾಧ್ಯತೆ ಬಹು ಕಡಿಮೆ. ದಂತ ವೈದ್ಯರು ಉಪಕರಣಗಳನ್ನು ಸರಿಯಾಗಿ ಸಂಸ್ಕರಿಸಿದ್ದಾರೆಯೇ ಇಲ್ಲವೋ ಎಂದು ಮುಂಜಾಗ್ರತಾ ಕ್ರಮವಾಗಿ ಪರಿಶೀಲಿಸುವುದು ಒಳ್ಳೆಯದು.

ಏಡ್ಸ್ ಅನುವಂಶೀಯವೆ?


ಖಂಡಿತ ಅಲ್ಲ. ಇದು ಅನುವಂಶೀಯ ರೋಗವಲ್ಲ. ವ್ಯಕ್ತಿ ತಾನೇ ಇದನ್ನು ಪಡೆದುಕೊಳ್ಳುತ್ತಾನೆ. ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ, ರಕ್ತದಿಂದ, ಸೋಂಕುಂಟಾದ ತಾಯಿಯಿಂದ ಮಗುವಿಗೆ ಹುಟ್ಟುವುದಕ್ಕೆ ಮುಂಚೆ ಇಲ್ಲವೇ ಹುಟ್ಟಿದ ಕೂಡಲೇ ಬರುವಂತಹದು (ಪಡೆದುಕೊಳ್ಳುವಂತಹದು).


ದೇಹದ ಹೊರಗೆ ಹೆಚ್.ಐ.ವಿ. ವೈರಸ್ ಎಷ್ಟು ಸಮಯ ಬದುಕಿರಬಲ್ಲದು?

ಹೆಚ್.ಐ.ವಿ. ವೈರಸ್ ಬಹಳ ನಾಜೂಕಿನದು. ಒಂದು ಬಾರಿ ದೇಹದ ಹೊರಗಡೆ ಗಾಳಿಯ ಸಂಪರ್ಕಕ್ಕೆ ಬಂದರೆ ಸತ್ತು ಹೋಗುತ್ತದೆ.

ಹೇಗೆ ದಾಳಿಯಿಡುತ್ತದೆ?


ಒಂದು ಬಾರಿ ಹೆಚ್.ಐ.ವಿ. ವೈರಸ್ ದೇಹದೊಳಕ್ಕೆ ಪ್ರವೇಶ ಪಡೆದರೆ ಅದು ರಕ್ತದಲ್ಲಿನ ಬಿಳಿರಕ್ತಗಳಲ್ಲಿರುವ ಟಿ.ಲಿಂಫೋಸೈಟ್ಸ್ ಜೀವಕೋಶಗಳಲ್ಲಿ ಸೇರಿಕೊಳ್ಳುತ್ತದೆ (ಇದು ಸೋಂಕು






ಹೆಚ್.ಐ.ವಿ. ಸೋಂಕು ಹೀಗೆ ಹರಡುವುದಿಲ್ಲ.

ಸ್ಪರ್ಶದಿಂದ, ಕೈಕೈ ಹಿಡಿದುಕೊಳ್ಳುವುದರಿಂದ, ಕೈ ಕುಲುಕುವುದರಿಂದ, ಒಂದೇ ಕಡೆ ಕೆಲಸ ಮಾಡುವುದರಿಂದ, ಒಟ್ಟಿಗೇ ಆಟವಾಡುವುದರಿಂದ, ಮಕ್ಕಳನ್ನು ಮುದ್ದಿಸುವುದರಿಂದ, ಒಂದೇ ತಟ್ಟೆಯಲ್ಲಿ ಊಟಮಾಡುವುದರಿಂದ, ಸೋಂಕಿಗೊಳಗಾದವರ ಬಟ್ಟೆ ಧರಿಸುವುದರಿಂದ, ಸೋಂಕುಂಟಾದ ವ್ಯಕ್ತಿ ತಯಾರಿಸಿದ ಅಡುಗೆ ಊಟ ಮಾಡುವುದರಿಂದ, ಸೊಳ್ಳೆ ತಿಗಣೆ ಕಚ್ಚುವುದರಿಂದ, ಈಜುಕೊಳ ಉಪಯೋಗಿಸುವುದರಿಂದ, ಕಕ್ಕಸು ಮನೆ, ಸ್ನಾನದ ಮನೆಗಳನ್ನು ಉಪಯೋಗಿಸುವುದರಿಂದ, ರಕ್ತ ದಾನ ಮಾಡುವುದರಿಂದ, ಕಣ್ಣೀರಿನಿಂದ, ಬೆವರಿನಿಂದ ಏಡ್ಸ್ ಖಂಡಿತ ಹರಡಲಾರದು.





ಗಳಿಂದ ಮನುಷ್ಯನ ದೇಹದ ರಕ್ಷಣೆ ಮಾಡುವ ಟಿ.ಕೋಶ) ವೈರಸ್ ಉತ್ಪತ್ತಿ ಮಾಡುವ ಎಂಜೈಮ್ ನಿಂಥ ವೈರಸ್‌ನ ಅನುವಂಶೀಯ ದ್ರಾವ್ಯವು ಡಿ.ಎನ್.ಎ. ಅನುವಂಶೀಯ ದ್ರವ್ಯವಾಗಿ ಪರಿವರ್ತನೆ ಹೊಂದುತ್ತದೆ. ನಂತರ ಈ ವೈರಸ್ ಡಿ.ಎನ್.ಎ.ಯು ಟಿ. ಲಿಂಫೋಸೈಟ್‌ನ ಡಿ.ಎನ್.ಎ.ಯೊಡನೆ ಸಂಯೋಜನೆ ಹೊಂದುತ್ತದೆಯಲ್ಲದೆ ಆ ಜೀವಕೋಶದ ಜೀವನಾವಧಿ ಮುಗಿಯುವವರೆಗೂ ಉಳಿದುಕೊಳ್ಳುತ್ತದೆ. ಈ ಸೋಂಕುಂಟಾದ ಜೀವಕೋಶವು ಇನ್ನು ಮುಂದೆ ವೈರಸ್‌ನ್ನು ಉತ್ಪಾದಿಸುವ ಕಾರ್ಖಾನೆಯಾಗುತ್ತದೆ. ಅಲ್ಲಿಂದ ಅಧಿಕ ವೈರಸ್‌ಗಳು ಹುಟ್ಟುತ್ತವೆ. ಈ ವೈರಸ್‌ಗಳು ಹೊಸ ಟಿ. ಲಿಂಫೋಸೈಟ್ಸ್‌ಗೆ ದಾಳಿಯಿಡುತ್ತವೆ. ಹೀಗೆ ಈ ಚಕ್ರ ಮರುಕಳಿಸುತ್ತದೆ ಹಾಗೂ ಮುಂದುವರೆಯುತ್ತ ಹೋಗುತ್ತದೆ. ಕೆಲವು ವರ್ಷಗಳ ನಂತರ ಟಿ. ಜೀವಕೋಶಗಳು ನಾಶವಾಗುತ್ತವೆ.



ಮಮತೆಯ ಕುಡಿ ಕಿತ್ತು ಹಾಕುವ ಮಹಾಮಾರಿ ⇧

ಜೀವಕೋಶದಲ್ಲಿರುವ CD4 ಕಣಗಳು ಮತ್ತು ಮದುಳಿನ ನರಕೋಶದಲ್ಲಿರುವ CD4

ಏಡ್ಸ್ ರೋಗಿಗಳಿಗೊಂದು ಆಶಾಕಿರಣ: ಹುಬ್ಬಳ್ಳಿಯ ಡಾ. ಯಾಳಗಿ

ಪ್ರಖ್ಯಾತ ಸರಕಾರಿ ಸಂಸ್ಥೆ ಸ್ವಾಯತ್ತತೆಯನ್ನು ಪಡೆದು ಸಾಧಿಸಲಾಗದ್ದನ್ನು ತಮ್ಮ ಅರ್ಪಣಾ ಭಾವ, ಸಾಮಾಜಿಕ ಕಳಕಳಿ, ಸಾರ್ಥಕ ಸೇವಾ ಮನೋಭಾವದ ಮೂಲಕ ಹುಬ್ಬಳ್ಳಿ ನಗರದ ಮಧ್ಯ ವಯಸ್ಕ ವೈದ್ಯರೊಬ್ಬರು ಸಾಧಿಸಿದುದು ನಿಜಕ್ಕೂ ಹೆಮ್ಮೆ ತರುತ್ತದೆ. ಅವರು ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯದ ಹಿಂದಿನ ವಿದ್ಯಾರ್ಥಿ ಹೆಸರು ಭರತರಾಜ್ ಪದ್ಮರಾಜ್ ಯಾಳಗಿ. ವೈದ್ಯಕೀಯ ಪದವಿ ಮತ್ತು ಪ್ರಾಯೋಗಿಕ ರೋಗ ವಿಧಾನದಲ್ಲಿ ಡಿಪ್ಲೊಮಾ ಪಡೆದ ನಂತರ ಸನ್ಮತಿ ವೈದ್ಯಕೀಯ ಪ್ರಯೋಗಾಲಯ ವೆಂಬ ರೂಪದಲ್ಲಿ ಅವರು ಸ್ಥಾಪಿಸಿದ ಸಂಸ್ಥೆಯನ್ನು ಉತ್ತರ ಕರ್ನಾಟಕದ ಜನತಾನುಕೂಲಕ್ಕಾಗಿ ಏಳು ವರ್ಷಗಳ ಹಿಂದೆ ಸನ್ಮತಿ ಏಡ್ಸ್ ಪತ್ತೆ ಕೇಂದ್ರ, ಹಾಗೂ ಸಂಶೋಧನೆ ಮತ್ತು ಸಲಹಾ ಸಂಸ್ಥೆಯಾಗಿ ಉನ್ನತೀಕರಿಸಿದರು ನಗರದ ಇನ್ನೊಬ್ಬ ವೈದ್ಯ ಎ.ಎಸ್.ಮಂಟ ಗಣೇಕರ್ ಅವರು ಎಲ್ಲ ಚಟುವಟಿಕೆಗಳನ್ನು ಕ್ರೋಢೀಕರಿಸುತ್ತಾರೆ.

ಈ ಸಂಸ್ಥೆಯಲ್ಲಿ ELISA READER (USA) ಎಂಬ ರೋಗ ಸಂದೇಹ•ನಿವಾರಣೋಪಕರಣವನ್ನು 1992ರಲ್ಲೂ, ರೋಗೋಪಸ್ಥಿತಿಯನ್ನು ನಿರ್ಣಾಯಕವಾಗಿ " ಖಾತರಿ ಪಡಿಸುವ Western Blot Test ಉಪಕರಣವನ್ನು 1994ರಲ್ಲೂ ಸ್ಥಾಪಿಸಲಾಯಿತು. ಇದು ಸಮಗ್ರ ಉತ್ತರ ಕರ್ನಾಟಕದಲ್ಲಿ ಸ್ಥಾಪಿತವಾದ ಪ್ರಪ್ರಥಮ ಉಪಕರಣ. (ಆರು ತಿಂಗಳ ಹಿಂದೆ ನಗರದ NMR SCAN CENTRE ನಲ್ಲೂ ಎರಡನೇ ಉಪಕರಣ ಸ್ಥಾಪಿತವಾಗಿದೆ.

ಚಿಕಿತ್ಸೆ ಲಭ್ಯವಿರದ ಈ ರೋಗಕ್ಕೆ ಜನಾಂದೋಲನದ ಮೂಲಕ ಸಾರ್ವಜನಿಕ ಅಭಿಪ್ರಾಯ ರೂಪಿಸುವುದೊಂದೇ ಉಳಿದ ಉಪಾಯ. ಆದುದರಿಂದ ಈ ದಿಶೆಯಲ್ಲಿ ಡಾ. ಯಾಳಗಿಯವರು ಅವಿರತವಾಗಿ, ಶ್ರದ್ಧಾಪೂರ್ವಕವಾಗಿ ಶ್ರಮಿಸುತ್ತಿದ್ದಾರೆ.

ದೂರವಾಣಿಯ ಮೂಲಕ ಅಥವಾ ಖುದ್ದಾಗಿ ಬರುವ ವ್ಯಕ್ತಿಗಳಿಗೆ ಗುಪ್ತವಾಗಿ ಅಥವಾ ಮುಕ್ತವಾಗಿ ಸಲಹೆ ನೀಡುತ್ತಾರೆ. ರೋಗ ಸಂದೇಹ ನಿವಾರಣಾ ಪರೀಕ್ಷೆ ಕೈಕೊಳ್ಳುತ್ತಾರೆ. ಇಂಥ ಎರಡೂ ಬಗೆಯ ಸುಮಾರು 1000 ಪ್ರಕರಣಗಳನ್ನು ಪೂರೈಸಿದ್ದಾರೆ. ಶೇಕಡಾ 80 ರಷ್ಟು ವೇಶ್ಯೆಯರು AIDS ರೋಗವಾಹಕರೆಂಬುದೂ, ಶೇಕಡಾ 98 ರಷ್ಟು ರೋಗಿಗಳು ಅಸುರಕ್ಷಿತ ಬಹು ಲೈಂಗಿಕ ಚಟುವಟಿಕೆ-ಕಾಮ ಕೇಳಿಯ ಬಲಿಪಶುಗಳೆಂಬುದು ಅವರ ಅಭಿಮತ. ನಾನು ಮಾಹಿತಿ ಸಂಗ್ರಹಿಸುತ್ತಿದ್ದಂತೆಯೇ ಐದು ವೇಶ್ಯೆಯರು ಪ್ರಾಥಮಿಕ ಪರೀಕ್ಷೆಗಾಗಿ ಪೊಲೀಸ್ ಇಲಾಖೆಯ ವತಿಯಿಂದ ಬಂದಾಗ ಇದು ದೈನಂದಿನ ಕರ್ತವ್ಯವೆಂದೂ ಮತ್ತು ಈ ಪರೀಕ್ಷೆ ಸಂಪೂರ್ಣ ಉಚಿತವಾದ ಸೇವೆಯೆಂದೂ ಹೇಳಿ ನನ್ನ ಮನ ಗೆದ್ದರು.

ಡಾ. ಯಾಳಗಿಯವರು, ದೃಶ್ಯ - ಶ್ರವಣ ಸಾಧನೆಗಳೊಡನೆ, ಆಮಂತ್ರಣ ಬಂದ ಹಳ್ಳಿ ನಗರಗಳಲ್ಲಿ ಸಾರ್ವಜನಿಕ ಭಾಷಣಗಳನ್ನು ನೀಡಿದ್ದಾರೆ. ಇವುಗಳ ಒಟ್ಟು ಸಂಖ್ಯೆ ಸುಮಾರು 400. ಮೂರು ಸಲ ಆಕಾಶವಾಣಿ ಧಾರವಾಡ ನಿಲಯದಿಂದ ಭಾಷಣ ಮಾಡಿದ್ದಾರೆ. ಪೊಲೀಸ್ ಸಿಬ್ಬಂದಿ, ಶಾಲೆ-ಕಾಲೇಜುಗಳ ವಿದ್ಯಾರ್ಥಿ- ವಿದ್ಯಾರ್ಥಿನಿಯರು, ಎನ್.ಸಿ.ಸಿ. ಕೆಡೆಟ್‌ಗಳು, ಗ್ರಾಮವಾಸಿಗಳು ಇದರಿಂದ ಪ್ರಭಾವಿತರಾಗಿದ್ದಾರೆ.

ಮಕ್ಕಳಲ್ಲಿ 12 ತಿಂಗಳ ನಂತರ, ದೊಡ್ಡವರಲ್ಲಿ 29 ತಿಂಗಳ ನಂತರ ರೋಗದ ಪ್ರಾರಂಭಿಕ ಚಿಹ್ನೆಗಳು ಕಾಣತೊಡಗುತ್ತವೆ. ರೋಗದ ಪೂರ್ಣ ಲಕ್ಷಣಗಳು 2 ರಿಂದ 10 ವರ್ಷಗಳೊಳಗೆ ಕಂಡುಬರುತ್ತವೆ. ಹುಬ್ಬಳ್ಳಿ ಧಾರವಾಡದಲ್ಲಿ 800 ಕ್ಕೂ ಅಧಿಕ ವ್ಯಕ್ತಿಗಳಿಗೆ HIV ಸೋಂಕು ತಗುಲಿದ್ದು, ಈಗಾಗಲೇ 80 ಜನ ರೋಗಕ್ಕೆ ಬಲಿಯಾಗಿದ್ದಾರೆಂದು ತಿಳಿಸಿದರು. ಎಲಿಸಾ ರೀಡರ್ ಪರೀಕ್ಷೆಗೆ ರೂ.200-250, ವೆಸ್ಟರ್ನ್ ಬ್ಲಾಟ್ ಟೆಸ್ಟ್‌ಗೆ ರೂ. 1600 ಶುಲ್ಕ ಆಕರಿಸಲಾಗುತ್ತದೆ.

ವೈಯಕ್ತಿಕ ಅಪಖ್ಯಾತಿ, ದೂಷಣೆ ಇತ್ಯಾದಿಗಳಿಗೆ ಬಗ್ಗದೆ ಕೇವಲ AIDS ರೋಗದ ಹಬ್ಬುವಿಕೆಯನ್ನು ತಡೆಯುವ ಪ್ರಾಮಾಣಿಕ ಉದ್ದೇಶದಿಂದ ಸುಮಾರು 15 ರಷ್ಟು ನಿಶ್ಚಿತಗೊಂಡ ಲಗ್ನಗಳನ್ನು ರದ್ದುಗೊಳಿಸಿದ್ದಾರೆ; ನಿರಪರಾಧಿ ಜೀವಗಳು ಬಲಿಯಾಗುವುದನ್ನು ತಪ್ಪಿಸಿದ್ದಾರೆ. ಸಾರ್ವಜನಿಕರಾಗಲಿ, ಸಂಸ್ಥೆಗಳಾಗಲಿ ಇವರ ಸೇವೆಯನ್ನು ಬಳಸಿಕೊಳ್ಳಲು ''ಡಾ. ಭರತರಾಜ್ ಪಿ. ಯಾಳಗಿ, ದಾಜಿಬಾನ ಪೇಟೆ ತಿರುವು, ಎಸ್.ಟಿ. ಭಂಡಾರಿ ಅಂಗಡಿ ಎದುರು, ಮೂರು ಸಾವಿರ ಮಠದ ರಸ್ತೆ, ಹುಬ್ಬಳ್ಳಿ-28'' ಈ ವಿಳಾಸದಲ್ಲಿ ಡಾಕ್ಟರರನ್ನು ಕಾಣಬಹುದು.

■ ಡಾ. ಟಿ.ಕೆ. ತಾಪಸ್

ಏಡ್ಸ್ ತಡೆಗಟ್ಟುವ ನಿರೋಧ್

ನಿರೋಧ್ ಎಲ್ಲಿ ಸಿಗುತ್ತದೆ?

ಗಂಡಸರು ಮತ್ತು ಹೆಂಗಸರೂ ನಿರೋಧ್ ಅನ್ನು ಖರೀದಿಸಬಹುದು. ಅದು ದಿನನಿತ್ಯದ ವಸ್ತುವಾಗಿದೆ. ಅದನ್ನು ನೀವು ಕೆಮಿಸ್ಟ್ ಅಥವಾ ಔಷಧಿ ಅಂಗಡಿಯಲ್ಲಿ, ದಿನಸಿ ವ್ಯಾಪಾರಿಗಳಲ್ಲಿ ಅಥವಾ ಪಾನ್ ಅಂಗಡಿಗಳಲ್ಲೂ ಖರೀದಿಸಬಹುದು. ಸರಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ದೊರೆಯುತ್ತದೆ.

ನೆನಪಿಡಿ


ನಿರೋಧ್‌ಗಳು ಅತೀ ಹಳೆಯದಾಗಿರಬಾರದು. ನೀವು ನಿರೋಧನ್ನು ಖರೀದಿಸುವ ಮುನ್ನ ಪೊಟ್ಟಣದ ಮೇಲೆ ಮುದ್ರಿಸಿರುವ ದಿನಾಂಕದ ಬಗ್ಗೆ ಖಚಿತಪಡಿಸಿಕೊಂಡು ಖರೀದಿಸಿ.

ಯಾರಲ್ಲಿ ಹೆಚ್.ಐ.ವಿ. ಸೋಂಕು ಇದೆಯೋ ಅಂತಹವರೊಂದಿಗೆ ನಿರೋಧ್ ಬಳಸದೆ ಅಸುರಕ್ಷಿತ ಲೈಂಗಿಕ ಕ್ರಿಯೆ ನಡೆಸಿದಲ್ಲಿ ನಿಮಗೆ ಏಡ್ಸ್ ಸೋಂಕು ಹರಡುವುದು. ಆದ್ದರಿಂದ, ನಿರೋಧ್ ಬಳಕೆಯಿಂದ ನಿಮ್ಮನ್ನೂ, ನಿಮ್ಮವರನ್ನೂ ರಕ್ಷಿಸಿ. ಲೈಂಗಿಕ ಕ್ರಿಯೆಗೆ ಮುನ್ನ ನಿರೋಧ್ ಅನ್ನು ಉದ್ರೇಕಗೊಂಡಿರುವ ಶಿಶ್ನದ ಮೇಲಿನಿಂದ ಕೆಳಮುಖವಾಗಿ ಅಥವಾ ಬುಡದವರೆಗೂ ಸುರಳಿ ಬಿಚ್ಚಬೇಕು. ಲೈಂಗಿಕ ಕ್ರಿಯೆಯ ನಂತರ, ವೀರ್ಯವು ನಿರೋಧ್‌ನೊಳಗೆ ಸಂಚಿತವಾಗುವುದು. ನಿರೋಧ್ ಅನ್ನು ನೀವು ಆರಂಭದಿಂದ ಅಂತ್ಯದವರೆಗೂ ಉಪಯೋಗಿಸಿದ್ದಲ್ಲಿ ಮಾತ್ರವೇ ಸುರಕ್ಷಿತವಾಗಿರುವುದು.

ನಿರೋಧ್ ಬಳಸುವುದರಿಂದ ನಿಮಗೆ ಏಡ್ಸ್ ಮತ್ತು ಲೈಂಗಿಕವಾಗಿ ಹರಡುವ ರೋಗಗಳ ವಿರುದ್ದ ರಕ್ಷಣೆ ಸಿಗುತ್ತದೆ. ಬೇಡದ ಗರ್ಭಧಾರಣೆಯ ವಿರುದ್ಧ, ನಿರೋಧ್ ರಕ್ಷಿಸುವುದು. ನಿಮಗೆ ಮತ್ತು ನಿಮ್ಮ ಸಂಗಾತಿಗೆ ಸೋಂಕು ಹರಡುವುದಿಲ್ಲ.




. ನಿರೋಧ್ ಬಳಸುವುದು ಹೇಗೆ?




ನಿರೋಧ್ ಹರಿಯದಂತೆ ಜಾಗರೂಕತೆಯಿಂದ ನಿರೋಧ್‌ನ ಪೊಟ್ಟಣವನ್ನು ಬಿಚ್ಚಿ.




ಅದನ್ನು ನಿಮ್ಮ ಕೈಯೊಳಗೆ ತೆಗೆದುಕೊಳ್ಳಿ.




ಹೆಬ್ಬೆರಳು ಮತ್ತು ತೋರುಬೆರಳಿನ ಮುಖಾಂತರ ನಿರೋಧ್‌ನ ತುದಿಯಲ್ಲಿರುವ ಗಾಳಿಯನ್ನು ಅದುಮಿ ಹೊರಹಾಕಿ.




ಉದ್ರೇಕ ಗೊಂಡ ಶಿಶ್ನದ ಮೇಲೆ ನಿರೋಧ್ ಅನ್ನು ಕೆಳಮುಖವಾಗಿ ಸುರಳಿ ಬಿಚ್ಚಿ.



ಶಿಶ್ನದ ಬುಡದವರೆಗೂ ನಿರೋಧ್ ಅನ್ನು ಸುರಳಿ ಬಿಚ್ಚಿ.



ವೀರ್ಯ ಸ್ಖಲನವಾದ ನಂತರ ಮತ್ತು ಶಿಶ್ನವು ಮುದುರುವ ಮುನ್ನ, ನಿರೋಧ್ ಅನ್ನು ಎಚ್ಚರಿಕೆಯಿಂದ ಸುರುಳಿ ಸುತ್ತುತ್ತಾ ಸ್ವಲ್ಪವೂ ವೀರ್ಯವು ಚೆಲ್ಲದಂತೆ ನೋಡಿಕೊಳ್ಳಿ.



ಅದನ್ನು ಒಂದು ಸಲ ಬಳಸಿದ ಕೂಡಲೇ ಕಾಗದದಲ್ಲಿ ಸುತ್ತಿ ಬಿಸಾಕಿರಿ.

ಕಣಗಳ ಮೇಲೆ ವೈರಸ್ ದಾಳಿ ಮಾಡುತ್ತದೆ. CD4 ಕಣಗಳು ರೋಗ ನಿರೋಧಕ ವ್ಯವಸ್ಥೆಯ ಬ್ಯಾಂಡ್ ಮಾಸ್ಟರ್ ಆಗಿದ್ದು ರೋಗನಿರೋಧಕ ವ್ಯವಸ್ಥೆಯ ಎಲ್ಲ ಕಾರ್ಯಗಳನ್ನು ಹತೋಟಿಯಲ್ಲಿಡುತ್ತವೆ. ನಮ್ಮ ದೇಹದಲ್ಲಿ ಸಾಮಾನ್ಯವಾಗಿ CD4ನ ಸಂಖ್ಯೆ 1000-1200/1 ಇರುತ್ತದೆ. ಸೋಂಕಿನ ಪ್ರಾರಂಭದಲ್ಲಿ ಜ್ವರ, ತಲೆನೋವು, ಕಂಡುಬರುತ್ತದೆ. ಈ ಸಮಯದಲ್ಲಿ CD4 ಕಣಗಳ ಮೇಲೆ ಯಾವ ಪರಿಣಾಮವೂ ಆಗಿರುವುದಿಲ್ಲ.

ನಂತರ ಕೆಲವು ದಿನಗಳ ಮೇಲೆ CD4ನ ಸಂಖ್ಯೆ 500/1 ಕ್ಕಿಂತ ಹೆಚ್ಚಿದಾಗ ಹಾಲ್ರಸ ಗ್ರಂಥಿಗಳ ಊತ ಕಂಡುಬರುತ್ತದೆ. CD4 ಸಂಖ್ಯೆ 500/1 ಕ್ಕಿಂತ ಕಡಿಮೆಯಾದಾಗ ಕ್ಯಾಂಡಿಡಿಯಾಸಿಸ್, ಹರ್ಪಿಸ್ ಸಿಂಪ್ಲೆಕ್ಸ್‌ಗಳು ಕಾಣಿಸಿಕೊಳ್ಳುತ್ತವೆ. CD4 ಸಂಖ್ಯೆ 400/1 ಇದ್ದಾಗ ಕ್ಷಯದ ಲಕ್ಷಣಗಳು ಕಂಡುಬರುತ್ತವೆ.

CD4ನ ಸಂಖ್ಯೆ 200/1 ಕ್ಕಿಂತ ಕಡಿಮೆಯಾದಾಗ ರೋಗ ನಿರೋಧಕ ವ್ಯವಸ್ಥೆಯ ಕುಸಿತ ಹೆಚ್ಚಾಗಿ ಅವಕಾಶವಾದಿ ಸೋಂಕುಗಳು ಕಂಡುಬರುತ್ತವೆ. ನ್ಯುಮೋನಿಯಾ, ಇನ್ನಿತರ ಬ್ಯಾಕ್ಟಿರಿಯಾ, ವೈರಸ್‌ಗಳ ಸೋಂಕು ಕಂಡುಬರುತ್ತವೆ. ನಂತರ ಕಪೋಡಿ ಸಾರ್ಕೋಯಾ (ಕ್ಯಾನ್ಸರ್) ಕಂಡುಬರುತ್ತದೆ. ನಂತರ ದೇಹದ ರೋಗ ನಿರೋಧಕ ಶಕ್ತಿಯು ಸಂಪೂರ್ಣವಾಗಿ ಕುಸಿದು ಸೋಂಕುಗಳ ವಿರುದ್ಧ ಹೋರಾಡುವ ಶಕ್ತಿ ನಾಶವಾಗಿ ಸಾವು ಸಂಭವಿಸುತ್ತದೆ.

ಏಡ್ಸ್‌ನಿಂದ ಸತ್ತ ವ್ಯಕ್ತಿಯ ದೇಹವು ಎಷ್ಟು ಕಾಲದವರೆಗೆ ಸೋಂಕು ಹರಡಬಲ್ಲದು?

ಇದು ಸತ್ತ ವ್ಯಕ್ತಿಯ ದೇಹದ ಉಷ್ಣತೆಯ ಮೇಲೆ ಅವಲಂಬಿಸಿರುತ್ತದೆ. ಸತ್ತ ತಕ್ಷಣ ಮಂಜಿನಲ್ಲಿದ್ದರೆ (Cold Storage) ದೇಹದಲ್ಲಿ ವೈರಸ್ ಒಂದು ವಾರದವರೆಗೆ ಇರುತ್ತದೆ. ಏಡ್ಸ್‌ನಿಂದ ಸತ್ತ ವ್ಯಕ್ತಿಯ ದೇಹವನ್ನು ದಪ್ಪನೆಯ ಪಾಲಿಥೀನ್ ಹಾಳೆಗಳಿಂದ ಎರಡು ಪದರಗಳಿಂದ ಸುತ್ತಬೇಕು. ಎರಡು ಪದರಗಳ ಮಧ್ಯೆ ಬ್ಲೀಚ್ ಮಾಡಿರಬೇಕು.

ಕ್ಯಾನ್ಸರ್ ಮತ್ತು ಏಡ್ಸ್‌ಗಳ ಮಧ್ಯೆ ಸಂಬಂಧವಿದೆಯೇ?

ಕೆಲವು ಏಡ್ಸ್ ರೋಗಿಗಳಿಗೆ ಕ್ಯಾನ್ಸರ್ ಬರುತ್ತದೆ. ಏಡ್ಸ್ ರೋಗಿಗಳಲ್ಲಿ ಕಂಡು ಬರುವ ಕ್ಯಾನ್ಸರ್ ಎಂದರೆ ಕಪೋಸಿ ಸಾರ್ಕೋಮಾ ಮತ್ತು ನಾನ್‌ಹಾಡ್ಜ್‌ಕಿನ್ಸ್ ಲಿಂಪೋಮಾ. ಆದರೆ ಮುಖ್ಯವಾದ ಸಂಗತಿಯೆಂದರೆ ಎಲ್ಲ ಕ್ಯಾನ್ಸರ್ ರೋಗಿಗಳು ಏಡ್ಸ್ ರೋಗಿಗಳಾಗಿರುವುದಿಲ್ಲ.

ವ್ಯಕ್ತಿಯು ತನ್ನ ದಿನನಿತ್ಯದ ಬದುಕಿನಲ್ಲಿ

ಪತ್ರಿಕಾ ವರದಿಗಳು

ಇತ್ತೀಚೆಗೆ ದಿನಪತ್ರಿಕೆಯೊಂದರಲ್ಲಿ ವರದಿಯಾಗಿರುವಂತೆ ವಿಜಾಪುರದ ಒಂದು ಹಳ್ಳಿಯಲ್ಲಿ ಏಡ್ಸ್‌ಗೊಳಗಾದ ಒಬ್ಬ ಮಹಿಳೆಯನ್ನು ಊಟ, ನೀರು ಕೊಡದೇ ಊರ ಹೊರಗೆ ಸ್ಮಶಾನದ ಕಟ್ಟೆಯ ಮೇಲೆ ಮಲಗಿಸಿ ಹೋಗಿದ್ದರಂತೆ. ಯಾರೂ ಆಕೆಗೆ ಸಹಾಯ ಮಾಡಬಾರದೆಂದು ಊರಿನವರಿಗೆಲ್ಲ ತಾಕೀತು ಮಾಡಿದ್ದರಂತೆ. ಆಕೆ ಎಂತಹ ನೋವು ಅನುಭವಿಸಿರಬಹುದು? ಏಡ್ಸ್ ಬಗ್ಗೆ ಜನರಲ್ಲಿ ಭೀತಿಯಿದೆಯೇ ಹೊರತು ಅದರ ಬಗ್ಗೆ ತಿಳುವಳಿಕೆಯಿಲ್ಲ ಎನ್ನುವುದು ಇದರಿಂದಲೇ ವ್ಯಕ್ತವಾಗುತ್ತದೆ.

ಈಶಾನ್ಯ ಪ್ರದೇಶದ ಒಂದು ರಾಜ್ಯಕ್ಕೆ ಸೇರಿದ ಒಬ್ಬ ಯುವಕ ಇತ್ತೀಚೆಗೆ ತನ್ನ ಮದುವೆಗೆ ಮೊದಲೇ ವೈದ್ಯರು ಹೆಚ್.ಐ.ವಿ. ಇರುವಿಕೆಯನ್ನು ಬಹಿರಂಗಪಡಿಸಿದ್ದರಿಂದ ತನಗೆ ಅನ್ಯಾಯವಾಗಿದೆಯೆಂದೂ, ಮದುವೆಯಾಗಲು ಯಾರೂ ಹೆಣ್ಣು ಕೊಡುತ್ತಿಲ್ಲವೆಂದೂ ತನ್ನ ಹಕ್ಕು ಸಾಧಿಸಲು ನ್ಯಾಯಾಲಯಕ್ಕೆ ಹೋಗಿದ್ದ. ಆದರೆ ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ನ್ಯಾಯಪೀಠವು ಏಡ್ಸ್ ಪೀಡಿತ ರೋಗಿಗೆ ಮದುವೆ ಹಕ್ಕು ಇಲ್ಲ ಎನ್ನುವ ತೀರ್ಪು ನೀಡಿದೆ. ಇನ್ನೊಬ್ಬ ವ್ಯಕ್ತಿಯ ಜೀವನ ಹಾಳುಮಾಡುವ ಅಧಿಕಾರ ಯಾರಿಗೂ ಇಲ್ಲವೆಂದು ಹೇಳಿದೆ.

ಹೆಚ್.ಐ.ವಿ. ಸೋಂಕುಂಟಾದ ವ್ಯಕ್ತಿಯನ್ನು ಕಂಡುಹಿಡಿಯಲು ಸಾಧ್ಯವೆ?

ಖಂಡಿತ ಸಾಧ್ಯವಿಲ್ಲ. ರಕ್ತ ಪರೀಕ್ಷೆಯಿಂದ ಮಾತ್ರ ಹೆಚ್.ಐ.ವಿ. ಸೋಂಕು ದೃಢಪಡುತ್ತದೆ. ಹಾಗೆಯೇ ಬಾಹ್ಯ ಲಕ್ಷಣಗಳಿಂದ ಅರಿಯಲು ಸಾಧ್ಯವಿಲ್ಲ.

ವ್ಯಕ್ತಿಯ ದೇಹದಲ್ಲಿರುವ ರಕ್ತವನ್ನು ಸಂಪೂರ್ಣವಾಗಿ ರಕ್ತಪೂರಣ (Blood transfusion) ಮಾಡುವುದರಿಂದ ಹೆಚ್.ಐ.ವಿ. ಸೋಂಕು ಹೋಗುತ್ತದೆಯೇ?

ಖಂಡಿತ ಇಲ್ಲ. ದುರಾದೃಷ್ಟವಶಾತ್ ಹೆಚ್.ಐ.ವಿ. ಸೋಂಕುಂಟಾದ ವ್ಯಕ್ತಿಯಲ್ಲಿ ವೈರಸ್ ಕೇವಲ ರಕ್ತದಲ್ಲಲ್ಲದೇ ಇನ್ನಿತರ ಜೀವ ಕೋಶಗಳು ಹಾಗೂ ಅಂಗಾಂಗಳಲ್ಲಿ ಅಂದರೆ ಯಕೃತ್ (Liver), ಮಿದುಳು, ಪ್ಲೀಹ (Spleen) ಮುಂತಾದವುಗಳಲ್ಲಿಯೂ ಇರುತ್ತವೆ. ಆದ್ದರಿಂದ

ಏಡ್ಸ್ ರೋಗಿಗಳನ್ನು ರಕ್ಷಿಸುವ ಸಂಸ್ಥೆ - ಸಂರಕ್ಷ

ಇದು ಏಡ್ಸ್‌ರೋಗಿಗಳು ಹಾಗೂ ಹೆಚ್.ಐ.ವಿ. ಸೋಂಕಿಗೊಳಗಾಗಿರುವವರ ಏಳಿಗೆಗಾಗಿ ದುಡಿಯುತ್ತಿರುವ ಒಂದು ಸಂಸ್ಥೆ. 1993ರ ಡಿಸೆಂಬರ್‌ನಲ್ಲಿ ಈ ಸಂಸ್ಥೆ ಪ್ರಾರಂಭವಾಯಿತು. ಮೊದಲು ಜನರು ಇಲ್ಲಿಗೆ ಬರುವುದಕ್ಕೆ ಹೆದರುತ್ತಿದ್ದರಂತೆ. ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 9 ರಿಂದ 5ರವರೆಗೆ ಕೌನ್ಸೆಲಿಂಗ್ ಇರುತ್ತದೆ. ವೈದ್ಯರಿಂದ ತಪಾಸಣೆಯೂ ಇರುತ್ತದೆ. ಈಗ ಪ್ರತಿದಿನ ಸರಾಸರಿ 4 ರಿಂದ 5 ಜನ ಹೆಚ್.ಐ.ವಿ. ಪೀಡಿತರು ಬರುತ್ತಾರೆಂದು ಕೌನ್ಸೆಲರ್ ಆಗಿರುವ ಸುಲೇಖಾ ಹಾಗೂ ಇಳ್ಳಂಗೋ ಅವರು ಹೇಳುತ್ತಾರೆ. ಅವರು ಹೇಳಿರುವಂತೆ ಕೌನ್ಸೆಲಿಂಗ್‌ಗೆ ಬರುವವರಲ್ಲಿ ಎಲ್ಲ ರೀತಿಯ ಜನರೂ ಇರುತ್ತಾರೆ. 10 ವರ್ಷಗಳಿಂದ ಹೆಚ್.ಐ.ವಿ. ಪೀಡಿತರಾದವರು ಯಾವುದೇ ತೊಂದರೆಯಿಲ್ಲದೆ ಆರೋಗ್ಯವಾಗಿದ್ದಾರೆ. ಅಲ್ಲಿಗೆ ಬರುವವರಲ್ಲಿ ಸೋಂಕು ಶೇಕಡಾ 92 ಭಾಗ ಲೈಂಗಿಕ ಸಂಪರ್ಕದಿಂದಲೇ ಉಂಟಾಗಿರುತ್ತದೆ. ಉಳಿದ ಶೇಕಡಾ 8 ಭಾಗ ಮಾತ್ರ ಬೇರೆ ರೀತಿಯಿಂದ ಉಂಟಾಗಿರುತ್ತದೆಂದು ಅವರು ಹೇಳುತ್ತಾರೆ. ತೀವ್ರತರ ಸೋಂಕಿಗೊಳಗಾದ ರೋಗಿಗಳನ್ನು ಬೌರಿಂಗ್ ಇಲ್ಲವೇ ನಿಮ್ಹಾನ್ಸ್ ಆಸ್ಪತ್ರೆಗೆ ಸೇರಿಸುತ್ತಾರೆ. ಕೌನ್ಸೆಲಿಂಗ್‌ಗೆ ಬರುವವರಲ್ಲಿ ಎಲ್ಲ ಜಿಲ್ಲೆಗಳ ಜನರೂ ಇದ್ದಾರೆ. ಆದರೆ ಹೆಚ್ಚಿನವರು ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗೆ ಸೇರಿದವರಾಗಿದ್ದಾರೆಂದು ಅವರ ಹೇಳಿಕೆ.

ಹೆಚ್.ಐ.ವಿ. ಸೋಂಕು ಬೇರೆಯವರಿಗೆ ಹರಡದಂತೆ ತಡೆಗಟ್ಟುವುದನ್ನು ಪುಸ್ತಕಗಳ, ವಿಡಿಯೋ, ಆಡಿಯೋ ಕ್ಯಾಸೆಟ್‌ಗಳ ಮೂಲಕ ರೋಗಿಗೆ ತಿಳುವಳಿಕೆ ಕೊಡುತ್ತಾರೆ. ದಿನನಿತ್ಯದ ಜೀವನದಲ್ಲಿ ಆರೋಗ್ಯಕರ ಜೀವನ ಶೈಲಿ ಅಳವಡಿಸಿಕೊಳ್ಳುವುದನ್ನು ಹೇಳಿ ಕೊಡುತ್ತಾರೆ. ರೋಗಿಯ ಒಪ್ಪಿಗೆಯಿದ್ದರೆ ಅವನ ಮನೆಗೂ ಹೋಗಿ ಮನೆಯವರಿಗೂ ತಿಳುವಳಿಕೆ ನೀಡುತ್ತಾರೆ. ಸೆಂಟ್ರಲ್ ಜೈಲಿನಲ್ಲಿಯು ವಾರಕ್ಕೆ ಎರಡು ಬಾರಿ ಭೇಟಿ ನೀಡಿ ಅಲ್ಲಿಯ ಖೈದಿಗಳಿಗೂ ಕೌನ್ಸೆಲಿಂಗ್ ನಡೆಸುತ್ತಾರೆ.

ವಿಳಾಸ: ಸಂರಕ್ಷ, 402, ನೆಲಮಹಡಿ, ರಿಚ್‌ಮಂಡ್ ಸರ್ಕಲ್ ಹತ್ತಿರ, ರಂಕಾಪಾರ್ಕ್ ಅಪಾರ್ಟ್‌ಮೆಂಟ್, ಲಾಲ್‌ಬಾಗ್ ರಸ್ತೆ, ಬೆಂಗಳೂರು.

ವೈರಸ್‌ನ್ನು ಸಂಪೂರ್ಣವಾಗಿ ರಕ್ತವನ್ನು ಬದಲಾಯಿಸುವುದರಿಂದ ಹೋಗಲಾಡಿಸಲು ಸಾಧ್ಯವಿಲ್ಲ.

ಲೈಂಗಿಕ ರೋಗಗಳನ್ನು ನಿರ್ಲಕ್ಷಿಸಿದರೆ ಏಡ್ಸ್ ಬರುವುದೇ?

ಹೌದು. ಚಿಕಿತ್ಸೆ ತೆಗೆದುಕೊಳ್ಳದ ಲೈಂಗಿಕ ರೋಗಗಳು ಹೆಚ್.ಐ.ವಿ. ಸೋಂಕುಂಟಾಗುವುದಕ್ಕೆ ಕಾರಣವಾಗುತ್ತವೆ. ಜನನಾಂಗದ ಹುಣ್ಣು ಏಡ್ಸ್‌ನ ವೈರಸ್ ಪ್ರವೇಶಿಸಲು ನಗುನಗುತ್ತ ದಾರಿ ಮಾಡಿಕೊಡುತ್ತದೆ.


ಲೈಂಗಿಕ ರೋಗಗಳೆಂದರೇನು?

ಲೈಂಗಿಕ ಸಂಪರ್ಕದಿಂದ ಉಂಟಾಗುವ ಕಾಯಿಲೆಗೆ ಲೈಂಗಿಕರೋಗ ಎನ್ನುವರು. ಈ ರೋಗಗಳನ್ನು ಹಗುರವೆಂದು ಭಾವಿಸಬಾರದು. ಬಹಳ ಬೇಗನೇ ಅದಕ್ಕೆ ಚಿಕಿತ್ಸೆ ತೆಗೆದುಕೊಳ್ಳಬೇಕು. ಲೈಂಗಿಕ ರೋಗಗಳು ದೇಹಕ್ಕೆ ಅಪಾಯಕಾರಿಯಾದವುಗಳು. ಇದರಿಂದ ಬಂಜೆತನ ಹಾಗೂ ಇನ್ನಿತರ ದೈಹಿಕ ತೊಂದರೆಗಳಲ್ಲದೇ ಏಡ್ಸ್ ಕೂಡ ಉಂಟಾಗುತ್ತದೆ. ನೆನಪಿಡಿ ಲೈಂಗಿಕ ರೋಗಗಳಿಗೆ ಚಿಕಿತ್ಸೆಯಿದೆ. 'ಏಡ್ಸ್‌ಗೆ ಚಿಕಿತ್ಸೆಯಿಲ್ಲ. ಆದ್ದರಿಂದ ಲೈಂಗಿಕ ರೋಗಗಳಿಗೆ ತಕ್ಷಣ ಚಿಕಿತ್ಸೆ ಪಡೆದರೆ ಏಡ್ಸ್‌ನ್ನು ದೂರವಿಟ್ಟಂತಾಗುತ್ತದೆ.

ಲೈಂಗಿಕ ರೋಗಗಳು ಹೇಗೆ ಹರಡುತ್ತವೆ?

1. ಯೋನಿ, ಮುಖ ಅಥವಾ ಗುದಮೈಥುನದಿಂದ

2. ಸೋಂಕುಂಟಾದ ರಕ್ತಪೂರಣದಿಂದ (Blood transfusion)



3. ತಾಯಿಯಿಂದ ಮಗುವಿಗೆ ಗರ್ಭಿಣಿಯಾಗಿರುವಾಗ ಇಲ್ಲವೇ ಹೆರಿಗೆಯ ಸಮಯದಲ್ಲಿ ಹರಡುತ್ತದೆ.

ಸಾಮಾನ್ಯ ಲೈಂಗಿಕ ರೋಗಗಳು

ಗನೋರಿಯಾ, ಸಿಫಿಲಿಸ್, ಹರ್ಪಿಸ್, ಕಾಂಕ್ರ್ಯಾಡ್, ಲಿಂಫೊ ಗ್ರಾನೋಲೋಮಾ ವೆನರಮ್, ನಾನ್‌ಗೋನೋಕಾಕಲ್, ಯುರೇಟ್ರೈಟಿಸ್.

ಲೈಂಗಿಕ ರೋಗಗಳ ಲಕ್ಷಣಗಳು

1. ಜನನಾಂಗದ ಮೇಲೆ ಇಲ್ಲವೇ ಹತ್ತಿರದಲ್ಲಿ ಗುಳ್ಳೆಗಳು ಕಂಡು ಬರುವುದು.

ಏಡ್ಸ್ ರೋಗಿಗಳ ಆಸ್ಪತ್ರೆ

ಬೆಂಗಳೂರಿನ 'ಫ್ರೀಡಂ ಫೌಂಡೇಶನ್' ಸಂಸ್ಥೆ ಏಡ್ಸ್ ರೋಗಿಗಳ ಪಾಲಿಗೆ ನಿಜಕ್ಕೂ ವರವಾಗಿದೆ. ಅಲ್ಲಿನ ಡೈರೆಕ್ಟರ್ ಅಶೋಕರವರಿಗೆ ಫೋನ್ ಮಾಡಿ ವಿಷಯ ತಿಳಿಸಿದಾಗ ಅವರು ಆಯ್ತು ಬನ್ನಿ ಎಂದರು. ಅಲ್ಲಿನ ಎಕ್ಸಿಕ್ಯುಟಿವ್ ಕಾರ್ಲ್ ಸಿಕ್ವೆರಾರವರು ತಮ್ಮ ಸಂಸ್ಥೆಯ ಕಾರ್ಯವೈಖರಿಯ ಬಗ್ಗೆ ತಿಳಿಸಿಕೊಟ್ಟರು. ಅವರು 1997 ಜನವರಿಯಲ್ಲಿ ಏಡ್ಸ್ ರೋಗಿಗಳಿಗಾಗಿ ಆಸ್ಪತ್ರೆ ಮತ್ತು ವಸತಿ ಕೇಂದ್ರ ನಿರ್ಮಿಸಿದರಂತೆ. ಕೆಲವು ಏಡ್ಸ್‌ರೋಗಿಗಳು ತುಂಬ ದಾರುಣ ಸ್ಥಿತಿಯಲ್ಲಿ ಅಲ್ಲಿಗೆ ಬರುತ್ತಾರಂತೆ. ಮನೆಯವರು ಸಮಾಜ ಹಾಗೂ ಆಸ್ಪತ್ರೆಯವರು ಹೊರ ಹಾಕಿದಾಗ ನೆಮ್ಮದಿಯಿಂದ ಸಾಯುವ ತಾಣ ಯಾವುದಾದರೂ ಇದೆಯೇ ಎಂದು ಹುಡುಕಿಕೊಂಡು ಬರುತ್ತಾರಂತೆ. ರೋಗಿಗಳಲ್ಲಿ ಹೆಚ್ಚಿನವರು ಭಯ, ಆತಂಕಗಳಿಂದಲೇ ಬಂದಿರುತ್ತಾರೆ. 22ರಿಂದ 45 ವರ್ಷಗಳವರೆಗಿನವರೇ ಹೆಚ್ಚು. ಅಲ್ಲಿ ಮಕ್ಕಳೂ ಇದ್ದಾರೆ. ಒಟ್ಟು ಮೂವತ್ತು ಹಾಸಿಗೆಗಳಿವೆ. 15 ಹೆಣ್ಣುಮಕ್ಕಳಿಗೆ, 15 ಗಂಡಸರಿಗೆ ಮೀಸಲಿಟ್ಟಿದ್ದಾರೆ. ರೋಗಿಗಳಿಗೆ ಊಟ, ವಸತಿ, ಚಿಕಿತ್ಸೆ ಎಲ್ಲವೂ ಉಚಿತವಾಗಿ ದೊರೆಯುತ್ತದೆ. ವಾರಕ್ಕೊಮ್ಮೆ ವೈದ್ಯರು ಪರೀಕ್ಷಿಸುತ್ತಿರುತ್ತಾರೆ. ದಿನಕ್ಕೆರಡು ಬಾರಿ ಬೆಳಿಗ್ಗೆ ಹಾಗೂ ಸಂಜೆ ಕೌನ್ಸೆಲಿಂಗ್ ಇರುತ್ತದೆ.

ಏಡ್ಸ್ ರೋಗಿಗಳ ಆಶ್ರಯ ಧಾಮದಲ್ಲಿರುವ ಕೌನ್ಸೆಲರ್ ಜಿ.ಎಸ್. ರಾವ್‌ರವರ ಪ್ರಕಾರ ಅಲ್ಲಿಗೆ ಬಂದು ಚಿಕಿತ್ಸೆ ತೆಗೆದುಕೊಂಡು ಆರೋಗ್ಯವಾಗಿ, ಸಹಜವಾಗಿ ಜೀವನ ನಡೆಸುವವರೂ ಇದ್ದಾರೆ. ಅಲ್ಲಿಯ ಒಬ್ಬ ಯುವಕ ಹತ್ತು ವರ್ಷಗಳಿಂದ ಹೆಚ್.ಐ.ವಿ. ಸೋಂಕಿಗೊಳಗಾಗಿದ್ದರೂ ಅವನು ತನ್ನ ಜೀವನ ಶೈಲಿ ಸುಧಾರಿಸಿಕೊಂಡು ಜಾಗರೂಕತೆಯಿಂದ ಜೀವನ ನಡೆಸುತ್ತಿರುವುದರಿಂದ ಯಾವುದೇ ತರದ ತೊಂದರೆಗಳು ಅವನನ್ನು ಭಾದಿಸಿಲ್ಲ. ಅಲ್ಲಿಗೆ ಬರುವಾಗ ಟಿ.ಬಿ, ನ್ಯೂಮೋನಿಯಾದಂತಹ, ಕಾಯಿಲೆಗಳು ಬಂದಿರುತ್ತವೆ. ಹೆಚ್.ಐ.ವಿ. ಸೋಂಕು ಇದೆಯೆಂದು ತಿಳಿದ ಕೂಡಲೇ ರೋಗಿ ಅದನ್ನು ಮುಚ್ಚಿಡುತ್ತಾನೆ. ಅಷ್ಟೊತ್ತಿಗಾಗಲೇ ಅದು ಅವನ ದೇಹದಲ್ಲಿ ಪ್ರವೇಶ ಪಡೆದು ಎರಡು ಮೂರು ವರ್ಷಗಳಾಗಿರುತ್ತವೆ. ತನಗೆ ತಿಳಿದೋ, ತಿಳಿಯದೆಯೋ ಅದನ್ನು ತನ್ನ ಹೆಂಡತಿಗೂ ದಯಪಾಲಿಸಿರುತ್ತಾನೆ. ಗಂಡನಾದವನು ತನ್ನ ಹೆಂಡತಿಗೆ ಬೇರೇನೂ ಕೊಡಲಾಗದಿದ್ದರೂ ಏಡ್ಸ್‌ನ ಬಳುವಳಿಯನ್ನಂತೂ ಪ್ರೀತಿಯಿಂದ ಕೊಡುತ್ತಾನೆ.

ಫ್ರೀಡಂ ಫೌಂಡೇಶನ್‌ನ ಆಸ್ಪತ್ರೆಯಲ್ಲಿ ಎರಡು ಕುಟುಂಬಗಳು ಇವೆ. ಗಂಡ, ಹೆಂಡತಿ, ಮಕ್ಕಳಿಗೂ ವೈರಸ್‌ನ ಸೋಂಕು ತಗುಲಿದೆ. ಅಲ್ಲಿ ರೋಗಿಗಳಿಗೆ ಪೌಷ್ಟಿಕಾಂಶಗಳುಳ್ಳ ಆಹಾರವನ್ನು ಕೊಡುತ್ತಾರೆ. ಬೆಳಿಗ್ಗೆ, ಸಂಜೆ ವಾಕಿಂಗ್ ಕಳಿಸುತ್ತಾರೆ. ಯೋಗಾಸನ, ಎಝುಡ್‌ಟಿ ಮಾತ್ರೆ ಕೊಡುತ್ತಾರೆ. ಆರೋಗ್ಯವಾಗಿರುವವರು ಅಡುಗೆ ಮಾಡುವವರಿಗೆ ಸಹಾಯ ಮಾಡ್ತಾರೆ. ಪಕ್ಕದಲ್ಲಿನ ಕಾರ್ಖಾನೆಗಳಿಗೆ ಕೆಲಸಕ್ಕೂ ಹೋಗುತ್ತಾರೆ. ಫ್ರೀಡಂ ಫೌಂಡೇಶನ್ ಸಂಸ್ಥೆ ಮಾಡುತ್ತಿರುವ ಈ ಕಾರ್ಯ ನಿಜಕ್ಕೂ ಶ್ಲಾಘನೀಯ. ಇದು ರೋಗಿಗಳಿಗೆ ಬದುಕುವ ಉತ್ಸಾಹ, ಧೈರ್ಯ ಮೂಡುವಂತೆ ಮಾಡುತ್ತದೆ. ಅಲ್ಲಿನ ಕೌನ್ಸೆಲರ್ ಜಿ.ಎಸ್.ರಾವ್ ಅವರ ಮಾತು, ನಗೆ ಹಾಗೂ ರೋಗಿಗಳನ್ನು ನೋಡಿಕೊಳ್ಳುವ ಸುಮಾ ಅವರ ಸಾಂತ್ವನ, ಸ್ಪರ್ಶ ಎಲ್ಲವೂ ಆದರ್ಶನೀಯ, ಅನುಕರಣೀಯ. ಏಡ್ಸ್ ಎಂದ ಕೂಡಲೇ ದೂರ ಹೋಗುವವರೇ ಹೆಚ್ಚಾಗಿರುವಾಗ ಅವರ ಬಳಿಯೇ ಇದ್ದು ಧೈರ್ಯ, ಆತ್ಮವಿಶ್ವಾಸಗಳನ್ನು ತುಂಬಿ ಕೀಳರಿಮೆಯನ್ನು ಹೋಗಲಾಡಿಸುತ್ತಿರುವ ಅವರ ಕಾರ್ಯ ಎಷ್ಟು ಬಣ್ಣಿಸಿದರೂ ಕಡಿಮೆಯೆ.

ವಿಳಾಸ:

ಫ್ರೀಡಂ ಫೌಂಡೇಶನ್

180, ಹೆಣ್ಣೂರು ಕ್ರಾಸ್, ಸೈಟ್‌ನಂ. 30, ಸೇಂಟ್ ಥಾಮಸ್ ಟೌನ್ ಪೋಸ್ಟ್,
ಹೆಣ್ಣೂರು ರಸ್ತೆ, ಬೆಂಗಳೂರು - 84

ಫ್ರೀಡಂ ಫೌಂಡೇಶನ್

ಸೈಟ್ ನಂ. 30, ಸರ್ವೆ ನಂ. 17/2, ಹೆಣ್ಣೂರು ಹಳ್ಳಿ, ಬೆಂಗಳೂರು-84. ಫೋನ್: 5440135



2. ಜನನಾಂಗದಲ್ಲಿ ನವೆಯುಂಟಾಗುವುದು.
3. ಮೂತ್ರವಿಸರ್ಜನೆಯ ಸಮಯದಲ್ಲಿ ಉರಿ, ನೋವು ಉಂಟಾಗುವುದು.
4. ಮೈಮೇಲೆ ಗಾಂಡಿಗಳೇಳುವುದು.

ಲೈಂಗಿಕ ರೋಗಗಳ ಪರಿಣಾಮ ಗರ್ಭದಲ್ಲಿನ ಮಗುವಿನ ಮೇಲಾಗಬಹುದೆ?

ಹೌದು. ಗರ್ಭಿಣಿಯರಲ್ಲಿ ಲೈಂಗಿಕ ರೋಗ ಕಂಡು ಬಂದರೆ ಅದರಿಂದ ಗರ್ಭದಲ್ಲಿನ ಮಗುವಿನ ಮೇಲೆ ಹೆರಿಗೆಗೆ ಮುಂಚೆಯೋ ಇಲ್ಲವೇ ಹೆರಿಗೆಯ ಸಮಯದಲ್ಲಿ ಪರಿಣಾಮ ಬೀರುತ್ತದ.

ಇದರಿಂದಾಗಿ ಮಗು ವಿಕಲಾಂಗವಾಗಿ ಹುಟ್ಟಬಹುದು. ಇಲ್ಲವೇ ಸತ್ತು ಹುಟ್ಟಬಹುದು.

ಲೈಂಗಿಕ ರೋಗ ಬಂದಾಗ ಏನು ಮಾಡಬೇಕು?

ನಿಧಾನ ಮಾಡದೇ ರೋಗ ಲಕ್ಷಣ ಕಂಡು ಬಂದ ತಕ್ಷಣ ಚರ್ಮ ಹಾಗೂ ಲೈಂಗಿಕ ರೋಗಗಳ ತಜ್ಞ ವೈದ್ಯರ ಬಳಿ ಚಿಕಿತ್ಸೆ ಪಡೆಯಬೇಕು. ಸಂಗಾತಿಗೂ ಚಿಕಿತ್ಸೆ ಕೊಡಿಸಬೇಕು.

ಏಡ್ಸ್‌ಗೆ ವ್ಯಾಕ್ಸಿನ್ ಇದೆಯೇ?

ಇಲ್ಲ. ಸಧ್ಯಕ್ಕೆ ಏಡ್ಸ್‌ಗೆ ಪರಿಣಾಮಕಾರಿ ವ್ಯಾಕ್ಸಿನ್ ಕಂಡು ಹಿಡಿಯಲು ಇಲ್ಲಿಯವರೆಗೂ ಸಾಧ್ಯವಾಗಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಹೆಚ್.ಐ.ವಿ.ವೈರಸ್‌ನ ವಿನ್ಯಾಸ (ರಚನೆ) ಸುಲಭವಾಗಿ ಬದಲಾಯಿಸುತ್ತ ಇರುವುದರಿಂದ ಕಷ್ಟವಾಗಿದೆ. ಮೂರು ವಿಧದ ವ್ಯಾಕ್ಸಿನ್ ಕಂಡುಹಿಡಿಯಬೇಕು.

1. ಹೆಚ್.ಐ.ವಿ. ಸೋಂಕುಂಟಾಗದಂತೆ ಆರೋಗ್ಯವಂತರಿಗೆ ನೀಡುವ ಲಸಿಕೆ.
2. ಹೆಚ್.ಐ.ವಿ. ಸೋಂಕುಂಟಾದ ಮೇಲೆ ಆರೋಗ್ಯಪೂರ್ಣ ಜೀವನವನ್ನು ಹೆಚ್ಚು ಕಾಲ ಬದುಕಲು ಸಾಧ್ಯವಾಗುವಂತಹುದು.
3. ಗರ್ಭಿಣಿಯಾಗಿರುವಾಗಲೇ ಮಗುವಿಗೆ ಸೋಂಕುಂಟಾಗದಂತೆ ಲಸಿಕೆ ಹಾಕುವುದು.

ಹೆಚ್.ಐ.ವಿ. ಪತ್ತೆ ವಿಧಾನ

1. ELISA (Enzyme linked immurnosorbert assay) ಪರೀಕ್ಷೆಯು ನಿರ್ಧಾರಿತವಾದುದು.
2. ವೆಸ್ಟರ್ನ್ ಬ್ಲಾಟ್ (Western blot) ಪರೀಕ್ಷೆ ಖಚಿತವಾದುದು.
3. ಪಿ.ಸಿ.ಆರ್. ಪರೀಕ್ಷೆ.

ಕೆಲವು ಬಾರಿ ಲ್ಯಾಬೋರೇಟರಿಗಳಲ್ಲಿ ಸುಳ್ಳು ಫಲಿತಾಂಶವೂ ಬರುವುದುಂಟು. ಅದಕ್ಕಾಗಿ ಪರೀಕ್ಷೆಯನ್ನು ಎರಡು ಮೂರು ಬಾರಿ ಬೇರೆ ಬೇರೆ ಕಡೆಗೆ ಮಾಡಿಸುವುದೊಳ್ಳೆಯದು.

ಮಕ್ಕಳು ಹೆಚ್.ಐ.ವಿ. ಸೋಂಕಿಗೊಳಗಾಗಿರುವವರೇ ಇಲ್ಲವೇ ಎಂಬುದನ್ನು ಪತ್ತೆ ಹಚ್ಚಲು ಸಾಧ್ಯವೆ?

ಹದಿನೆಂಟರಿಂದ ಇಪ್ಪತ್ನಾಲ್ಕು ತಿಂಗಳೊಳಗಿನ ಮಕ್ಕಳಿಗೆ ಪರೀಕ್ಷೆ ಮಾಡಿದಲ್ಲಿ ತಾಯಿಯು ಸೋಂಕಿಗೊಳಪಟ್ಟದ್ದರೆ ಮಗುವೂ ಸೋಂಕಿಗೆ ಒಳಪಟ್ಟಿರುತ್ತದೆ. ಈಗಿನ ಅಂಕಿ ಸಂಖ್ಯೆಗಳ ಪ್ರಕಾರ ಮೂರರಲ್ಲಿ ಒಂದು ಮಗು ತಾಯಿಯಿಂದ ಸೋಂಕು ಪಡೆದಿರುತ್ತದೆ. ಆದ್ದರಿಂದ 24 ತಿಂಗಳ ಒಳಗಾಗಿ ಮಗುವಿನ ಸೋಂಕನ್ನು ಪತ್ತೆ ಹಚ್ಚುವುದು ಕಷ್ಟ ಮತ್ತು ತಪ್ಪು.

ಏಡ್ಸ್‌ಗೆ ಚಿಕಿತ್ಸೆ ಇದೆಯೆ?

ಇಲ್ಲ. ಸಧ್ಯಕ್ಕೆ ಏಡ್ಸ್‌ನ್ನು ಚಿಕಿತ್ಸಿಸುವ ಯಾವುದೇ ಔಷಧಿಗಳಿಲ್ಲ. ಕೆಲವು ಔಷಧಿ AZT(Ziduvudino) ಉಪಯೋಗಿಸುತ್ತಿದ್ದಾರೆ. ಆದರೆ ಇದರಿಂದ ದುಷ್ಪರಿಣಾಮಗಳೂ ಇವೆ. ಈ ಔಷಧಿಯೂ ದುಬಾರಿಯಾದವುಗಳು.

ಒಂದು ಸಲಹೆ

ರಾಜ್ಯ ಸರಕಾರದವರು ರೇಷನ್ ಕಾರ್ಡ್‌ನಂತೆ ಹೆಲ್ತ್ ಕಾರ್ಡ್‌ಗಳನ್ನು ಮಾಡಬೇಕು. ಅದರಲ್ಲಿ ಕುಟುಂಬದ ಪ್ರತಿಯೊಬ್ಬರ ಆರೋಗ್ಯದ ಬಗ್ಗೆ ದಾಖಲಾತಿ ಇರಬೇಕು. ಹೆಲ್ತ್‌ಕಾರ್ಡ್ ಇದ್ದವರಿಗೆ ರೇಷನ್ ಕಾರ್ಡ್ ದೊರೆಯುವುದೆಂಬ ಕಡ್ಡಾಯ ಮಾಡಿದರೆ ಎಲ್ಲರೂ ಈ ಕಾರ್ಡ್ ಮಾಡಿಸುತ್ತಾರೆ. ಆದರಿಂದ ಜನರಲ್ಲಿ ಆರೋಗ್ಯದ ಬಗ್ಗೆ, ಏಡ್ಸ್ ವೈರಸ್‌ನ ಸೋಂಕಿನ ಬಗ್ಗೆ ಇನ್ನಿತರ ಸೋಂಕುಗಳ ಬಗ್ಗೆಯೂ ಜಾಗೃತಿ ಮೂಡಿಸಬಹುದು. ಇದರಿಂದಾಗಿ ಜನರು ತಾವೇ ಎಚ್ಚೆತ್ತುಕೊಂಡು ಆರೋಗ್ಯದ ಬಗ್ಗೆ ಸ್ವತಃ ಕಾಳಜಿ ವಹಿಸುತ್ತಾರೆ.

ಈ ಔಷಧಿಗಳಿಂದ ಕೆಲವು ವರ್ಷ ಸಾವನ್ನು ಮುಂದೂಡಬಹುದು. ಆದರೆ ಅವಕಾಶವಾದಿ ಸೋಂಕುಗಳಾದ ಕ್ಷಯ, ನ್ಯುಮೋನಿಯಾ ಮುಂತಾದವುಗಳಿಗೆ ಪರಿಣಾಮಕಾರಿಯಾಗಿ ಚಿಕಿತ್ಸೆ ಕೊಡಲೇಬೇಕು. ಹೆಚ್.ಐ.ವಿ. ಸೋಂಕನ್ನು ಇನ್ನಿತರರಿಗೆ ಹರಡದಂತೆ ನೋಡಿಕೊಳ್ಳುವುದೂ ಚಿಕಿತ್ಸೆಯ ಒಂದು ಭಾಗವೇ ಆಗಿದೆ.

ಸೋಂಕಿಗೊಳಗಾದ ವ್ಯಕ್ತಿಗಳಿಗೆ ಮಾನಸಿಕ ಸ್ಥೈರ್ಯ ನೀಡಬೇಕಾದುದು ಅವಶ್ಯಕ

ಹೆಚ್.ಐ.ವಿ. ಪಾಸಿಟಿವ್ ಬಂದ ಕೂಡಲೇ ಜನರು ಹೆದರಿಕೊಳ್ಳದೇ ವೈದ್ಯರನ್ನು ಸಂಪರ್ಕಿಸಿ ಎಲ್ಲರಂತೆ ಸಹಜವಾಗಿ ಹೆಚ್ಚಿನ ಸೋಂಕಿಗೊಳಗಾಗದಂತೆ ಬದುಕುವುದು ಹೇಗೆಂದು ತಿಳಿದುಕೊಂಡು ಅದರಂತೆ ಬದುಕಬೇಕು. ಹೆಚ್.ಐ.ವಿ. ಏಡ್ಸ್ ರೋಗಿಗಳಿಗೆ ಸಲಹೆ ಕೊಡುವುದಕ್ಕೆ ಹಾಗೂ ಉಚಿತ ಚಿಕಿತ್ಸೆ ಕೊಡುವುದಕ್ಕೆ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ. ಅಂತಹ ಸಂಸ್ಥೆಗಳನ್ನು ಭೇಟಿ ಮಾಡಿ ಸಲಹೆ ಪಡೆದುಕೊಳ್ಳುವುದೊಳ್ಳೆಯದು. ಒಂದು ಬಾರಿ ಹೆಚ್.ಐ.ವಿ. ಪಾಸಿಟಿವ್ ಬಂದಿದೆಯೆಂದರೆ ಅಲ್ಲಿಗೆ ಜೀವನ ಮುಗಿದು ಹೋಗುವುದಿಲ್ಲ. ಎಲ್ಲರಂತೆ ಅವರೂ ಸಹಜವಾಗಿ ಜೀವನ ನಡೆಸಬಹುದು. ಬೆಂಗಳೂರಿನ 'ಸಂರಕ್ಷ' ಹಾಗೂ 'ಫ್ರೀಡಂ ಫೌಂಡೇಶನ್' ಸಂಸ್ಥೆಗಳು ಪ್ರತಿದಿನ ಕೌನ್ಸಲಿಂಗ್ ನಡೆಸುತ್ತಿವೆ. ಕೌನ್ಸಲಿಂಗ್‌ನಲ್ಲಿ ರೋಗಿ ನಿರ್ಭಯವಾಗಿ ತನ್ನೆಲ್ಲ ಸಮಸ್ಯೆಗಳನ್ನು ಹೇಳಿಕೊಳ್ಳಬೇಕು.

ರೋಗಿಗಳು ಮೊಟ್ಟಮೊದಲು ರಕ್ತ ಪರೀಕ್ಷೆಯ ವರದಿ ಬಂದಾಗ ತಕ್ಷಣ ಒಪ್ಪಿಕೊಳ್ಳುವುದಿಲ್ಲ, ನಿರಾಕರಿಸುತ್ತಾರೆ. ಕೋಪಕ್ಕೊಳಗಾಗುತ್ತಾರೆ. ಗಂಡನಿಗೆ ಹೆಂಡತಿಯ ಮೇಲೆ, ಹೆಂಡತಿಗೆ ಗಂಡನ ಮೇಲೆ ಕೊನೆಗೆ ದೇವರ ಮೇಲೂ ಕೋಪ ಬರುತ್ತದೆ. ಕೀಳರಿಮೆಯೂ ಅವರನ್ನು ಕಾಡುತ್ತದೆ. ಎಲ್ಲರೊಂದಿಗೆ ತಾನು ಬೆರೆಯಲು ಯೋಗ್ಯವಲ್ಲವೇನೋ ಎನ್ನುವ ಭಾವನೆ ಬರುತ್ತದೆ. ಮನೆಯವರಿಗೆ, ಗೆಳೆಯರಿಗೆ ತಿಳಿದರೆ ಅವರೆಲ್ಲ ಹೇಗೆ ನೋಡುವರೋ? ಅಲ್ಲದೆ ಎಲ್ಲವನ್ನು ಕಳೆದುಕೊಳ್ಳುವೆನೇನೋ ಎಂಬ ಭಯ ಕಾಡುತ್ತದೆ. ಭವಿಷ್ಯವೇ ನಾಶವಾದಂತೆ, ಲೈಂಗಿಕ ಶಕ್ತಿ ಕುಂದಿ ಹೋಯಿತೇನೋ ಎನ್ನುವ ಆತಂಕ, ಮನೆಯವರ ಹಾಗೂ ಸಮಾಜದ ದೃಷ್ಟಿಯಲ್ಲಿ ತಾನು

ಇಲ್ಲವಾಗಿದ್ದೇನೇನೋ ಎಂಬ ಅನಿಸಿಕೆ, ಮೂವತ್ತು ವರ್ಷಕ್ಕೆ ಮುದುಕನಾಗಿದ್ದೇನೋ ಎಂಬ ಅನಿಸಿಕೆ, ಆತ್ಮವಿಶ್ವಾಸದ ಕೊರತೆ ಕಂಡುಬರುತ್ತದೆ. ತನ್ನ ಅಸಹಾಯಕತೆ ದುಃಖ ತರಿಸುತ್ತದೆ. ತನ್ನ ಹೆಂಡತಿ ಮಕ್ಕಳಿಗೆ ಏನಾಗಬಹುದು? ತನ್ನ ಮನೆಯವರು ಸಹಾಯ ಮಾಡುವರೆ? ಈ ಎಲ್ಲ ವಿಷಯಗಳನ್ನು ಯೋಚಿಸಿ ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬ ಭಾವನೆ ತೀವ್ರವಾಗಿ ಕಾಡುತ್ತದೆ. ಆದ್ದರಿಂದ ಅವರಿಗೆ ಧೈರ್ಯ ನೀಡಿ, ಅಸಹಾಯಕತೆಯನ್ನು ಹೋಗಲಾಡಿಸಿ ಬದುಕಿನ ಬಗ್ಗೆ ಭರವಸೆ ಮೂಡಿಸಬೇಕು. ಮೊದಲೇ ಹೆದರಿಕೊಂಡವರಿಗೆ ಮತ್ತಷ್ಟು ಭಯ ಮೂಡಿಸಬಾರದು. •

ಏಡ್ಸ್‌ಗೆ ಚಿಕಿತ್ಸೆ ಕಂಡು ಹಿಡಿಯುವುದಕ್ಕೆ ಇನ್ನೆಷ್ಟು ಕಾಲ ಬೇಕಾಗಬಹುದು?

ಎಲ್ಲ ದೇಶಗಳಲ್ಲಿಯೂ ಬಹಳಷ್ಟು ಸಂಶೋಧನೆಗಳು ನಡೆಯುತ್ತಿವೆ. ಪರಿಣಾಮಕಾರಿ ಔಷಧಿಗಳು ಮಾರುಕಟ್ಟೆಗೆ ಬರಲು ಬಹಳ ವರ್ಷಗಳು ಹಿಡಿಯಬಹುದು. ಕೆಲವು ತಜ್ಞರ ಪ್ರಕಾರ ಐದರಿಂದ ಹತ್ತು ವರ್ಷಗಳು ಇಲ್ಲವೇ ಅದಕ್ಕಿಂತ ಹೆಚ್ಚು ವರ್ಷಗಳೂ ಹಿಡಿಯಬಹುದು. ■

ಏಡ್ಸ್ ರೋಗಿಗಳ ಸಂದರ್ಶನ

ಶುಭ ಪದಿನೆಂಟು ವರುಷದ ಎಳೆಯ ಹುಡುಗಿ. ತಂದೆ ತೀರಿ ಹೋದಾಗ ಮನೆಯ ಚುಕ್ಕಾಣಿ ಅಲುಗಾಡಿದಾಗ ತಾಯಿ ಇವಳನ್ನು ಶಾಲೆ ಬಿಡಿಸಿ ಯಾರದೋ ಮನೆಯಲ್ಲಿ ಮನೆ ಕೆಲಸಕ್ಕೆ ಬಿಟ್ಟಿದ್ದಳಂತೆ. ಅವರು ಇವಳನ್ನು ಬಾಂಬೆಗೆ ಕರೆದೊಯ್ದು ಅಲ್ಲಿನ ಒಂದು ವೇಶ್ಯಾಗೃಹಕ್ಕೆ ರೂ. 10,000/-ಗಳಿಗೆ ಮಾರಿದರಂತೆ. ಅವಳು ಇನ್ನೂ ಅರಳುತ್ತಿರುವ ಹೂವು. ಆದರೆ ಅದನ್ನು ಅರಳಲು ಬಿಡದೇ, ಅರಳುವ ಮೊದಲೇ ಚಿವುಟಿ ಹೋಗುವಂತೆ ಈ ಸಮಾಜ ಮಾಡಿದೆ. ಬಾಂಬೆಯ ಆ ಮನೆಯಲ್ಲಿ ಹಿಂಸೆ ತಾಳಲಾಗದೇ ಅಲ್ಲಿಂದ ತಪ್ಪಿಸಿಕೊಂಡು ಬರುವಾಗ ಪೋಲಿಸರ ಕೈಗೆ ಸಿಕ್ಕಿದ್ದಾರೆ. ಪೋಲೀಸರು ಬೆಂಗಳೂರಿಗೆ ಕರೆತಂದು ರಿಮ್ಯಾಂಡ್ ಹೋಂನಲ್ಲಿಟ್ಟಿದ್ದರಂತೆ. ಈಗ 6 ತಿಂಗಳ ಹಿಂದೆ ಜ್ವರ ಬರಲು ಶುರುವಾಯಿತಂತೆ. ಒಂದು ತಿಂಗಳಾದರೂ ಕಡಿಮೆಯಾಗದಾಗ ವೈದ್ಯರಿಗೆ ಅನುಮಾನ ಬಂದು ರಕ್ತ ಪರೀಕ್ಷೆ ಮಾಡಿಸಿದಾಗ ಹೆಚ್.ಐ.ವಿ. ಪಾಸಿಟಿವ್ ಬಂದಿತಂತೆ. ನಂತರ ಇಲ್ಲಿಗೆ ಕರೆತಂದು ಬಿಟ್ಟಿದ್ದಾರೆ. ಅವಳದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸಬೇಕಾಗಿದೆ. ಅವಳು ತನ್ನ ತಾಯಿಗೆ, ತಂಗಿ, ತಮ್ಮಂದಿರಿಗೆ ಈ ವಿಷಯ ತಿಳಿಸಿಲ್ಲ. ನಾನು 'ಶುಭ, ನಿನಗೆ ಈ ಕಾಯಿಲೆ ಬಂದಿದೆಯೆಂದು ತಿಳಿದಾಗ ಏನನ್ನಿಸಿತು' ಎಂದು ಕೇಳಿದೆ. ಅವಳು ನಿರ್ಲಿಪ್ತವಾಗಿ 'ಡಾಕ್ಟ್ರೇ, ನಾನು ಬಾಂಬೆಯಲ್ಲಿ ಅನುಭವಿಸಿದ ದೈಹಿಕ, ಮಾನಸಿಕ ಹಿಂಸೆಗಿಂತ ಇದೇನೂ ಹೆಚ್ಚಲ್ಲ, ಇರುವಷ್ಟು ದಿನ ಆರಾಮವಾಗಿರ್ತೀನಿ. ಸಾವು ಯಾವಾಗ ಬಂದರೂ ನನಗೆ ಸಂತೋಷವೇ', ಎಂದು ಹೇಳಿ ಪಕ್ಕದ ರೋಗಿಯ ಮಗುವನ್ನು ಆಡಿಸುತ್ತ ಕುಳಿತುಕೊಂಡಳು. ಇವಳ ವಯಸ್ಸಿನ ಬೇರೆ ಹುಡುಗಿಯರು ಹುಡುಗಾಟವಾಡಿಕೊಂಡು ಕಾಲೇಜಿಗೆ ಹೋಗುತ್ತಾ ಭವಿಷ್ಯವನ್ನು ರೂಪಿಸಿಕೊಳ್ಳುವುದರ ಬಗ್ಗೆ ಯೋಚಿಸುತ್ತ ಇರ್ತಾರೆ. ಆದರೆ ಇವಳಿಗೆ ಭವಿಷ್ಯವೇ ಇಲ್ಲ. ಬರೀ ಶೂನ್ಯ. ಬಾಂಬೆಯ ವೇಶ್ಯಾಗೃಹ ಅವಳಿಗೆ ಎಂತಹ ಶಿಕ್ಷೆ ಕೊಟ್ಟಿದೆ ನೋಡಿ. ಅವಳನ್ನು ಮಾತಾಡಿಸಿ ಎದ್ದು ಬರುವಾಗ ಮನಸ್ಸು ಭಾರವಾಗಿತ್ತು.

ಸಂಕೇಶ್ವರದ ರಜಿಯಾಳದು ಇನ್ನೊಂದು ತರಹ ಕಥೆ, ವ್ಯಥೆ. ಅವಳಿಗಿನ್ನೂ 24 ವರ್ಷ ವಯಸ್ಸು. ಇವಳದು ಪ್ರೇಮವಿವಾಹ. ಗಂಡ ಮರಾಠಿ, ಎರಡು ಮಕ್ಕಳಿವೆ. ಒಂದು ಮಗುವನ್ನು ತವರು ಮನೆಯಲ್ಲಿ ಬಿಟ್ಟಿದ್ದಾಳೆ. ಇನ್ನೊಂದು ಕೈಕೂಸು ಇವಳ ಬಳಿ ಇದೆ. ಅದಕ್ಕೂ ಸೋಂಕು ತಗುಲಿರಬಹುದೆಂದು ಅನುಮಾನವಿದೆ. ಇನ್ನೂ ರಕ್ತ ಪರೀಕ್ಷೆ ಮಾಡಿಸಿಲ್ಲ. ಎರಡನೆಯ ಮಗುವಿಗೆ ಗರ್ಭಿಣಿಯಾಗಿರುವಾಗಲೇ ಗಂಡನಿಗೆ ಭೇದಿ ಶುರುವಾದದ್ದು ನಿಲ್ಲಲೇ ಇಲ್ಲವಂತೆ. ಆಸ್ಪತ್ರೆಯಲ್ಲಿ ಡ್ರಿಪ್ ಕೊಡುತ್ತಿರುವಾಗಲೇ ರಕ್ತ ಪರೀಕ್ಷೆಯ ವರದಿ ನೋಡಿದ ಖಾಸಗಿ ನರ್ಸಿಂಗ್ ಹೋಂನ ವೈದ್ಯರು ಚಿಕಿತ್ಸೆ ನೀಡುವುದಿಲ್ಲವೆಂದು ಹೊರಹಾಕಿದರಂತೆ. ನಂತರ ಮನೆಯಲ್ಲೇ ಕೆಲವು ದಿನಗಳು ಇದ್ದನಂತೆ. ಆಗ ಇವಳೇ ದುಡಿದು ಗಂಡನನ್ನು ನೋಡಿಕೊಂಡಿದ್ದಾಳೆ. ನಂತರ ಇವಳಿಗೆ ಹೆರಿಗೆಯಾಗಿ ಮಗು ಸ್ವಲ್ಪ ದೊಡ್ಡದಾದ ಮೇಲೆ ಇಲ್ಲಿಯ ವಿಳಾಸ ಗೊತ್ತಾದ ಮೇಲೆ ಗಂಡನನ್ನು ಕರೆದುಕೊಂಡು ಬಂದಿದ್ದಾಳೆ. ಅವಳ ದೊಡ್ಡ ದೊಡ್ಡ ಕಂಗಳಲ್ಲಿನ ಹೊಳಪು, ಎದ್ದು ಕಾಣುವ ಆತ್ಮವಿಶ್ವಾಸ ಅವಳಿಗೆ ಬದುಕಿನ ಬಗ್ಗೆ ಇರುವ ಆಸಕ್ತಿ ತೋರಿಸುತ್ತದೆ. ದುರಾದೃಷ್ಟದ ಸಂಗತಿಯೆಂದರೆ ಇಲ್ಲಿ ಬಂದ ಮೇಲೆ ರಕ್ತ ಪರೀಕ್ಷೆಯಿಂದ ಇವಳಿಗೂ ಹೆಚ್.ಐ.ವಿ. ಸೋಂಕು ತಗುಲಿದೆಯೆಂದು ತಿಳಿದಿದೆ. ಆದರೂ ಅವಳು ಧೈರ್ಯಗೆಡದೆ ಗಂಡನಿಗೂ ಧೈರ್ಯ ತುಂಬುತ್ತ, ಜೊತೆಗಿರುವ ಇನ್ನಿತರ ರೋಗಿಗಳ ಜೊತೆಗೂ ನಗುನಗುತ್ತಾ ಮಾತಾಡಿ ಅವರಲ್ಲಿರುವ ಭಯ, ಆತಂಕಗಳನ್ನು ಹೋಗಲಾಡಿಸುತ್ತಾಳೆ. 'ರಜಿಯಾ, ನಿಮ್ಮ ತಾಯಿ ಮನೆಯವರಿಗೆ ಅತ್ತೆ ಮನೆಯವರಿಗೆ ವಿಷಯ ಗೊತ್ತೆ?' ಎಂದಾಗ 'ಅತ್ತೆ ಮನೆಯವರಿಗೆ ಗೊತ್ತು. ಅವರು ಬಂದು ನನ್ನ ಗಂಡನನ್ನು ಮಾತಾಡಿಸಿಕೊಂಡು ಹೋಗುತ್ತಾರೆ, ಆದರೆ ನನ್ನ ಕಡೆ ತಿರುಗಿಯೂ ನೋಡುವುದಿಲ್ಲ. ತವರು ಮನೆಯವರಿಗೆ ನಾನೇ ತಿಳಿಸಿಲ್ಲ. ನನಗಿಂತ ಚಿಕ್ಕವರು ಇನ್ನೂ ಮೂರು ಜನ ಇದ್ದಾರೆ. ಮತ್ತೆ ನಮ್ಮಮ್ಮ ಎದೆಯೊಡೆದು ಕೊಂಡು ಸತ್ತರೆ ಅವರಿಗೆ ಯಾರು ದಿಕ್ಕು? ಅದಕ್ಕೆ ಗಂಡನಿಗೆ ತೋರಿಸುವುದಕ್ಕೆ ಬೆಂಗಳೂರಿಗೆ ಹೋಗುತ್ತೇನೆಂದು ಹೇಳಿ ಬಂದಿದ್ದೇನೆ. ನನ್ನ ದೊಡ್ಡ ಮಗುವನ್ನು ಅಲ್ಲಿಯೇ ಬಿಟ್ಟಿದ್ದೇನೆ.' ಎನ್ನುವಾಗ ಅವಳಲ್ಲಿ ಮತ್ತೆ ವಾಪಸ್ಸು ಹೋಗಿ ಜೀವನ ನಡೆಸುತ್ತೇನೆಂಬ ಭರವಸೆ ಎದ್ದು ಕಾಣುತ್ತಿತ್ತು.

ದಾವಣಗೆರೆಯ ರೀಟಾಳಿಗೆ 26 ವರ್ಷ. ಡ್ರೈವರ್ ಒಬ್ಬನಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಪಿ.ಯು.ಸಿ.ವರೆಗೆ ಓದಿದ್ದಾಳೆ. ಗಂಡನಿಗೆ ಎಲ್ಲ ಚಟಗಳೂ ಇವೆಯಂತೆ. ಇವಳು ಗರ್ಭಿಣಿಯಾದಾಗ ಬಹಳ ಸುಸ್ತು, ಜ್ವರ ಬಿಡದೇ ಬರುತ್ತಿತ್ತು. ಪರೀಕ್ಷಿಸಿದಾಗ ಹೆಚ್.ಐ.ವಿ. ಪಾಸಿಟಿವ್ ಬಂದಿದೆ. ನಂತರ ಗಂಡನ ರಕ್ತವನ್ನೂ ಪರೀಕ್ಷಿಸಿದ್ದಾರೆ. ಅವನಿಗೂ ಪಾಸಿಟಿವ್ ಬಂದಿದೆ. 8ನೇ ತಿಂಗಳಲ್ಲಿಯೇ ಶಸ್ತ್ರ ಚಿಕಿತ್ಸೆ ಮಾಡಿ ಮಗುವನ್ನು ಹೊರ ತೆಗೆದಿದ್ದಾರೆ. ನಂತರ ಅತ್ತೆಮನೆಯವರು ಇವಳನ್ನು ಮನೆಗೆ ಸೇರಿಸಿಲ್ಲ. ಅಲ್ಲಿಂದ ಸೀದಾ ತವರು ಮನೆಗೆ ಬಂದಿದ್ದಾಳೆ. ಅಲ್ಲಿ ಒಂದು ತಿಂಗಳು ಇದ್ದಳಂತೆ. ನಂತರ ಇವಳ ಅಣ್ಣ, ಅಮ್ಮ ಎಲ್ಲರೂ ಅಕ್ಕಪಕ್ಕದವರಿಗೆ ತಿಳಿದರೆ ತಮ್ಮ ಗೌರವ, ಮರ್ಯಾದೆ ಹಾಳಾಗುವುದೆಂದು ಇವಳನ್ನು ಇಲ್ಲಿಗೆ ಕರೆತಂದು ಸೇರಿಸಿದ್ದಾರೆ. ಮಗುವಂತೂ ತುಂಬ ಸಣ್ಣಗಿದೆ. ಬರೀ ಮೂಳೆ, ಚರ್ಮ ಅಷ್ಟೇ ಕಾಣುತ್ತದೆ. ಗಂಡನ ಬಗ್ಗೆ ಕೇಳಿದರೆ

ಅವಳಿಗೆ ಕೋಪ ಬರುತ್ತದೆ. 'ಅಲ್ಲ ಡಾಕ್ಟ್ರೇ, ಅವನು ತಾನು ಅನುಭವಿಸುವುದಲ್ಲದೆ ನನಗೂ ಈ ಕಾಯಿಲೆ ಅಂಟಿಸಿದ್ದಾನಲ್ಲ, ನಾನೂ Suffer ಪಡಬೇಕಾಗಿದೆ ನೋಡಿ. ಮೊನ್ನೆ ಭೇಟಿಯಾಗಲು ಬಂದಿದ್ದ, ನಾನು ಮಾತಾಡಿಸಲಿಲ್ಲ, ಮಾತಾಡಲು ಅಸಹ್ಯ ಅನ್ನುತ್ತೆ, ಅವನಿಗೆ ಸಧ್ಯ ಯಾವ ತೊಂದರೆ ಇಲ್ಲದಿರೋದ್ರಿಂದ ಈಗಾಗಲೇ ಇನ್ನೂ ಎಷ್ಟು ಜನರಿಗೆ ಈ ಕಾಯಿಲೆ ಅಂಟಿಸಿದ್ದಾನೋ? ಇನ್ನೂ ಹಾಗೇ ಅಂಟಸುತ್ತ ಓಡಾಡುತ್ತಿರುವನೋ? ಇಲ್ಲಿ ಕೌನ್ಸಲಿಂಗ್‌ಗೆ ಬಾ ಎಂದರೆ ಬರೋದಿಲ್ಲ. ಅವನ ವಿಷಯ ಬಿಟ್ಬಿಡಿ ಡಾಕ್ಟ್ರೇ, ಮಗುವಿನ ಬಗ್ಗೆ ಯೋಚಿಸಿದರೆ ತುಂಬ ದುಃಖವಾಗುತ್ತೆ, ತಾಯಿ ಹಾಲು ಅಮೃತ ಅಂತಾರೆ. ಆದರೆ ನನ್ನ ಹಾಲು ಹಾಲಾಹಲವಾಗುವುದೆಂದರೆ ಮಗುವಿಗೆ ಹೇಗೆ ಕುಡಿಸಲಿ ಹೇಳಿ? ಅವಳ ಮಾತು ಕೇಳಿ ನನ್ನ ಕಣ್ಣಲ್ಲಿ

ಏಡ್ಸ್‌ನೊಂದಿಗೆ ಹೇಗೆ ಬದುಕಬಹುದು?

ರಾಜಕುಮಾರ್ ಕಳೆದ ಒಂಬತ್ತು ವರ್ಷಗಳಿಂದ ಎಚ್.ಐ.ವಿ. ಪೀಡಿತರಾಗಿ ಬದುಕುತ್ತಿದ್ದಾರೆ. ಇಂದು ಆತ ಸುಖೀಪುರುಷ. ಯಾವುದೇ ಸಮಸ್ಯೆ ಇಲ್ಲದೆ ಆರೋಗ್ಯಪೂರ್ಣ ಜೀವನ ನಡೆಸುತ್ತಿದ್ದಾರೆ. ಈತ ಎಚ್.ಐ.ವಿ./ಏಡ್ಸ್ ಪೀಡಿತರಾದ ಇತರ ಜನರಿಗೆ ಸಹಾಯ ಮಾಡಲು ಉತ್ಸುಕರಾಗಿದ್ದಾರೆ. ಇವರನ್ನು ಅಂಚೆಪೆಟ್ಟಿಗೆ ಸಂಖ್ಯೆ 2325, ಬೆಂಗಳೂರು - 560 023. ಈ ವಿಳಾಸದಲ್ಲಿ ಸಂಪರ್ಕಿಸಬಹುದು.

''ನಮಸ್ತೇ ನಾನು ರಾಜಕುಮಾರ್, ಒಬ್ಬ ಆರೋಗ್ಯಶಾಲಿ ಹಾಗೂ ಅಂದವಾದ ಯುವಕ. ಇದರ ಹಿಂದೆ ಯಾವುದೇ ಭಾರಿ ಗುಟ್ಟಿಲ್ಲ. ಎಚ್.ಐ.ವಿ. ಸೋಂಕು ಪಡೆದನಂತರ ಅನೇಕ ವ್ಯಕ್ತಿಗಳಿಗೆ ಸೋಂಕು ಎಂದರೆ ತಮ್ಮನ್ನು ತಾವು ಕಳೆದುಕೊಂಡಂತೆ ಬಲು ಖಿನ್ನರಾಗಿ ಬಿಡುತ್ತಾರೆ. ಆದರೆ ಎಚ್.ಐ.ವಿ. ಸೋಂಕು ಪಡೆದವರೂ ವ್ಯಕ್ತಿಗಳಂತೆಯೇ ಮತ್ತು ಎಂದಿನಂತೆ ಆರೋಗ್ಯಕಾರಿ ಜೀವನ ನಡೆಸಬಹುದು. ಅವರಿಗೆ ಬೇಕಾಗಿರುವುದೆಲ್ಲ ಇದ್ದು ಜಯಿಸುತ್ತೇನೆ ಎನ್ನುವ ಛಲ ಮತ್ತು ಶುದ್ಧ ಜೀವನಕ್ರಮ. ನಾನು ಚೆನ್ನಾಗಿ ಊಟ ಮಾಡುತ್ತೇನೆ. ಪೌಷ್ಟಿಕ ಆಹಾರ ತಿನ್ನುತ್ತೇನೆ. ದಿನನಿತ್ಯ ಯೋಗಾಭ್ಯಾಸ ಮಾಡುತ್ತೇನೆ, ವೈದ್ಯಕೀಯ ತಪಾಸಣೆ ಕ್ರಮವಾಗಿ ಮಾಡಿಸುತ್ತಿದ್ದೇವೆ. ನಾನು ಕುಡಿಯುವುದಿಲ್ಲ, ಸಿಗರೇಟು ಸೇದುವುದಿಲ್ಲ, ಎಲ್ಲಕ್ಕೂ ಮಿಗಿಲಾಗಿ ನಾನು ಎಚ್.ಐ.ವಿ. ಪೀಡಿತ ಎಂದು ತಲೆ ಕೆಡಿಸಿಕೊಳ್ಳುವುದಿಲ್ಲ. ನಿಜ ಹೇಳಬೇಕೆಂದರೆ ನನ್ನ ಸೋಂಕು ಪತ್ತೆ ಆದಾಗ ನಾನು 52 ಕೆಜಿ ಇದ್ದೆ. ಈಗ 64 ಕೆಜಿ ಯಾಗಿದ್ದೇನೆ. ನನ್ನ ಸ್ನೇಹಿತರು ಮತ್ತು ಸಹೋದ್ಯೋಗಿಗಳಿಂದ ನಾನು ಪಡೆಯುತ್ತಿರುವ ಬೆಂಬಲ ಮತ್ತು ಪ್ರೋತ್ಸಾಹ ನಾನು ಈ ರೀತಿ ಉತ್ತಮ ಗುಣಮಟ್ಟದ ಜೀವನ ನಡೆಸುವುದಕ್ಕೆ ಸಹಕಾರಿಯಾಗಿದೆ.

ಆರಂಭದಲ್ಲಿ ನನಗೆ ಸೋಂಕು ಇದೆ ಎಂದು ತಿಳಿದಾಗ ನನಗೆ ತೀವ್ರ ಆಘಾತವಾಯಿತು. ಬಹಳ ಖಿನ್ನನಾದೆ. ಅದನ್ನು ಒಪ್ಪಿಕೊಳ್ಳುವುದೇ ನನಗೆ ಸಾಧ್ಯವಾಗಲಿಲ್ಲ. ಹೇಗಾದರೂ ಮಾಡಿ ಇದರಿಂದ ತಪ್ಪಿಸಿಕೊಳ್ಳಬೇಕು ಒಂದು ಪರಿಹಾರ ಕಂಡುಕೊಳ್ಳಬೇಕು ಎಂಬುದು ನನ್ನ ಹಂಬಲವಾಯಿತು. ನನಗೆ ಈ ರೀತಿ ಸೋಂಕಿದೆ ಎನ್ನುವುದನ್ನು ಯಾರಿಗೂ ಹೇಳಲಿಲ್ಲ. ನನ್ನ ಮನೆಯವರಿಗೂ ಆ ಸಮಯದಲ್ಲಿ ಹೇಳಲಿಲ್ಲ. ಕ್ಯಾನ್ಸರ್ ಇರುವಂತಹ ಜನರು ಆದರ ಬಗ್ಗೆ

ಒಂದು ಅನುಭವ

ಗುಟ್ಟು ಮಾಡಬೇಕಾಗಿಲ್ಲ. ಆದರೆ ಎಚ್.ಐ.ವಿ./ಏಡ್ಸ್ ಕುರಿತ ಕಳಂಕ ಮತ್ತು ಜನರು ನನ್ನನ್ನು ದೂರವಿಡುತ್ತಾರೆ ಎಂಬ ಭಯ ನನ್ನನ್ನು ಕಾಡಲಾರಂಭಿಸಿತು. ಆಗ ನಾನು ಎಚ್.ಐ.ವಿ./ಏಡ್ಸ್ ಕುರಿತು ಕೆಲಸ ಮಾಡುತ್ತಿರುವ ಒಂದು ಸರಕಾರೇತರ ಸಂಸ್ಥೆಯನ್ನು ಭೇಟಿ ಮಾಡುವ ಅವಕಾಶ ದೊರೆಯಿತು. ಅಲ್ಲಿ ವಾತಾವರಣ ಸ್ನೇಹಮಯವಾಗಿತ್ತು. ಮತ್ತು ನಾನು ಎಚ್.ಐ.ವಿ. ಸೋಂಕು ಇರುವಂತಹ ಜನರೊಂದಿಗೆ ಬೆರೆಯಲು ಮತ್ತು ಅವರೊಡನೆ ಸಮಾನ ಸಮಸ್ಯೆಗಳು ಹೋರಾಟ ಮತ್ತು ಅನುಭವಗಳನ್ನು ಹಂಚಿಕೊಳ್ಳುವುದು ಸಾಧ್ಯವಾಯಿತು. ನನ್ನ ಈ ಹೊಸ ಮಿತ್ರರು ನನ್ನಲ್ಲಿ ಅಗಾಧ ಭರವಸೆ ತುಂಬಿದರು. ನನ್ನ ಒಂಟಿತನದ ಭಾವನೆ ಮಾಯವಾಯಿತು.

ಭಾರತದಲ್ಲಿ ಮೊದಲ ಎಚ್.ಐ.ವಿ. ಸೋಂಕು ಪೀಡಿತ ಪ್ರಕರಣ 1986ರಲ್ಲಿ ಪತ್ತೆ ಆದಂದಿನಿಂದ ಇವತ್ತಿನವರೆಗೂ ಆ ವೈರಸ್ಸಿನ ಮೇಲೆ ಹೆಚ್ಚು ಗಮನ ಹರಿಸುತ್ತಿದ್ದಾರೆಯೇ ಹೊರತು ಆ ವೈರಸ್ ಪೀಡಿತರಾಗಿ ಬಾಳುತ್ತಿರುವ ಜನರ ಮೇಲೆ ಗಮನ ಹರಿಸುತ್ತಿಲ್ಲ. ಇಂದು ಆ ವ್ಯಕ್ತಿಗಳು ಬದುಕಿದ್ದಾರೆ, ಹಾಗೆ ಚೆನ್ನಾಗಿಯೇ ಇದ್ದಾರೆ. ಭಯಮಿಶ್ರಿತ ಸಂದೇಶಗಳು ಅನೇಕ ರೀತಿಯಲ್ಲಿ ಕಾಡಿ ಸೋಂಕು ಪೀಡಿತ ಜನರು ಭರವಸೆ ನೆರಳಿನಲ್ಲಿ ಬಾಳುವಂತಾಯಿತು. ನನ್ನ ಸೋಂಕನ್ನು ಪತ್ತೆ ಮಾಡಿದ ವೈದ್ಯರು ನಾನು ಅಬ್ಬಬ್ಬಾ ಎಂದರೆ 3 ವರ್ಷ ಬಾಳಬಹುದು ಎಂದಿದ್ದರು. ಇಂದು ಆ ವೈದ್ಯರೇ ಒಂದು ಅಪಘಾತದಲ್ಲಿ ತೀರಿ ಹೋಗಿದ್ದಾರೆ. ನಾನು ಚೆನ್ನಾಗಿಯೇ ಇದ್ದೇನೆ. ಈಗ ನನಗೆ ಎಚ್.ಐ.ವಿ. ಸೋಂಕಿನೊಂದಿಗೆ ಬಾಳುವುದು ಮಧುಮೇಹದಂತಹ ಯಾವುದೇ ದೀರ್ಘಕಾಲದ ಕಾಯಿಲೆಯೊಂದಿಗೆ ಬಾಳುವಂತದ್ದು ಎನಿಸಿವೆ. ವೈದ್ಯರು ಎಚ್.ಐ.ವಿ. ಸೋಂಕು ಇದೆ ಎಂದಾಕ್ಷಣ ಆಕಾಶ ಕಳಚಿ ಬಿದ್ದಂತಲ್ಲ! ಅಲ್ಲಿಗೇ ಬದುಕು ಕೊನೆಗೊಳ್ಳುವುದಿಲ್ಲ. ಈ ಸೋಂಕು ಪತ್ತೆ ಆದ ಮೇಲೆಯೇ ನನ್ನ ಬದುಕು ಹೆಚ್ಚು ಹಸನಾಯಿತು ಎಂದು ಹೇಳಬಲ್ಲ ಒಬ್ಬ ವ್ಯಕ್ತಿ ನಾನು. ಅದಕ್ಕೆ ಯಾವುದೇ ಮದ್ದು ಇಲ್ಲದೇ ಇರಬಹುದು. ಆದರೆ ನಾನು ಆಶಾಭಾವನೆಯನ್ನು ಬಿಟ್ಟಿಲ್ಲ. ಎಚ್.ಐ.ವಿ/ಏಡ್ಸ್ ಪೀಡಿತರ ಮತ್ತು ಅವರ ಕುಟುಂಬದ ಜೀವನದ ಉತ್ತಮ ಗುಣಮಟ್ಟವನ್ನು ಉಳಿಸಿಕೊಂಡು ಬರಲು ಆರೈಕೆ ಬೆಂಬಲ ನೀಡುವುದಕ್ಕೆ ಈಗ ಇನ್ನಷ್ಟು ಹೆಚ್ಚು ಸಂಪನ್ಮೂಲ ಬಳಕೆಯಾಗಬೇಕೆಂಬುದು ನನ್ನ ಆಸೆ. ಇದರಿಂದ ಅಂಥ ಸೋಂಕು ಪೀಡಿತ ವ್ಯಕ್ತಿ ತಾನೂ ಮುಂದೆ ಬಂದು ಇತರರಿಗೆ ಸಹಾಯ ನೀಡಿ ಎಚ್.ಐ.ವಿ. ಬಗ್ಗೆ ಇರುವ ಆತಂಕದ ಭಾವನೆ ನೀಗಿಸಿ ಸರ್ವೇ ಸಾಮಾನ್ಯವಾಗಿಸುವುದಕ್ಕೆ ಸಹಕಾರಿಯಾಗುತ್ತಾನೆ.

ಈ ವೈರಸ್ಸು ನಮ್ಮ ಬದುಕನ್ನು ನಿಯಂತ್ರಿಸುವ ಶಕ್ತಿ ಅಲ್ಲ. ಕಳೆದ ಒಂಬತ್ತು ವರ್ಷಗಳಲ್ಲಿ ಮಿಕ್ಕವರಿಗಿಂತ ನಾನು ಹೇಗೆ ಬೇರೆ? ಎಂಬುದನ್ನು ಕಾಣಲು ಪ್ರಯತ್ನಿಸಿದ್ದೇನೆ. ನನಗೆ ಉತ್ತರ ಸಿಕ್ಕಿಲ್ಲ. ನಾನೊಬ್ಬ ಎಚ್.ಐ.ವಿ. ಪೀಡಿತ ಮನುಷ್ಯ ಆದರೆ ನಾನು ಸಮಾಜದ ಒಬ್ಬ ಗಣ್ಯ ಸದಸ್ಯನಾಗಿ ಬಾಳಬೇಕೆಂಬುವ ಹಂಬಲ ಇರುವ ವ್ಯಕ್ತಿ.

ಕೃಪೆ: ಎಚ್.ಐ.ವಿ./ಏಡ್ಸ್ ವಾರ್ತಾ ಪತ್ರ.

ನೀರು ಬಂತು. ಎದೆಯಲ್ಲಿ ಹಾಲುಕ್ಕಿಹರಿಯುತ್ತಿದ್ದರೂ ಮಗುವಿಗೆ ಕುಡಿಸುವ ಹಾಗಿಲ್ಲ. ಅಳುತ್ತಿದ್ದ ಮಗುವನ್ನು ನೋಡಿಯೂ ಸುಮ್ಮನಿರಬೇಕಾದರೆ ಆ ತಾಯಿ ಜೀವ ಎಷ್ಟು ನೊಂದಿರಬಹುದು?

ಲಲಿತಾ ಮಹಾರಾಷ್ಟ್ರದ ಒಂದು ಹಳ್ಳಿಯಿಂದ ಬಂದಿದ್ದಾಳೆ. ಅವಳಿಗಿನ್ನೂ 25 ವರ್ಷ. ಮದುವೆಯಾಗಿ 7 ವರ್ಷ. ಎರಡು ಮಕ್ಕಳಿವೆ. ಗಂಡ ಹಾಸಿಗೆ ಹಿಡಿದು ತಿಂಗಳಾದಾಗ ಪರೀಕ್ಷೆ ಮಾಡಿಸಿದರೆ ಹೆಚ್.ಐ.ವಿ. ಪಾಸಿಟಿವ್ ಬಂದಿತಂತೆ. ಅಲ್ಲಿ ಅವನಿಗೆ ವೈದ್ಯರು ಚಿಕಿತ್ಸೆ ಕೊಡಲಿಲ್ಲವಂತೆ. ನಂತರ ಕ್ಷಯ ರೋಗವೂ ಅಂಟಿಕೊಂಡಿದೆ. ಅವನು ಏಡ್ಸ್‌ಗೆ ಚಿಕಿತ್ಸೆ ಇಲ್ಲವೆಂದು ತಿಳಿದು ಮಾನಸಿಕ ಆಘಾತಕ್ಕೊಳಗಾಗಿ ಸತ್ತು ಹೋದನಂತೆ. ಅವನೂ ಡ್ರೈವರ್ ಕೆಲಸ ಮಾಡುತ್ತಿದ್ದನಂತೆ. ಅವನು ಸತ್ತುಹೋದ ಮೇಲೆ ಮೈದುನ ಈಕೆಯನ್ನು ಇಲ್ಲಿ ತಂದು ಬಿಟ್ಟಿದ್ದಾನೆ. ಆಕೆಗೆ ಮರಾಠಿ ಬಿಟ್ಟರೆ ಬೇರೆ ಭಾಷೆ ಬರುವುದಿಲ್ಲ. ಅವರು ಬಿಟ್ಟು ಹೋಗುವಾಗ 'ಇಲ್ಲಿರೋದಿಲ್ಲ ಕರೆದುಕೊಂಡು ಹೋಗಿ' ಎಂದು ಗೋಳಿಡುತ್ತಿದ್ದಳಂತೆ. ಮಗು ಅತ್ತಾಗಲೆಲ್ಲ ಮುದ್ದುಗರೆಯುತ್ತ ಹಾಲುಣಿಸುತ್ತಿದ್ದ ಲಲಿತಾ ಈಗ ಅದು ಅತ್ತರೆ ತಾನೂ ಅಳುತ್ತಾಳೆ. ಏನೂ ಮಾಡಲಾಗದ ನಿಸ್ಸಹಾಯಕತೆ. ಜೊತೆಗಿರುವ ಬೇರೆ ರೋಗಿಗಳನ್ನು ನೋಡಿ ಸಮಾಧಾನಪಟ್ಟುಕೊಳ್ಳುತ್ತಾಳೆ. ಮತ್ತೆ ಊರಿಗೆ ಹೋಗುವೇನೋ ಇಲ್ಲವೋ ಎಂಬ ಚಿಂತೆ ಅವಳ ಮುಖದಲ್ಲಿ ಎದ್ದು ಕಾಣುತ್ತಿತ್ತು. ಕ್ಷಣಿಕ ಸುಖಕ್ಕಾಗಿ ಗಂಡ ತೆತ್ತ ಬೆಲೆಗೆ ಅವನೊಬ್ಬನಲ್ಲದೆ ಹೆಂಡತಿ, ಮಕ್ಕಳೂ ಶಿಕ್ಷೆ ಅನುಭವಿಸಬೇಕು. ಅವಳು 'ನಾ ಬದುಕಬೇಕ್ರೀ, ಈ ಮಕ್ಕಳನ್ನು ಸಾಕಬೇಕ್ರಿ, ಇವು ದೊಡ್ಡವಾಗುವತನಕ ನಾ ಬದುಕ್ತೀನ್ರಿ' ಅಂತ ಅಳುತ್ತಲೇ ಹೇಳುತ್ತಾಳೆ. 25 ವರ್ಷಕ್ಕೇ ಗಂಡನನ್ನು ಕಳೆದುಕೊಂಡು ವಿಧವೆಯಾದ ಅವಳನ್ನು ನೋಡಿದರೆ ಕರಳು ಚುರ್ರಕ್ಕೆನ್ನುತ್ತದೆ. ಆಡುತ್ತಿದ್ದ ಕಂದಮ್ಮಗಳನ್ನು ನೋಡಿದರೆ ಪಾಪ ಎನ್ನಿಸುತ್ತದೆ. ಏಡ್ಸ್ ಎಂತಹ ಕ್ರೂರ! ಅದಕ್ಕೆ ಮಕ್ಕಳು, ದೊಡ್ಡವರು, ಪಾಪ ಮಾಡದವರು, ಪಾಪ ಮಾಡಿದವರು ಎಂಬ ಭೇದವೇ ಇಲ್ಲ. ಎಲ್ಲರನ್ನೂ ತನ್ನೊಳಕ್ಕೆ ಸೆಳೆದುಕೊಳ್ಳುತ್ತದೆ. •

ಜಯಮ್ಮನಿಗೆ 34 ವರ್ಷ. ಅವಳ ಗಂಡ ಹೊಸಪೇಟೆ ಬಳಿಯ ಕಾರ್ಖಾನೆಯೊಂದರಲ್ಲಿ ಎಂ.ಡಿಗೆ ಡ್ರೈವರ್ ಆಗಿದ್ದ. ಕುಡಿತದ ಚಟ ಇದೆಯಂತೆ. ಗಂಡ, ಹೆಂಡತಿ ಹಾಗೂ ಇಬ್ಬರು ಮಕ್ಕಳಿಗೂ ಹೆಚ್.ಐ.ವಿ.ಯ ಸೋಂಕು ತಗುಲಿದೆ. ಇನ್ನಿಬ್ಬರು ಮಕ್ಕಳು ಆರೋಗ್ಯವಾಗಿದ್ದಾರೆ. ಅವರು ಊರಲ್ಲಿದ್ದಾರೆ. ಮಕ್ಕಳು ಊರಿಗೆ ಹೋಗೋಣ ಅನ್ನುತ್ತಿರುತ್ತವಂತೆ. ಬಂಧು ಬಳಗದವರನ್ನು ನೆನಸಿಕೊಂಡು ದುಃಖ ಪಡುತ್ತಾಳೆ. ಗಂಡನಿಂದಲೇ ಹೀಗಾಗಿದೆಯೆಂದು ಬೇಸರ, ದುಃಖ ಇದೆ. ಆದರೂ 'ಬಂದಿದ್ದೆಲ್ಲ ಅನುಭವಿಸಬೇಕಲ್ಲ, ನನಗೆ ಹುಷಾರಾಗದಿದ್ದರೆ ಪರವಾಗಿಲ್ಲ. ನನ್ನ ಮಕ್ಕಳು ಚೆನ್ನಾಗಿದ್ದರೆ ಸಾಕು' ಎನ್ನುತ್ತಾಳೆ.

ಮೂವತ್ತು ವರುಷದ ಗಂಗಪ್ಪ ಎಸ್.ಎಸ್.ಎಲ್.ಸಿ. ಓದಿದ್ದಾನೆ. ಮದುವೆಯಾಗಿ 8 ವರ್ಷಗಳಾಗಿವೆ. ಕೊಪ್ಪಳ ತಾಲ್ಲೂಕಿನ ಒಂದು ಹಳ್ಳಿಯವನು. ಮೂರು ಮಕ್ಕಳಿವೆ. ಬಟ್ಟೆ ವ್ಯಾಪಾರ ಮಾಡುತ್ತಿದ್ದವನು ನಾಲ್ಕು ತಿಂಗಳಾದ್ರೂ ಜ್ವರ ಬಿಡದಿದ್ದಾಗ ರಕ್ತ ಪರೀಕ್ಷೆ ಮಾಡಿಸಲಾಗಿ ಹೆಚ್.ಐ.ವಿ. ಪಾಸಿಟಿವ್ ಬಂದಿದೆ. ನಂತರ ನ್ಯೂಮೋನಿಯ ಆಗಿದೆ. ಅದೃಷ್ಟದ ಸಂಗತಿಯೆಂದರೆ ಹೆಂಡತಿ, ಮಕ್ಕಳಿಗೆ ಬಂದಿಲ್ಲ. ಇಲ್ಲಿ ಬಂದ ಮೇಲೆ ಆರೋಗ್ಯ ಸುಧಾರಿಸಿದೆಯಂತೆ. ಅವನ ಊರಿನಲ್ಲಿ ಎರಡು ವರ್ಷದಿಂದ ಹೆಚ್.ಐ.ವಿ. ಪಾಸಿಟಿವ್ ಬಂದಿರೋರು ಆರೋಗ್ಯದಿಂದ ತಮ್ಮ ಕೆಲಸ ಮಾಡಿಕೊಂಡಿರುವುದನ್ನು ನೋಡಿರುವನಾದ್ದರಿಂದ ಇವನಿಗೂ ತಾನು ಇಲ್ಲಿಂದ ವಾಪಸ್ಸು ಹೋಗಿ ಎಲ್ಲರಂತೆ ಸಹಜವಾಗಿ ಜೀವನ ನಡೆಸಬಲ್ಲೆನೆಂಬ ಧೈರ್ಯವಿದೆ.

ಮೂವತ್ತೆರಡು ವರ್ಷದ ರಾಜಪ್ಪ ಪಿ.ಯು.ಸಿ.ವರೆಗೆ ಓದಿದ್ದಾನೆ. ಅಂಗಡಿಯಲ್ಲಿ ಲೆಕ್ಕ ಬರೆಯುತ್ತಿದ್ದನಂತೆ. ತಿಂಗಳಿಂದ ಬಿಡದೇ ಭೇದಿಯಾಗುತ್ತಿತ್ತಂತೆ. ನಂತರ ರಕ್ತ ಪರೀಕ್ಷೆಯಿಂದ ಹೆಚ್.ಐ.ವಿ. ಪಾಸಿಟಿವ್ ಎಂದು ದೃಢಪಟ್ಟಿದೆ. ಕುಡಿಯುವ ಚಟ ಹಾಗೂ ವೇಶ್ಯಾಗೃಹಗಳಿಗೆ ಹೋಗುವ ಅಭ್ಯಾಸವಿತ್ತಂತೆ. ಹೆಂಡತಿಗೆ ಬಂದಿಲ್ಲವೆಂದು ಹೇಳುತ್ತಾನೆ.

37 ವರ್ಷದ ನಾರಾಯಣಪ್ಪನಿಗೆ ಮದುವೆಯಾಗಿ ಒಂದು ಹೆಣ್ಣು ಮಗುವಿದೆ. ಕರಕುಶಲ ಕೆಲಸ ಮಾಡಿಕೊಂಡಿದ್ದಾನೆ. ಒಂದು ತಿಂಗಳಿಂದ ಜ್ವರ, ಚಳಿ ಬರುತ್ತಿತ್ತಂತೆ. ಕ್ಷಯ ರೋಗ ಕೂಡ ಇದೆ. ಹದಿನೈದು ವರ್ಷದಿಂದ ಕುಡಿಯೋ ಚಟ ಇದೆ. ಮೂರು ತಿಂಗಳ ಹಿಂದೆ ರಕ್ತ ಪರೀಕ್ಷೆ ಮಾಡಿಸಿದಾಗ ಹೆಚ್.ಐ.ವಿ. ಪಾಸಿಟಿವ್ ಬಂದಿದೆ. ಹೆಂಡತಿಗೂ ಹೆಚ್.ಐ.ವಿ. ಪಾಸಿಟಿವ್ ಬಂದಿದೆ. ಇಲ್ಲಿ ಬಂದ ಮೇಲೆ ಆರೋಗ್ಯ ಸುಧಾರಿಸಿದೆಯಂತೆ. ನಿದ್ರೆ ಚೆನ್ನಾಗಿ ಬರುತ್ತಿದೆಯಂತೆ. ಜ್ವರ ಬರುವುದು ನಿಂತಿದೆಯಲ್ಲದೇ ತೂಕವು ಸ್ವಲ್ಪ ಹೆಚ್ಚಿದೆ.

ಬಸಪ್ಪನಿಗೆ 32 ವರ್ಷ. ಬಳ್ಳಾರಿಯ ಬಳಿಯ ಒಂದು ಹಳ್ಳಿಯಲ್ಲಿ ವ್ಯವಸಾಯ ಮಾಡಿಕೊಂಡಿದ್ದವನು. ಮದುವೆಯಾಗಿ ಇಬ್ಬರು ಮಕ್ಕಳಿವೆ. ಒಂದು ತಿಂಗಳಿಂದ ಜ್ವರ, ಹೊಟ್ಟೆನೋವು, ಭೇದಿ ಇತ್ತಂತೆ. ಯಾವ ಔಷಧಿಗೂ ಜಗ್ಗದಾದಾಗ ಮನೆಯವರು ಒಂದು ಖಾಸಗಿ ನರ್ಸಿಂಗ್ ಹೋಂಗೆ ಸೇರಿಸಿದ್ದಾರೆ. ಅಲ್ಲಿಯ ವೈದ್ಯರು ತಕ್ಷಣ ತುರ್ತಾಗಿ ಆಪರೇಷನ್ ಮಾಡಬೇಕೆಂದು ಹೇಳಿ ಮಾಡಿಯೇ ಬಿಟ್ಟರಂತೆ. ಆದರೆ ಆಪರೇಷನ್ ನಂತರವೂ ಭೇದಿ ನಿಲ್ಲದಿದ್ದಾಗ ವೈದ್ಯರು ತಡವಾಗಿಯಾದರೂ ಎಚ್ಚೆತ್ತುಕೊಂಡು ರಕ್ತವನ್ನು ಪರೀಕ್ಷೆಗೆ ಕಳಿಸಿದರಂತೆ. ಆಗಲೇ ಹೆಚ್.ಐ.ವಿ.ಯ ಇರುವಿಕೆ ತಿಳಿದು ಬಂದಿದ್ದು. ನಂತರ ಮನೆಯವರು ಇವನನ್ನು ಕರೆತಂದು ಇಲ್ಲಿ ಬಿಟ್ಟು ಹೋಗಿದ್ದಾರೆ. ಮೊದಲು ಇವನಿಗೆ ವಿಷಯ ತಿಳಿಸಿರಲಿಲ್ಲವಂತೆ. ಇಲ್ಲಿಗೆ ಬಂದ ಮೇಲೆ ತಿಳಿದಿದೆ.

ಸಂದರ್ಶನ ಮಾಡಿದ ಎಲ್ಲ ರೋಗಿಗಳಿಗೂ ಏಡ್ಸ್ ಬಗ್ಗೆ ಅಲ್ಪ ಸ್ವಲ್ಪ ಮಾಹಿತಿ ಇತ್ತೆಂದು ತಿಳಿಸಿದ್ದಾರೆ. ಎಲ್ಲಾ ಪುರುಷ ರೋಗಿಗಳು ಕುಡಿತ, ಸಿಗರೇಟು, ಗುಟಖಾ ಚಟ ಜೊತೆಗೆ ಬೇರೆ ಸ್ತ್ರೀಯರೊಂದಿಗೆ ಲೈಂಗಿಕ ಸಂಪರ್ಕ ಹೊಂದಿದ್ದವರೇ. ಫ್ರೀಡಂ ಫೌಂಡೇಶನ್ ಕೌನ್ಸೆಲರ್ ರಾವ್‌ರವರ ಪ್ರಕಾರ ಹೆಚ್ಚಿನ ರೋಗಿಗಳಿಗೆ ಲೈಂಗಿಕ ಸಂಪರ್ಕದಿಂದಲೇ ವೈರಸ್ ಬಂದಿರುತ್ತದೆ.

ಆದರೆ ಇದನ್ನು ಎಲ್ಲ ರೋಗಿಗಳೂ ಒಪ್ಪಿಕೊಳ್ಳುವುದಿಲ್ಲ. ನಿರಾಕರಿಸುತ್ತಾರೆ. ಆದರೆ ಎಲ್ಲ ರೋಗಿಗಳೂ ಅಲ್ಲಿನ ಊಟ, ವಸತಿ, ಚಿಕಿತ್ಸೆ ಬಗ್ಗೆ ತೃಪ್ತಿ ವ್ಯಕ್ತಪಡಿಸುತ್ತಾರೆ. ಎಲ್ಲ ರೋಗಿಗಳೂ ಡೈನಿಂಗ್ ಹಾಲ್‌ನಲ್ಲಿ ಕುಳಿತು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿರುತ್ತಾರೆ. ಅಲ್ಲಿನ ಪ್ರೀತಿ, ವಿಶ್ವಾಸ, ಸೌಹಾರ್ದತೆಯ ವಾತಾವರಣದಿಂದ ರೋಗಿಗಳಲ್ಲಿನ ಆತಂಕ, ಭಯ ಹೋಗಿ ಬದುಕಬೇಕೆಂಬ ಹಾಗೂ ಬದುಕುತ್ತೇವೆಂಬ ಆಸೆ ಚಿಗುರಿದೆ. ನಾನು ಗಮನಿಸಿದ ಒಂದು ಮುಖ್ಯವಾದ ಸಂಗತಿಯೆಂದರೆ ಅಲ್ಲಿ ಪುರುಷ ರೋಗಿಗಳಿಗಿಂತ ಮಹಿಳಾ ರೋಗಿಗಳೇ ಹೆಚ್ಚು ಧೈರ್ಯ, ಆತ್ಮವಿಶ್ವಾಸಗಳನ್ನು ಹೊಂದಿದ್ದಾರೆ. ಅವರು ಹುಟ್ಟಿನಿಂದಲೂ ಕಷ್ಟ ಅನುಭವಿಸುತ್ತ ಬಂದಿರುತ್ತಾರಾದ್ದರಿಂದ ಈ ಕಾಯಿಲೆಯಿಂದ ವಿಚಲಿತರಾಗಿಲ್ಲದಿರಬಹುದು. ಕೌನ್ಸೆಲರ್ ರಾವ್‌ರ ಪ್ರಕಾರ ಕೆಲವು ರೋಗಿಗಳ ಮನೆಯವರು ರೋಗಿಯನ್ನು ಬಿಟ್ಟು ಹೋಗುತ್ತಾರಾಗಲೀ ತಿರುಗಿ ಬಂದು ನೋಡುವುದಿಲ್ಲ. ಮಾತನಾಡಿಸುವುದಿಲ್ಲ. ವಾಪಸ್ಸು ಕರೆದುಕೊಂಡು ಹೋಗುವುದೂ ಇಲ್ಲವಂತೆ. ■

ಷಾಪಿಂಗ್ ಷಾಕ್

■ ಡಾ. ಎಚ್. ಎಸ್. ವೆಂಕಟೇಶ್

ಬೇಜಾರು ಮಾಡಿಕೊಳ್ಳಬೇಡಿ ಸ್ವಾಮಿ, ಷಾಪಿಂಗ್‌ನಲ್ಲಿ ಎಂತಾ ಷಾಕ್ ಇತ್ತೆಂದು ಅನುಭವಿಸಿದವನು ನಾನು. ಬರೆಯುವವನೂ ನಾನೇ, ಓದಿ ಎಚ್ಚರಗೊಳ್ಳುವವರು ನೀವು. ಹೇಗಿದೆ ನ್ಯಾಯ? ಇರಲಿ.

ಇಡೀ ಶಿವಕಾಶಿಯ ಪಟಾಕಿಯನ್ನೆಲ್ಲಾ ತಂದು, ನನ್ನ ಸುತ್ತಾ ಸುರಿದು, ಬೆಂಕಿ ಹಚ್ಚಿದರೂ ನಿರುಮ್ಮಳವಾಗಿ ಇರುವವನು ನಾನು. ಜಾಸ್ತಿ ಏನಾಗಬಹುದು? ಇರುವ ಒಂದೇ ಒಂದು ಪ್ರಾಣ ಹೋಗಬಹುದು. ''ನಮಗೇನು ಆರೇಳಿವೆಯೇ? ಒಂದು ಹೋದ್ರೆ ಹೋಗ್ಲೀನ್ನಕ್ಕೆ?' ಎಂದು ಕೇಳಬೇಡಿ. ಆದರೆ ಅಂದು ಪ್ರಾಣವೊಂದು ಉಳಿದು ಮಿಕ್ಕೆಲ್ಲಾ ಹೋಯ್ತು. ಸ್ವಾಮಿ, ನನ್ನ ಮಾನ, ಹಣ, ಸೋಷಿಯಲ್ ಪ್ರೆಸ್ಟೀಜು ಎಲ್ಲಾ, ಅದೂ ಪಬ್ಲಿಕ್ಕಾಗಿ.

ಆಫೀಸಿನಿಂದ ಅದೇ ತಾನೇ ಬಂದಿದ್ದೆ. ಜಯ ಪ್ರೀತಿಯಿಂದ ಕಾಫಿ ಕೊಟ್ಟು, ತಲೆ ಕೂದಲಿಗೆ ಕೈಯಿಟ್ಟಳು. ಅರ್ಥವಾಗಿತ್ತು, ಏನೋ ಮಸಲತ್ತು. ದೀಪಾವಳಿ ಹತ್ತಿರ ಬಂದಿತ್ತಲ್ಲಾ,

''ರ್ರೀ, ನಾಳೆ ಷಾಪಿಂಗ್ ಹೋಗೋಣ್ವಾ ದೀಪಾವಳಿಗೆ ಬಟ್ಟೆ ತರ್ಬೇಕು'' ತಿರುಪತಿ ಯಾತ್ರೇಂದ್ರೇ - ಅರ್ಥವಾಗಲ್ವ, ಕಾಸೂ ಕೇಡು, ತಲೆಯೂ ಬೋಡು.

''ನಿಮ್ಮ ಫ್ರೆಂಡು, ಪರಮೇಶಿಯೂ ಬರ್ತಾರಂತೆ'' ನನ್ನೆದೆಯಲ್ಲೇ ಪೋಖ್ರಾನ್ ಸಿಡಿದಿತ್ತು.

'' ಆ ಮನೆ ಹಾಳ, ಪಿಶಾಚಿ, ಬರೋದಾದ್ರೆ ನಾನು ಬರಲ್ಲ'' ಮೈ ಉರಿದಂತಾಗಿ ಕಿರುಚಿದೆ.


''ಮೆಲ್ಲಗೆ ಮಾತಾಡ್ರೀ, ಪರಮೇಶಿ ಬಂದಿದ್ದಾರೆ''

''ಬಂದ್ರೆ ಬರ್ಲಿ ಬಿಡು. ನಂಗೇನು ಮಾಡ್ತಾನೆ? ಅಯೋಗ್ಯ''

ಒಳಗೆ ಬಂದು ನನ್ನನ್ನೇ ದಿಟ್ಟಿಸಿದ ಕಣ್ಣುಗಳು - ಪರಮನವು.

''ಅತ್ಗೆ, ನೀವು ರೆಡಿಯಾಗಿರಿ, ನಾಳೆ ನಾನು, ನನ್ನ ನಾದ್ನಿ ಬರ್ತೀವಿ, ಎಲ್ರೂ ಒಟ್ಗೇ ಹೋಗೋಣ'' ಹೊರಟೇ ಹೋಗಿದ್ದ.

ಪ್ರಾಣ ಸ್ನೇಹಿತಾಂದ್ರೆ, ನಾನು ಒಂದ್ಮಾತೂ



ಬೈಬಾರ್‍ದಾ? ನೀವೇ ಹೇಳಿ, ಅದಕ್ಕೆ ಆ ಚಂಡಾಲ ಹೀಗೆ ಮಾಡಬಹುದಾ?

ಭಾನುವಾರವಲ್ಲವೇ, ಊಟ ಮುಗಿಸಿ ಸ್ವಲ್ಪ ನಿದ್ದೆ ಮಾಡುತ್ತಿದ್ದಂತೇ ಪರಮನ ಸವಾರಿ, ನಾದಿನಿ ಜೊತೆ. ಹಳ್ಳಿಯ ಹೆಣ್ಣಾದರೂ ಸ್ವಲ್ಪ ಮಿತಿ ಮೀರಿದ ಅಲಂಕಾರ, ಕಣ್ಣಿಗೆ ರಾಚುವಂತಿತ್ತು.

''ಅತ್ಗೇ, ಈವತ್ತು ಸಾಯಂಕಾಲ ನಿಮ್ಗೆಲ್ಲಾ ಎಂ.ಟಿ.ಆರ್. ಮಸಾಲೆ ಪಾರ್ಟಿ, ನಂದೇ'' ಕೂಗಿದ್ದ ನನ್ನ ಕಿವಿಗೇ ಬೀಳುವಂತೆ.

ಮಸಾಲೆ ದೋಸೆ- ನನ್ನ ಮೆದುಳು ಪ್ರಜ್ಞೆ ಕಳೆದುಕೊಳ್ಳುವ ಕ್ಲೋರೋಫಾರಂ. ಜೊತೆಗೆ ಜಯಳು ಇದ್ದಾಳೆ, ಪರಮ ಬಾಲ ಬಿಚ್ಚಲಾರ, ಎಂದೇ ನಾನು ಭಾವಿಸಿದ್ದೆ. ಆದರೆ ಅದಾಗಲೇ, ನನಗೇ ಬಾಲ ಹಚ್ಚಿ, ಲಂಕಾದಹನದ ದೃಶ್ಯಕ್ಕೆ ಕಿಡಿಯಾಗಿದ್ದ.

ಸಿಂಪಲ್ ಸುಂದರಿ ಜಯ, ಜಂಭದಿಂದಲೇ ಹೊರಟೆ. ಮೊದಲು ಬಟ್ಟೆ ತೊಗೋಬೇಕಲ್ಲಾ. ಎಂ.ಟಿ. ಆರ್. ಹತ್ತಿರವೆಂದು ಅಲ್ಲೇ ಷಾಪಿಂಗ್ ಮಾಡಲು ಪರಮನ ಸಲಹೆ.

ಬಟ್ಟೆ ಅಂಗಡಿಗೆ ನುಗ್ಗಿದೆವು. ಹಾಂ, ಒಂದು ವಿಚಾರ ಹೇಳಲು ಮರೆತೆ. ಪರಮನ ನಾದಿನಿ ಇಲ್ಲಿಯವರೆಗೂ ಒಂದೂ ಮಾತಾಡಿರಲಿಲ್ಲ.

ಅಂದೇ ನನಗೆ ಗೊತ್ತಾದದ್ದು. ಒಂದು ಸೀರೆಗಾಗಿ ಜಯ ಇಡೀ ಅಂಗಡಿಯನ್ನೇ ಒದರಿ ನೋಡುತ್ತಾಳೆಂದು. ನನಗೋ ತಾಳ್ಮೆ ಮುಗಿದಿತ್ತು.

''ಎಷ್ಟುಹೊತ್ತೇ, ಒಂದು ಸೀರೆಗೆ?''

''ಗುರೂ, ನಿಂಗೇನೂ ಗೊತ್ತಾಗಲ್ಲ ಸುಮ್ನಿರು, ನೀವು ಹುಡ್ಕಿ ಅತ್ಗೆ'' ಎಂದ ಪರಮ.

''ನೋಡು, ಇಲ್ಲೇ ಲಾಲ್ಬಾಗಿದೆ, ಇವ್ಳಿಗೂ ಅದ್ನ ನೋಡ್ಬೇಕಂತೆ, ಹೋಗಿ ತೋರಿಸ್ಕೋ ಬಾ,'' ಪರಮ ನಾದಿನಿಯ ಕಡೆ ಕೈ ತೋರಿದ.

''ಹೌದ್ರೀ, ಸುಮ್ಮೆ ಪಿರಿ, ಪಿರಿ ಮಾಡ್ಬೇಡಿ. ನೀವು ಬರೋ ಹೊತ್ಗೇ ನಾವು ಸೆಲೆಕ್ಷನ್ ಮುಗಿಸಿರ್ತೀವಿ'' ಜಯ ಗುರುಗುಟ್ಟಿದಳು.

ಸದ್ಯ, ಬಚಾವಾದೆಯೆಂದು ಹೊರ ಬಂದೆ. ಹಿಂದೆ ಪರಮನ ನಾದಿನಿ.

''ಅವ್ನ ಕೈ ಹಿಡ್ಕೋ, ಬಿಡ್ಬೇಡಾ, ಇಲ್ಲಾಂದ್ರೆ ಈ ಗಲಾಟೇಲಿ ನೀನು ತಪ್ಪಿಸ್ಕೊತೀ'' ಪರಮ ನಾದಿನಿಗೆ ಹೇಳಿದ. ಆ ಮೂಕಿಯೋ ತಲೆ ಯಾಡಿಸಿದಳು.

ಲಾಲ್ಬಾಗನ್ನು ಹೊಕ್ಕ ತಕ್ಷಣ ಮಕ್ಕಳಂತೆ ಕೈ ಹಿಡಿದುಕೊಂಡಳು. ನಾನು ಬೆಚ್ಚಿದೆ, ಆದರೂ ಮುಗ್ಧ ಹೆಣ್ಣಲ್ಲವೇ ಎಂದು ಸುಮ್ಮನಾದೆ, ನಮ್ಮಿಬ್ಬರ ವೇಷ ತಾಳಿಕೆಯಾಗುವಂತಿರಲಿಲ್ಲ. ವಿಚಿತ್ರ ಕಾಂಬಿನೇಷನ್ನು.

ಅವಳಿಗೆ ಎಲ್ಲಾ ತೋರಿಸುತ್ತಾ ಹೋದೆ, ಸುಮ್ಮನೇ ನಕ್ಕು ತಲೆಯಾಡಿಸುತ್ತಿದ್ದಳೇ ವಿನಾ ಮಾತಿಲ್ಲ, ಪಾಪ ಮೂಕಿಯಿರಬೇಕು, ಅದಕ್ಕಾಗೇ ಪರಮ ನನಗೂ, ಜಯಳಿಗೂ ಹೆಚ್ಚು ಹೇಳಿರಲಿಲ್ಲವೆಂದು ಭಾವಿಸಿದೆ.

ಆದರೆ ಮುಂದಾದ್ದದ್ದು ನನ್ನ ಪ್ರಾಣ ವೊಂದನ್ನು ಬಿಟ್ಟು ಉಳಿದೆಲ್ಲಾ ಹೋಯ್ತು ಸ್ವಾಮಿ, ಪರಮನ ನಾದಿನಿಗೆ ಎಲ್ಲಾ ತೋರಿಸಿ ಬರುವಷ್ಟರಲ್ಲಿ ಎದುರುಗಡೆ ಪೋಲಿಸರಿಬ್ಬರು. ಕುತ್ತಿಗೆಯಲ್ಲಿ ತಾಳಿ, ಕಾಲುಂಗುರ ಯಾವುದೂ ಇಲ್ಲದ, ಸ್ವಲ್ಪ ರಾಡಿಯೆನಿಸುವ ಮೇಕಪ್ಪಿನ ಹೆಣ್ಣೊಬ್ಬಳ ಕೈ ಹಿಡಿದು ಹೋಗುತ್ತಿರುವ ನಾನು. ಅವರನ್ನು ನೋಡೇ ನನ್ನ ಎದೆ ಏನೋ ಭೀತಿಯಿಂದ ನಡುಗಿದರೂ ಮುಂದೆ ಹೆಜ್ಜೆಯಿಟ್ಟೆ.

''ರ್ರೀ, ಯಾರ್ರೀ ನೀವು?'' ಪರಿಚಯ ಹೇಳಿದೆ.

''ಇವರ್‍ಯಾರು?'' ಇನ್ನು ಪುರಾಣವನ್ನೆಲ್ಲಾ ಹೇಳುವಂತಾಯ್ತೆ? ಬೆದರಿದೆ.

''ಇವ್ರು ಯಾರಮ್ಮ?''

''ಏನಾಗಬೇಕು ನಿನ್ಗೆ?''

ಪೋಲಿಸರು ಕೇಳುತ್ತಿದ್ದಂತೇ ಪರಮನ ನಾದಿನಿಯ ಕಣ್ಣಲ್ಲಿ ನೀರು, ಹೆದರಿಕೆಯಿಂದ ಬಾಯಿ ಬಿಡವೊಲ್ಲಳು.

ಅವರ ಅನುಮಾನ ನಿಜವಾದಂತೆ ಭಾವಿಸಿದರು.

ಅಷ್ಟರಲ್ಲಾಗಲೇ ಕುತೂಹಲಿಗಳ ಗುಂಪು ನನ್ನ ಸುತ್ತಾ.

ದೇವರೇ ಇನ್ನು ಗತಿ?

''ನಡೀರಿ ಸ್ಟೇಷನ್ನಿಗೆ'' ಒಬ್ಬ ಗದರಿದ.

''ಹಾಳಾದವ್ರು, ನೋಡೋಕೆ ಡೀಸೆಂಟ್ ಥರಾ ಇರ್ತಾರೆ, ಇಂತಾ ಪಬ್ಲಿಕ್ ಪ್ಲೇಸೆಲ್ಲಾ ಇಂತಾವ್ರಿಂದ ಹೊಲಸಾಗೋಯ್ತು''

''ಒಂಚೂರಾದ್ರೂ ಟೇಸ್ಟ್ ಬೇಡ್ವಾ? ಒಳ್ಳೇ ಹಳ್ಳೀನ ಕರ್‍ಕೊಬಂದಿದಾನೆ'

''ಆದ್ರೂ ಬುದ್ವಂತ ಕಾಣಯ್ಯ, ಅವ್ರು ಒಳ್ಗೆ ಏನೇನಿದೇಂತ ಹೇಳಕ್ಕೆ ಬರ್‍ದೇ ಇರೋಹಾಗೆ ಮೂಕೀನ್ನೇ ಕರ್‍ಕೊಬಂದಿದಾನೆ''

''ಪಟ್ನದವ್ರಿಗೆ ಖರ್ಚು ಮಾಡಕ್ಕೆ ಇವನ್ಕೈಲಿ ಎಲ್ಲಾಗ್ತದೆ, ಕಮ್ಮಿ ಕಾಸು, ಜಾಸ್ತಿ ಮಜ''

''ಅಯ್ಯೋ ಪಾಪ, ಹಾಳಾದವ್ರು ಇವತ್ತೇ ಇವ್ರ ಕೈಗೆ ಸಿಗ್ಬೇಕೆ?''

ಮೆಡಿಕಲ್ ಕಾಲೇಜಿನಲ್ಲಿ ಹೆಣದ ಒಂದೊಂದೇ ಅಂಗವನ್ನು ಕುಯ್ದು ಹೊರಕ್ಕೆಳೆದು, ಹಿಂಜಿ, ಅದರ ಬಗ್ಗೆ ವಿವರಣೆ ಕೊಡುತ್ತಾರಲ್ಲಾ- ಹಾಗಾಯ್ತು ನನ್ನ ಸ್ಥಿತಿ. ಒಬ್ಬೊಬ್ಬರದೂ ಒಂದೊಂದು ಮಾತು.

ಈ ಮಾತೆಂಬ ಧರ್ಮದೇಟಿನಲ್ಲಿ ನನ್ನ ಪ್ರಾಣವೊಂದನ್ನು ಬಿಟ್ಟು ಎಲ್ಲಾ ಹೋಯ್ತು. ಸದ್ಯ, ಪೋಲೀಸರ ಕೈ ಇನ್ನೂ ನನ್ನ ಕಾಲರ್, ಕುತ್ತಿಗೆಗೆ ಬಿದ್ದಿರಲಿಲ್ಲ.

''ಜೇಬಲ್ಲಿ ಏನಾದ್ರೂ ಇದ್ರೆ ಸುಮ್ನೆ ಅವರ್‍ಗೆ ಕೊಟ್ಟು ಮನೇಗ್ಹೋಗಿ'' ಒಬ್ಬ ಮೆಲ್ಲನೆ ನನ್ನ ಕಿವಿ ಬಳಿ ಉಸುರಿದ. ಅವನ ಹಾವಭಾವ ನೋಡಿ ಪೊಲೀಸರೂ ಏನಾದರೂ ಗಿಟ್ಟಬಹುದೆಂದು ನಿಂತರು. ಜೇಬಿಗೆ ಕೈಹಾಕಿದೆ. ಎಲ್ಲಾ ಹಣ ಜಯಳಿಗೆ ಪರ್ಸಿನ ಸಮೇತ ಕೊಟ್ಟದ್ದು ಜ್ಞಾಪಕಕ್ಕೆ ಬಂತು. ಸಂಧಾನಕಾರನೂ ಆಕಾಶ ನೋಡಿದ.

''ಇನ್ನು ನಿನ್ನ ಹಣೆ ಬರಹ'' ವೆನ್ನುವಂತೆ ಹೊರಟು ಹೋದ.

ಏನೂ ಗಿಟ್ಟದ್ದರಿಂದ ಅವರಿಗೂ ಕೋಪ ಬಂದಿರಬೇಕು. ಮುಖ ಊದಿಸಿ ದುರು ದುರು ನೋಡಿದರು. ''ಆಯ್ತು ನಿನ್ನಗತಿ'' ಎಂದಿತು ಮನಸ್ಸು.

''ಗುರುವೇ'' ಪರಮನ ಧ್ವನಿ.

ಆಪದ್ಬಾಂಧವ, ಅನಾಥ ರಕ್ಷಕನಂತೆ ಬಂದಿದ್ದ. ಹಿಂದೆಯೇ ಜಯ.

ಪರಮನ ನಾದಿನಿಯ ಕಣ್ಣೀರು, ಪೊಲೀಸರು, ಜನರ ಗುಂಪನ್ನು ನೋಡಿ, ನಾನೇ ಏನೋ ತರಲೆ ಮಾಡಿರಬೇಕೆಂದು ಭಾವಿಸಿದಳೋ? ಅಯ್ಯೋ ದೇವರೇ!

ನಿಧಾನವಾಗಿ ಪರಮ ಎಲ್ಲಾ ಕೇಳಿದ.

''ಅವ್ಳು ನನ್ನ ನಾದ್ನಿ'' ಎಂದವನೇ ಎಲ್ಲಾ ಬಿಡಿಸಿ ಹೇಳಿದ, ಬದುಕಿಸಿದ. ಗುಂಪು ನಗುತ್ತಾ ಕರಗಿತು.

''ಹೌದು, ಇಷ್ಟೆಲ್ಲಾ ಆದ್ರೂ ನೀನ್ಯಾಕೆ ಬಾಯಿ ಬಿಡ್ಲಿಲ್ಲ?''

''ನೀನೇ ಹೇಳಿದ್ಯಲ್ಲಾ ಮಾವಾ, ನಾನು ಹೇಳೋವರ್‍ಗೂ ಮಾತಾಡ್ಬೇಡಾಂತ.

ಇಲ್ದಿದ್ರೆ ಆ ಪೊಲೀಸಪ್ಪಂಗೆ ಆವಾಗ಼್ಲೇ ಗಾಚಾರ ಬಿಡಿಸ್ತಿದ್ದೆ''

ಮೂಕ ಗಿಳಿ ಬಾಯಿ ಬಿಟ್ಟಿತು. ಮುಸಿ, ಮುಸಿ ನಕ್ಕ ಪರಮ, ಅಂದರೆ ಇವೆಲ್ಲಾ ಇವನದೇ ಕಿತಾಪತಿಯೆಂದಾಯ್ತು. ಅಂದು ಲಾಲ್ಬಾಗಿನಲ್ಲಿ ಪೊಲೀಸರ ಕಾವಲಿದೆಯೆಂದು ತಿಳಿದೇ ಹೀಗೆ ಮಾಡಿದ್ದ.

ಎಂಟಿಆರ್‌ನಲ್ಲಿ ಕೊಡಿಸಿದ ಮಸಾಲೆ ನನ್ನ ಕೋಪವನ್ನು ಅರ್ಧ ಅಡಗಿಸಿತು. ಉಳಿದರ್ಧ ಜಯಳ ನಗುಮುಖದಿಂದ. ಆದರೆ ಲಾಲ್ಬಾಗಿನಲ್ಲಿ ಹೋದದ್ದು?

ಮರಳಿ ಬರುವಾಗ ಪರಮ ಒಂದು ಪುಸ್ತಕ ಕೈಗೆ ಕೊಟ್ಟ.

''ಅಚ್ಚಗನ್ನಡದ ಬೈಗುಳಗಳ ಸಂಗ್ರಹ''

''ಗುರುವೇ, ಇದ್ರಲ್ಲಿ ಇಡೀ ಕರ್ನಾಟಕದಲ್ಲಿರೋ ಕನ್ನಡದ ಬೈಗುಳಗಳೆಲ್ಲಾ ಇದೆ. ಚೆನ್ನಾಗಿ ಓದ್ಕೋ, ಬೈಯ್ಯೋದಿದ್ರೂ ಹೊಸ ಹೊಸ್ದಾಗಿ ಬಯ್ಬೇಕಪ್ಪಾ, ಸುಮ್ನೆ ಅದೇ ಹಳೇ ಗ್ರಾಮೋಫೋನ್ ರೆಕಾರ್ಡ್ ತರ, ಅಯೋಗ್ಯ, ತರಲೆ, ಕೇಡಿಗ ಎಂದೆಲ್ಲಾ ಬಯ್ತಿ. ಅದ್ನೇ ಕೇಳೀ ಕೇಳೀ ನಂಗೂ ಬೇಜಾರು. ಅದ್ಕೇ ಇದು. ಇನ್ಮುಂದೆ ಇದ್ನ ಚೆನ್ನಾಗಿ ಓದ್ಕೊಂಡು ನನ್ನ ಬೈಯ್ಬೇಕು, ಮಜಾ ತೊಗೋತೀನಿ''

ಇವನಿಗೆ ಏನನ್ನಬೇಕು? ನೀವೇ ಹೇಳಿ ಸ್ವಾಮಿ

ಹೊಸ ಬೈಗುಳ ಕಲಿತು- ಬೈಯ್ಯಬೇಕಂತೆ... ಅದಕ್ಕಾಗಿ ಪುಸ್ತಕ.

'ಆದ್ರೆ ಗುರೂ, ಒಂದ್ಮಾತು. ನೀನು ಏನೇ ಬೈಯ್ಯೋದಾದ್ರೂ ನಾನೊಬ್ನೇ ಇದ್ದಾಗ ಮಾತ್ರಾ. ಬೇರೇವ್ರ ಮುಂದೆ ಆಡಿದ್ಯೋ..' ಎಚ್ಚರಿಕೆ ಕೊಡೋದೇ ಘಟಿಂಗ. ಸಾರಿ, ಇದು ಹಳೆಯದು, ಹೊಸದನ್ನ ಇನ್ನೂ ಅಭ್ಯಾಸ ಮಾಡಿಲ್ಲ.


ಅಂದಿನಿಂದ ಶಾಪಿಂಗ್ ಎಂದರೆ ಶಾಕಾಗುತ್ತದೆ. ಒಂದು ವೇಳೆ ಹೋದರೂ ನನ್ನ ಜೊತೆಯವರು ಕಿವುಡು- ಮೂಕರಲ್ಲವೆಂದು ಖಾತ್ರಿ ಮಾಡಿಕೊಂಡೇ ಹೊರಡುವುದು.

ಈಗೀಗ ಬೈಗುಳದ ಸಂಗ್ರಹವನ್ನೆಲ್ಲಾ ಬಾಯಿ ಪಾಠ ಮಾಡುತ್ತಿದ್ದೇನೆ. ಅಂದಿನಿಂದ ಇಂದಿನವರೆಗೂ ಪರಮ ಒಬ್ಬಂಟಿಯಾಗಿ ಸಿಗುತ್ತಿಲ್ಲ.

ನಿಮಗೇನಾದರೂ ಸಿಕ್ಕರೆ ಕೂಡಲೆ ನನಗೆ ತಿಳಿಸಿ. ಈಗ ಎಲ್ಲಾ ಬಾಯಿ ಪಾಠವಾಗಿದೆ. ಪರಮನೊಬ್ಬ - ಒಬ್ಬನೇ ಬೇಕು. ■

ಅಂಚೆ ಪ್ರಪಂಚದ ಅಚ್ಚರಿ

ಎಂ.ಎಂ.ಇನಾಂದಾರ



ಅಂಚೆ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ, ಮದ್ರಾಸಿನ ಪ್ರೆಸಿಡೆನ್ಸಿ ಪೋಸ್ಟ್ ಮಾಸ್ಟರ್ ಹುದ್ದೆಯಿಂದ ನಿವೃತ್ತರಾಗಿರುವ ಮಹಾದೇವರಾವ್ ಎಂ. ಇನಾಂದಾರ ಹುಬ್ಬಳ್ಳಿಯ ವಿಶಿಷ್ಟ ವ್ಯಕ್ತಿ. ಅಂಚೆ ಪ್ರಪಂಚದ ಬಗೆಗೆ ಅಧಿಕೃತವಾಗಿ ಹೇಳಬಲ್ಲ - ಬರೆಯಬಲ್ಲ ಅಪರೂಪದ ವ್ಯಕ್ತಿ ಇವರೆಂಬುದು ಒಂದು ಹಿರಿಮೆ. ಇದೀಗ ಎಪ್ಪತ್ತೇಳರ ವೃದ್ಧಾಪ್ಯದಲ್ಲಿ ಕೂಡ (ಜನನ: 22-7-1922) ಅಪೂರ್ವ ಮಾಹಿತಿಗಳನ್ನು ಕಲೆಹಾಕಿ, ಉಪಯುಕ್ತ ಲೇಖನಗಳನ್ನು ಬರೆಯುತ್ತಾ, ಜನಸಾಮಾನ್ಯರಿಗೆ ಅಂಚೆ ಇತಿಹಾಸವನ್ನು ತಿಳಿಸುವ ಅವಿಶ್ರಾಂತ ಶ್ರಮ ಅವರದು.

ಹಿಂದೂ ಹಾಗೂ ಇಂಡಿಯನ್ ಎಕ್ಸ್‌ಪ್ರೆಸ್ ಆಂಗ್ಲ ದೈನಿಕಗಳಲ್ಲಿ ಲೇಖನ ಬರೆದದ್ದುಂಟು. 'ಸಂಯುಕ್ತ ಕರ್ನಾಟಕ'ದಲ್ಲಿ 1980 ಹಾಗೂ 90ರ ದಶಕದಲ್ಲಿ ಅನೇಕ ಲೇಖನಗಳನ್ನು ಮೂಡಿಸಿದ್ದುಂಟು. ಕರ್ನಾಟಕ, ಕೇರಳ, ಮಹಾರಾಷ್ಟ್ರ, ತಮಿಳ್ನಾಡುಗಳಲ್ಲಿ ಕಾರ್ಯ ನಿರ್ವಹಿಸಿದ ಶ್ರೀಯುತರು ಅಂಚೆ ಇಲಾಖೆಯ ಚರಿತ್ರೆ ಮತ್ತು ಬೆಳವಣಿಗೆಗಳ ಬಗೆಗೆ ಆಳ ಅಭ್ಯಾಸ ಮಾಡುತ್ತಾರೆ. ನಿವೃತ್ತಿಯ ನಂತರ 'ಮದ್ರಾಸ್ ಆರ್ಚೀವ್ಸ್'ನಲ್ಲಿ ಹಾಗೂ 'ಬಾಂಬೆ ಆರ್ಚೀವ್ಸ್'ನಲ್ಲಿ ಅಧ್ಯಯನ, ಸಂಶೋಧನೆ ನಡೆಸಿರುತ್ತಾರೆ. ಇದಕ್ಕೆ ಮುಖ್ಯ ಕಾರಣ ಅಂಚೆ ಇತಿಹಾಸದ ಪುಸ್ತಕಗಳಲ್ಲಿ ಬಾಂಬೆ ಹಾಗೂ ಮದ್ರಾಸ್ ಜಿ.ಪಿ.ಓ. ಬಗೆಗಿನ ಆರಂಭದ ವಿವರಗಳು ಅಲಭ್ಯವಿದ್ದುದು.

ಇವರ ಶೋಧನೆಯ ಫಲಶ್ರುತಿಯಾಗಿ 'ಬಾಂಬೆ ಜಿ.ಪಿ.ಓ' ಹಾಗೂ 'ಮದ್ರಾಸ್ ಜಿ.ಪಿ.ಓ' ಎಂಬೆರಡು ಅಪೂರ್ವ ಪುಸ್ತಕಗಳು ರೂಪುದಳೆದವು. ಉತ್ತರ ಕರ್ನಾಟಕದವರೊಬ್ಬರು ಆಂಗ್ಲ ಭಾಷೆಯಲ್ಲಿ ಅಂಚೆಯ ಬಗೆಗೆ ಗ್ರಂಥ ಬರೆದು ಪ್ರಕಟಿಸಿ, ಕೈಸುಟ್ಟುಕೊಳ್ಳದೇ ಗೆದ್ದು ಬಂದದ್ದು ಅಪೂರ್ವ ಘಟನೆ. ಇವರು ಕನ್ನಡದಲ್ಲಿ ಬರೆದ 'ಅಂಚೆ ಪ್ರಪಂಚ' ಪುಸ್ತಕವನ್ನು ಮಿಂಚಿನ ಬಳ್ಳಿ ಗ್ರಂಥ ಪ್ರಕಾಶನ ಹೊರತಂದಿದೆ. ಇದೊಂದು ಆಕರ ಗ್ರಂಥ.

ಅಪೂರ್ವ ನಾಣ್ಯ, ಅಂಚೆ ಚೀಟಿಗಳನ್ನು ಸಂಗ್ರಹಿಸುವ ಹವ್ಯಾಸ ಹೊಂದಿದ್ದ ಇನಾಂದಾರರು ಅವನ್ನೆಲ್ಲಾ ಈಗ ಲಂಡನ್ನಿನ 'ಇಂಡಿಯನ್ ಫಾರೆನ್ ಸರ್ವಿಸ್' ನಲ್ಲಿರುವ ಎಂ.ಪಾರ್ಥಸಾರಥಿಯವರಿಗೆ ಒಪ್ಪಿಸಿದ್ದಾರೆ.

'ಮದ್ರಾಸ್ ಜಿ.ಪಿ.ಓ. 1986' ಹಾಗೂ 'ಬಾಂಬೆ ಜಿ.ಪಿ.ಓ. - 1988' ಪುಸ್ತಕಗಳಿಗೆ ಅಂತಾರಾಷ್ಟ್ರೀಯ ಮನ್ನಣೆ ಹಾಗೂ ಪುರಸ್ಕಾರ ಲಭಿಸಿದೆ. ಅಂತಾರಾಷ್ಟ್ರೀಯ ಅಂಚೆ ಚೀಟಿ ಪ್ರದರ್ಶನದಲ್ಲಿ, ಅಂಚೆ ಇತಿಹಾಸ ಸಾಹಿತ್ಯ ವಿಭಾಗದಲ್ಲಿ ಪದಕ, ಪ್ರಶಸ್ತಿ ಬಂದಿದೆ. ಆಸ್ಟ್ರೇಲಿಯಾ-84, ಇಟಲಿ-85, ಕೆನಡಾ-86, ಅಮೆರಿಕಾ(ಚಿಕಾಗೊ)-87 ಹಾಗೂ ದೆಹಲಿಯಲ್ಲಿ ನಡೆದ ಅಂತಾರಾಷ್ಟ್ರೀಯ ಪ್ರದರ್ಶನ-89ರಲ್ಲಿ ಈ ಮನ್ನಣೆ, ಗೌರವ.

ಹುಬ್ಬಳ್ಳಿಯ 'ಅಂಚೆಚೀಟಿ ಸಂಗ್ರಹಕಾರರ ಸಂಘ'ದ ಸಂಸ್ಥಾಪಕ ಅಧ್ಯಕ್ಷರಾಗಿರುವ ಎಂ.ಎಂ.ಇನಾಂದಾರರು ಇದೀಗ ಪಿ.ಟಿ.ಐ.ದಿಂದ ನಿರಂತರ ಲೇಖನಕಾರನೆಂದು ನೋಂದಾಯಿತರಾಗಿದ್ದಾರೆ. ಪಿ.ಟಿ.ಐ. ಫೀಚರ್ಸ್‌ಗಾಗಿ ಆಯ್ಕೆಯಾದ ಉತ್ತರ ಕರ್ನಾಟಕದ ಪ್ರಥಮ ಲೇಖಕ ಇವರಾಗಿದ್ದಾರೆ. ಅಂಚೆ ಪ್ರಪಂಚದ 24 ವೈವಿಧ್ಯಮಯ ಲೇಖನಗಳು ಪಿ.ಟಿ.ಐ. ಫೀಚರ್ಸ್‌ನಲ್ಲಿ ಸ್ವೀಕೃತಗೊಂಡು ಪ್ರಕಟವಾಗಿರುವುದು ಒಂದು ಅಗ್ಗಳಿಕೆ.

ಅನೇಕ ಸಂಘ-ಸಂಸ್ಥೆಗಳಿಂದ ಸನ್ಮಾನಿತರಾಗಿರುವ, ಅಂಚೆಯ ಅಚ್ಚರಿಗಳ ಬಗೆಗೆ ವಿಶೇಷ ಉಪನ್ಯಾಸಗಳನ್ನು ನೀಡಿರುವ ಶ್ರೀಯುತರು ಅಂಚೆ ಇಲಾಖೆಯ ಪ್ರಥಮ ಕನ್ನಡಿಗ ಡೈರಕ್ಟರ್ ಜನರಲ್ ಸರ್ ಗುರುನಾಥ ಬೇವೂರರ ಬಗೆಗೆ ವಿಶೇಷ ಅಂಚೆ ಚೀಟಿ ಬಿಡುಗಡೆಗೆ ಕಾರಣಕರ್ತರಾಗಿದ್ದಾರೆ. ಜೆಫರಿಕ್ಲಾರ್ಕ್ ಮತ್ತು ಐ.ಜಿ. ಹ್ಯಾಮಿಲ್ಟನ್ ಅಂಚೆ ಇತಿಹಾಸ ಬರೆದ ಯುರೋಪಿಯನ್ ವಿದ್ವಾಂಸರು. ತದನಂತರ ಈ ದಿಸೆಯಲ್ಲಿ ಮಹತ್ವಪೂರ್ಣ ಕೊಡುಗೆ ಸಲ್ಲಿಸಿದವರು ಹುಬ್ಬಳ್ಳಿಯ ಎಂ.ಎಂ.ಇನಾಂದಾರ ಎಂಬುದು ಅಭಿಮಾನದ ಸಂಗತಿ.

■ ಆರೂರು ಲಕ್ಷ್ಮಣ್ ಶೇಟ್

ಕ್ವಿಜ್-17ರ ಬಹುಮಾನ ವಿಜೇತರು

ಆಂತೋನಿ (ಪ್ರಸನ್ನ) ಜಿ.
ತಂದೆ: ಜಾರ್ಜ್ ಪ್ರಸನ್ನ
ಆರ್.ಎಂ.ಸಿ. ಆವರಣದ ಹಿಂಬಾಗ,
ಕಣ್‌ತೂರ್ ಬಸಪ್ಪ ಆವರಣ,
ಬಸವೇಶ್ವನಗರ,
ತಿಪಟೂರು - 572 201

ಗಿರೀಶ ಆರ್.ಸೋಮಯಾಜಿ
ಕೃಷ್ಣಾ ಕೃಪಾ, ಗಿರಿಜಾ ನಿಲಯ,
ಕೆರೂರು - 587 206
ತಾ.ಬಾದಾಮಿ, ಜಿ.ಬಾಗಲಕೋಟೆ

ಜಾಫರ್ ಎಂ.ಗೋಗಿ
ಭಾಗ್ಯವತಿ ವರ್ಕ್ ಶಾಪ್
ಮೊರಟಗಿ - 586 123
ಸಿಂಧಗಿ ತಾಲೂಕು, ಬಿಜಾಪುರ ಜಿಲ್ಲೆ.

ರಾಜಶೇಖರಯ್ಯ ಜಿ.ವಸ್ತ್ರದ
ಶಿರೋಳ - 582 212
ತಾ.ನರಗುಂದ,
ಜಿಲ್ಲೆ ಗದಗ.

ಎಸ್.ಸಿದ್ದರಾಜು
S/oಸಿದ್ದರಾಮಯ್ಯ
ನಂ.29/20, ಶ್ರೀರಾಮಮಂದಿರ ಬೀದಿ.
ಎಲೆಕೇರಿ - 571 501,
ಚನ್ನಪಟ್ಟಣ ತಾಲೂಕು
ಬೆಂಗಳೂರು ಜಿಲ್ಲೆ

ಈ ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.

ಕ್ವಿಜ್ - 17ರ ಸರಿಯುತ್ತರ

1. ದೀಪಾವಳಿಯ ವಿಶೇಷ ಬೋನಸ್!
   ಬಿಸಿಲ ಬದುಕು ಓದುಗರಿಗೆ ಮಾತ್ರ
2. ಕನಿಷ್ಠ ವಯೋಮಿತಿ 21 ವರ್ಷ
3. ಎಸ್.ಎಂ.ಪಂಚಗಟ್ಟಿ
4. ಸುಷ್ಮಾ ಸ್ವರಾಜ್
5. ಉಪೇಂದ್ರ

ಸೂಚನೆಗಳು

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಬಹುಮಾನ ಪಡೆದವರ ಭಾವಚಿತ್ರ ಪ್ರಕಟಿಸಲಾಗುವುದು. ಕೂಪನ್‌ಜೊತೆಗೆ ಭಾವಚಿತ್ರ ಕಳಿಸಬೇಡಿ. ಬಹುಮಾನಿತರನ್ನು ಸಂಪರ್ಕಿಸಿ ಭಾವಚಿತ್ರ ತರಿಸಿಕೊಳ್ಳಲಾಗುವುದು.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು. ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **15 - 12 - 1998**

ವಿಜೇತರಿಗೆ 500 ರೂ. ಸ್ಪೆಷಲ್ ಬಹುಮಾನ

ಪ್ರವೇಶ ಪತ್ರ

ಕ್ವಿಜ್ - 18

ಹೆಸರು...
ವಿಳಾಸ...
....
....
ಪಿನ್ ಕೋಡ್.......................... ದೂರವಾಣಿ..........................

1. 'ಬದುಕು' ನವೆಂಬರ್ 98ರ ಸಂಚಿಕೆಯಲ್ಲಿ ಪ್ರಕಟವಾದ 'ಜಯ ಖನ್ನಡ ಮಾತೆ!' ಹಾಸ್ಯ ಬರಹದ ಲೇಖಕರು ಯಾರು?
   ....
2. ಅಮರ್ತ್ಯ ಸೇನ್ ಅವರು ನೊಬೆಲ್ ಪ್ರಶಸ್ತಿ ಪಡೆದ ಎಷ್ಟನೇ ಭಾರತೀಯರು?
   ....
3. ಪ್ಯಾಲೆಸ್ತೈನಿನ ಅಧ್ಯಕ್ಷರ ಹೆಸರೇನು?
   ....
4. 'ಪ್ರಜಾವಾಣಿ' ದಿನ ಪತ್ರಿಕೆ ಸಂಪಾದಕರು ಯಾರು?
   ....
5. B.S.R.B. ವಿಸ್ತೃತ ರೂಪವೇನು?
   ....

ಪ್ರವೇಶ ಪತ್ರವನ್ನು 15.12.98ರೊಳಗೆ ಕಳುಹಿಸಬೇಕಾದ ವಿಳಾಸ :
ಸಂಪಾದಕರು, **ಬಿಸಿಲ ಬದುಕು,** ಅಂಚೆ ಪೆಟ್ಟಿಗೆ 7951,
ಬಸವೇಶ್ವರನಗರ, ಬೆಂಗಳೂರು-79.

ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ, ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಕುಷ್ಠ ರೋಗ

ಕುಷ್ಠರೋಗದ ಬಗ್ಗೆ ಹೆದರಿಕೆ ಬೇಡ, ಎಚ್ಚರಿಕೆ ಬೇಕು

ಕುಷ್ಠರೋಗ ಪ್ರಾಚೀನಕಾಲದಿಂದಲೂ ಇರುವ ಖಾಯಿಲೆ. ಕುಷ್ಠರೋಗವೆಂದರೆ ಅಂಗವಿಕಲರಾಗಿ ಭಿಕ್ಷಾ ವೃತ್ತಿಯಲ್ಲಿರುವವರ ಚಿತ್ರಣವೇ ಎಲ್ಲರ ಗಮನಕ್ಕೆ ಬರುವುದು. ಇದು ಸೂಕ್ಷ್ಮ ರೋಗಾಣುಗಳಿಂದ ಬರುವ ರೋಗ.

ಹರಡುವ ವಿಧಾನ: ರೋಗ ಹೆಚ್ಚು ಸೋಂಕುಳ್ಳರೋಗಿಯು ಸೀನುವಾಗ ಅಥವಾ ಕೆಮ್ಮುವಾಗ ಅಥವಾ ಉಗುಳಿದಾಗ ಮೈಕೋ ಬ್ಯಾಕ್ಟೀರಿಯಾ ಲೆಪ್ರೆ ಎಂಬ ಸೂಕ್ಷ್ಮ ರೋಗಾಣು ವಾತಾವರಣಕ್ಕೆ ಬಂದು ಸೇರಿ ಉಸಿರಾಟದ ಮೂಲಕ ಆರೋಗ್ಯವಂತರ ಶರೀರಕ್ಕೆ ಸೇರುತ್ತದೆ. ಹಾಗೂ ರೋಗಿಯೊಡನೆ ದೀರ್ಘಕಾಲದ ಸಂಪರ್ಕದಿಂದಲೂ ರೋಗ ಹರಡಬಹುದು. ರೋಗ ನಿರೋದಕ ಶಕ್ತಿ ಕಡಿಮೆ ಇರುವ ಶೇ. 3 ಅಥವಾ 4 ಜನರಲ್ಲಿ ಮಾತ್ರ ರೋಗದ ಚಿಹ್ನೆಗಳು ಕಂಡುಬರುತ್ತವೆ.

ಪ್ರಾರಂಭದ ಚಿಹ್ನೆಗಳು: ತಿಳಿ ಬಿಳಿ ಬಣ್ಣದ ಅಥವಾ ತಾಮ್ರಬಣ್ಣದ ಮಚ್ಚೆಗಳು ದೇಹದ ಯಾವುದೇ ಭಾಗದಲ್ಲಿ ಕಂಡು ಬರುವುದು. ಈ ಮಚ್ಚೆಗಳಲ್ಲಿ ಮುಖ್ಯವಾಗಿ ಸ್ಪರ್ಶಜ್ಞಾನ ಇಲ್ಲದಿರುವುದು ಬೆವರು ಬರುವುದಿಲ್ಲ, ಕೂದಲು ಇಲ್ಲದಿರುವುದನ್ನು ನೋಡಬಹುದು. ಕೆಲವರಲ್ಲಿ ಕೈಕಾಲು ಜೋಮು ನರಗಳು ದಪ್ಪವಾಗಿರುವುದು, ಕಿವಿಯಲ್ಲಿ ಗಂಟುಗಳು ಮುಖ ಮತ್ತು ಕಿವಿಗಳಲ್ಲಿ ಎಣ್ಣೆಯಂತ ಹೊಳಪು ಇತ್ಯಾದಿಗಳನ್ನು ನೋಡಬಹುದು.

ಈ ಮೇಲ್ಕಂಡ ಯಾವುದೇ ಚಿಹ್ನೆಗಳಿದ್ದರೆ ಅವನು ಈ ರೋಗದ ಪ್ರಾರಂಭದ ಹಂತದಲ್ಲಿ ಇರುವನೆಂದು ಗುರುತಿಸಬಹುದು. ಈ ರೋಗ ಪ್ರಾರಂಭವಾದಲ್ಲಿ ನೋವು ಅಥವಾ ತೊಂದರೆ ಇಲ್ಲದೆ ಇರುವುದರಿಂದ ಚಿಕಿತ್ಸೆ ಪಡೆಯದೆ ರೋಗ ಮುಂದುವರಿದು ಹಲವು ವರ್ಷಗಳ ನಂತರ ಅಂಗವಿಕಲತೆ ಉಂಟಾಗಿ ಯಾರಿಗೂ ಬೇಡವಾದ ಬದುಕನ್ನು ನಡೆಸಬೇಕಾಗುತ್ತದೆ.

ಈಗ ಬಹಳ ಪರಿಣಾಮಕಾರಿಯಾದ ಬಹು ಔಷಧ ಚಿಕಿತ್ಸೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ದೊರೆಯುತ್ತದೆ. ರೋಗ ಪ್ರಾರಂಭದ ಹಂತದಲ್ಲಿದ್ದರೆ 6 ತಿಂಗಳು ಹಾಗೂ ಹೆಚ್ಚಿನ ಪ್ರಮಾಣದಲ್ಲಿದ್ದರೆ 12 ತಿಂಗಳು ಚಿಕಿತ್ಸೆಯನ್ನು ಪಡೆಯಬೇಕಾಗುತ್ತದೆ. ಪ್ರಾರಂಭದ ಹಂತದಲ್ಲೇ ಚಿಕಿತ್ಸೆಗೆ ಬಂದರೆ ಬೇರೆಯವರಿಗೆ ಹರಡುವುದನ್ನು ಹಾಗೂ ಅಂಗವಿಕಲತೆಯನ್ನು ತಡೆಗಟ್ಟಬಹುದು ಮತ್ತು 2000 ಇಸವಿಗೆ ಈ ರೋಗ ನಿರ್ಮೂಲನೆಯನ್ನು ಮಾಡಬಹುದು.

ಕಳೆದ 6 ವರ್ಷಗಳಲ್ಲಿ ಬಹು ಔಷಧ ಚಿಕಿತ್ಸೆಯಿಂದ 4591 ರೋಗಿಗಳು ಗುಣಮುಖರಾಗಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ 494 ಕುಷ್ಠರೋಗಿಗಳು ವಿವಿಧ ಹಂತಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಜೇನು ಜಗತ್ತಿನೊಳಗೊಂದು ಸುತ್ತು

■ ಡಾ. ಬಸವರಾಜಪ್ಪ ಎಸ್.
ಉಪನ್ಯಾಸಕರು
ಕುವೆಂಪು ವಿಶ್ವವಿದ್ಯಾಲಯ
ಬಿ.ಆರ್.ಪ್ರಾಜೆಕ್ಟ್ - 577 115



ರಾಣಿನೊಣದ ಅತಿ ಮುಖ್ಯ ಕೆಲಸವೆಂದರೆ ಕುಟುಂಬದ ಸದಸ್ಯರ ಸಂಖ್ಯಾಭಿವೃದ್ಧಿ ಮಾಡುವುದು. ಅಂದರೆ ತನ್ನ ಜೀವಿತ ಅವಧಿಯಲ್ಲಿ ಸಾಕಷ್ಟು ಮೊಟ್ಟೆಗಳನ್ನಿಡುವುದು. ಗಂಡು ನೊಣವು ರಾಣಿನೊಣದ ಜೊತೆ ಮಿಲನ ಗೊಳ್ಳುವುದನ್ನು ಹೊರತು ಪಡಿಸಿದರೆ ಯಾವ ಕೆಲಸವನ್ನು ಮಾಡದೇ ಸೋಮಾರಿಗಳಂತೆ ಗೂಡಿನಲ್ಲಿ ಕಾಲಕಳೆಯುತ್ತವೆ.

ಜೀವ ಜಗತ್ತಿನಲ್ಲಿ ಪ್ರಾಣಿಗಳು ಮಾನವನಿಗೆ ಹತ್ತು ಹಲವು ವಿಧದಲ್ಲಿ ಸಹಕಾರಿಯಾಗಿವೆ. ಪ್ರಾಣಿ ಪ್ರಪಂಚದಲ್ಲಿ ಹೆಚ್ಚು ವೈವಿಧ್ಯಮಯ ಜೀವನ ಪ್ರಭೇದ ಗಳನ್ನು ಹೊಂದಿರುವ ಕೀಟಗಳ ಸಾಮ್ರಾಜ್ಯ ದಲ್ಲಿ ಅಫಿಸ್ ಜಾತಿಯ ವಿವಿಧ ಜೇನುನೊಣ ಗಳಾದ ಅಫಿಸ್ ಫ್ಲೋರಿಯಾ, ಅಫಿಸ್ ಮೆಲ್ಲಿಫೇರಾ, ಅಫಿಸ್ ಇಂಡಿಕಾ ಮತ್ತು ಅಫಿಸ್ ಡಾರಸೇಟಾ ತಮ್ಮ ಶಕ್ತ್ಯಾನುಸಾರ ವಿವಿಧ ಗಾತ್ರದ ಮೇಣಯುಕ್ತ ಗೂಡನ್ನು ಕಟ್ಟುತ್ತವೆ. ದೊಡ್ಡ ದೊಡ್ಡ ಕಲ್ಲುಬಂಡೆಗಳಲ್ಲಿನ ಹಿತವಾದ ಭಾಗದಲ್ಲಿ, ಮರ -ಗಿಡದ ರೆಂಬೆ - ಕೊಂಬೆ ಗಳಲ್ಲಿ, ಪೊದೆ- ಪೊಟರಿಗಳಲ್ಲಿ ವ್ಯವಸ್ಥಿತವಾಗಿ ಮನುಷ್ಯನ ತಾಂತ್ರಿಕ ನಿಪುಣತೆಗೆ ಸರಿಗಟ್ಟಬಲ್ಲ ಒಂದೇ ಅಳತೆಯ ಷಟ್‌ಕೋನಾಕೃತಿಯ ಸಹಸ್ರಾರು ಕೋಣೆಗಳುಳ್ಳ ಈ ಮೇಣದ ಗೂಡಿನಲ್ಲಿ ಆಹಾರ ಶೇಖರಣೆಗೆಂದು ಮೊಟ್ಟೆ ಮರಿಗಳನ್ನು ಪೋಷಣೆ ಮಾಡಲೆಂದು ಮತ್ತು ರಾಣಿಜೇನು ನೊಣವನ್ನು ಸುರಕ್ಷಿತವಾಗಿ ಕಾಪಾಡಲೆಂದು ಪ್ರತ್ಯೇಕವಾದ ಭಾಗವನ್ನು ಮೀಸಲಿಡುತ್ತವೆ. ಒಂದು ಜೇನುಗೂಡಿನಲ್ಲಿ, ಕುಟುಂಬದ ಸಂರಕ್ಷಣೆ ಅದರ ಬೆಳವಣಿಗೆ ಗನುಸಾರವಾಗಿ ಮತ್ತು ಕೆಲಸ ಕಾರ್ಯಗಳಿಗ ನುಗುಣವಾಗಿ ವಿವಿಧ ಬಗೆಯ ಸಹಸ್ರಾರು ಸಂಖ್ಯೆಯಿಂದಿಡಿದು ಹಲವಾರು ಲಕ್ಷಗಳಷ್ಟು ನೊಣಗಳು ವಾಸಿಸುತ್ತವೆ. ಜೇನು ನೊಣದ ಕುಟುಂಬದಲ್ಲಿನ ಪ್ರಮುಖ ಸದಸ್ಯರುಗಳೆಂದರೆ ರಾಣಿ ನೊಣ, ಹಲವಾರು ಗಂಡು ನೊಣಗಳು ಮತ್ತು ಕೆಲಸಗಾರ ನೊಣಗಳು. ರಾಣಿ ಮತ್ತು ಡ್ರೂನ್ ನೊಣಗಳನ್ನು ಹೊರತು ಪಡಿಸಿದರೆ, ಮಿಕ್ಕೆಲ್ಲಾ ನೊಣಗಳು ಲಿಂಗರಹಿತ ಕೆಲಸಗಾರ ಕೀಟಗಳಾಗಿವೆ. ರಾಣಿನೊಣದ ಅತಿ ಮುಖ್ಯ ಕೆಲಸವೆಂದರೆ ಕುಟುಂಬದ ಸದಸ್ಯರ ಸಂಖ್ಯಾಭಿ ವೃದ್ಧಿ ಮಾಡುವುದು. ಅಂದರೆ ತನ್ನ ಜೀವಿತ ಅವಧಿಯಲ್ಲಿ ಸಾಕಷ್ಟು ಮೊಟ್ಟೆಗಳನ್ನಿಡುವುದು. ಗಂಡು ನೊಣವು ರಾಣಿನೊಣದ ಜೊತೆ ಮಿಲನ (ಸಂಭೋಗ) ಗೊಳ್ಳುವುದನ್ನು ಹೊರತು ಪಡಿಸಿದರೆ ಯಾವ ಕೆಲಸವನ್ನು ಮಾಡದೇ ಸೋಮಾರಿಗಳಂತೆ ಗೂಡಿನಲ್ಲಿ ಕಾಲಕಳೆಯುತ್ತವೆ.

ಜೇನು ಗೂಡಿನಲ್ಲಿ ಬಹು ಸಂಖ್ಯೆಯುಳ್ಳ ಕೆಲಸಗಾರ ಕೀಟಗಳ ಪಾತ್ರ ಪ್ರಮುಖವಾದದ್ದು. ವಾಸಿಸಲು ಗೂಡನ್ನು ನಿರ್ಮಿಸಿ, ಅದರ ಗಾತ್ರವನ್ನು ಹಂತ ಹಂತವಾಗಿ ಹೆಚ್ಚಿಸುವುದರ ಜೊತೆಗೆ ಶತ್ರುಗಳ ದಾಳಿಯಿಂದ ಗೂಡನ್ನು ಸಂರಕ್ಷಿಸುತ್ತವೆ. ಮೊಟ್ಟೆಯಿಂದ ಹೊರ ಬಂದ ಮರಿಗಳಿಗೆ ಕೆಲಸಗಾರ ನೊಣಗಳು ಅಗತ್ಯವಾದ ಆಹಾರವನ್ನು ಸಮಯಕ್ಕೆ ಸರಿಯಾಗಿ ಒದಗಿಸಿ, ಅವುಗಳನ್ನು ಪೋಷಿಸುತ್ತವೆ. ಇದರ ಜೊತೆಗೆ ವೈವಿಧ್ಯಮಯ ಪರಿಸರದಲ್ಲಿನ ವಿವಿಧ ಪ್ರಭೇದಕ್ಕೆ ಸೇರಿರುವ ಗಿಡ-ಮರಗಳ ಹೂಗಳಿಂದ ಮಕರಂದವನ್ನು ಹೀರಿ, ಕೇಸರಿ-ಕುಸುಮಗಳನ್ನು ಸಂಗ್ರಹಿಸಿ ತಂದು, ಸಿಹಿ ಸಿಹಿಯಾದ ತುಪ್ಪವನ್ನು ತಯಾರು ಮಾಡುತ್ತವೆ. ಹೀಗೆ ನೂರಾರು ಮೈಲಿಗಳಷ್ಟು ಅಲೆದು, ಹತ್ತಾರು ಜಾತಿಯ ಗಿಡ ಮರಗಳನ್ನು ಸುತ್ತಿ ತಮ್ಮ ಶಕ್ತ್ಯಾನುಸಾರ ಮಕರಂದ ಮತ್ತು ಪರಾಗರೇಣುಗಳನ್ನು ವಿವಿಧ ಹೂವುಗಳಿಂದ

ಕರ್ನಾಟಕದಲ್ಲಿ ಮಲೆನಾಡು ಪ್ರದೇಶವು ಜೇನು ಸಾಕಾಣಿಕೆಗೆ ಬಹು ಪ್ರಶಸ್ತವಾಗಿದೆ. ಕೊಡಗು, ಚಿಕ್ಕಮಗಳೂರು, ಮೈಸೂರು, ಶಿವಮೊಗ್ಗ, ಉತ್ತರ ಮತ್ತು ದಕ್ಷಿಣ ಕನ್ನಡ ಮತ್ತು ಬೆಳಗಾಂ ಜಿಲ್ಲೆಗಳ ಭೂಪ್ರದೇಶದಲ್ಲಿ ಜೇನು ಕೃಷಿಯು ಸಾವಿರಾರು ಜನರ ಆರ್ಥಿಕ ಬೆಳೆಯಾಗಿದೆ. ಜೇನು ಸಾಕಾಣಿಕೆಯನ್ನು ಹಾಸನ, ಕೋಲಾರ, ಮಂಡ್ಯ, ಚಿತ್ರದುರ್ಗ, ತುಮಕೂರು, ಬಳ್ಳಾರಿ, ಬೆಂಗಳೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿಯೂ ಕೈಗೊಳ್ಳಲಾಗುತ್ತಿದೆ.

ಆರ್ಥಿಕವಾಗಿ ಹಿಂದುಳಿದ ಜೇನು ಸಾಕಾಣಿಕೆದಾರರಿಗೆ, ಪ್ರಗತಿಪರ ಜೇನು ಕೃಷಿಕರಿಗೆ ಈ ಬ್ಯಾಂಕುಗಳಿಂದ ಹೇರಳವಾಗಿ ಹಣದ ಸೌಲಭ್ಯವನ್ನು ಮಾಡಿಕೊಡಲಾಗುತ್ತಿದೆ.


ಸಂಗ್ರಹಿಸುವ ಈ ಜೇನುಕೀಟಗಳ ಕಠಿಣ ಪರಿಶ್ರಮಯುಕ್ತ ಕರ್ತವ್ಯವನ್ನು ಅರಿತ ಮಾನವ, ನೂರಾರು ವರ್ಷಗಳಿಂದ ಅಫಿಸ್ ಜಾತಿಗೆ ಸೇರಿದ ಜೇನು ನೊಣಗಳನ್ನು ಸಾಕಿ ಬೆಳೆಸಿ ಅವುಗಳಿಂದ ಲಾಭ ಪಡೆಯುತ್ತಿದ್ದಾನೆ.

ಮಾನವ ನಿರ್ಮಿತ ಪರಿಸರದಲ್ಲಿ, ಕೃತಕವಾಗಿ ನಿರ್ಮಿಸಿದ ವಾಸಸ್ಥಳಗಳಲ್ಲಿ ಅಫಿಸ್ ಫ್ಲೋರಿಯಾ, ಅಫಿಸ್ ಇಂಡಿಕಾ ಮತ್ತು ಅಫಿಸ್ ಮೆಲ್ಲಿಫೇರಾ ಜಾತಿಯ ಜೇನುನೊಣಗಳನ್ನು ಯಾವುದೇ ಅಡ್ಡಿ ಆತಂಕಗಳಿಲ್ಲದೇ ಸಾಕಿ ಬೆಳೆಸಬಹುದಾಗಿದೆ. ವಿವಿಧ ಋತುಮಾನಗಳಲ್ಲಿ, ಈ ಜೇನುಕೀಟಗಳು ಅವಶ್ಯಕತೆಗನುಗುಣವಾಗಿ ಆಹಾರ ಲಭ್ಯವಿರುವಂತೆ ಮಾಡಿ, ಅವುಗಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಸಾಕಾಣಿಕೆ ಕೈಗೊಳ್ಳುವುದರ ಮೂಲಕ ಪ್ರಪಂಚದಾದ್ಯಂತ ಅನೇಕ ವಿದ್ಯಾವಂತ ಮತ್ತು ಅವಿದ್ಯಾವಂತ ಜನರು ಆರ್ಥಿಕವಾಗಿ ಯಶಸ್ಸು ಸಾಧಿಸಿದ್ದಾರೆ. ಆದರೆ, ಅಫಿಸ್ ಡಾರಸೇಟಾ ಜಾತಿಯ ಕೀಟವು ಸ್ವಾಭಾವಿಕವಾಗಿ ವಿವಿಧ ಪರಿಸರದಲ್ಲಿ ವಾಸಿಸಲಿಚ್ಚಿಸುವುದರಿಂದ ಇದುವರೆವಿಗೂ ಈ ಕೀಟವನ್ನು ಮಾನವ ನಿರ್ಮಿತ ಪರಿಸರದಲ್ಲಿ ಸಾಕಲು ಅಸಾಧ್ಯವಾಗಿದೆ. ಅಫಿಸ್ ಜಾತಿಯ ಜೇನು ಕೀಟಗಳಲ್ಲೇ ಅತಿ ದೊಡ್ಡ ಗಾತ್ರದ ಗೂಡನ್ನು ನಿರ್ಮಿಸಬಲ್ಲ ಈ ಡಾರಸೇಟಾ ಕೀಟ ವು ಪ್ರತಿ ಗೂಡಿಗೆ ಸುಮಾರು 10 ರಿಂದ 26 ಕೆ.ಜಿ. ಸಿಹಿ ಸಿಹಿಯಾದ ಜೇನುತುಪ್ಪವನ್ನು ಒಂದು ವರ್ಷದ ಅವಧಿಯಲ್ಲಿ ನೀಡುತ್ತದೆ. ನಮ್ಮ ದೇಶದಲ್ಲಿ ಒಟ್ಟು ಉತ್ಪನ್ನವಾಗುತ್ತಿರುವ ಜೇನು ತುಪ್ಪದಲ್ಲಿ ಶೇ. 80 ರಷ್ಟು ಜೇನು ತುಪ್ಪವನ್ನು ಅಫಿಸ್ ಡಾರಸೇಟಾ ಕೀಟವು ಒದಗಿಸುತ್ತದೆ!

ಕರ್ನಾಟಕದಲ್ಲಿ ಮಲೆನಾಡು ಪ್ರದೇಶವು ಜೇನು ಸಾಕಾಣಿಕೆಗೆ ಬಹು ಪ್ರಶಸ್ತವಾಗಿದೆ. ಕೊಡಗು, ಚಿಕ್ಕಮಗಳೂರು, ಮೈಸೂರು, ಶಿವಮೊಗ್ಗ, ಉತ್ತರ ಮತ್ತು ದಕ್ಷಿಣ ಕನ್ನಡ ಮತ್ತು ಬೆಳಗಾಂ ಜಿಲ್ಲೆಗಳ ಭೂಪ್ರದೇಶದಲ್ಲಿ ಜೇನು ಕೃಷಿಯು ಸಾವಿರಾರು ಜನರ ಆರ್ಥಿಕ ಬೆಳೆಯಾಗಿದೆ. ಜೇನು ಸಾಕಾಣಿಕೆಯನ್ನು ಹಾಸನ, ಕೋಲಾರ, ಮಂಡ್ಯ, ಚಿತ್ರದುರ್ಗ, ತುಮಕೂರು, ಬಳ್ಳಾರಿ, ಬೆಂಗಳೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿಯೂ ಕೈಗೊಳ್ಳಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಜೇನು ಸಾಕಾಣಿಕೆಯನ್ನು ಒಂದು ಉದ್ಯಮವೆಂದು ಪರಿಗಣಿಸಲಾಗಿದೆ. ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್), ರಾಷ್ಟ್ರ ಮತ್ತು ರಾಜ್ಯ ಮಟ್ಟದ ಬ್ಯಾಂಕುಗಳಲ್ಲಿ ಸಾಲದ ಯೋಜನೆಯನ್ನು, ಈ ಕೃಷಿಯನ್ನಾವಲಂಭಿಸಿರುವವರ ಉಪಯೋಗಕ್ಕೆ ಅನುಷ್ಠಾನಗೊಳಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದ ಜೇನು ಸಾಕಾಣಿಕೆದಾರರಿಗೆ, ಪ್ರಗತಿಪರ ಜೇನು ಕೃಷಿಕರಿಗೆ ಈ ಬ್ಯಾಂಕುಗಳಿಂದ ಹೇರಳವಾಗಿ ಹಣದ ಸೌಲಭ್ಯವನ್ನು ಮಾಡಿಕೊಡಲಾಗುತ್ತಿದೆ. ಜೇನು ಸಾಕಾಣಿಕೆಯ ಸ್ಥಿತಿ ಮತ್ತು ಸಾಕಾಣಿಕೆಯ ತಾಂತ್ರಿಕತೆಯ ಗುಣ ಮಟ್ಟ ಹೆಚ್ಚಿಸಲು ಕೃಷಿ ವಿಶ್ವವಿದ್ಯಾಲಯಗಳಲ್ಲಿ ರಾಷ್ಟ್ರೀಯ ಜೇನು ಕೃಷಿ ಸಂಶೋಧನಾ ಸಂಸ್ಥೆಗಳಲ್ಲಿ ಉನ್ನತ ಮಟ್ಟದ ಅಧ್ಯಯನವನ್ನು ಕೈಗೊಳ್ಳಲಾಗುತ್ತಿದೆ. ಹಿನ್ನಡೆಗೊಂಡಿರುವ ಜೇನುಕೃಷಿ ಪ್ರದೇಶದಲ್ಲಿ ಜೇನು ಸಾಕಾಣಿಕೆ ಚಟುವಟಿಕೆಗೆ ಪುನಶ್ಚೇತನ ನೀಡುವ ಉದ್ದೇಶದಿಂದ ನೂತನ ಮಾದರಿ ಮಾರ್ಗಸೂಚಿಗಳನ್ನು ಕಾಲ ಕಾಲಕ್ಕೆ ಕೈಗೊಳ್ಳಲಾಗುತ್ತಿದೆ. ವಿಶ್ವಸಂಸ್ಥೆಯ ಕೃಷಿ ಮತ್ತು ಆಹಾರ ಸಂಸ್ಥೆಯಿಂದ ಲಕ್ಷಾಂತರ ರೂಪಾಯಿಗಳ ಧನ ಸಹಾಯವನ್ನು ಉಪಯೋಗಿಸಿಕೊಂಡು ಜೇನು ಕೃಷಿಗೆ ಮತ್ತು ಕೃಷಿಕರ ಅಭಿವೃದ್ಧಿಗೆ ಭಾರತ ಸರ್ಕಾರದ ಹಲವಾರು ಸಂಘ ಸಂಸ್ಥೆಗಳು ಮತ್ತು ವಿಶ್ವ ವಿದ್ಯಾನಿಲಯಗಳು ಶ್ರಮಿಸುತ್ತಿವೆ. ಜೇನು ಕೃಷಿಯ ಕೇಂದ್ರ ಬಿಂದು ಕೆಲಸಗಾರ ನೊಣ. ಇದರ ಪರಿಶ್ರಮದ ಫಲವಾದ ಸಿಹಿಯಾದ ಜೇನು ಆರ್ಥಿಕವಾಗಿ ಬಹು ಉಪಯುಕ್ತವಾಗಿದೆ. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಉಪಯೋಗವಾಗುತ್ತಿರುವ ಈ ಜೇನು ತುಪ್ಪ, ಜೇನು ಗೂಡಿನಲ್ಲಿಯ ನಿಸ್ವಾರ್ಥ ಗುಣವುಳ್ಳ ಸಹಸ್ರಾರು ಲಿಂಗರಹಿತ ಕೆಲಸಗಾರ ನೊಣಗಳ ಪರಿಶ್ರಮದ ಫಲವೆಂಬುದು ಅಷ್ಟೇ ಕೌತಕಮಯ! ■

ಅಂಗವಿಕಲರಲ್ಲಿ ನೆಮ್ಮದಿ ಮೂಡಿಸುತ್ತಿರುವ ಸಂಸ್ಥೆ





ಅಂಗವಿಕಲತೆಯು ಹಲವಾರು ವರ್ಷಗಳಿಂದ ನಮ್ಮನ್ನು ಕಾಡುತ್ತಿದೆ. ತಾಂತ್ರಿಕವಾಗಿಯೂ, ವೈಜ್ಞಾನಿಕವಾಗಿಯೂ ಮುಂದುವರೆಯುತ್ತಿರುವ ನಮ್ಮ ರಾಷ್ಟ್ರದಲ್ಲಿ ಇರುವ ಒಟ್ಟು ಅಂಗವಿಕಲರ ಸಂಖ್ಯೆ 5,00,00,000 ಎಂದು 1991ರಲ್ಲಿ ನಡೆಸಿದ ಸರ್ವೇಕ್ಷಣೆಯಿಂದ ತಿಳಿದು ಬಂದಿದೆ. ನಮ್ಮ ರಾಜ್ಯದಲ್ಲಿ ಕಡಿಮೆ ಎಂದರೂ 19 ಲಕ್ಷ ಮಂದಿ ವಿವಿಧ ರೀತಿಯ ಅಂಗವೈಕಲ್ಯಕ್ಕೆ ಒಳಗಾಗಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿರುವ ಅಂಗವಿಕಲರ ನೋವು ಹತಾಶೆಗಳಿಗೆ ಸ್ಪಂದಿಸಿ ಕಾರ್ಯಮಗ್ನವಾಗಿರುವ ಸಂಘ ಸಂಸ್ಥೆಗಳು ಮಾತ್ರ ಕೇವಲ ಬೆರಳೆಣಿಕೆಯಷ್ಟು.

ವಿಶ್ವಸಂಸ್ಥೆಯು 1993-2002ರ ಅವಧಿಯನ್ನು 'ಅಂಗವಿಕಲರ ದಶಕ'ವೆಂದು ಘೋಷಿಸಿದ್ದರೂ ಅದರಿಂದ ಹೇಳಿಕೊಳ್ಳುವಂತಹ ಸಾಧನೆ ಆಗಿಲ್ಲ. ಅಂಗವಿಕಲರ ನೆರವಿಗಾಗಿ ಅಲ್ಲಲ್ಲಿ ಸಂಘ-ಸಂಸ್ಥೆಗಳ ಸ್ಥಾಪನೆಯಾಗಿವೆ. ಅಂಗವಿಕಲರಿಗೆ ಪುನಃಶ್ಚೇತನ ಒದಗಿಸುವ ಧ್ಯೇಯದಿಂದ ಸ್ಥಾಪನೆಗೊಂಡ ಹಲವಾರು ಸಂಸ್ಥೆಗಳಲ್ಲಿ ಬೆಂಗಳೂರಿನ ಲಿಂಗರಾಜಪುರದಲ್ಲಿರುವ 'ದೈಹಿಕ ಅಂಗವಿಕಲರ ಸಂಸ್ಥೆ' ಪ್ರಮುಖವಾದುದು. ಕಳೆದ 38 ವರ್ಷಗಳಿಂದಲೂ ಈ ಸಂಸ್ಥೆ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಸಂಸ್ಥೆಯು ನಡೆಸುತ್ತಿರುವ ಅನೇಕ ಚಟುವಟಿಕೆಗಳಲ್ಲಿ 'ಹೋಂ ಬೆಸ್ಡ್ ಪ್ರೋಗ್ರಾಮ್' (HBP) ಸಹ ಒಂದಾಗಿದೆ. ಅಂಗವಿಕಲರಲ್ಲಿ ಆತ್ಮಸ್ಥೈರ್ಯ ತುಂಬಿ, ಅವರ ಸಾಮರ್ಥ್ಯ ಕೌಶಲ್ಯಗಳನ್ನು ಪುರಸ್ಕರಿಸಿ ಹಲವಾರು ಮಂದಿ ಅಂಗವಿಕಲರಿಗೆ ದಾರಿದೀಪವಾಗಿರುವುದು HBPಯ ವೈಶಿಷ್ಟ್ಯ.

ಈ ಸಂಸ್ಥೆಯು 15ನೇ ಜುಲೈ 1996 ರಂದು ಸ್ಥಾಪನೆಯಾಯಿತು. ಇದರ ಮುಖ್ಯ ಉದ್ದೇಶ ಮಧ್ಯಮ ಹಾಗೂ ಅಂಗವೈಕಲ್ಯವಿರುವ ಸ್ಥಳೀಯ ಅಂಗವಿಕಲರಿಗೆ ಪ್ರಾಶಸ್ತ್ಯ ನೀಡಿ ಅವರನ್ನು ಪುನಃಶ್ಚೇತನಗೊಳಿಸಿ, ಸಮಾಜದ ಮುಖ್ಯ ವಾಹಿನಿಯಲ್ಲಿ ಸೇರಿಸುವುದೇ ನಮ್ಮ ಸಂಸ್ಥೆಯ ಮುಖ್ಯ ಗುರಿ ಎಂದು ಘಟಕದ ಮುಖ್ಯಸ್ಥರಾದ ಸಾರಂಗಧರನ್ ಹೇಳುತ್ತಾರೆ.

ಇಲ್ಲಿಯ ಪ್ರಮುಖ ಚಟುವಟಿಕೆಗಳೆಂದರೆ ಅಸೆಂಬ್ಲಿಂಗ್ ಕೆಲಸಕ್ಕೆ ಸಂಬಂಧಿಸಿದ ಸಪ್ಲಿಮೆಂಟರಿ ಸ್ಪ್ರಿಂಗ್ಸ್ ಜೋಡಣೆ, ಎಕ್ಸ್‌ಟೆನ್‌ಷನ್ ಸ್ಪ್ರಿಂಗ್ಸ್ ಜೋಡಣೆ, ಪ್ಲಾಸ್ಟಿಕ್ ಕವರ್ಸ್ ಇತ್ಯಾದಿ ಅನೇಕ ಚಟುವಟಿಕೆಗಳಲ್ಲಿ ನಿರತವಾಗಿದ್ದು, ವಾರ್ಷಿಕ 6 ಲಕ್ಷ ವಹಿವಾಟು ನಡೆಸುತ್ತಿದೆ.

ಇಲ್ಲಿ ಪ್ರಾರಂಭದಲ್ಲಿ ಕೇವಲ 30 ಮಂದಿ ಇದ್ದರು. ಇಂದು ಸುಮಾರು 60 ಮಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಸ್ಥೆಗೆ ಕೆಲವು ಕೈಗಾರಿಕೆಗಳು ನೆರವು ನೀಡುತ್ತಿರುವುದು ಬಹಳ ಸಂತೋಷದ ವಿಷಯ. ಐ.ಟಿ.ಐ, ಎನ್.ಜಿ.ಇ.ಎಫ್, ಇಂಟರ್ ನ್ಯಾಷನಲ್ ಇನ್ಸ್‌ಟ್ರುಮೆಂಟ್ಸ್ ಮುಂತಾದ ಸಂಸ್ಥೆಗಳು ಇಲ್ಲಿ ತಯಾರಾದ ವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದವು. 1996ರಲ್ಲಿ ಎ.ಪಿ.ಡಿ.ಯು (ದೈಹಿಕ ಅಂಗವಿಕಲರ ಸಂಸ್ಥೆ) ಮೈಕೊ ಕಾರ್ಖಾನೆಯ ಮುಖ್ಯಸ್ಥರಿಗೆ ತನ್ನ ಅಂಗ ಸಂಸ್ಥೆಯಾದ ಈ HBP ಘಟಕಕ್ಕೆ ಜಾಬ್ ವರ್ಕ್ ಆಧಾರದ ಮೇಲೆ ಅಸೆಂಬ್ಲಿಂಗ್ ಕೆಲಸಗಳನ್ನು ನೀಡುವಂತೆ ಕೋರಿಕೆ ಸಲ್ಲಿಸಿ ಮೈಕೊ ಕಾರ್ಖಾನೆಯಿಂದ ಉತ್ತಮ ಆರ್ಡರ್‌ಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ.

ಸಂಸ್ಥೆಯ ವಿಳಾಸ : **ದೈಹಿಕ ಅಂಗವಿಕಲರ ಸಂಸ್ಥೆ, ಹೆಣ್ಣೂರು ರಸ್ತೆ, ಲಿಂಗರಾಜಪುರಂ, ಸೇಂಟ್ ಥಾಮಸ್ ಟೌನ್, ಬೆಂಗಳೂರು - 84.**

■ **ಅಶೋಕ್**

ಹಾರುವ ತಟ್ಟೆಗಳ ಕಾರಾಗೃಹ!

ಭಾಗ -9

■ ನಾರಾಯಣ ಎಂ. ಭಟ್



ಹಾರಾಡುವ ತಟ್ಟೆಗಳ ಬಗ್ಗೆ ಬರೆಯುತ್ತಾ ಕೂತಿರುವಾಗ ಬಿ.ಬಿ.ಸಿ. ವರ್ಲ್ಡ್ ಚಾನೆಲ್‌ನಲ್ಲಿ ಅತ್ಯಂತ ರೋಚಕ ವಿಷಯ ಒಂದು ಮೂಡಿ ಬಂತು. ಅದುವೇ ಏರಿಯಾ-51.

ಪ್ರಪಂಚದ ಅತ್ಯಂತ ನಿಗೂಢ ಹಾಗೂ ರಹಸ್ಯಮಯ ಪ್ರದೇಶಗಳಲ್ಲಿ ಏರಿಯಾ-51 ಅಗ್ರಮಾನ್ಯಸ್ಥಾನ ಪಡೆದಿದೆ. ನಿಜ ಹೇಳ ಬೇಕೆಂದರೆ, ಈ ಏರಿಯಾ-51 ಇದೆಯೋ ಇಲ್ಲವೋ ಎಂದು ಯಾರೂ ಖಚಿತವಾಗಿ ಹೇಳಲಾರರು! ಯು.ಎಸ್.ಎ.ನ ನಾವೇಡ್ ದಲ್ಲಿನ ಮರುಭೂಮಿಯಲ್ಲಿದೆ ಎನ್ನಲಾದ ಈ ಏರಿಯಾ-51ನ್ನು ಕುರಿತು ಎಷ್ಟೊಂದು ಗೌಪ್ಯವನ್ನು ಕಾಪಾಡಿಕೊಂಡು ಬರಲಾಗುತ್ತಿದೆ ಎಂದರೆ, ಅಲ್ಲಿ ಏನು ನಡೆಯುತ್ತಿದೆ ಎಂದು ಬಹಳಷ್ಟು ಜನ ಮಿಲಿಟರಿ ಅಧಿಕಾರಿಗಳಿಗೇ ತಿಳಿದಿಲ್ಲ.

ಹೀಗಾಗಿ ಅದು ಅನೇಕಾನೇಕ ಊಹಾಪೋಹಗಳಿಗೆ ಗ್ರಾಸ ಒದಗಿಸಿದೆ.

ಈ ರಹಸ್ಯಮಯ ಪ್ರದೇಶದಲ್ಲಿ ಹಾರಾಡುವ ತಟ್ಟೆಗಳನ್ನು ಸೆರೆಹಿಡಿದು ಬಂಧಿಸಲಾಗಿದೆ ಎಂದು ಕೆಲವರು ನಂಬಿದ್ದಾರೆ. ಇನ್ನು ಕೆಲವರು, ಅಮೇರಿಕ ವು ತಾನೇ ಹಾರಾಡುವ ತಟ್ಟೆಗಳನ್ನು ನಿರ್ಮಿಸಿ ಅದರಲ್ಲಿ ಅಡಗಿಸಿಟ್ಟುಕೊಂಡು, ಅನೇಕ ಪ್ರಯೋ ಗಗಳನ್ನು ನಡೆಸುತ್ತಿದೆ ಎಂದು ಭಾವಿಸಿದ್ದಾರೆ.

ಏರಿಯಾ-51ರ ಸುತ್ತ ನುಸಿಯಾ ಸುಳಿದಾಡದಂತಹ ಭದ್ರ ವ್ಯವಸ್ಥೆ ಇರುವುದು ಇಂತಹ ನಂಬಿಕೆಗಳಿಗೆ ಪುಷ್ಟಿಕೊಟ್ಟಿದೆ. ಚರ್ಮ ಸುಡುವಷ್ಟು ರಣ ಬಿಸಿಲಿರುವ ಈ ಏರಿಯಾ-51ರಲ್ಲಿ (ಮರುಭೂಮಿಯಲ್ಲಿದೆ) ಯಾರು ಕೆಲಸ ಮಾಡುತ್ತಿದ್ದಾರೆ ಹಾಗೂ ಏನೇನು ಮಾಡುತ್ತಿದ್ದಾರೆ ಎನ್ನುವುದನ್ನು ಅತ್ಯಂತ ಗೌಪ್ಯವಾಗಿ ಇರಿಸಲಾಗಿದೆ. David Biscoff ಎನ್ನುವ ವಿಜ್ಞಾನಿ ಹಾರಾಡುವ ತಟ್ಟೆಗಳ ಇರುವಿಕೆ ಹಾಗೂ ಅನ್ಯಗ್ರಹ ಜೀವಿಗಳು ಭೂಮಿಗೆ ಭೇಟಿ ನೀಡಬಹುದು ಎಂದು ನಂಬಿದ್ದಾನೆ. ಈತನ ಪ್ರಕಾರ, ಹಾರಾಡುವ ತಟ್ಟೆಗಳು ಭೌತಿಕವಾಗಿ ಅಸ್ತಿತ್ವದಲ್ಲಿರುವ ಸಾಧ್ಯತೆಗಳಿವೆ. ಏರಿಯಾ-51ರಲ್ಲಿ ಭೂಮಿಯಿಂದ ಆಕಾಶಕ್ಕೆ ಕ್ಷಣ ಮಾತ್ರ ಸದ್ದು, ಗದ್ದಲವಿಲ್ಲದೆ ನೆಗೆಯುವ ತಟ್ಟೆಗಳ ನಿರ್ಮಾಣವಾಗುತ್ತಿರುವ ಸಂಭವ ಇರ ಬಹುದು ಎಂದು ಅಭಿಪ್ರಾಯ ಪಟ್ಟಿದ್ದಾನೆ.

ಇನ್ನೊಬ್ಬ ಭೌತವಿಜ್ಞಾನಿ Bob Lazer ಎಂಬಾತನು, ಹಾರಾಡುವ ತಟ್ಟೆಗಳು, ಯಾವುದೇ ಹೊಗೆ ಇಲ್ಲದೆ, ಶಬ್ದವಿಲ್ಲದೆ ಕ್ಷಣ ಮಾತ್ರದಲ್ಲಿ ಪ್ರಚಂಡ ವೇಗದಿಂದ ಚಲಿಸಬಲ್ಲ ವಸ್ತುಗಳೇ ಆಗಿದ್ದರೆ, ಅವು ಎಲ್ಲಿಂದ ಬಂದಿವೆಯೋ ಅಲ್ಲಿನ ಜನರ ತಂತ್ರಜ್ಞಾನ ಎಷ್ಟೊಂದು ಉನ್ನತ ಮಟ್ಟದಲ್ಲಿದೆ ಎನ್ನುವುದು ತಿಳಿದುಬರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಅವನ ಪ್ರಕಾರ ತಾಂತ್ರಿಕತೆಯಲ್ಲಿ ನಮ್ಮಿಂದ ಎಷ್ಟೋ ಮೇಲಿನ ಸ್ತರದಲ್ಲಿರುವ ಅನ್ಯಗ್ರಹ ವಾಸಿಗಳು ಭೂಮಿ ಗ್ರಹದ ಬಗ್ಗೆ ತಿಳಿಯಲು ಈ ಹಾರುವ ತಟ್ಟೆಗಳನ್ನು ಬಳಸಿಕೊಳ್ಳುತ್ತಿರಬಹುದು. ಆದರೆ, ನಾವು ಅವರ ತಾಂತ್ರಿಕತೆಯನ್ನು ಅರಿಯಲಾರದಷ್ಟು ಕೆಳಮಟ್ಟದಲ್ಲಿದ್ದು, ಅನಗತ್ಯವಾಗಿ ಭಯ, ಆತಂಕ ಪಡುತ್ತಿದ್ದೇವೆ. ನಮ್ಮ ನಾಗರೀಕತೆಯನ್ನು ಅವರೊಂದಿಗೆ ಹೋಲಿಸಿ ಕೊಂಡರೆ ನಮ್ಮದು ಅಂಡಮಾನಿನ ಆದಿವಾಸಿಗಳ ನಾಗರೀಕತೆಯ ಮಟ್ಟದಲ್ಲಿರ ಬಹುದು ಎಂದು ಆತನ ಅನಿಸಿಕೆ. ಹೀಗಾಗಿ, ಅಂಡಮಾನದ ಆದಿವಾಸಿಗಳಿಗೆ ಕಂಪ್ಯೂಟರ್ ಹೇಗೆ ಅರ್ಥ ವಾಗದೋ ಹಾಗೆಯೇ ನಮಗೂ ಹಾರಾಡುವ ತಟ್ಟೆಗಳು ಅರ್ಥವಾಗದೇ ಇರಬಹುದು ಎಂದು ವಿವರಣೆ ನೀಡಿದ್ದಾನೆ.

ಈ ರೀತಿ ಹಾರಾಡುವ ತಟ್ಟೆಗಳು ಇಂದಿಗೂ ಜಗತ್ತಿನಾದ್ಯಂತ ಕುತೂಹಲ ಹಾಗೂ ರಹಸ್ಯವನ್ನು ಕಾಪಾಡಿಕೊಂಡಿವೆ. ಅಮೇರಿಕದಲ್ಲಿ ಯು.ಎಫ್.ಓ.ಗಳ ಬಗ್ಗೆ ಎಷ್ಟು ಆಸಕ್ತಿ ಇದೆ ಎಂದರೆ, ಅಲ್ಲಿ Ufologistಗಳು (ಯು.ಎಫ್.ಓ.ಗಳ ಬಗ್ಗೆ ಅಧ್ಯಯನ ಮಾಡುವ ಜನ) ಹಲವಾರು ಇದ್ದಾರೆ. ಇಂದಿಗೂ ಅನೇಕ ಯು.ಎಫ್.ಓ.ಗಳ ಪತ್ರಿಕೆಗಳು ಪ್ರಕಟವಾಗುತ್ತಿವೆ.

ಹಾರಾಡುವ ತಟ್ಟೆಗಳು ಭಾರತದಲ್ಲಿ!

ನಮ್ಮ ದೇಶದಲ್ಲಿಯೂ ಹಲವಾರು ಜನ ಹಾರಾಡುವ ತಟ್ಟೆಗಳನ್ನು ಕಣ್ಣಾರೆ ಕಂಡಿದ್ದಾಗಿ ತಿಳಿಸಿದ್ದಾರೆ.

1978ರ ಮಾರ್ಚ್ ತಿಂಗಳ 10ರಂದು ಉದಯಪುರದಲ್ಲಿ ವಾಸಿಸುತ್ತಿದ್ದ ಫ್ರಾನ್ಸ್‌ನ ನಾಗರೀಕರಾದ ಡಾ.ಜೆ.ಎ.ಕಾರಪೋತಿಯರ್ ಹಾಗೂ ಅವರ ಮಗ, ಮದುವೆಯೊಂದಕ್ಕೆ ತೆರಳಿದ ಸಂದರ್ಭದಲ್ಲಿ ರಾತ್ರಿ 8.15ರ ಸುಮಾರಿಗೆ ಅತ್ಯಂತ ಪ್ರಕಾಶಮಾನವಾದ ವಸ್ತುವೊಂದು ತಮ್ಮ ಮುಂದೆ ಸುಳಿದಾಡಿತು ಎಂದು ತಿಳಿಸಿದರು. ಆದರೆ ಆ ದೃಶ್ಯ ಕೇವಲ 15 ಸೆಕೆಂಡುಗಳಷ್ಟು ಕಾಲವೇ ತಮ್ಮೆದುರಿಗೆ ಇತ್ತು ಎಂದು ಹೇಳಿದ್ದರು.

1978ರ ಎಪ್ರಿಲ್ ತಿಂಗಳಲ್ಲಿ ಉತ್ತರ ಭಾರತದ ಹಲವೆಡೆ ಹಾರಾಡುವ ತಟ್ಟೆಗಳ ಪ್ರಕರಣಗಳು ಬೆಳಕಿಗೆ ಬಂದವು.

ಯು.ಎಫ್.ಓ.ಗಳ ಬಗ್ಗೆ ಹಲವು ಜನ ಸುಳ್ಳು ಹೇಳಿ, ರೀಲು ಬಿಟ್ಟು ಸಿಕ್ಕಿಹಾಕಿಕೊಂಡಿದ್ದಾರೆ. ಹಲವಾರು ಜನ ಅಸಂಬದ್ಧ ಉದಾಹರಣೆಗಳನ್ನು ಮುಂದಿಟ್ಟಿದ್ದಾರೆ. ಉದಾಹರಣೆಗೆ Releia ಎಂಬ ಧಾರ್ಮಿಕ ಪಂಥವು ಈ ಭೂಮಿಯಲ್ಲಿ ಮಾನವನ ಉಗಮಕ್ಕೆ ಹಾರಾಡುವ ತಟ್ಟೆಗಳಲ್ಲಿ ಕೆಲಸ ಮಾಡುತ್ತಿರುವ ವಿಜ್ಞಾನಿಗಳೇ ಕಾರಣ ಎಂಬ ವಿಕೃತ ವಾದವನ್ನು ಪ್ರತಿಪಾದಿಸಿದೆ.

ಆ ತಟ್ಟೆಗಳಲ್ಲಿ ಹಾರಿಬರುವ ಜೀವಿಗಳೇ ನಮಗೆ ಮೋಕ್ಷ ದಯಪಾಲಿಸಬಲ್ಲರು ಎಂದು ನಂಬಿರುವ ಹಾಗೂ ಸಾಮೂಹಿಕ ಆತ್ಮಹತ್ಯೆಗೆ ತೊಡಗುವ ಭೀಕರ Cult (ಪಂಥ)ಗಳಿಗೇನೂ ಅಮೇರಿಕದಲ್ಲಿ ಕೊರತೆ ಇಲ್ಲ!

ಅಲ್ಲಿನ ಜನರಲ್ಲಿ ಶೇ 1ರಷ್ಟು ಮಂದಿಗೆ ಅನ್ಯಗ್ರಹ ಜೀವಿಗಳ ಬಗ್ಗೆ ಹಾಗೂ ಹಾರುವ ತಟ್ಟೆಗಳ ಬಗ್ಗೆ ಪೂರ್ಣ ನಂಬಿಕೆ ಇದೆ!

ಆದರೆ, ಯು.ಎಫ್.ಓ.ಗಳ ಬಗ್ಗೆ ತೀವ್ರ ಸಂದೇಹದ ದೃಷ್ಟಿಯಿಂದ ನೋಡುವ ಜನರೂ ಇದ್ದಾರೆ. ಅವರ ಪ್ರಕಾರ, ಹಾರಾಡುವ ತಟ್ಟೆಗಳು ಹಾಗೂ ಅವುಗಳ ಬಗ್ಗೆ ಹುಟ್ಟಿರುವ ಕಥೆಗಳು ಶುದ್ಧಸುಳ್ಳು, ಕಾಲ್ಪನಿಕ ವಿಜ್ಞಾನ ಕಥೆಗಳಿಂದಲೋ ಇಲ್ಲವೇ ಮಾನಸಿಕ ಭ್ರಾಂತಿಯಿಂದಲೋ ಪ್ರೇರೇಪಿತರಾದ ಅನೇಕರು ತಾವು ಯು.ಎಫ್.ಓ.ಗಳನ್ನು ಕಂಡಿರುವುದಾಗಿಯೂ ಹಾಗೂ ಅವುಗಳಲ್ಲಿ ಪ್ರಯಾಣಿಸಿರುವುದಾಗಿಯೂ ಸುಳ್ಳು ಕಥೆಗಳನ್ನು ಹೇಳಿ ಪ್ರಚಾರ ಗಿಟ್ಟಿಸುತ್ತಾರೆ ಎನ್ನುವುದು ಅನೇಕ ಘಟನೆಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸಿದಾಗ ವ್ಯಕ್ತವಾದ ಸತ್ಯ ಎನ್ನುವುದನ್ನು ನಾವು ಮರೆಯಬಾರದು.

ಒಂದು ವೇಳೆ ಯು.ಎಫ್.ಓ.ಗಳಲ್ಲಿ ಯಾರಾದರೂ ಪ್ರಯಾಣಿಸಿದ್ದರೆ, ಅಪಹರಣಕ್ಕೆ ಒಳಗಾಗಿ ಬಂಧನವನ್ನು ಅನುಭವಿಸಿದ್ದರೆ, ಇಲ್ಲಿಯವರೆಗೂ ಯಾಕೆ ಯಾವುದೇ ಭೌತಿಕವಾದ ವಸ್ತುವನ್ನು ಅವರು ತಮ್ಮೊಂದಿಗೆ ತಂದಿಲ್ಲ (ಸಾಕ್ಷಿಯಾಗಿ) ಎನ್ನುವುದು ಇಂದಿಗೂ ಬಿಡಿಸಲಾಗದ ಪ್ರಶ್ನೆಯಾಗಿಯೇ ಉಳಿದುಬಿಟ್ಟಿದೆ. ಇದೇ ಅಲ್ಲದೇ ಇಲ್ಲಿಯವರೆಗೆ ಹಾರಾಡುವ ತಟ್ಟೆಗಳು ಎಂದು ನಂಬಬಹುದಾದ ಯಾವುದೇ ವಸ್ತುವಾಗಲಿ ಇಲ್ಲವೇ ಅವಶೇಷವಾಗಲಿ ಈ ಪ್ರಪಂಚದ ಯಾವುದೇ ಸ್ಥಳದಲ್ಲಿಯೂ ದೊರಕಿಲ್ಲ! ಹೀಗಾಗಿ ಹಾರಾಡುವ ತಟ್ಟೆಗಳು ಕೇವಲ ಸ್ವಂತ ನಂಬಿಗೆಯ ವಸ್ತುಗಳಾಗಿ ಬಿಡುತ್ತವೆ ಎಂದು ಅನೇಕ ವಿಜ್ಞಾನಿಗಳು ತಿಳಿಯುತ್ತಾರೆ. ಹಾರಾಡುವ ತಟ್ಟೆಗಳ ಇರುವಿಕೆಯನ್ನು ಸಾಕ್ಷ್ಯಾಧಾರಗಳ ಮೂಲಕ ಸಾಬೀತು ಪಡಿಸುವವರಿಗೆ 10,000 ಡಾಲರ್‌ಗಳ ಬಹುಮಾನವನ್ನು Philip.J. Klass ಎಂಬಾತ ಘೋಷಿಸಿ, 2 ದಶಕಗಳೇ ಕಳೆದಿದ್ದರೂ ಅದು ಹಾಗೆಯೇ ಇದೆ. ಅದನ್ನು ಇಲ್ಲಿಯ ತನಕ ಯಾರೂ ಪಡೆದಿಲ್ಲ!

ನೀವ್ಯಾಕೆ ಪ್ರಯತ್ನಿಸಬಾರದು?

ಅತ್ಯಂತ ವಿವಾದಾತ್ಮಕವಾದ ಹಾರಾಡುವ ತಟ್ಟೆಗಳ ಬಗ್ಗೆ ಎಷ್ಟು ಅಪನಂಬಿಕೆ ಇದ್ದರೂ ಒಂದು ಮಾತು ಮಾತ್ರ ಸತ್ಯ.

ನಮಗೆ ಗೊತ್ತಿರದ ಭೌತಿಕ ನಿಯಮವನ್ನು ಬಳಸಿಕೊಂಡು ಕಾಣಿಸಿಕೊಳ್ಳುವ ಈ ಹಾರಾಡುವ ತಟ್ಟೆಗಳ ಅಸ್ತಿತ್ವವು ನಿಜವೆಂದು ಸಾಬೀತಾದಲ್ಲಿ ಮಾನವ ಜನಾಂಗಕ್ಕೆ ಭವಿಷ್ಯತ್‌ನ ಹೊಂಗಿರಣಗಳು ತೋರುವುದಂತೂ ದಿಟ. ಯಾಕೆಂದರೆ, ಈ ಭೂಮಿಯಲ್ಲಿ ಸಧ್ಯಕ್ಕೆ ಇರುವ ಪರಿಸರ ಮಾಲಿನ್ಯ, ಅಣುಬಾಂಬ್ ಭೀತಿ ಮುಂತಾದವುಗಳಿಂದ ಮಾನವ ಜನಾಂಗ ಅಂತ್ಯವಾಗುತ್ತದೆ ಎಂದು ಭಾವಿಸಿ ನಿರಾಶೆಯ ಭಾವ ಹೊತ್ತ ನಮಗೆ, ನಮಗಿಂತಲೂ ಉನ್ನತ ತಂತ್ರಜ್ಞಾನ ಹೊಂದಿರುವ ಜೀವಿಗಳು ಬ್ರಹ್ಮಾಂಡದಲ್ಲಿ ಎಲ್ಲೋ ಒಂದೆಡೆ, ಈ ಎಲ್ಲ ಆತಂಕಗಳನ್ನು ಮೀರಿ, ಬದುಕಿ ಉಳಿದಿವೆ ಎನ್ನುವುದು ಅತ್ಯಂತ ಸಮಾಧಾನ ತರುವ ಸಂಗತಿಯಲ್ಲವೇ? ■

ಮಹಿಳೆ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಕರ್ನಾಟಕ ವಿಶಿಷ್ಟ ಯೋಜನೆಗಳು

ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಅವರ ಉಳಿವು, ರಕ್ಷಣೆ ಮತ್ತು ಅಭಿವೃದ್ಧಿ ಮನುಕುಲದ ಅಭಿವೃದ್ಧಿಗೆ ಅವಶ್ಯಕವಾಗಿದೆ. ಮಕ್ಕಳ ಮೂಲಭೂತ ಅಗತ್ಯಗಳನ್ನು ಪೂರೈಸಿ, ಅವರಿಗೆ ಜ್ಞಾನ ಮತ್ತು ಸಂಪನ್ಮೂಲಗಳನ್ನು ಒದಗಿಸಿ, ಸಜ್ಜುಗೊಳಿಸುವುದು ಅಭಿವೃದ್ಧಿಯ ಪ್ರಾಥಮಿಕ ಗುರಿ. ಆದ್ದರಿಂದಲೇ ಮಕ್ಕಳ ಮೂಲಭೂತ ಅಗತ್ಯಗಳನ್ನು ಪೂರೈಸಿ, ಅವರಿಗೆ ಜ್ಞಾನ ಹಾಗೂ ಸಂಪನ್ಮೂಲಗಳನ್ನು ಒದಗಿಸುವುದು ಪ್ರಾಮುಖ್ಯವಾಗಿದೆ.

ಮಕ್ಕಳ ದುರವಸ್ಥೆಯನ್ನು ನಿವಾರಿಸಲು ಹಾಗೂ ಅವರ ಬೆಳವಣಿಗೆ ಮತ್ತು 'ಅಭಿವೃದ್ಧಿಗೆ ಮಕ್ಕಳಿಗಾಗಿ ರಾಜ್ಯ ಕ್ರಿಯಾ ಯೋಜನೆ' ಯನ್ನು ರೂಪಿಸಿದೆ. ಇದು 1990ರಲ್ಲಿ ವಿಶ್ವಶೃಂಗ ಸಭೆಯಲ್ಲಿ ಜಾಗತಿಕ ಭ್ರಾತೃ ಸಂಘ ನೀಡಿದ ಆಶ್ವಾಸನೆಗಳಿಗೆ ಅನುಗುಣವಾಗಿದೆ. ಅದಕ್ಕನುಗುಣವಾಗಿ 1995ರಲ್ಲಿ ಹೆಣ್ಣುಮಗು ಮತ್ತು ಬಾಲಕಿಯರ ಸ್ಥಾನಮಾನ ಸುಧಾರಣೆ ಮತ್ತು ಅವನತಿ ಹೊಂದುತ್ತಿರುವ ಲಿಂಗ ಅನುಪಾತವನ್ನು ವಿಪರ್ಯಾಸ್ತಗೊಳಿಸುವುದು, ಔಪಚಾರಿಕ, ಅನೌಪಚಾರಿಕ ಮತ್ತು ಬದಲಿ ವ್ಯವಸ್ಥೆಯ ಮೂಲಕ ಅಂಗವಿಕಲರೂ ಸೇರಿದಂತೆ ಶೇ. 100 ರಷ್ಟು ಬಾಲಕಿಯರಿಗೆ ಪ್ರಾಥಮಿಕ ಶಿಕ್ಷಣ ಸೌಲಭ್ಯ ಅಂತೆಯೇ ಕನಿಷ್ಠ ಶೇ. 80 ರಷ್ಟು ತರುಣಿಯರಿಗಾದರೂ ವೈಯಕ್ತಿಕ ಆರೋಗ್ಯ ಸುಧಾರಣೆಯ ಅರಿವು ಮೂಡಿಸಿ ವಿಶೇಷ ಆರೋಗ್ಯ ಶಿಬಿರಗಳನ್ನು ಸ್ಥಾಪಿಸುವುದು ಹಾಗೂ ಶಾಲಾ ಶಿಕ್ಷಣವನ್ನು ಮುಂದುವರೆಸದ ಕನಿಷ್ಠ ಶೇ.50 ರಷ್ಟು ತರುಣಿಯರಿಗೆ ಸ್ವಾವಲಂಬಿಗಳಾಗಲು ವೃತ್ತಿ ನೈಪುಣ್ಯತೆ ಒದಗಿಸುವುದು.

1995ರ ಅಂತ್ಯದ ವೇಳೆಗೆ ಜನನಪೂರ್ವ ಧನುರ್ವಾಯು ಸೋಂಕನ್ನು ತಡೆಗಟ್ಟುವುದು, ಮಕ್ಕಳು ದಡಾರದಿಂದ ಸಾಯುವುದನ್ನು ಶೇ.95ರಷ್ಟು ಕಡಿಮೆ ಮಾಡುವುದು. ಪೋಲಿಯೊವನ್ನು ರಾಜ್ಯದ 10 ಜಿಲ್ಲೆಗಳಲ್ಲಿ ನಿವಾರಿಸುವುದು, ಅತಿಸಾರದಿಂದಾಗುವ ಸಾವುಗಳಲ್ಲಿ ಶೇ. 50 ರಷ್ಟು ಇಳಿತ, ಅತಿಸಾರ ಪ್ರಕರಣಗಳನ್ನು ಶೇ. 10-ರಷ್ಟು ಇಳಿತ ಸಾಧಿಸುವುದು, ಜನಸಂಖ್ಯೆಯ ಶೇ. 50 ರಷ್ಟು ಜನರಿಗೆ ಎಚ್.ಐ.ವಿ. ಏಡ್ಸ್ ಬಗ್ಗೆ ಅರಿವು ಮೂಡಿಸುವುದು, ಅಪೌಷ್ಟಿಕತೆಯ ಸಮಸ್ಯೆಯನ್ನು ನಿವಾರಿಸುವುದು, ಕಬ್ಬಿಣಾಂಶದ ಕೊರತೆಯಿಂದ ಉಂಟಾಗುವ ರಕ್ತಹೀನತೆಯನ್ನು ಶೇ. 10 ರಷ್ಟು ಇಳಿಸುವುದು, ರೋಗ ಪೀಡಿತ ಪ್ರದೇಶಗಳಲ್ಲಿ ಅಯೋಡಿನ್ ಯುಕ್ತ ಉಪ್ಪಿನ ಬಳಕೆ ಹೆಚ್ಚಿಸಲು ಕ್ರಮ, ಶಿಶುಗಳಿಗೆ ಮೊದಲ 4-6 ತಿಂಗಳ ಅವಧಿಯಲ್ಲಿ ಕೇವಲ ಮೊಲೆ ಹಾಲು ಉಣಿಸುವುದು ಮತ್ತು ಸಕಾಲದಲ್ಲಿ ಪೂರಕ ಆಹಾರ ನೀಡಲಾರಂಭಿಸುವುದರ ಪ್ರಾಮುಖ್ಯತೆಯ ಅರಿವು ಮೂಡಿಸುವುದು, ರಾಜ್ಯದಲ್ಲಿ 1000ಕ್ಕೂ ಹೆಚ್ಚು ಹೆರಿಗೆ ಆಸ್ಪತ್ರೆಗಳನ್ನು 'ಶಿಶು ಮಿತ್ರ' ರೆಂದು ಪ್ರಮಾಣೀಕರಿಸುವುದು.

-ಕರ್ನಾಟಕ ವಾರ್ತೆ

ಬೇಲ್ ಅವಲಕ್ಕಿ

ದಿಢೀರೆಂದು ಸ್ನೇಹಿತರು ಬಂದಾಗ ಏನುಮಾಡಬೇಕೆಂದು ಯೋಚಿಸುತ್ತಿದ್ದೀರಾ, ಹಾಗಾದರೆ ತಡವೇಕೆ ಒಂದು ತಿಂಡಿ ರೆಡಿಮಾಡಿ.

ಬೇಕಾಗುವ ಸಾಮಗ್ರಿಗಳು:

ತೆಳು ಅವಲಕ್ಕಿ 250 ಗ್ರಾಂ, ಕ್ಯಾರೆಟ್ 100 ಗ್ರಾಂ (ತುರಿಯಬೇಕು), ಕೊತ್ತಂಬರಿ ಸೊಪ್ಪು ಒಂದು ಕಟ್ಟು(ಕತ್ತರಿಸಬೇಕು), ಒಣಮೆಣಸಿನಕಾಯಿ ಪುಡಿ 1/2 ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಇಂಗು ಚಿಟಿಕೆ, ತೆಂಗಿನಕಾಯಿ ತುರಿ 1 ಕಪ್, ತುಪ್ಪ 1 ಚಮಚ.



ಮಾಡುವ ವಿಧಾನ:

ಅವಲಕ್ಕಿಯನ್ನು ಒಂದು ಪಾತ್ರೆಗೆ ಹಾಕಿ ಅದರಲ್ಲಿ ಮೆಣಸಿನ ಪುಡಿ, ಉಪ್ಪು, ತುಪ್ಪ ಇಂಗು ಹಾಕಿ ಕಲೆಸಬೇಕು. ಆಮೇಲೆ ತುರಿದ ಕ್ಯಾರೆಟ್, ಕತ್ತರಿಸಿದ ಕೊತ್ತಂಬರಿ ಸೊಪ್ಪು, ತೆಂಗಿನಕಾಯಿ ತುರಿಯನ್ನು ಹಾಕಿ ಕಲೆಸಬೇಕು. ಸ್ನೇಹಿತರ ಹತ್ತಿರ ಮಾತಾಡಿಕೊಳ್ಳುತ್ತ ಇವುಗಳನ್ನು ಮಾಡಬಹುದು. ಮಾತು ಮುಗಿಯುವುದರೊಳಗೆ ಅವರಿಗೆ ಕೊಡಬೇಕಾಗಿರುವ ತಿಂಡಿ ರೆಡಿಯಾಗುತ್ತದೆ.

ಬೇಕಾದರೆ ಮೇಲೆ (ಒಂಪುರಿ) ಅಥವಾ ಚೌಚೌ ಹಾಕಿ ಕೊಡಬಹುದು. ಇನ್ನೂ ರುಚಿಯಾಗಿರುತ್ತದೆ (ಒಲೆ ಹಚ್ಚುವ ಪ್ರಮೇಯವೇ ಇಲ್ಲ).

-ಸಿ.ಉದಯಚಂದ್ರಿಕ, ಬೆಂಗಳೂರು.

ಟಮೋಟೋ ಬಿಸಿ ಉಪ್ಪಿನಕಾಯಿ

ಬೇಕಾಗುವ ಸಾಮಗ್ರಿಗಳು:

ಟಮೋಟೋ 1/2 ಕೆ.ಜಿ., ಸಾಸುವೆ 1 ಚಮಚ, ಮೆಂತ್ಯೆ 1 ಚಮಚ, ಅರಿಶಿಣಪುಡಿ 1/2 ಚಮಚ, ಒಣಮೆಣಸಿನಪುಡಿ 1 ಚಮಚ, ಕಡಲೆಕಾಯಿ ಎಣ್ಣೆ 50 ಗ್ರಾಂ, ಉಪ್ಪು ರುಚಿಗೆ ತಕ್ಕಷ್ಟು (ಇಂಗು ಸ್ವಲ್ಪ)

ಮಾಡುವ ವಿಧಾನ:

ಟಮೋಟೋಗಳನ್ನು ತೊಳೆದು ಒಂದರಲ್ಲಿ ನಾಲ್ಕು ತುಂಡುಗಳಂತೆ ಕತ್ತರಿಸಿ ಇಟ್ಟುಕೊಳ್ಳಬೇಕು. ಸಾಸುವೆ, ಮೆಂತ್ಯೆ ಎರಡನ್ನು ವಾಸನೆ ಬರುವ ತನಕ ಹುರಿದು ಪುಡಿಮಾಡಿ ಇಟ್ಟುಕೊಳ್ಳಬೇಕು. ಆಮೇಲೆ ಬಾಣಲಿಗೆ ಎಣ್ಣೆ ಹಾಕಿ ಬಿಸಿಯಾದ ಮೇಲೆ ಟಮೋಟೋ ತುಂಡುಗಳನ್ನು ಹಾಕಬೇಕು. ಸ್ವಲ್ಪ ಹೊತ್ತು ಅಂದರೆ ಎರಡು ನಿಮಿಷವಾದ ಮೇಲೆ ಅರಿಶಿಣ, ಉಪ್ಪು, ಮೆಣಸಿನ ಪುಡಿ, ಮತ್ತು ಸಾಸುವೆ ಮೆಂತ್ಯೆ ಪುಡಿಗಳನ್ನು ಹಾಕಿ ಕಲಸಿ. ಒಂದು ನಿಮಿಷದ ನಂತರ ಇಳಿಸಿ ಬಿಡಬೇಕು. ಇದು ಮಾಡುವುದು ಸುಲಭ ಮತ್ತು ಬೇಗ ಆಗುವುದು. ಒಂದು ವಾರ ಆದರೂ ಕೆಡುವುದಿಲ್ಲ. (ಹುಳಿ ಕಡಿಮೆ ಅನಿಸಿದವರು ಹುಣಸೆ ಹಣ್ಣಿನ ರಸ ಎರಡು ಚಮಚದಷ್ಟು ಹಿಂಡಿ ಬಿಸಿಮಾಡಿಕೊಳ್ಳಬಹುದು).



-ಸಿ.ಜಾನಕಿ, ಬೆಂಗಳೂರು.

ನೀವೂ ಬರೆಯಬಹುದು

ಇದು ಎಲ್ಲರ ಅಂಕಣ. ಅಡುಗೆಯಲ್ಲಿ ಆಸಕ್ತಿಯಿರುವವರು ತಮಗೆ ಗೊತ್ತಿರುವ ಅಡುಗೆಗಳ ಬಗ್ಗೆ ಅವುಗಳನ್ನು ತಯಾರಿಸುವ ವಿಧಾನದ ಬಗ್ಗೆ ಸಂಕ್ಷಿಪ್ತವಾಗಿ ಬರೆಯಬಹುದು. ಬರಹದ ಜತೆಗೆ ತಮ್ಮದೊಂದು ಭಾವಚಿತ್ರ ಕಳಿಸಿ.

ವಿಳಾಸ : ಸಂಪಾದಕರು, **ಬಿಸಿಲ ಬದುಕು,** ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951 ಬಸವೇಶ್ವರನಗರ, ಬೆಂಗಳೂರು - 560 079.

ಪುಳಿಯೊಗರೆ ಗೊಜ್ಜು

ಬೇಕಾಗುವ ಸಾಮಗ್ರಿಗಳು:

ಸಾರಿನ ಪುಡಿ 250 ಗ್ರಾಂ, ಹುಣಸೆಹಣ್ಣು 200 ಗ್ರಾಂ, ಒಂದು ಅಚ್ಚು ಬೆಲ್ಲ, ಕಡಲೆ ಬೇಳೆ ಒಂದು ಚಮಚ, ಸಾಸಿವೆ ಒಂದು ಚಮಚ, ಅರಿಶಿಣ, ಕಪ್ಪು ಎಳ್ಳು 150 ಗ್ರಾಂ, ಜೀರಿಗೆ ಎರಡು ಚಮಚ ಮೆಂತ್ಯೆ ಅರ್ಧ ಚಮಚ, ರುಚಿಗೆ ತಕ್ಕಷ್ಟು ಉಪ್ಪು, 1/4 ಕೆ.ಜಿ. ರಿಫೈಂಡ್ ಎಣ್ಣೆ, ಕರಿಬೇವಿನ ಎಲೆ.

ಮಾಡುವ ವಿಧಾನ:

ಹುಣಸೆ ಹಣ್ಣನ್ನು ಎರಡು ದೊಡ್ಡ ಲೋಟ ನೀರಿನಲ್ಲಿ ನೆನೆಸಿ ಚೆನ್ನಾಗಿ ಕಿವಿಚಿ ಚರಟ ತೆಗೆಯಿರಿ. ಬಾಣಲೆ ಒಲೆ ಮೇಲಿಟ್ಟು ಕಾದ ನಂತರ ಎಣ್ಣೆ ಹಾಕಿ ಸಾಸಿವೆ, ಇಂಗು, ಕಡಲೆ ಬೇಳೆ, ಕರಿಬೇವಿನ ಎಲೆ ಹಾಕಿ ಒಗ್ಗರಣೆ ಕೊಡಿ. ಅದಕ್ಕೆ ಹುಣಸೆ ರಸ ಹಾಕಿ ಕುದಿಸಿ. ಇದು ಕುದಿಯಲು ಪ್ರಾರಂಭಿಸಿದಾಗ ಸಾರಿನ ಪುಡಿ, ಉಪ್ಪು, ಬೆಲ್ಲ, ಅರಿಶಿಣ ಪುಡಿ ಹಾಕಿ ಕುದಿಸಿ ಗಟ್ಟಿಯಾದಾಗ ಎಳ್ಳನ್ನು ಹುರಿದು ಪುಡಿ ಮಾಡಿ ಹಾಕಿ. ಇದು ಕುದಿದು ಮುಟ್ಟಿದಾಗ ಕೈಗೆ ಅಂಟದಷ್ಟು ಗಟ್ಟಿಯಾಗುತ್ತದೆ. ಈ ಹದಕ್ಕೆ ಬಂದ ಮೇಲೆ ಜೀರಿಗೆ, ಮೆಂತ್ಯೆ ಬೇರೆ ಬೇರೆ ಹುರಿದು ಎರಡನ್ನೂ ಸೇರಿಸಿ ಪುಡಿ ಮಾಡಿ ಗೊಜ್ಜು ಇಳಿಸುವಾಗ ಈ ಪುಡಿ ಹಾಕಿ ಕಲಸಿ. ಒಂದು ನಿಮಿಷ ಕುದಿಸಿ ಕೆಳಗಿಳಿಸಿ. ಈ ಗೊಜ್ಜನ್ನು ಶೀತಲ ಯಂತ್ರದಲ್ಲಿಟ್ಟರೆ ಸುಮಾರು ತಿಂಗಳು ಉಳಿಯುತ್ತದೆ. (ಜೀರಿಗೆ ಮೆಂತ್ಯೆ ಬೇಡದಿದ್ದರೆ ಕಡಲೆ ಬೀಜ ಹುರಿದು ಹಾಕಿ).

-ಜಿ.ಎ.ರುಕ್ಮಿಣಿ ಮಾಲಾ, ಮೈಸೂರು.

ತೆಂಗಿನಕಾಯಿ ದೋಸೆ

ಬೇಕಾಗುವ ಸಾಮಗ್ರಿಗಳು:



1/2 ಕೆ.ಜಿ. ಅಕ್ಕಿ ಒಂದು ತೆಂಗಿನಕಾಯಿ.

ಮಾಡುವ ವಿಧಾನ:

ನೆನೆಸಿದ ಅಕ್ಕಿಯನ್ನು ತೆಂಗಿನ ಕಾಯಿ ತುರಿಯೊಂದಿಗೆ ಸಣ್ಣಗೆ ರುಬ್ಬಿ ತಕ್ಷಣವೇ ಮಾಡಬೇಕು. ಹಿಟ್ಟು ತೆಳ್ಳಗಿರಬೇಕು.

-ಅನಿತಾ ಎಚ್.ಹಿರೂರ, ಹುಣಸಗಿ.

ಶಾಸನ-ಸುವ್ಯವಸ್ಥೆ ಎಲ್ಲಿದೆ?



■ ಕೋ.ಚೆನ್ನಬಸಪ್ಪ
ನಿವೃತ್ತ ನ್ಯಾಯಧೀಶರು
127, ಪಶ್ಚಿಮ ಕಾರ್ಡ್ ರಸ್ತೆ,
ಮಹಾಲಕ್ಷ್ಮೀಪುರ, ಬೆಂಗಳೂರು - 86

ಇಲ್ಲಿ ಆಡಳಿತ ಇದೆ, ಶಾಸನವಿದೆ, ಶಾಸನ ಉಲ್ಲಂಘನೆ ಮಾಡಿದವರನ್ನು ಪೊಲೀಸರು ಹಿಡಿಯುತ್ತಾರೆ, ಅಂಥವರಿಗೆ ಶಿಕ್ಷೆಯಾಗುತ್ತದೆ ಎಂಬುದರಲ್ಲಿ ಯಾರಿಗೂ ನಂಬುಗೆಯಿಲ್ಲ. ಸರ್ಕಾರದಲ್ಲಿ ಪೊಲೀಸರಲ್ಲಿ ಜನರಿಗೆ ವಿಶ್ವಾಸವಿಲ್ಲ. ತಮಗೆ ಶಿಕ್ಷೆಯಾದೀತೆಂಬ ಹೆದರಿಕೆ ಕೊಲೆ, ಸುಲಿಗೆ, ಹಾದರ ಮಾಡುವವರಿಗೆ ಕೊಳ್ಳಿ ಹಚ್ಚುವವರಿಗೆ ಇಲ್ಲ.

ನವೆಂಬರ್ 2ನೇ ವಾರ ಆಂಧ್ರ ಪ್ರದೇಶದಲ್ಲಿ ಒಂದು ಘಟನೆ ನಡೆಯಿತು.

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಕೆಲವರು ಹೈದರಾಬಾದಿಗೆ ಸಮೀಪದ ಒಂದು ನಗರದಲ್ಲಿ ಒಂದು ಬಂಗಲೆಯ ಕಾಂಪೋಂಡ್ ಗೋಡೆಯ ಮೇಲೆ ಘೋಷಣೆಗಳನ್ನು ಬರೆಯುತ್ತಿದ್ದರು. ಮನೆಯ ಮಾಲೀಕರು ಒಬ್ಬ ರೆಡ್ಡಿಗಾರು- ಗೋಡೆಯ ಮೇಲೆ ಬರೆಯಬೇಡಿ ಎಂದು ಹೇಳಿದರು. ಈ ಯುವಕರು ಆ ಆಜ್ಞಾಪೂರ್ವಕ ವಿನಂತಿಯನ್ನು ಧಿಕ್ಕರಿಸಿ ಗೋಡೆಯ ಮೇಲೆ ಘೋಷಣೆ ಬರೆದರು. ಮನೆ ಮಾಲೀಕರು ಜೋಡುನಳಿಗೆ ಬಂದೂಕಿನಿಂದ ಗುಂಡು ಹಾರಿಸಿ ಆ ಯುವಕನಿಗೆ ಗಾಯ ಮಾಡಿದರು. ಘೋಷಣೆ ಬರೆಯಲು ಬಂದಿದ್ದ ಯುವಕರ ತಂಡ ದಿಕ್ಕಾಪಾಲಾಗಿ ಓಡಿದರು!

ಅದಕ್ಕಿಂತ ಮೊದಲು ಮುಂಬಯಿಂದ ಹತ್ತಿರದ ಉಪನಗರದ ಕಾಲೇಜಿಗೆ ರೈಲಿನಲ್ಲಿ ಹೋಗುತ್ತಿದ್ದ ಯುವತಿಯೋರ್ವಳನ್ನು ಯುವಕರ ತಂಡವೊಂದು ಸುತ್ತು ಗಟ್ಟಿ ಆಕೆಯ ಮೇಲೆ ಹಲ್ಲೆ ನಡೆಸಿ, ಅವರ ಕೈಚೀಲ... ಚೈನು..ಇತ್ಯಾದಿ ಕಿತ್ತುಕೊಳ್ಳಲು ಹವಣಿಸಿತು. ಆ ಯುವತಿ ಪ್ರತಿಭಟಿಸಿದಳು. ಅದೇ ಡಬ್ಬಿಯಲ್ಲಿದ್ದ ಇನ್ನಾರೂ ಆಕೆಯ ಸಹಾಯಕ್ಕೆ ಬರಲಿಲ್ಲ. ಆ ಯುವಕರು ಹುಡುಗಿಯನ್ನು ರೈಲಿನಿಂದ ಹೊರದೂಡಿದರು. ಆಕೆ ಹಳಿಯಮೇಲೆ ಬಿದ್ದಳು. ರೈಲು ಆಕೆಯ ಎರಡೂ ಕಾಲುಗಳ ಮೇಲೆ ಹರಿದು ಕಾಲುಗಳು ಕತ್ತರಿಸಿಹೋದವು!

ಇನ್ನೊಂದು ಘಟನೆ. ಬಳ್ಳಾರಿಯ ಅಪ್ರಾಪ್ತ ಹುಡುಗಿ ಗುಲ್ಬರ್ಗಾದಲ್ಲಿ ಓದುತ್ತಿದ್ದರು. ಆಕೆಗೆ ಮತ್ತು ಬರುವ ಏನನ್ನೋ ತಿನ್ನಿಸಿ, ಲಿಂಗಸೂಗೂರಿಗೆ ಕರೆತಂದು ಅಲ್ಲಿ ಒಂದು ವಸತಿಗೃಹದಲ್ಲಿ ಸಾಮೂಹಿಕ ಅತ್ಯಾಚಾರ ಮಾಡಿ, ಮರು ದಿನ ಬಳ್ಳಾರಿ ಬಸ್‌ನಿಲ್ದಾಣದಲ್ಲಿ ಆಕೆಯನ್ನು ಅರೆಪ್ರಜ್ಞಾವಸ್ಥೆಯಲ್ಲಿ ಬಿಟ್ಟು ಹೋದರಂತೆ!

ಇಂಥ ಸುದ್ದಿಗಳು ದಿನದಿನವೂ ಪ್ರತಿಯೊಂದು ನಗರ, ಪಟ್ಟಣದಲ್ಲೂ ನಡೆಯುತ್ತಲೆ ಇವೆ. ಹಳ್ಳಿಗಳಲ್ಲಿ ಈ ಪ್ರವೃತ್ತಿ ಈಗ ವ್ಯಾಪಕವಾಗಿ ಹಬ್ಬುತ್ತಿದೆ. ಹಳ್ಳಿಗಳಲ್ಲಿಯೂ, ಕತ್ತಲಾದ ಮೇಲೆ ಮಹಿಳೆಯರು ಮನೆ ಬಾಗಿಲು ದಾಟದಂಥ ಪರಿಸ್ಥಿತಿ. ಶಹರಗಳಲ್ಲಿ ಹಾಡು ಹಗಲೇ ಹುಡುಗಿಯರ ಕೊರಳ ಸರವನ್ನು ಕಿತ್ತೊಡುವುದು, ಮುದುಕಿಯರ ಕತ್ತು ಹಿಸುಕಿ ಮನೆದೋಚುವುದು, ನೀರಡಿಕೆಯಾಗಿದೆ ಎಂದು ನೀರು ಕುಡಿಯಲು ಕೇಳಿ, ನೀರು ಕೊಟ್ಟವರ ಎದೆಗೆ ಚೂರಿ ಹಾಕಿ ಮೈಮೇಲಿನ ಆಭರಣ ದೋಚುವುದು ದಿನದಿನವೂ ನಡೆಯುವ ಘಟನೆಗಳು.

ಇಂಥ ಘಟನೆಗಳು ಎಷ್ಟು ಸರ್ವಸಾಮಾನ್ಯ ಆಗಿದೆ ಎಂದರೆ ಅವು ನಿಸರ್ಗ ನಿಯಮಗಳೊ ಎಂಬಷ್ಟು ಸಾಮಾನ್ಯವಾಗಿ ಹೋಗಿದೆ!

ಹೀಗೇಕೆ?

ಮುಂಬೈ ರೈಲಿನಿಂದ ಹೊರದೂಡಿದಾಗ ಕಾಲುಕಳೆದುಕೊಂಡ ಆ ಯುವತಿಯನ್ನು ಆಸ್ಪತ್ರೆಯಲ್ಲಿ ಪತ್ರಿಕಾಕರ್ತರು ಪ್ರಶ್ನಿಸಿದಾಗ ಆಕೆ:

'ಇದಕ್ಕೆ ಮುಖ್ಯ ಕಾರಣ ಸರ್ಕಾರ. ಇಲ್ಲಿ ಆಡಳಿತ ಇದೆ, ಶಾಸನವಿದೆ, ಶಾಸನ ಉಲ್ಲಂಘನೆ ಮಾಡಿದವರನ್ನು ಪೊಲೀಸರು ಹಿಡಿಯುತ್ತಾರೆ, ಅಂಥವರಿಗೆ ಶಿಕ್ಷೆಯಾಗುತ್ತದೆ ಎಂಬುದರಲ್ಲಿ ಯಾರಿಗೂ ನಂಬುಗೆಯಿಲ್ಲ. ಸರ್ಕಾರದಲ್ಲಿ ಪೊಲೀಸರಲ್ಲಿ ಜನರಿಗೆ ವಿಶ್ವಾಸವಿಲ್ಲ. ತಮಗೆ ಶಿಕ್ಷೆಯಾದೀತೆಂಬ ಹೆದರಿಕೆ ಕೊಲೆ, ಸುಲಿಗೆ, ಹಾದರ ಮಾಡುವವರಿಗೆ ಕೊಳ್ಳಿ ಹಚ್ಚುವವರಿಗೆ ಇಲ್ಲ. ಆದ್ದರಿಂದಲೇ ಇಂಥಾದ್ದೆಲ್ಲ ಸಲೀಸಾಗಿ ನಡೆಯುತ್ತಿದೆ' ಎಂದಳಂತೆ

ಇದು ನೂರಕ್ಕೆ ನೂರು- ಅಷ್ಟೇಕೆ ನೂರಕ್ಕೆ ಇನ್ನೂರಷ್ಟು ಸತ್ಯ ಎಂಬುದು ಈ ದೇಶದ ದುರ್ಭಾಗ್ಯ ಜನರ ನಂಬಿಕೆ. ಇಲ್ಲಿ ಯಾರೇ ಏನೇ ಮಾಡಿ- ಎಂಥ ಘೋರ ಅಪರಾಧವನ್ನಾದರೂ ಮಾಡಿ ದಕ್ಕಿಸಿಕೊಳ್ಳಬಹುದು ಎಂಬ ಭಾವನೆ ಸರ್ವಸಾಮಾನ್ಯವಾಗಿ ಹೋಗಿದೆ! ಹಾಗೆಯೆ ಪೊಲೀಸರಿಗೆ ದೂರು ಕೊಟ್ಟರೆ ಏನೂ ಆಗುವುದಿಲ್ಲ. ಬದಲು ಫಿರ್ಯಾದಿ ಕೊಟ್ಟವರೆ ಕಷ್ಟ ಪರಂಪರೆಯನ್ನು ಅನುಭವಿಸಬೇಕು ಎಂಬುದು ಎಲ್ಲರ ಅನುಭವ. ಒಂದು ವೇಳೆ ಈ ಪೊಲೀಸರ ಸಹವಾಸ ಬೇಡವೆಂದು ನ್ಯಾಯಾಲಯಗಳ ಕಟ್ಟೆ ಹತ್ತಿದರೆ ಇಡೀ ಜೀವಮಾನ ಕೋರ್ಟುಗಳ ನೆರಳಿನಲ್ಲೇ ಸಾಯಬೇಕಾದೀತು ಎಂಬ ಹೆದರಿಕೆ. ಈ ಹೆದರಿಕೆ ನಿರಾಧಾರವಲ್ಲ ಎಂಬುದಕ್ಕೆ ಶಾಸನ ಸಭೆಯಲ್ಲಿ ಕಾನೂನು ಮಂತ್ರಿಗಳು ಕೊಟ್ಟ ಉತ್ತರವೆ ಸಾಕ್ಷಿ. ಕರ್ನಾಟಕ ರಾಜ್ಯದಲ್ಲಿ ಹನ್ನೆರಡು ಲಕ್ಷ ಎಪ್ಪತ್ತಾರು ಸಾವಿರ (12,76,000) ಕ್ರಿಮಿನಲ್ ಸಿವಿಲ್ ಮೊಕದ್ದಮೆಗಳು ಇತ್ಯರ್ಥವಾಗಲು ಕಾದು ಕುಳಿತಿವೆ!! ಅದರಲ್ಲಿ ಹತ್ತು ವರ್ಷ ಹಳೆಯ ಖಟ್ಲೆಗಳೂ ಇವೆ!! ಅಂದ ಮೇಲೆ ನ್ಯಾಯಾಲಯಗಳಿಗೆ ಹೋಗುವ ಅವಿವೇಕ ಹೆಜ್ಜೆಯನ್ನು ಯಾರು ಕೈಕೊಂಡಾರು?

ಹಿಂದೆ - ಬ್ರಿಟಿಷರಿದ್ದ ಕಾಲದಲ್ಲಿ - ಊರಲ್ಲಿ ಏನಾದರೂ ವಿವಾದವುಂಟಾದಾಗ : 'ಪೊಲೀಸ್ ಠಾಣೆಗೆ ಹೋಗುತ್ತೇನೆ ನೋಡು' ಎಂದರೆ ಸಾಕು, ತಪ್ಪು ಮಾಡಿದವನು, ಮಾಡದವನು ಸಹ ಗಡಗಡ ನಡುಗಿ 'ಬ್ಯಾಡ್ರೀ ಬ್ಯಾಡ್ರೀ... ನಿಮ್ಮ ಕಾಲಿಗೆ ಬೀಳ್ತೇನಿ...' ಎಂದು ಅಂಗಲಾಚುತ್ತಿದ್ದ. 'ಕೋರ್ಟಿಗೆ ಹೋಗುತ್ತೇನೆ' ಎಂದು ಹೆದರಿಸಿದರೆ ಸಾಕು ಅಂಜಿ ಬೆವೆತು ಹೋಗುತ್ತಿದ್ದರು. ಆದರೆ ಈಗ: 'ಹೋಗೋ ಪೊಲೀಸರಿಗೆ ದೂರು ಕೊಡು... ಕೋರ್ಟಿಗೆ ಹೋಗು... ನಾನು ನೋಡಿಕೊಳ್ತೇನೆ' ಎಂದು ನಿರ್ಭಯವಾಗಿ ಆಹ್ವಾನ ಕೊಡುತ್ತಾನೆ. ಅವನಿಗೆ ಗೊತ್ತು ಪೊಲೀಸರಿಗೆ ದೂರು ಕೊಟ್ಟರೆ, ಕೋರ್ಟಿಗೆ ಹೋದರೆ ಏನೇನೂ ಆಗುವುದಿಲ್ಲವೆಂದು.

ಇಲ್ಲೊಂದು ಶಾಸನವಿದೆ; ಅದನ್ನು ಉಲ್ಲಂಘಿಸಿದರೆ ಶಿಕ್ಷೆ ಆದೀತು ಎಂಬ ಭೀತಿಯೇ ಇಲ್ಲದಂತಾಗಿದೆ. ಹಿಂದೆ ಬ್ರಿಟಿಷರ ಆಳ್ವಿಕೆಯ ಕಾಲಕ್ಕೆ ಆ ತರುವಾಯ 1960-65 ರತನಕ ಒಂದು ತಾಲೂಕಿನಲ್ಲಿ ನಾಲ್ಕು ಪೊಲೀಸ್ ಠಾಣೆಗಳಿರುತ್ತಿದ್ದವು. ಒಬ್ಬೊಬ್ಬ ಸಬ್ ಇನ್ಸ್‌ಪೆಕ್ಟರ್ ಇರುತ್ತಿದ್ದರು. ಆದರೂ ತಾಲೂಕಿನಲ್ಲಿ ತಿಂಗಳಿಗೆ ಹತ್ತಿಪ್ಪತ್ತು ದೊಡ್ಡ ಅಪರಾಧಗಳಾದರೆ ದೊಡ್ಡ ಸುದ್ದಿ! ಸಣ್ಣ ಪುಟ್ಟ ಅಪರಾಧಗಳಾದರೂ ಹೆಚ್ಚು ಇರಲಿಲ್ಲ. ಮತ್ತೆ ಅಂಥ ಅಪರಾಧಗಳು ಉಲ್ಬಣವಾಗದಂತೆ ನೋಡಿಕೊಳ್ಳುವ ಪ್ರಯತ್ನ ನಡೆಯುತ್ತಿತ್ತು. ಹತ್ತಾರು ಖಾಕಿ ಸಮವಸ್ತ್ರಧಾರಿಗಳು ಒಂದು ಹೋಬಳಿಯ, ಅಂದಾಜು ಮೂವತ್ತು ನಾಲ್ವತ್ತು ಹಳ್ಳಿಗಳಲ್ಲಿ ಶಾಸನ ಸುವ್ಯವಸ್ಥೆ (Law and order) ಕಾಪಾಡುತ್ತಿದ್ದರು. ರಾಜ್ಯಬಿಹೆಷವುಳ್ಳ

ಟೋಪಿ, ಬೆಲ್ಟು, ಸಮವಸ್ತ್ರ, ಜನರನ್ನು ಶಾಸನಕ್ಕೆ ತಲೆ ಬಾಗುವಂತೆ ಮಾಡಿತ್ತು. ಪೊಲೀಸರು ಊರಿ ಗೊಬರು ಮನೆಗೊಬ್ಬರು ಇರಬೇಕಾಗಿರಲಿಲ್ಲ. ಅದು ಸಾಧ್ಯವೂ ಇಲ್ಲ. ಅವರು ಸಾವಿರಕ್ಕೊಬ್ಬರು, ಹತ್ತು ಸಾವಿರಕ್ಕೊಬ್ಬರು ಜಾತ್ರೆಯ ಜಂಗುಳಿಯಲ್ಲಿ ಬಂದೋಬಸ್ತ್ ಮಾಡುವಂತೆ ಹತ್ತಾರು ಜನರು ಇಡೀ ಜಾತ್ರೆಯಲ್ಲಿ ಕಳ್ಳರಿಗೆ ಭೀತಿಯನ್ನು ಹುಟ್ಟಿಸುತ್ತದೆ.

ಆದರೆ ಈಗೇಕೆ ಅದು ಸಾಧ್ಯವಾಗುತ್ತಿಲ್ಲ?

ಈ ಪ್ರಶ್ನೆಗೆ ಉತ್ತರವನ್ನು ಇತ್ತೀಚೆಗೆ ರಾಜ್ಯದ ಐ.ಪಿ.ಎಸ್ ಮತ್ತು ಕೆ.ಪಿ.ಎಸ್. ನೌಕರರ ಸಂಘ ಭಾರತ ಸರ್ಕಾರ ರಚಿಸಿರುವ ಪೊಲೀಸ್ ಆಯೋಗಕ್ಕೆ ಸಲ್ಲಿಸಿದ ಮನವಿಯಲ್ಲಿ ಕಾಣಿಸಿದ್ದಾರೆ. ಡಿಐಜಿ, ಎಸ್‌ಪಿ.. ಶ್ರೇಣಿಯ ಜವಾಬ್ದಾರಿಯುತ ಉನ್ನತ ಅಧಿಕಾರಿಗಳು ಆಯೋಗಕ್ಕೆ ಸಲ್ಲಿಸಿದ ಮನವಿಯಲ್ಲಿ: ಪೊಲೀಸರ ನೇಮಕಾತಿ, ಬಡ್ತಿ, ವರ್ಗಾವಣೆ.. ಇತ್ಯಾದಿ ವಿಚಾರದಲ್ಲಿ ರಾಜಕಾರಣಿಗಳ ಹಸ್ತಕ್ಷೇಪ ಇರುವುದರಿಂದ ಪೊಲೀಸ್ ಸಿಬ್ಬಂದಿ ತಮ್ಮ ಕರ್ತವ್ಯ ನಿರ್ವಹಣೆಗೆ ಪ್ರಬಲ ಅಡ್ಡಿಯಾಗಿದೆ. ಎಲ್ಲಿಯವರೆಗೆ ಪೊಲೀಸ್ ಆಡಳಿತೆಯಲ್ಲಿ ಚುನಾಯಿತ ಶಾಸಕರು, ಸಂಸದರು, ಮಂತ್ರಿಗಳು, ಕೈ ಹಾಕುತ್ತಾರೋ ಅಲ್ಲಿಯವರೆಗೆ ಅವರು ತಮ್ಮ ಶಾಸನಾನ್ವಯ ಕರ್ತವ್ಯ ನಿರ್ವಹಣೆ ಸಾಧ್ಯವಿಲ್ಲ ಎಂದು ಮೊರೆಯಿಟ್ಟಿದ್ದಾರೆ. ಇದೇ ಮಾತನ್ನು ಈಗ ಪೊಲೀಸ್ ಆಯೋಗದ ಅಧ್ಯಕ್ಷರಾದ ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಶ್ರೀರೊಬೆರೊ ಮುಂಬಯಿಯಲ್ಲಿ ದೂರದರ್ಶನಕ್ಕೆ ನೀಡಿದ ಸಂದರ್ಶನದಲ್ಲಿ ಬಿಚ್ಚು ಮಾತಿನಲ್ಲಿ ಹೇಳಿದ್ದಾರೆ! ಈ ಪೊಲೀಸ್ ಅಧಿಕಾರಿಗಳು ಶಾಸಕರ ಹಕ್ಕುಚ್ಯುತಿ ಮಾಡಿದ್ದಾರೆಂದು ಶಾಸಕರು ಆರ್ಭಟಿಸಿದ್ದಾರೆ.

ಅವರ ಈ ಮಾತು ನಿಜವಲ್ಲ ಎಂದು ಯಾರು ಹೇಳಿಯಾರು? ಶಾಸಕರು ತಮ್ಮ ತಾಲ್ಲೂಕುಗಳಿಗೆ ತಮಗೆ ಬೇಕಾದ ಪೊಲೀಸ್ ಅಧಿಕಾರಿಗಳನ್ನು (ಇತರ ಇಲಾಖೆಯವರನ್ನೂ ಸಹಿತ) ನೇಮಕ ಮಾಡಿಸಿಕೊಳ್ಳುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯೆ. ತಮಗೆ ಬೇಕಾದವರಾದರೆ ತತ್ರಾಪಿ ತಮ್ಮ ಜಾತಿಯವರೇ ಆದರೆ, ಮತ್ತೆ ತತ್ರಾಪಿ ತತ್ರಾಪಿ ತಮ್ಮ ಒಳಪಂಗಡದವರೆ ಆದರೆ - ಅವರು ತಮ್ಮ ಕ್ಷೇತ್ರಾಭಿವೃದ್ಧಿ ಕಾರ್ಯ ಮಾಡುವುದು ಸಾಧ್ಯವೆಂದು ಅಂಥವರನ್ನೇ ವರ್ಗಾಯಿಸಿಕೊಳ್ಳುತ್ತಾರೆ. ಅಂಥ ಅಧಿಕಾರಿಗಳು ರಾಜ್ಯ ಶಾಸನದ ಸೇವಕರಾಗುವುದಿಲ್ಲ, ತಮ್ಮ ನೇಮಕಾತಿ, ಬಡ್ತಿ, ವರ್ಗಾವಣೆ ಮಾಡಿದ ಶಾಸಕರ ಸೇವಕರಾಗುತ್ತಾರೆ. ಆಗ ಶಾಸಕ ಪ್ರಭೃತಿಗಳು ಯಾವ ಕೆಲಸವನ್ನಾದರೂ ತಮಗಿಷ್ಟ ಬಂದಂತೆ ಮಾಡಿಸಿಕೊಳ್ಳುತ್ತಾರೆ. ಶಾಸಕರು ತಮ್ಮ ಕ್ಷೇತ್ರದ ದೊರೆಗಳು ಎಂದು ಭಾವಿಸಿಕೊಂಡಿರುವುದೇ ಮಾತ್ರವಲ್ಲ. ಅವರು ಆ ಹಿಂದಿನ ಪಾಳೆಯಗಾರ / ದೊರೆ/ ಅರಸರಂತೆಯೆ ಈ ದೇಶವನ್ನು ಆಳುತ್ತಾರೆ! ಈ ಮಾತನ್ನು ಐದು ವರ್ಷ ಶಾಸಕರಾಗಿರುವ ಇಂದು ಬಂದು ನಾಳೆ ಹೋಗುವ ಪಡಪೋಶಿಗಳು ಯಾವ ಸಂಕೋಚ, ನಾಚಿಕೆ, ಎಗ್ಗು ಇಲ್ಲದೆ ಬಡಾಯಿಕೊಚ್ಚಿಕೊಳ್ಳುತ್ತಾರೆ.

ಇದರಿಂದ ಶಾಸನ ಸುವ್ಯವಸ್ಥೆಯು ಕುಸಿದು ಬಿದ್ದಿರುವುದಲ್ಲದೆ ಇದು ಭ್ರಷ್ಟಾಚಾರಕ್ಕೂ ಹೆಬ್ಬಾಗಿಲು ತೆರೆದಿದೆ! ಪೊಲೀಸ್ ಇಲಾಖೆಯಲ್ಲಿ ಭ್ರಷ್ಟಾಚಾರ ವಿಜೃಂಭಿಸಲು ಚುನಾಯಿತ ಪ್ರತಿನಿಧಿಗಳೇ ಮೂಲಕಾರಣ ಎಂಬುದು ಪ್ರತಿಯೊಬ್ಬ ಪ್ರಜೆಗೂ ಮನದಟ್ಟಾಗಿದೆ. ಪೊಲೀಸ್ ಇಲಾಖೆಯಲ್ಲಿ ಭ್ರಷ್ಟಾಚಾರ ವಿಜೃಂಭಿಸುತ್ತಿದೆ ಎಂಬುದನ್ನು ನಮ್ಮ ರಾಜ್ಯದ ಗೃಹ ಮಂತ್ರಿಗಳಿಗೆ ಸ್ಪಷ್ಟವಾದ ಮಾತುಗಳಲ್ಲಿ ಬಿಚ್ಚು ಮನಸ್ಸಿನಿಂದ ಬಹಿರಂಗವಾಗಿಯೇ ಹೇಳಿದ್ದಾರೆ. ರಾಜ್ಯದಲ್ಲಿ ತತ್ರಾಪಿ ಮೈಸೂರು, ಬೆಂಗಳೂರಿನಂಥ ಮಹಾಶಹರಗಳಲ್ಲಿ ಕಟ್ಟುವ ಪೊಲೀಸ್ ಠಾಣಾ ಕಟ್ಟಡಗಳನ್ನು ಪೊಲೀಸ್ ಅಧಿಕಾರಿಗಳೆ ಕಟ್ಟಿಸುವಷ್ಟು ಹಣವಂತರಿದ್ದಾರೆ ಎಂದು ಹೇಳಿದ್ದಾರೆ!! ಪೊಲೀಸ್ ಅಧಿಕಾರಿಗಳಿಗೆ ವಂತಿಗೆ ಎತ್ತಲು ಅವಕಾಶ/ ಅನುಮತಿ ಕೊಟ್ಟಿದ್ದಾದರೆ ಇನ್ನು ಈ ದೇಶ ಉಳಿದೀತೆ? ಇಲ್ಲಿ ಶಾಸನ ಸುವ್ಯವಸ್ಥೆ ಎಂಬುದರ ಗಂಧ ಅಥವಾ ನೆರಳಾದರೂ ಇದ್ದೀತೆ!! ಈ ದೇಶ ಹಾಳಾಗಿ ಹೋದರೆ ಎಲ್ಲ ರಂಗದಲ್ಲೂ ಅವನತಿ ಹೊಂದಿದರೆ- ಅದಕ್ಕೆ ಚುನಾಯಿತ ಪ್ರತಿನಿಧಿಗಳೆ ಕಾರಣವೆಂದು ಇತಿಹಾಸ ದಾಖಲಿಸುವುದು. ಇದನ್ನು ಮುಂದಿನ "ಪೀಳಿಗೆ ಕಣ್ಣಾರೆ ಕಂಡು ಕಣ್ಣೀರು ಸುರಿಸೀತು!

ಈ ದೇಶದಲ್ಲಿ ಈಗ ಯಾವ ಶಾಸನಕ್ಕೂ ಮರ್ಯಾದೆಯಿಲ್ಲ. ಶಾಸನ ಕಾಗದದ ಮೇಲಿರುವ ಶವ ಎಂಬುದನ್ನು ಕಣ್ಣಿದ್ದ ಯಾರಾದರೂ ನೋಡಬಹುದು. ಬೆಂಗಳೂರಿನಂಥ ರಾಜ್ಯದ ರಾಜಧಾನಿಯಲ್ಲಿ ಕಟ್ಟಡಗಳು, ಮಹಾನಗರ ಪಾಲಿಕೆ ರಚಿಸಿದ ಕಟ್ಟಡ ನಿರ್ಮಾಣ ಉಪನಿಬಂಧನೆ (Building by laws) ಗಳನ್ನು ಉಲ್ಲಂಘಿಸಿ ದಿನದಿನವೂ ತಲೆ ಎತ್ತುತ್ತಿವೆ. ಪ್ರತಿ ಬೀದಿಯಲ್ಲೂ 'ಫಾಸ್ಟ್‌ಫುಡ್' ಹೋಟೆಲ್‌ಗಳು ಬಿರುಸಿನ ವ್ಯಾಪಾರ ಮಾಡುತ್ತಿವೆ. ಅವರ ಗಿರಾಕಿಗಳು ಅರ್ಧರಸ್ತೆಯ ತುಂಬ ತಮ್ಮ ವಾಹನಗಳನ್ನು ನಿಲ್ಲಿಸಿ ಸಂಚಾರಕ್ಕೆ ಅಡ್ಡಿ ಪಡಿಸುತ್ತಾರೆ. ವಾಸ್ತವ್ಯ ಪ್ರದೇಶ (Residential area) ದಲ್ಲಿ ಕಾರ್ ರಿಪೇರಿ ಗ್ಯಾರೇಜ್‌ಗಳು ತಲೆಯೆತ್ತುತ್ತವೆ! ಸಾರ್ವಜನಿಕ ನಾಗರಿಕ ಉಪಯೋಗಕ್ಕಾಗಿ ಮೀಸಲಿರಿಸಿದ ಜಾಗದಲ್ಲಿ ಏಕಾಏಕಿ ಗಣಪತಿ, ಮಾರುತಿ, ಶನಿದೇವತೆ... ಉದ್ಭವಿಸುತ್ತಾರೆ. ಅಲ್ಲೊಂದು 'ದೇವಾಲಯ' ಎದ್ದು ನಿಲ್ಲುತ್ತದೆ. ಅಲ್ಲಿ ಮಂಗಳಾರತಿಯ ಮಹಾ ಕಾರ್ಯ ನಡೆಯುತ್ತದೆ!! ಇದನ್ನು ತಡೆ ಹಿಡಿಯುವ ಎದೆಗಾರಿಕೆ ತೋರಿಸಿದ ರವೀಂದ್ರರನ್ನು ಮಹಾಪೌರರೇ ವಿರೋಧಿಸಿದರು! ಅಂದರೆ ಮತ್ತೆ ಅಲ್ಲಿಗೇ ಬರುತ್ತೇವೆ. ಚುನಾಯಿತ ಪ್ರತಿನಿಧಿಗಳ ಕೈಯಲ್ಲಿ ಶಾಸನ ಹತವಾಗಿ ಹೋಗಿದೆ!

ಹಾಗಾದರೆ ಇಲ್ಲಿ ಏನು ಉಳಿದಿದೆ? ಈ ದೇಶದಲ್ಲಿ ಜನ ಬದುಕಿ ಉಳಿದಿದ್ದರೆ ಅದು ರಾಜ್ಯದ ರಕ್ಷಣೆಯಿಂದಲ್ಲ. ರಾಜ್ಯದ ಮುಖ್ಯ ಕರ್ತವ್ಯ ಜನರ ಪ್ರಾಣ ಮತ್ತು ಸ್ವಾತಂತ್ರ್ಯ ರಕ್ಷಣೆ. ಆದರೆ ರಾಜ್ಯಾಧಿಕಾರ ಈ ಪ್ರಾಥಮಿಕ ಕರ್ತವ್ಯ ನಿರ್ವಹಣೆಯಲ್ಲಿ ಸಂಪೂರ್ಣ ಸೋತು ಹೋಗಿದೆ. ದರೋಡೆಕಾರರು, ವಂಚಕರು, ಕೊಲೆಗಡುಕರು, ನಿರ್ಭಯವಾಗಿ ಅಲೆದಾಡುತ್ತಾರೆ. ಒಮ್ಮೊಮ್ಮೆ ಕಾನೂನಿನ ಬಲೆಯಲ್ಲಿ ಸಿಕ್ಕಿಬಿದ್ದರೂ ಅವರನ್ನು ರಾಜಕಾರಣಿಗಳೇ ಪಾರುಮಾಡಿದ್ದು ಬಯಲಿಗೆ ಬಂದಿದೆ. ಬೆಂಗಳೂರಿನಲ್ಲಿ ಸಾರ್ಕ್ ಸಮ್ಮೇಳನ ನಡೆದಿದ್ದಾಗ, ರಾಜೀವ್‌ಗಾಂಧಿಯ ರಕ್ಷಣೆಗಾಗಿ ನಿಂತಿದ್ದ ಪೊಲೀಸ್ ಮತ್ತು ರಕ್ಷಣಾ ಸಿಬ್ಬಂದಿ ವೀರಪ್ಪನ್‌ನನ್ನು ಸೆರೆಹಿಡಿದು ತಂದಿದ್ದರು. ಆಗ ರಾಜಕಾರಣಿಗಳ ಕುಮ್ಮಕ್ಕಿನಿಂದಲೇ ತಪ್ಪಿಸಿಕೊಂಡು ಹೋದನೆಂದು ಬೊಬ್ಬಾಟ ಎದ್ದಿತ್ತು!! ಈಗ ರಮೇಶ ಶರ್ಮಾ ಎಂಬ ರಾಜಕೀಯ ಮುಖವಾಡ ಧರಿಸಿದ ಕುಖ್ಯಾತ ಪುಢಾರಿ ದಾವೂದ್ ಇಬ್ರಾಹಿಮನ ಸಹಚರ. ಅವನಿಗೆ ಸತ್ತು ಹೋಗಿರುವ ಇಬ್ಬರು ಪ್ರಧಾನಿಗಳ ನಿಕಟ ಸಂಪರ್ಕ ಇದ್ದಿತಂತೆ!!

ಹಾಗಾದರೆ ಈ ದೇಶ ಉಳಿದೀತೆ? ಇನ್ನು ಕೆಲವೆ ವರ್ಷಗಳಲ್ಲಿ ಇದು ಪಿಂಡಾರಿಗಳ, ಪಂಜುಗಳ್ಳರ- ಅಂದರೆ ಈಗಿನ ಪರಿಭಾಷೆಯಲ್ಲಿ ಏಕೆ 47 ರೈಫಲ್‌ಧಾರಿಗಳ ಆಡುಂಬೊಲವಾಗಿ ಹೋಗುವುದರಲ್ಲಿ ಸಂಶಯವೇ ಇಲ್ಲ. ಅಂಥ ಪುಂಡರನ್ನು ಪಿಂಡಾರಿಗಳನ್ನು ಸದೆ ಬಡಿಯುವ ಸರ್ಕಾರ ಇಲ್ಲಿ ಇರುವುದಿಲ್ಲ! ಈಗ ನಡೆಯುತ್ತಿರುವ ಹಗಲು ದರೋಡೆ ಇನ್ನೂ ಉಲ್ಬಣವಾಗಿ ಹೋಗಬಹುದು. ಆಗ ಜನ ಆತ್ಮ ರಕ್ಷಣೆಗಾಗಿ ಖಾಸಗೀ ಸೈನ್ಯವನ್ನು ಅವಲಂಬಿಸಬೇಕಾದೀತು. ಹಾಗೆ ಬಿಹಾರದಲ್ಲಿ 'ರಣಧೀರಸೇನೆ' ಅಸ್ತಿತ್ವದಲ್ಲಿದೆ! ಅದು ಇಡೀ ದೇಶಕ್ಕೇ ಹಬ್ಬಿದರೆ ಆಶ್ಚರ್ಯ ಪಡಬೇಕಾಗಿಲ್ಲ. ■

■ ಶಾಂತಾ ನಾಗರಾಜ್

ಜನತಾದಳ ಸರ್ಕಾರದಲ್ಲಿ
ದೇವೇಗೌಡರ ಸಾಮ್ರಾಜ್ಯದಲ್ಲಿ
ನಾಗೇಗೌಡರ ಮಂತ್ರಿತ್ವದಲ್ಲಿ
ರೇವಣ್ಣನ ದರ್ಬಾರಿನಲ್ಲಿ
ಪೊಲೀಸರ ತಾಂಡವ ನೃತ್ಯ.

ಬಾಗೂರು - ನವಿಲೆ

ದಳಪತಿಗಳ ದೌರ್ಜನ್ಯಕ್ಕೆ ತತ್ತರಿಸಿದ ರೈತರು!

ಜುಲೈ 20. 1998. ಅಂದು ಮುಂಜಾನೆ ಎಂದಿನಂತೆ ಆ ಹಳ್ಳಿಗಳಲ್ಲಿ ಸೂರ್ಯೋದಯ ವಾಯಿತು. ದನಕರುಗಳ ಕೊರಳ ಗೆಜ್ಜೆನಾದ, ಹಕ್ಕಿಗಳ ಕಲರವ, ಬಾವಿಯ ರಾಟೆಯ ಜೀಕು ಶಬ್ದ ಯಾವುದಕ್ಕೂ ಮುಂದಾಗಲಿರುವ ಘೋರ ಅನ್ಯಾಯಗಳ ಪರಿವೆಯೇ ಇರದಂತೆ, ಎಲ್ಲ ನಾದಗಳೂ ಸುಶ್ರಾವ್ಯವಾಗಿ, ಲಯ ಬದ್ಧವಾಗಿ ತಮ್ಮಷ್ಟಕ್ಕೆ ತಾವೇ ಪರಿಸರವನ್ನು ತುಂಬುತ್ತಿತ್ತು. ಬೆಳಗಿನ ಸುಮಾರು ಹತ್ತು ಗಂಟೆ ಇರಬಹುದು ಆ ಹಳ್ಳಿಗೆ ಧರಭರ ಶಬ್ದ ಮಾಡು ತ್ತಾ ಹತ್ತಾರು ಪೊಲೀಸು ವ್ಯಾನುಗಳೂ ಜೀಪು ಗಳೂ ಆಗಮಿಸಿದವು. ಅವುಗಳಿಂದ ಇಳಿದ ನೂರಾರು ಪೊಲೀಸರ ಬೂಟಿನ ಶಬ್ದ, ಹಳ್ಳಿಯ ನಿತ್ಯದ ಸುಲಯವನ್ನು ಹೊಸಕಿ ಹಾಕಿಬಿಟ್ಟಿತು. ರಸ್ತೆಯಲ್ಲಿ ನಡೆಯುತ್ತಿದ್ದವರು ಅವಾಕ್ಕಾಗಿ ನಿಂತೇ ಬಿಟ್ಟರು. ಗೋಲಿಯಾಡುತ್ತಿದ್ದ ಪುಟ್ಟ ಕೈಗಳು, ಅಮ್ಮನ ಮಡಿಲನ್ನಪ್ಪಿಕೊಳ್ಳುವುದಕ್ಕೆ ಮನೆಗೆ ದೌಡಾಯಿಸಿದವು. ಹಿಂದಿನ ಕಾಲದಲ್ಲಿ ದಂಡಿನವರು ಬಂದಾಗ, ಹೆದರಿ ಕಂಗಾಲಾಗು ತ್ತಿದ್ದಂತೆ ಆ ಜನ ನಡುಗಿದರು. ಎಲ್ಲ ಮನೆಗಳ ತಲಬಾಗಿಲುಗಳೂ ಬಿಗಿದು ಮುಚ್ಚಿಕೊಂಡವು.

ಮುಂದಿನ ಕೆಲಸವೆಲ್ಲ ಪೊಲೀಸು ವ್ಯವಸ್ಥೆ ಯ ಒಟ್ಟಾರೆ ವಿಕೃತಿಯ ಪ್ರದರ್ಶನ. ಖಾಕಿ ಬಟ್ಟೆ ಯಲ್ಲಿದ್ದ, ಸರ್ಕಾರದಿಂದ ಅನುಮತಿ ಪಡೆದಿದ್ದ, ಸುಭದ್ರ ಸ್ಥಿತಿಯಲ್ಲಿದ್ದ ದರೋಡೆಕೋರ ಮನಸ್ಸುಗಳೇ ಮುಂದಿನ ಕೈಂಕರ್ಯವನ್ನು ನಡೆ ಸಿದ್ದು. ಸಾರಾಯಿ ಅಂಗಡಿಗಳನ್ನು ಲೂಟಿಮಾಡ ಲಾಯಿತು. ಹೊಟ್ಟೆ ಹಿಡಿಸುವಷ್ಟು ಕುಡಿದಿದ್ದಾ ಯಿತು. ಜೀಪು ತುಂಬುವಷ್ಟು ತುಂಬಿಸಿ ದ್ದಾಯಿತು. ಮುಚ್ಚಿದ ಮನೆಗಳ ಕದಗಳನ್ನು ಕಲ್ಲಿನಿಂದ ಚಚ್ಚಿದ್ದಾಯಿತು. ಎಲ್ಲರ ಮನೆಯ ಟಿ.ವಿ. ಮುಂತಾದ ಬೆಲೆ ಬಾಳುವ ವಸ್ತುಗಳನ್ನು ಕುಟ್ಟಿ ಪುಡಿ ಮಾಡಿದ್ದಾಯಿತು. ನೋಡುತ್ತಿರು ವಂತೆಯೇ ಎಲ್ಲ ಹೆಂಗಸರನ್ನು ಅವಾಚ್ಯ ಶಬ್ದಗ ಳಿಂದ ಬಯ್ಯುತ್ತಾ ಮನಬಂದಂತೆ ಥಳಿಸ ಲಾಯಿತು. ಎಂಬತ್ತು ವರ್ಷದ ವೃದ್ಧೆಯಿಂದ ಹಿಡಿದು ಎಂಟು ವರ್ಷದ ಹುಡುಗಿಯವರೆಗೆ ಎಲ್ಲರ ದೇಹಗಳೂ ಬೆತ್ತದ ಬಡಿತದ ಬಾಸುಂಡೆ ಗಳನ್ನು ಧರಿಸಿದ್ದಾಯಿತು. ತುಂಬ ದುಃಖದ ಸಂಗತಿ ಎಂದರೆ ಆ ಅಮಾಯಕರಿಗೆ ಪೊಲೀಸ ರು ಯಾಕೆ ತಮ್ಮನ್ನು ಹೊಡೆಯುತ್ತಿದ್ದಾರೆ ಎನ್ನುವ ವಿಷಯವೇ ತಿಳಿದಿರಲಿಲ್ಲ. ಆ ಸರ್ವಾ ಧಿಕಾರದ ತಾಂಡವ ನೃತ್ಯದ ಮುಂದೆ ಈ ಬಡ ಹಳ್ಳಿಯ ಹೆಣ್ಣುಮಕ್ಕಳು ನಡುಗಿಹೋದರು. ಅವರನ್ನು ರಕ್ಷಿಸಬೇಕಾದ, ಆ ಹಳ್ಳಿಗಳ ಪುರುಷ ವರ್ಗ ಶಾಂತಿಯುತವಾದ ಸತ್ಯಾಗ್ರಹ ನಡೆಸಿದ ತಪ್ಪಿಗೆ ಜೈಲು ಸೇರಿಯಾಗಿತ್ತು. ಈ ಮಹಿಳಾ ವರ್ಗದ ಮಹಾಪರಾಧ ಒಂದೇ ಒಂದು



ಶಂಕರಾಚಾರಿಯವರ ತಮ್ಮನ ಮಗಳು ಕುರುಡಿ ಅವಳನ್ನೂ ಚಚ್ಚಿದ್ದಾರೆ.



80 ವರ್ಷದ ಹಣ್ಣು ಮುದುಕಿಯನ್ನು ಬಿಡದ ಪೊಲೀಸರ ಲಾಠಿಗಳು!

ಆಗಿತ್ತು. ಆದೆಂದರೆ ಜೈಲು ಸೇರಿದ ರೈತರ ಮಡದಿಯೋ, ಮಾತೆಯೋ, ಮಗಳೋ ಆಗಿದ್ದುದು! ರಾಮಾಯಣ, ಮಹಾಭಾರತ, ಎಲ್ಲ ಕಾಲದ ಖಳವರ್ಗಕ್ಕಿಂತ ಘೋರ ಖಳನಾಯಕರಾಗಿದ್ದುದು ಮತ್ತೆ ಯಾರೂ ಅಲ್ಲ ಪೊಲೀಸರು!

ಬಾಗೂರು-ನವಿಲೆ ರೈತರ ಹೋರಾಟ ಇಂದು ನೆನ್ನೆಯದಲ್ಲ. ಇಪ್ಪತ್ತು ವರ್ಷ ಹಳೆಯದು. ಆಳುವವರಿಗೆ ದೂರದೃಷ್ಟಿತ್ವ ಇಲ್ಲದಿರುವುದು, ತಾವು ಮಾಡಿದ ಅಕೃತ್ಯಗಳನ್ನು ಸರಿಪಡಿಸಲು ಪ್ರಯತ್ನಿಸದಿರುವುದು, ಅನ್ಯಾಯ ಕಣ್ಣೆದುರೇ ನಡೆಯುತ್ತಿದ್ದರೂ ತಮಗೆ ಲಾಭವಿಲ್ಲದಿದ್ದಾಗ ಏನೂ ಅನ್ಯಾಯ ನಡೆದೇ ಇಲ್ಲ ಎಂದು ವಾದಿಸುವುದು, ಬಡವರ ಹೆಸರಿನಲ್ಲಿ ಶೋಷಿಸುವುದು, ಇವೆಲ್ಲಕ್ಕೂ ಜೀವಂತ ಸಾಕ್ಷಿ, ಬಾಗೂರು ನವಿಲೆ ಸುತ್ತಮುತ್ತಲಿನ 42 ಹಳ್ಳಿಗಳು. ತುಮಕೂರು, ಮಂಡ್ಯ ಜಿಲ್ಲೆಗಳಿಗೆ ಕುಡಿಯುವ ನೀರಿಗಾಗಿ ಹಾಸನ ಜಿಲ್ಲೆಯ ಚೆನ್ನರಾಯಪಟ್ಟಣ ತಾಲೂಕಿನ ಗೊರೂರಿನ ಹೇಮಾವತಿ ನದಿಯ ನೀರೇ ಬೇಕಾಯಿತು. ವಿಸ್ತೃತ ವಿಜ್ಞಾನದ ಅರಿವನ್ನು ಸಮರ್ಪಕವಾಗಿ ಬಳಸಿಕೊಳ್ಳದಿದ್ದರೆ ಏನಾಗುತ್ತದೆ ಎನ್ನುವುದಕ್ಕೆ ಬಾಗೂರು -ನವಿಲೆ ಸುರಂಗ ಉತ್ತಮ ಉದಾಹರಣೆ. ತುಮಕೂರು ಮಂಡ್ಯ ಜಿಲ್ಲೆಗಳಿಗೆ ಕುಡಿಯುವ ನೀರಿಗಾಗಿ ಗೊರೂರಿನ ಹೇಮಾವತಿ ಜಲಾಶಯದಿಂದ ಸುಮಾರು ಹತ್ತು ಕಿ.ಮೀಟರ್ ಸುರಂಗವನ್ನು ತೋಡಲಾಯಿತು. 200 ಅಡಿ ಆಳದಲ್ಲಿರುವ ಈ ಸುರಂಗದ ಅಕ್ಕಪಕ್ಕದ ನೆಲದಲ್ಲಿರುವ ಅಂತರ್ ಜಲವೂ ಇದರಲ್ಲೇ ಕೂಡಿಕೊಂಡು ಈ ಹತ್ತು ಕಿ.ಮೀಟರ್ ನೆಲದ ಅಕ್ಕಪಕ್ಕದಲ್ಲಿರುವ ಹಳ್ಳಿಗಳು ಬರಡಾಗುತ್ತವೆ ಎನ್ನುವ ಸಾಮಾನ್ಯ ಅರಿವೂ ಸುರಂಗ ಯೋಜಿಸಿದವರಿಗೆ ಬರಲಿಲ್ಲ.



ಈಕೆಯನ್ನು ಇಂದಿಗೂ ಕಾಡುವ ಮಾಯದ ಗಾಯಗಳು



ಪೊಲೀಸರ ಮನಸ್ಥಿತಿ ಬಿಂಬಿಸುವ ಮನೆ

ಪರಿಣಾಮ 42 ಹಳ್ಳಿಗಳ ಜನರ ಬದುಕು, ಅದರಲ್ಲೂ ಮಣ್ಣನ್ನೇ ನಂಬಿದವರ ಬದುಕು ಆ ನೆಲದಂತೆ ಬರಡಾಗಿ ಹೋಗಿದೆ. ಬಾಗೂರು -ನವಿಲೆ ಮುಂತಾದ ಹಳ್ಳಿಗಳ ರೈತರು ಮೊದಲು ಉತ್ತಮ ಬದುಕನ್ನೇ ಕಂಡವರು. ತೆಂಗು, ಭತ್ತ, ಕಬ್ಬುಗಳನ್ನು ಬೆಳೆದು ತಮ್ಮ ಶ್ರಮಕ್ಕೆ ಸರಿಯಾದ ಬೆಲೆ ಪಡೆದು ನೆಮ್ಮದಿಯ ಜೀವನ ನಡೆಸಿದವರು. ಆದರೆ ಈಗ ಸರ್ಕಾರದ ಸುರಂಗ ಸಾಹಸದಿಂದಾಗಿ ಆ ಜನ ಬಡತನಕ್ಕೆ ತಳ್ಳಲ್ಪಟ್ಟಿದ್ದಾರೆ. ಭೂಮಿ ಇದ್ದರೂ ಅದರಲ್ಲಿ ಏನೇನೂ ಬೆಳೆಯಲಾಗದ ಸ್ಥಿತಿಯಲ್ಲಿ ಈ ಜನ ಕಂಗಾಲಾಗಿದ್ದಾರೆ.

ಈ ಬಗ್ಗೆ ಸರ್ಕಾರಕ್ಕೆ ಮಾಡಿಕೊಂಡ ಮನವಿಗಳೆಲ್ಲವೂ ಕೋಣನ ಮುಂದೆ ಕಿಂದರಿ ಬಾರಿಸಿದಂತೆ ಆಗಿದೆ. ಸರ್ಕಾರದ ಒಳ ಒತ್ತಡಗಳೇನಿವೆಯೋ ಗೊತ್ತಿಲ್ಲ. ಆದರೆ ಮುಖ್ಯಮಂತ್ರಿಗಳ ನಿಸ್ಸಹಾಯಕ ಮಾತುಗಳು ಅಧಿಕಾರಸ್ಥರ ಅಸಡ್ಡೆಗೆ ಸಾಕ್ಷಿಯಾಗಿವೆ. ರೈತರ ಪ್ರತಿನಿಧಿಗಳು ತಮ್ಮ ತೋಟದಲ್ಲಿ ಬೆಳೆದ ತೆಂಗಿನಕಾಯಿಗಳನ್ನು ಮುಖ್ಯಮಂತ್ರಿಗೆ ತೋರಿಸಿದರಂತೆ. ಅದಕ್ಕೆ ಸಿ.ಎಂ. 'ಇದೇನ್ರಿ ಬಾಳೇಕಾಯಿ ತಂದಿದ್ದೀರಿ' ಎಂದರಂತೆ. 'ಸ್ವಾಮಿ ಇದು ಬಾಳೇಕಾಯಿ ಅಲ್ಲ ನಮ್ಮ ತೋಟಗಳಲ್ಲಿ ನೀರಿನ ಅಭಾವದಿಂದಾಗಿ ತೆಂಗುಗಳು ಹೀಗಾಗಿವೆ' ಎಂದ ರೈತರಿಗೆ ಸಿ.ಎಂ. ಉತ್ತರ 'ಹೌದ್ರಿ, ನನಗೆ ಗೊತ್ತು. ಆದರೆ ನಾನೇನೂ ಮಾಡಲಾರೆ. ಸರ್ಕಾರದಿಂದ ಪರಿಹಾರ ಸಾಧ್ಯವಿಲ್ಲ ಏತ ನೀರಾವರಿ ವ್ಯವಸ್ಥೆಯೂ ಮಾಡಲಾಗುವುದಿಲ್ಲ.'' ಇದು ದಳ ಸರ್ಕಾರದ ನೊಗ ಹೊತ್ತವರ ಕರಾಳ ನಡವಳಿಕೆ. ಎಲ್ಲರಿಗೂ ಅವರವರ ಕುರ್ಚಿಯೇ ಮುಖ್ಯ; ಎಲ್ಲಕ್ಕಿಂತ!

ಸುಮಾರು 2.35 ಲಕ್ಷ ತೆಂಗಿನ ಮರಗಳು ಹತ್ತು ವರ್ಷಗಳಿಂದ ನೀರಿಲ್ಲದೇ ನಷ್ಟಕ್ಕೆ ಒಳಗಾಗಿ 25 ಕೋಟಿ, 61 ಲಕ್ಷ ರೂಪಾಯಿಗಳು ಕೈತಪ್ಪಿಹೋದ ಸಂತಾಪ ಹೊತ್ತು ರೈತರು ಅಹಿಂಸಾ ಮಾರ್ಗ ಹಿಡಿದದ್ದು, ಮಹಾತ್ಮರು ತೋರಿಸಿದ ದಾರಿಯಲ್ಲಿ ಜನ ಇನ್ನೂ ನಂಬಿಕೆ ಇಟ್ಟಿದ್ದಾರೆ ಎನ್ನುವುದಕ್ಕೆ ಪ್ರತೀಕ. ಆದರೆ ಅಹಿಂಸಾ ಮಾರ್ಗದ ಬಗ್ಗೆ ಭಾಷಣ ಕುಟ್ಟಿ ಆಡಳಿತ ವಹಿಸಿಕೊಂಡವರು ಇವತ್ತು ಹಿಡಿದಿರುವುದು ಹಿಂಸಾಮಾರ್ಗವನ್ನೇ! ತಮ್ಮ ಅಧೀನದಲ್ಲಿರುವ ಪೊಲೀಸರಿಂದ ಏನೆಲ್ಲ ಮಾಡಿಸುತ್ತಾರೆ ಎನ್ನುವುದಕ್ಕೆ ಬಾಗೂರು - ನವಿಲೆ ರೈತರೇ ಸಾಕ್ಷಿ.

42 ಹಳ್ಳಿಗಳ ಸಂಕೇತವಾಗಿ ಒಂದೆಡೆ 42 ಗುಡಿಸಲುಗಳನ್ನು ಕಟ್ಟಿಕೊಂಡು, ಒಂದೊಂದು ಗುಡಿಸಲಿಗೆ ತಮ್ಮ ಪ್ರೀತಿಯ ಹಳ್ಳಿಯ ಹೆಸರಿಟ್ಟು, ಅದರಲ್ಲಿ ಊರ ಪ್ರಮುಖ ರೈತರು ಉಳಿದುಕೊಂಡು ನಡೆಸಿದ 96 ದಿನಗಳ ನಿರಂತರ ರೈತ ಚಳವಳಿಗೆ ಸರ್ಕಾರ ಒಮ್ಮೆಲೇ ಬೆಚ್ಚಿಬಿದ್ದಿತು! ಇದಕ್ಕೆ ಪ್ರತಿಕ್ರಿಯಿಸಲು ಸರ್ಕಾರಕ್ಕೆ ಅನೇಕ ದಾರಿಗಳಿದ್ದವು. ಸ್ಥಳೀಯ ಮಂತ್ರಿಯನ್ನು ಕಳಿಸಿ ಸಂಧಾನ ನಡೆಸಬಹುದಿತ್ತು. ರೈತ ಮುಖಂಡರನ್ನು ಕರೆಸಿ ಅವರ ನೋವುಗಳನ್ನು ಕೇಳಬಹುದಿತ್ತು. ಆದರೆ ಸರ್ಕಾರಕ್ಕೆ ಮಾನವೀಯತೆ ನೆಲೆಯ ಯಾವ ಪ್ರಯತ್ನವೂ ತೋರಲೇ ಇಲ್ಲ. ಪೊಲೀಸರ ತುಕಡಿಯೊಂದನ್ನೇ ಕಳಿಸಿ ಗುಡಿಸಲುಗಳಲ್ಲಿದ್ದ ರೈತರನ್ನು ದಸ್ತಗಿರಿ ಮಾಡಿ

ಶಿಷ್ಟ ಕೈದಿಗಳು ದುಷ್ಟ ಪೊಲೀಸರು!

ಇತ್ತೀಚೆಗೆ ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ ಕೆಲವು ಸದಸ್ಯೆಯರು ಬಾಗೂರು ಮುಂತಾದ ಹಳ್ಳಿಗಳಿಗೆ ಭೇಟಿ ನೀಡಿ ಅಲ್ಲಿ ನಡೆದ ಪೊಲೀಸ್ ದೌರ್ಜನ್ಯವನ್ನು ಕುರಿತಂತೆ ಅಲ್ಲಿ ನೊಂದವರ ಜೊತೆ ಮಾತನಾಡಿದ್ದನ್ನು ವಿಡಿಯೋಟೇಪ್‌ನಲ್ಲಿ ಸಂಗ್ರಹಿಸಿ ಬೆಂಗಳೂರಿನ ಕೆಲವು ಆಸಕ್ತರ ಮುಂದೆ ಪ್ರದರ್ಶಿಸಿದರು. ಈ ಕಾರ್ಯಕ್ರಮಕ್ಕೆ ಬಾಗೂರಿನಿಂದ ಸುಧಾ ಮತ್ತು ಆಶಾ ಎನ್ನುವ ತರುಣಿಯರೂ ಬಂದು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಆಶಾ ಮೇಲೆ ಕೊಲೆಯ ಆಪಾದನೆ ಇದೆ. ಅದು ನಡೆದದ್ದು ಹೀಗೆ. ಆ ದಿನ ಪೊಲೀಸರು ತಾವೇ ಒಂದು ಹಳೆಯ ಜೀಪಿಗೆ ಬೆಂಕಿ ಹಚ್ಚಿ, ಅದರ ಆಪಾದನೆಯನ್ನು ರೈತರ ಮೇಲೆ ಹೊರಿಸುವ ಯತ್ನ ಮಾಡಿದರು. ಎರಡನೇ ವರ್ಷ ಪದವಿಯಲ್ಲಿ, ಚೆನ್ನರಾಯಪಟ್ಟಣ ಕಾಲೇಜಿಗೆ ಹಳ್ಳಿಯಿಂದ ಹೋಗಿಬಂದು ಮಾಡುತ್ತಾ ಓದುತ್ತಿರುವ ಆಶಾ ಆ ದಿನವೂ ಬಸ್ಸಿನಲ್ಲಿ ಬಂದಿಳಿದರು. ಬಸ್ಸನ್ನು ಹಳ್ಳಿಗೆ ಸ್ವಲ್ಪ ದೂರದಲ್ಲೇ ಪೊಲೀಸರೇ ತಡೆದು ನಿಲ್ಲಿಸಿದ್ದರಿಂದ, ಆಕೆ ನಡೆದು ಊರ ಕಡೆ ಬರುತ್ತಿದ್ದರು ಅಷ್ಟೆ. ಅವರು ಉರಿಯುತ್ತಿರುವ ಜೀಪನ್ನು ನೋಡಿದರೋ ಇಲ್ಲವೋ ಪೊಲೀಸರು ಆಶಾರನ್ನು ನೋಡಿದ್ದಷ್ಟೇ ಸಾಕಾಯಿತು. ಇದು ತೋಳ ಕುರಿಮರಿಯ ಕಥೆಗಿಂತ ನೀಚತನದ್ದು. 'ಆಶಾ ಎದುರು ನಿಂತು ಜೀಪನ್ನು ಸುಡಲು ಸಹಾಯ ಮಾಡಿದರು. ತನ್ಮೂಲಕ ಜೀಪಲ್ಲಿದ್ದವರನ್ನು ಕೊಲೆ ಮಾಡಲು ಯತ್ನಿಸಿದರು'- ಇದು ಆರೋಪ! ತನ್ನ ಹಳ್ಳಿಯಲ್ಲಿ ಏನಾಗುತ್ತಿದೆ ಎಂದು ಗ್ರಹಿಸುವಷ್ಟರಲ್ಲಿ ಆಶಾ ಮೈಮೇಲೆ ಲಾಠಿಗಳು ಬೀಸಲಾರಂಭಿಸಿದವು. ಕೆಲವೇ ಕ್ಷಣಗಳಲ್ಲಿ ದಸ್ತಗಿರಿಯೂ ಆಯಿತು. ಆಶಾ ಸ್ವಲ್ಪ ಧೈರ್ಯವಂತೆ. ಸ್ಟೇಷನಿನ್ನಲ್ಲಿ ಇನ್ಸ್‌ಪೆಕ್ಟರ್ ಅನ್ನು ಕೇಳಿಯೇ ಬಿಟ್ಟರು. ''ಹೀಗೇಕೆ ನಮ್ಮನ್ನು ಹಿಂಸಿಸುತ್ತಿದ್ದೀರಿ' ಎಂದು. ಅದಕ್ಕೆ ಉತ್ತರವಾಗಿ ಕಪಾಳಕ್ಕೆ ರಪ್ ಎನ್ನುವ ಬಡಿತಗಳು. ಗುಳಿ ಬೀಳುವ ನವಿರಾದ ಆ ಕೆನ್ನೆಗಳು ಹುಟ್ಟಿದಾಗಿನಿಂದ ಏಟು ತಿಂದಿರಲಿಲ್ಲ! ಈ ಪೊಲೀಸು ಎನ್ನುವ ಯಮದೂತನಿಗೆ ತನ್ನ ಮುಂದಿರುವ ಪುಟ್ಟ ತರುಣಿ ಮನುಷ್ಯಳು ಎಂದೇ ಅನಿಸಿರಲ್ಲಿಲ್ಲವಲ್ಲ!

ಚೆನ್ನರಾಯಪಟ್ಟಣದ ತನ್ನ ಜೈಲಿನ ಅನುಭವವನ್ನು ಆಶಾ ತನ್ನ ಮುಗ್ಧ ಮಾತುಗಳಲ್ಲಿ ಬೆರಗು ತುಂಬಿ ವಿವರಿಸುತ್ತಾರೆ. ''ನಾವೆಲ್ಲ ನಡೆಯಲಾರದ ಸ್ಥಿತಿಯಲ್ಲಿ ಜೈಲಿಗೆ ಬಂದೆವು. ಕೆಲವರಂತೂ ಜೋರಾಗಿ ನರಳುತ್ತಾ ಅಳುತ್ತಾ ಇದ್ದರು. ಅಲ್ಲಿದ್ದ ಇತರ ಕೈದಿಗಳು ನಮ್ಮನ್ನೆಲ್ಲಾ ಬಹಳ ಚೆನ್ನಾಗಿ ನೋಡಿಕೊಂಡರು. ಕೈಗೆ ಏಟು ಬಿದ್ದು ಕೈ ಎತ್ತಲಾರದವರಿಗೆ ಊಟ ತಿನ್ನಿಸಿದರು. ಅವರೆಂಜಲನ್ನು ತೆಗೆದು ಶುಚಿಮಾಡಿದರು. ಬೆನ್ನು ಮೂಳೆಗೆ ಏಟು ಬಿದ್ದು ಮೇಲೇಳಲಾರದ ಸ್ಥಿತಿಯಲ್ಲಿದ್ದವರಿಗೆ ಮಲಗಿದಂತೆಯೇ ಗಂಜಿ ಕುಡಿಸಿದರು. ಅವರು ನಮ್ಮನ್ನು ಕಂಡು ಮರುಗುತ್ತಿದ್ದರು. ಸಮಾಧಾನದ ಮಾತುಗಳನ್ನು ಹೇಳುತ್ತಿದ್ದರು. ನನಗಂತೂ ಆ ಕ್ಷಣದಲ್ಲಿ ಅನಿಸಿದ್ದು ಹೀಗೆ: ಇವರೆಲ್ಲ ಯಾವ ಯಾವ ಅಪರಾಧ ಮಾಡಿ ಜೈಲು ಸೇರಿದ್ದಾರೋ ಗೊತ್ತಿಲ್ಲ. ಆದರೆ ಆ ಕ್ಷಣಕ್ಕೆ ನಮಗೆ ಹಿತೈಷಿಗಳಾಗಿದ್ದರು. ನಿಜವಾಗಿಯೂ ಇವರು ಅಪರಾಧಿಗಳೋ, ಏನೊಂದೂ ತಿಳಿಯದ ನಮ್ಮನ್ನು ಚೆಚ್ಚಿ ಹಾಕಿರುವ ಪೊಲೀಸರು ಅಪರಾಧಿಗಳೋ ಎನಿಸುತ್ತಿತ್ತು'' ಎನ್ನುವ ಆಶಾರವರ ಮಾತನ್ನು ಕೇಳಿದಾಗ ಸಣ್ಣ ವಯಸ್ಸಿನ ಅವರ ಗಂಭೀರ ಚಿಂತನೆ ಬೆರಗು ಗೊಳಿಸುತ್ತದೆ. ಮುಂದುವರೆದ ಆಶಾ ಕೇಳುತ್ತಾರೆ ''ಪೊಲೀಸರು ಬಾಯಿ ಬಿಟ್ಟರೆ ಮುಂಡೆ, ರಂಡೆ, ಸೂಳೆ, ಅನ್ನುತ್ತಿದ್ದರು. ಬಹುಶಃ ಪೊಲೀಸರಿಗೆ ಟ್ರೈನಿಂಗ್‌ನಲ್ಲಿ ಬಯ್ಯುವುದೂ ಕಲಿಸುತ್ತಾರೋ ಏನೋ'' - ಈ ಮಾತನ್ನು ಕೇಳಿದ ಎಂಥಾ ಪ್ರಜ್ಞಾವಂತನಿಗೂ ತಾನೆಂಥ ಕೆಟ್ಟ ವ್ಯವಸ್ಥೆಯಲ್ಲಿ ಬಾಳುತ್ತಿದ್ದೇನೆ ಎಂದು ತಲೆ ತಗ್ಗಿಸುವಂತಾಗುತ್ತದೆ.

ಸುಮಾರು 400 ಜನ ಮಹಿಳೆಯರನ್ನು ಥಳಿಸಿದ್ದಾರೆ. ಯುವತಿಯರನ್ನು ಮನೆ ಅಂಗಳಕ್ಕೆ ಎಳೆದು ತಂದು ಹೊಡೆದಿದ್ದಾರೆ. ಕೆಲವು ಮಹಿಳೆಯರ ತಾಳಿಗಳನ್ನು ಮತ್ತು ಚಿನ್ನ ಸರಗಳನ್ನು ಕಿತ್ತುಕೊಂಡು ಹೊಡೆದಿದ್ದಾರೆ.

ಸುಧಾಳದ್ದು ಮತ್ತೊಂದು ಕಥೆ. ಆಕೆಗೂ ಏಟುಗಳು ಧಾರಾಳವಾಗಿ ಬಿದ್ದಿವೆ. ಎಲ್ಲರೂ ದಸ್ತಗಿರಿಯಾಗಿ ಪೊಲೀಸ್ ವ್ಯಾನ್ ಹತ್ತುವ ಮುನ್ನ ಪೊಲೀಸರ ಕಣ್ಣು ತಪ್ಪಿಸಿ ಓಡಿ ಬಂದಾಕೆ ಸುಧಾ. ಹಾಗೆ ಓಡಿಬಂದವಳು ಸುಮ್ಮನೇ ಕೂಡಲಿಲ್ಲ. ಮಕ್ಕಳನ್ನು, ಮುದುಕರನ್ನು ದಸ್ತಗಿರಿಯಾಗದವರನ್ನು ಸಂತೈಸುವ ಕೆಲಸ, ರೈತ ಮುಖಂಡರನ್ನು ಕಾಣುವ ಕೆಲಸ, ಬೆಂಗಳೂರಿಗೆ ಬಂದು ಕಾಲೇಜಿಗೆ ಸೇರಿ ಓದುವ ಕೆಲಸ, ಈ ಮಧ್ಯೆ ಸಂಘಟನೆ, ಬೀದಿನಾಟಕಗಳು, ಸಮೂಹಗೀತೆಗಳು ಎಲ್ಲ ಗುಂಪಿನಲ್ಲಿ ಸುಧಾ ಹಾಜರ್.

ಎಂಬತ್ತು ವರ್ಷದ ಮುದುಕಿಯೊಬ್ಬರು ''ಎಂಥ ಯವದೂತರಮ್ಮ ಅವರು, ನನ್ನ ಎಂಟು ವರ್ಷದ ಮೊಮ್ಮಗಳನ್ನೂ ಬಿಟ್ಟಿಲ್ಲ ನನ್ನನ್ನೂ ಬಿಟ್ಟಿಲ್ಲ ದನ ಚಚ್ಚಿದ ಹಾಗೆ ಚಚ್ಚಿದ್ದಾರಲ್ಲ! ಅದು ಸರಿ, ಅವರು ನಮ್ಮನ್ನು ಹೊಡೆ ದದ್ದು ಯಾಕೆ?'' ಎಂದು ಜಾಗೃತಿಯ ಸದಸ್ಯೆ ಯರನ್ನು ಕೇಳುತ್ತಾರೆ. ಈ ಪ್ರಶ್ನೆಗೆ ಉತ್ತರವ ನ್ನು ಆಕೆಗೆ ಅರ್ಥವಾಗುವಂತೆ ಯಾರು ವಿವರಿಸಿಯಾರು?

ತನ್ನ ಗಂಡನ ಹೆಣವನ್ನು ಮಣ್ಣು ಮಾಡುವಾಗ ಹೆಣವೊಂದನ್ನು ಬಿಟ್ಟು ಎಲ್ಲ ನೆಂಟರನ್ನೂ, ಕೊನೆಗೆ ವಿಧವೆಯನ್ನೂ ಹೆಗ್ಗಣ ಬಡಿದಂತೆ ಬಡಿದು, ಹೆಣವನ್ನು ಅವಸರದಲ್ಲಿ ಮುಚ್ಚಿಹಾಕಿಸಿದ ರೀತಿಯನ್ನು ಊರವರು ಇನ್ನೂ ಪ್ರಶ್ನಿಸುತ್ತಾರೆ. ''ಹೆಣ ಮಣ್ಣುಮಾಡಾಕೂ ಕೊಡದ ಇಂಥಾ ದರ್ಬಾರನ್ನ ಯಾವ ಕಾಲ್ದಗಾದ್ರೂ, ನೀವಾದ್ರೂ ಕಂಡಿದ್ದೇನಪ್ಪ?'' ಮಾನವೀಯತೆ ಎನ್ನುವ ಪದವೇ ಈ ಕೃತ್ಯದ ಮುಂದೆ ನಾಚಿ ಹೋಗಬೇಕು. ■

ಆ ಎಲ್ಲ ಗುಡಿಸಲುಗಳಿಗೆ ಬೆಂಕಿ ಹಚ್ಚಲಾಯಿತು. 96 ದಿನಗಳ ಒಡನಾಟದಿಂದ ತಾನೇ ನಿರ್ಮಿಸಿದ ಗುಡಿಸಲುಗಳ ಮೇಲೆ ಅತೀವ ಮಮತೆಯ ನ್ನಿಟ್ಟುಕೊಂಡಿದ್ದ ಶಂಕರಾಚಾರಿ ಎನ್ನುವ ರೈತ ತನ್ನೆದುರೇ ಬೆಂಕಿನ ಕೆನ್ನಾಲಿಗೆಗಳು ಗುಡಿಸಲನ್ನು ಕಬಳಿಸುತ್ತಿರುವುದನ್ನು ಕಂಡು ಮತಿಭ್ರಮಿತ ನಾಗಿ ತನ್ನ ಪ್ರಾಣವನ್ನೇ ಸಮರ್ಪಿಸಿಬಿಟ್ಟದ್ದು ರೈತರ ನೋವಿನ ತೀವ್ರತೆಗೆ ಸಾಕ್ಷಿಯಾಗಿದೆ.

ಹಳ್ಳಿಯ ಗಂಡಸರನ್ನೆಲ್ಲಾ ಗುಡಿಸಿ ಜೈಲು ತುಂಬಿಸಿದ ಮೇಲಾದರೂ ಪೊಲೀಸರು ಸುಮ್ಮ ನಾಗಬಹುದಿತ್ತು. ಆದರೆ ಯಾವುದೋ ವಿಕೃತ ಮನಸ್ಸಿನ ಪೊಲೀಸರ ಮಾನಸಿಕ 'ನವೆ' ಇಷ್ಟಕ್ಕೆ ತೃಪ್ತವಾಗಲಿಲ್ಲ. ಅವರ ಕ್ಷುದ್ರದೃಷ್ಟಿ ರೈತ ಮಹಿಳೆ ಯರ ಕಡೆಗೂ ತಿರುಗಿತು. ಮನುಷ್ಯರ ಪ್ರಪಂಚ ದಲ್ಲಿ ನಡೆಯಬಾರದ್ದು ನಡೆದೇ ಹೋಯಿತು!

'ಮೂಗು ಹಿಡಿದರೆ ಬಾಯಿ ತಾನಾಗೇ ತೆರೆಯುತ್ತದೆ' ಎನ್ನುವ ಹಳೆಯ ಗಾದೆ ಮಾತಿದೆ. ಅದರಂತೆ ಆ ಮನೆಯವರನ್ನು ಹಿಂಸಿಸಿದರೆ ರೈತರು ತಾವಾಗಿಯೇ ತಪ್ಪಾಗಿ ಪರಿಹಾರ ಕೇಳದೇ ಸುಮ್ಮನಿರುತ್ತಾರೆ ಎನ್ನುವ ಊಹೆ ಅಧಿಕಾರಸ್ಥರದ್ದು. ಈ ಊಹೆಗೆ ಇತರ ಎಲ್ಲ ಕೆಟ್ಟ ಮನಸ್ಸಿನ ಪೊಲೀಸ್ ಶಕ್ತಿಯೂ ಸೇರಿಕೊಂಡು ಹಳ್ಳಿಗಳಲ್ಲಿ ನಿರಾತಂಕವಾಗಿ ದಾಂದಲೆ ನಡೆಯಿತು.

ಜಯಮ್ಮ ಎಂಬ ಅಮಾಯಕ ಮಹಿಳೆಯ ಮಾತು ಕೇಳಿದರೆ ಪ್ರಜ್ಞಾವಂತರ ಎದೆ ನಡುಗಿ ಹೋಗುತ್ತದೆ. ನಾವೆಂಥ ಕೆಟ್ಟ ವ್ಯವಸ್ಥೆಯಲ್ಲಿ ಹೇಡಿಗಳಂತೆ ಬದುಕುತ್ತಿದ್ದೇವೆ ಎಂದು ನಮ್ಮ ಮೇಲೇ ನಮಗೆ ಕೋಪ ಬರುತ್ತದೆ. ಜಯಮ್ಮ ಬಾಗೂರಿನ ಕೃಷಿ ಕಾರ್ಮಿಕಳು. ಗಂಡ ನಿಷ್ಪ್ರಾಣಿ. ಟೈಫಾಯಿಡ್ ಜ್ವರದಿಂದ ಬಳಲುತ್ತಿದ್ದ ಮಗ, ವಯಸ್ಸಿಗೆ ಬಂದ ಮಗಳು. ಈ ಎಲ್ಲರ ಹೊಟ್ಟೆ ಜಯಮ್ಮನ ಕೂಲಿ ಹಣದಿಂದಲೇ ತುಂಬ ಬೇಕು. ಇವಳ ಮನೆ ಬಾಗಿಲು ಪೂರಾ ಮುರಿದ ಪೊಲೀಸರು ಜಯಮ್ಮನನ್ನು ಹಿಗ್ಗಾ ಮುಗ್ಗಾ ಎಳೆದಾಡಿ ಚಚ್ಚಿದ್ದಾರೆ. ಮಂಡಿಗಳು ಇಂದಿಗೂ ಚಾಚಲು ಬಾರದಂತೆ ಜಖಂಗೊಂಡಿವೆ. ಯಾವುದೋ ಪೊಲೀಸ್ ಜೀಪು ಸುಟ್ಟದ್ದಕ್ಕೆ ಈಕೆಯ ಮೇಲೆ ಕೊಲೆ ಪ್ರಯತ್ನಕ್ಕೆ ಸೀಮೆ ಎಣ್ಣೆ ಒದಗಿಸಿದವಳು ಎಂದು ಕೇಸ್ ಹಾಕಲಾಗಿದೆ. 'ಆಯ್ಕೊಂಡು ತಿನ್ನುವ ಕೋಳಿಗೆ ಕಾಲುಮುರಿದಂತೆ' ತನ್ನ ಕೂಲಿ ಕೆಲಸಕ್ಕೂ ಸಂಚಕಾರ ಉಂಟಾದ ಸ್ಥಿತಿಯಲ್ಲಿರುವ ಜಯಮ್ಮ ಕೇಳುತ್ತಾಳೆ ''ನಮಗೆ ಕೊಡುವುದೇ ತಿಂಗಳಿಗೆ ಎರಡು ಲೀಟರ್ ಸೀಮೆ ಎಣ್ಣೆ. ಈ ಊರಿನಲ್ಲಿ 20 ದಿನ ಕರೆಂಟ್ ಇರುವುದಿಲ್ಲ. ನಾವು ಬಡವರು. ಬುಡ್ಡಿಯೂ ಉರಿಸಿಕೊಂಡು ಒಲೆಯನ್ನೂ ಉರಿಸುವುದಕ್ಕೆ ಎರಡು ಲೀಟರ್ ಸೀಮೆ ಎಣ್ಣೆ ಎಲ್ಲೂ ಸಾಕಾಗುವುದಿಲ್ಲ. ನಾನು ಜೀಪು ಸುಡಲು ಸೀಮೆ ಎಣ್ಣೆ ಎಲ್ಲಿಂದ ತರಲಿ? ನಾವು ಬಡವರಾದರೂ ಮಾನವಂತರಾಗಿ ಬದುಕಿದವರು. ನನ್ನ ಗಂಡನೇ ನನ್ನನ್ನು ಒಂದು ದಿನ ಹೊಡೆದಿರಲಿಲ್ಲ. ಈಗ ಪೊಲೀಸರಿಂದ ಹೀಗೆ ಹೊಡೆತ ತಿಂದದ್ದಾಯಿತು. ಇಷ್ಟೆಲ್ಲಾ ಆಗಿಯೂ ಇನ್ನೂ ಬದುಕಿರಬೇಕೇ'' ಎಂದು ಅಳುವ ಆಕೆ ದುಃಖದಿಂದ ಅವಮಾನದಿಂದ ಕುಗ್ಗಿಯೇ ಹೋಗಿದ್ದಾಳೆ. ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಯಲ್ಲಿದ್ದಾಳೆ. ತಮ್ಮನ ಮನೆಯ ಸಮಾರಂಭಕ್ಕೂ ಈಕೆ ನಾಚಿಕೆಯಿಂದ ಹೋಗಲೇ ಇಲ್ಲ. ಈಗ ಈಕೆಯ ಮುಂದೆ ಬೃಹದಾಕಾರದ ಸಮಸ್ಯೆ ಇರುವುದು ಏನೆಂದರೆ ತಿಂಗಳಿಗೆರಡು ಬಾರಿ ಚೆನ್ನರಾಯಪಟ್ಟಣದ ಪೊಲೀಸು ಠಾಣೆಗೆ ಹೋಗಿ ಹೆಬ್ಬೆಟ್ಟು ಒತ್ತಿ ಬರಬೇಕು ''ಅದಕ್ಕೆ ಇಪ್ಪತ್ತು ರೂಪಾಯಿ ಖರ್ಚಾಗುತ್ತದೆ. ಈ ಹಣವನ್ನೆಲ್ಲಿಂದ ತರಲಿ'' ಎನ್ನುವ ಆಕೆಯ ಪ್ರಶ್ನೆ ಕೇಳುಗರ ಕರುಳಲ್ಲಿ ಕತ್ತರಿಯನ್ನಾಡಿಸಿದಂತಾಗುತ್ತದೆ.

ಈವರೆಗೂ ಈ ಹಳ್ಳಿಗೆ ಯಾವ ರಾಜಕಾರಣಿಯೂ ತಲೆ ಹಾಕಿಲ್ಲ. ಇಷ್ಟೆಲ್ಲ ದೌರ್ಜನ್ಯ ನಡೆಸಿದ ಪೊಲೀಸರನ್ನೂ ಸರ್ಕಾರ ದಂಡಿಸಿಲ್ಲ. ಅವರೆಲ್ಲ ಮಹಾಯುದ್ಧದಲ್ಲಿ ಜಯಶಾಲಿಯಾದಂತೆ ನಗುತ್ತಾ ತಾವು ನಡೆಸಿದ ಮಹಾ ಕಾರ್ಯವನ್ನು ಕಥೆ ಮಾಡಿ ಹೇಳಿಕೊಂಡು ತಿರುಗಾಡುತ್ತಿದ್ದಾರೆ. ದುಃಖದಲ್ಲಿ ಅವಮಾನದಲ್ಲಿ ಕುದಿಯುತ್ತಿರುವ ಈ 42 ಹಳ್ಳಿಯ ಜನ ಮಾತ್ರ ರಾಜಕೀಯವಾಗಿ ಜಾಗೃತರಾಗುತ್ತಿದ್ದಾರೆ. ಅಷ್ಟೇ ಅಲ್ಲ, ಸಂಘಟನೆಯಲ್ಲೂ ಆಸಕ್ತಿ ವಹಿಸುತ್ತಿದ್ದಾರೆ.

ಹಳ್ಳಿಯ ಹಿರಿಯರೊಬ್ಬರು ವ್ಯಂಗ್ಯವಾಗಿ ಹೇಳುವ ಮಾತನ್ನು ಇಲ್ಲಿ ಸ್ಮರಿಸುತ್ತಾ ಲೇಖನ ಮುಗಿಸುತ್ತೇನೆ: 'ನಾವೆಲ್ಲ ಓಟುಕೊಟ್ಟು ಮಣ್ಣಿನ ಮಗನನ್ನು ಪ್ರಧಾನಿ ಮಾಡಿದೆವಲ್ಲ! ಅದಕ್ಕೇ ಸರ್ಕಾರ ಈಗ ನಮಗೆಲ್ಲಾ ಮಣ್ಣು ತಿನ್ನಿಸುತ್ತಿದೆ''

■



ಸುಧಾ, ಆಶಾ:
ಪೊಲೀಸ್ ದೌರ್ಜನ್ಯದ ವಿರುದ್ಧ ದನಿಯೆತ್ತಿರುವ ಧೀರೆಯರು




ಶ್ರೀಮತಿ ಸುಶೀಲ – ಶಂಕರಾಚಾರಿ ಅವರ ಪತ್ನಿ. ಗಂಡನ ಶವವನ್ನು ಮಣ್ಣು ಮಾಡಲು ಸಹ ಆಕೆಗೆ ಸಮಯ ನೀಡಲಾಗಲಿಲ್ಲ. ಬದಲಾಗಿ ಲಾಠಿಯ ಪ್ರಹಾರದ ಸುರಿಮಳೆ ಆಯಿತು.

ಸಂವೇದನೆ

■ ಎಂ. ಎಸ್. ಮೂರ್ತಿ

'ವಿನ್ಯಾಸ', ನಂ. 132, 1ನೇ ಮಹಡಿ ಗಾಂಧಿ ಬಜಾರ್ ಸರ್ಕಲ್, ಬಸವನಗುಡಿ, ಬೆಂಗಳೂರು-4

ನಮ್ಮ ಪ್ರೀತಿಯ 'ಬೆಂಗಳೂರು'



ಶೀರ್ಷಿಕೆ: 'ದಿ ಬೆಂಗಳೂರು' ಸೈಜು: 28 X 20 ಸೆಂ. ಮೀ.

ಕನಸಿನಂತೆ ಕಾಣುವ ಈ ಬೆಂಗಳೂರು ನಗರ ತನ್ನ ಮಡಿಲೊಳಗೆ ಬದುಕುವ ಜನರನ್ನು ತಂದೆಯಂತೆ ಕಾಯುತ್ತಿದೆ. ಜನಸಾಮಾನ್ಯರಿಗೆ ಭ್ರಮೆಗಳ ತೂಕಡಿಕೆಯಿಂದ ಎಚ್ಚರಿಸಿ ವಾಸ್ತವವನ್ನು ನಿಷ್ಠುರವಾಗಿ ಕಲಿಸುತ್ತದೆ. ಒಂದು ನಿರ್ದಿಷ್ಟ ವಿಶ್ಲೇಷಣೆಗೆ ಸಿಗದ ಈ ನಗರದಲ್ಲಿ ಸಿಗುವ ಎಲ್ಲ ರೀತಿಯ ಅನುಭವಗಳೂ ಮನುಷ್ಯನಿಗೆ ಒಂದಲ್ಲ ಒಂದು ರೀತಿಯಲ್ಲಿ ಉಪಯೋಗಕ್ಕೆ ಬರುವಂತಹವು. ಅವು ಅಂತಹ ಅವಕಾಶಗಳನ್ನು ಬಳಸಿಕೊಳ್ಳುವವನ ಆಲೋಚನಾ ಮೌಲ್ಯವನ್ನವಲಂಬಿಸಿರುತ್ತದೆ. ಇಲ್ಲಿ ದುಷ್ಟರು, ನೀಚರು, ಮೂರ್ಖರು, ರಾಕ್ಷಸರು, ಮುಗ್ಧರು, ಪ್ರೀತಿಸುವವರು, ಕ್ರಿಯಾಶೀಲರು, ಸೃಜನಶೀಲರು, ಶ್ರಮಜೀವಿಗಳು, ನಂಬಿಸುವವರು, ನಂಬುವವರು, ವಂಚಕರು ಎಲ್ಲರೂ ಬದುಕುತ್ತಿದ್ದಾರೆ. ಹೀಗೆ ಬರೆದರೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ- ಬೆಂಗಳೂರಿನಂತೆ. ಬಾಲ್ಯದಿಂದಲೂ ನಾನು ಕಂಡು, ಅನುಭವಿಸಿದ ಈ ಸಂಕೀರ್ಣ ನಗರ ನನ್ನ ಬಾಲ್ಯ ಸ್ನೇಹಿತನಂತೆ. ಎಂದೂ ಮೋಸ ಮಾಡದೆ, ನಿಷ್ಠುರವಾಗಿ ಬದುಕನ್ನು ಕಲಿಸಿದೆ. ಇಂತಹ ಮಿತ್ರನನ್ನು ಯಾರಿಗಾದರೂ ಪರಿಚಯಿಸುವುದೆಂದರೆ ನನಗೆ ಹೆಮ್ಮೆ ಎನಿಸುತ್ತದೆ; ಯಾಕೆಂದರೆ ಒಮ್ಮೊಮ್ಮೆ ಅಂತಹ ಅವಕಾಶ ಸಿಕ್ಕಾಗಲೂ ಒಂದು ರೀತಿಯ ಹೊಸ ಆಯಾಮ ಈ ನಗರದ ಕುರಿತು ತೆರೆದುಕೊಳ್ಳುತ್ತದೆ. ಬದುಕಿಗೆ ಅನಾವಶ್ಯಕ ಅರ್ಥಗಳನ್ನು ಕೊಡದೆ ತೀರಾ ಸರಳವಾಗಿ ಬದುಕನ್ನು ಕಾಣುವಂತೆ ಮಾಡುವ ಈ ನಗರ ನನಗೆ ಇಷ್ಟ. ಮೊನ್ನೆ ಫ್ರಾನ್ಸ್ ದೇಶದಿಂದ 'ಅಲೈನ್' ಎಂಬ ಹೆಸರಿನ ನನ್ನ ಹಿರಿಯ ಮಿತ್ರರೊಬ್ಬರು ತಮ್ಮ ದೇಶದ ಸುಮಾರು ಮೂವತ್ತು ಪ್ರವಾಸಿಗರೊಂದಿಗೆ ಭಾರತ ನೋಡಲು ಬಂದಿದ್ದರು. ಎಲ್ಲಾ ಕಡೆ ಸುತ್ತಾಡಿ ಬೆಂಗಳೂರಿಗೂ ಬಂದಿದ್ದರು. ಇಲ್ಲಿ ಒಂದೆರಡು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಿ ಆ ದಿನ ಮಧ್ಯಾಹ್ನ ತಾಜ್ ಹೋಟೆಲ್‌ನಲ್ಲಿ ಔತಣ ಏರ್ಪಡಿಸಿದ್ದರು. ಆ ಔತಣ ಕೂಟದಲ್ಲಿ ನನ್ನ ಒಂದು ಪಕ್ಕದಲ್ಲಿ ನನ್ನ ಮಿತ್ರರಾದ 'ಅಲೈನ್', ಇನ್ನೊಂ ದು ಪಕ್ಕದಲ್ಲಿ ಅವರ ಮಿತ್ರರಾದ ಡಾ.ಫಿಲಿಪ್ಸ್ ಕುಳಿತಿದ್ದರು. ಅವರು ಆ ದಿನ ಬೆಳಿಗ್ಗೆಯಷ್ಟೇ ಪರಿಚಯವಾಗಿ ನನ್ನ ಕಲಾಕೃತಿಗಳನ್ನು ಕಂಡು ಮಾತನಾಡಿಸಿದರು. ಬೆಂಗಳೂರನ್ನು ಕುರಿತು ನಾನು ರಚಿಸುತ್ತಿರುವ ಕಲಾಕೃತಿಗಳಲ್ಲೊಂದು ತುಂಬಾ ಇಷ್ಟಪಟ್ಟು ಕೊಂಡುಕೊಂಡಿದ್ದರು. ಪಕ್ಕದಲ್ಲಿ ಕುರಿತ ಡಾ.ಫಿಲಿಪ್ಸ್ ಅವರಿಗೆ ಸುಮಾರು 65 ವರ್ಷ ವಯಸ್ಸಾಗಿರಬೇಕು- ಇಂಗ್ಲಿಷ್ ಬರುವುದಿಲ್ಲ, ನಿಧಾನವಾಗಿ ಹೇಳಿದರೆ ಸ್ವಲ್ಪ ಅರ್ಥವಾಗಬಹುದು. ಅವರ ಬಗ್ಗೆ, ಅವರ ಹೆಂಡತಿ ಕಲಾಕೃತಿ ರಚಿಸುವ ಬಗ್ಗೆ, ತಮ್ಮ ಮಕ್ಕಳ ಬಗ್ಗೆ ಹೇಳುತ್ತಾ ಹೋದರು. ನನಗೆ ಫ್ರೆಂಚ್ ಭಾಷೆ ಬರುವಷ್ಟೇ ಅವರಿಗೆ ಇಂಗ್ಲಿಷ್ ಬರುತ್ತಿತ್ತು. ಅವರ ಹರುಕು-ಮುರುಕು ಇಂಗ್ಲಿಷ್‌ನೊಂದಿಗೆ ನನ್ನ ಕೆಟ್ಟ ಫ್ರೆಂಚ್ ಸೆಣಸಾಡುತ್ತಿತ್ತು. ಸುಮಾರು ಒಂದೂವರೆ ಗಂಟೆ ಅವಧಿಯ ಆ ಔತಣ ಕೂಟದಲ್ಲಿ

ನನಗೆ ಹೊಟ್ಟೆ ತುಂಬದಿದ್ದರೂ ಮನಸ್ಸು ತುಂಬಿತ್ತು. ಡಾ.ಫಿಲಿಪ್ಸ್ ವೃತ್ತಿಯಲ್ಲಿ ಪ್ರಪಂಚದಲ್ಲೇ ಬಹುದೊಡ್ಡ ಹೃದಯ ತಜ್ಞರು. ಅವರ ಆಸಕ್ತಿ, ನಡಾವಳಿ ಮತ್ತು ಖಚಿತತೆ ನನಗೆ ಬಹಳ ಇಷ್ಟವಾಗಿತ್ತು. ನನ್ನ ಕಲಾಕೃತಿಗಳನ್ನು ನೋಡುವಾಗ ತಮ್ಮ ಇತರ ಸ್ನೇಹಿತರಂತೆ ಕಲಾಕೃತಿಗಳನ್ನು ಹುಡುಕಾಡದೆ ನೇರ ನನ್ನ 'ದಿ ಬೆಂಗಳೂರು' ಕಲಾಕೃತಿಯನ್ನು ಆರಿಸಿದರು. ನೋಡಿದರು. ತಕ್ಷಣ ಖರೀದಿಸಿಯೂ ಬಿಟ್ಟರು -ಚೌಕಾಸಿ ಮಾಡದೆ. ಸಂಜೆ ಅವರನ್ನು ಬೀಳ್ಕೊಟ್ಟ ಮೇಲೆ ಯೋಚಿಸುತ್ತಿದ್ದೆ. ಇಷ್ಟು ದೊಡ್ಡ 'ಹೃದಯ ತಜ್ಞರಾಗಿ' ಇಂಗ್ಲಿಷ್ ಭಾಷೆಯ ಅಗತ್ಯ ಕಾಣದ ಅವರು ಬೆಳೆದದ್ದು ನನಗೆ ಆಶ್ಚರ್ಯವಾಗಿತ್ತು. ನಮ್ಮ ಕನ್ನಡ ಭಾಷೆಗೆ ಹೋಲಿಸಿದರೆ ಅವರಲ್ಲಿ ಎಲ್ಲಾ ಪ್ರಾಪಂಚಿಕ ವಿಷಯಗಳ ಬಗ್ಗೆಯೂ ತಮ್ಮ ಭಾಷೆಯಲ್ಲಿ ಗ್ರಂಥಗಳು ಸಿಗುವ ಹಾಗೆ ಮಾಡಿಕೊಂಡಿದ್ದಾರೆ. ವಿಜ್ಞಾನ, ಸಾಹಿತ್ಯ, ಕಲೆ, ತಂತ್ರಜ್ಞಾನ ಯಾವುದೇ ವಿಷಯಗಳ ಬಗ್ಗೆ ಕೂಲಂಕಷ ಮಾಹಿತಿ ದೊರೆತರೆ ಇತರ ಭಾಷೆಯ ಅಗತ್ಯ ಇರುವುದಿಲ್ಲ. ತಮ್ಮ ಕ್ಷೇತ್ರದಲ್ಲಿ ಉನ್ನತವಾಗಿ ಬೆಳೆಯಲು ಇತರ ಭಾಷೆಯ ಎರವಲು ಬೇಕಾಗುವುದಿಲ್ಲ. ಅಂತಹ ಸಾಮಾಜಿಕ ಸಾಂಸ್ಕೃತಿಕ ಸಿದ್ಧತೆ ಫ್ರೆಂಚ್ ದೇಶದಲ್ಲಿ ಆಗಿದೆ.

ನಮ್ಮಲ್ಲಿ ಡಾ. ಶಿವರಾಮ ಕಾರಂತರು ಹೇಳುತ್ತಿದ್ದುದು ನೆನಪಾಯಿತು. "ನಮ್ಮ ಕನ್ನಡ ಭಾಷೆ ಬೆಳೆಯಬೇಕಾದರೆ ಕನ್ನಡದ ಪ್ರತಿಯೊಂದು ಕ್ಷೇತ್ರದ ವಿದ್ವಾಂಸರು ಅವರವರ ಕ್ಷೇತ್ರದ ಸಾಧನೆಗಳ, ಆವಿಷ್ಕಾರಗಳ ಕುರಿತು ಕನ್ನಡ ಭಾಷೆಯಲ್ಲಿ ಗ್ರಂಥ ರಚಿಸಬೇಕು. ಅವು ನಮ್ಮ ಮಕ್ಕಳಿಗೆ ತಲುಪುವಂತಾಗಬೇಕು. ಆಗ ನಾನು ವಿರಮಿಸುತ್ತೇನೆ" ಎಂದಿದ್ದರು. ತುಂಬಾ ಸತ್ಯವಾದ ವಾಸ್ತವವಾದ ಮಾತು. ನಾವು ಬದುಕುವ ಈ ಸುಂದರ ನಗರ ಸತ್ವಪೂರ್ಣವಾಗುವುದು ಇಲ್ಲಿ ಬಾಳಿ ಬದುಕಿ ಮುಂದಿನ ಜನಾಂಗವನ್ನು ಬೆಳೆಸುವ ಕನ್ನಡದ ಜನರು ಬೆಳೆದಾಗ.

ಥಳುಕಿನ ರೂಪಾಂತರವಾಗುತ್ತಿರುವ 'ಬೆಂಗಳೂರು' ನಗರದಲ್ಲಿ ನಾವೆಲ್ಲರೂ ಬೌದ್ಧಿಕವಾಗಿ ಬೆಳೆಯಬೇಕು. ಆಗ ನಗರ ನಿಜವಾಗಿ ಜೀವಂತವಾಗಿರುತ್ತದೆ. ಇಲ್ಲಿ ಕೇವಲ ಭಾಷೆಯ ಬಗ್ಗೆ ಹುಚ್ಚು ಅಭಿಮಾನವಿರಿಸಿಕೊಳ್ಳುವುದರಿಂದ ಈ ನಗರ ಉಳಿಯುವುದಿಲ್ಲ. ನಮ್ಮ ಭಾಷೆಯ ಮೂಲಕ ನಮ್ಮ ಬೌದ್ಧಿಕ ಬೆಳವಣಿಗೆಯಾಗಬೇಕು. ಅಂಥ ಬೌದ್ಧಿಕ ಬೆಳವಣಿಗೆ ನಮ್ಮ ನಮ್ಮ ಬದುಕಿನ ಕ್ಷೇತ್ರಗಳನ್ನು ಶ್ರೀಮಂತಗೊಳಿಸಬಲ್ಲದು. ■

ವಯಸ್ಕರಿಗಾಗಿ

■ ಡಾ. ವಸುಂಧರಾ ಭೂಪತಿ



ಬಿಳಿ ಸೆರಗು

ಈಗ ಪಿ.ಯು.ಸಿ. ಓದುತ್ತಿರುವೆ. ಋತುಮತಿಯಾಗಿ 4-5 ವರ್ಷಗಳಾಗಿವೆ. ನಾನು ದೊಡ್ಡವಳಾದಾಗಿನಿಂದಲೂ ಪ್ರತಿದಿನ ಬಿಳಿ ಸೆರಗು (White Bleeding) ಆಗುತ್ತಲೇ ಇದೆ. ನಿಯಮಿತವಾಗಿ ಎಂ.ಸಿ. ಕೂಡಾ ಆಗುತ್ತಿದೆ. ಎಂ.ಸಿ. ಆಗಿ 5 ದಿನಗಳ ನಂತರ ಮತ್ತೆ ಬಿಳಿ ಸೆರಗು ಶುರುವಾಗುತ್ತದೆ. ಅನೇಕ ಕಡೆ ವಿಚಾರಿಸಿ ಔಷಧಿ ತೆಗೆದುಕೊಂಡರೂ ಕಡಿಮೆಯಾಗಿಲ್ಲ. ಇದರಿಂದ ಜೀವನವೇ ಬೇಸರವಾಗಿದೆ. ನಿಮ್ಮ ಸಲಹೆಗಾಗಿ ಕಾಯುತ್ತಿರುವೆ.

-ವಿದ್ಯಾರ್ಥಿನಿ, ಊರುಬೇಡ.

ಸಲಹೆ

ಎಲ್ಲರಲ್ಲೂ ಯೋನಿಯಿಂದ ಅಲ್ಪ ಪ್ರಮಾಣದಲ್ಲಿ ಬಿಳಿದ್ರವ ಸ್ರವಿಸುವುದು ಸಹಜ ಹಾಗೂ ಸಾಮಾನ್ಯ. ಆದಕ್ಕಾಗಿ ಚಿಂತಿಸುವುದು ಬೇಡ. ಆದರೆ ಈ ಬಿಳಿ ದ್ರವ ಅತಿಯಾಗಿ ಸ್ರವಿಸಿದರೆ, ಕೆಟ್ಟವಾಸನೆಯಿಂದ ಕೂಡಿದ್ದರೆ ಹಾಗೂ ಇದರಿಂದ ಯೋನಿಯಲ್ಲಿ ನವೆಯಾಗುತ್ತಿದ್ದರೆ ಮಾತ್ರ ಚಿಕಿತ್ಸೆ ತೆಗೆದುಕೊಳ್ಳಲೇಬೇಕಾಗುತ್ತದೆ. ಈ ತರಹದ ಲಕ್ಷಣಗಳು ನಿಮಗಿದ್ದಲ್ಲಿ ಸ್ತ್ರೀರೋಗ ತಜ್ಞ ವೈದ್ಯರನ್ನು (ಗೈನಾಕಾಲ ಜಿಸ್ಟ್) ಸಂಪರ್ಕಿಸಿ ಚಿಕಿತ್ಸೆ ಪಡೆಯಿರಿ.

ನಡೆಸಲೇಬೇಕೆ?

ನಾನೊಬ್ಬ ಯುವಕ. ನನ್ನ ಪ್ರಶ್ನೆಗಳು ಹೀಗಿವೆ:

ಮದುವೆಯಾದ ನಂತರ ಪತಿ-ಪತ್ನಿಯರು ಲೈಂಗಿಕ ಕ್ರಿಯೆ ನಡೆಸಲೇಬೇಕೆ? ಈ ಕ್ರಿಯೆ ನಡೆಸಿದರೆ ಮಾತ್ರ ಮಕ್ಕಳು ಹುಟ್ಟುತ್ತಾರೆಯೇ? ಈ ಕ್ರಿಯೆಯಲ್ಲಿ ತೊಡಗದಿದ್ದರೆ ಏನಾಗುತ್ತೆ?

-ಓದುಗ, ಊರುಬೇಡ.

ಸಲಹೆ

ಮಕ್ಕಳು ಬೇಕೆಂದರೆ ಪತಿ ಪತ್ನಿಯರು ಲೈಂಗಿಕ ಕ್ರಿಯೆ ನಡೆಸಲೇಬೇಕು. ದೈಹಿಕ ಸುಖ ಹಾಗೂ ಮಾನಸಿಕ ನೆಮ್ಮದಿಯನ್ನು ಪತಿ ಪತ್ನಿಯರಲ್ಲಿ ಉಂಟು ಮಾಡಿ, ಒಬ್ಬರನ್ನೊಬ್ಬರು ಅರಿತು ಬೆರೆತು ಬಾಳುವುದಕ್ಕೆ ಹಾಗೂ ಸಂತಾನೋತ್ಪತ್ತಿಗಾಗಿ ಲೈಂಗಿಕ ಕ್ರಿಯೆ ಅತ್ಯಂತ ಅವಶ್ಯಕ. ನಿಮಗೆ ಲೈಂಗಿಕ ಕ್ರಿಯೆ ಬೇಡವೆನ್ನಿಸಿದಲ್ಲಿ ಮದುವೆಯಾಗುವ ಆವಶ್ಯಕತೆಯೇ ಇಲ್ಲ.

ಇದು ಸಹಜವೇ

ಲೈಂಗಿಕ ವಿಷಯ ಓದಿದಾಗ, ಬೇರೆಯವರು ಈ ಬಗ್ಗೆ ಮಾತನಾಡಿದಾಗ, ರಾತ್ರಿ ಇಂಥ ವಿಷಯಗಳು ನೆನಪಾದರೆ ನನ್ನ ಜನನಾಂಗ ಉದ್ರೇಕಗೊಂಡು ಆದರಲ್ಲಿ ನೀರು ಬರುತ್ತದೆ. ಇದು ಸಹಜವೇ? ಪರಿಹಾರ ಸೂಚಿಸಿ.

-ಹೆಸರು-ಊರುಬೇಡ.


ಸಲಹೆ

ಲೈಂಗಿಕ ವಿಷಯಗಳ ಬಗ್ಗೆ ಯೋಚಿಸಿದಾಗ ಹಾಗಾಗುವುದು ಸಾಮಾನ್ಯ ಹಾಗೂ ಸಹಜವಾದುದು. ಆದಕ್ಕಾಗಿ ಚಿಂತಿಸುವ ಅವಶ್ಯಕತೆಯಿಲ್ಲ.

ಆತ ತುಂಬಾ ಸೆಕ್ಸಿ!

ನನ್ನ ಸಮಸ್ಯೆ ಹೇಳಿಕೊಳ್ಳಲು ನನಗೆ ಬಹಳ

ವಯಸ್ಕರ
ಸಂದೇಹ ಸಲಹೆ



ನಾಚಿಕೆಯಾಗುತ್ತಿದೆ. ಆದರೂ ನೀವೂ ಒಬ್ಬ ಹೆಣ್ಣುಮಗಳು, ನನ್ನ ತಾಯಿ ಸಮಾನ ಎಂದು ಭಾವಿಸಿ ಬರೆಯುತ್ತಿದ್ದೇನೆ. ನನ್ನ ವಯಸ್ಸು 22 ವರ್ಷ. ಒಬ್ಬ ಹುಡುಗನೊಂದಿಗೆ ನಿಶ್ಚಿತಾರ್ಥ ಆಗಿದೆ. ಆತ ತುಂಬಾ ಸೆಕ್ಸಿ. ನನ್ನ ಎದೆ ತುಂಬಾ ಚಿಕ್ಕದಾಗಿದೆ. ಮೊಲೆತೊಟ್ಟು ಎದ್ದು ಕಾಣುವಂತಿಲ್ಲ. ಆ ಹುಡುಗ ಯಾರೂ ಇಲ್ಲದ ಸಮಯದಲ್ಲಿ ನಮ್ಮ ಮನೆಗೆ ಬಂದಿದ್ದ. ಆತ ಏಕಾಂತದಲ್ಲಿ ನನ್ನ ಬ್ರಾ ಬಿಚ್ಚಿದಾಗ ಏನೋ ಒಂದು ತರಹ ಆನಂದ. ಹತ್ತು ನಿಮಿಷಗಳ ನಂತರ ಬಟ್ಟೆ ಸರಿಪಡಿಸಿಕೊಂಡೆ. ಆಗ ಆತ ಹೇಳಿದ್ದು: ''ನನಗೆ ನಿನ್ನ ಬ್ರೆಸ್ಟ್ ನೋಡಿದರೆ ಮೂಡ್ ಬರೋಲ್ಲ. ದಯವಿಟ್ಟು ಯಾರಾದರೂ ಮಹಿಳಾ ವೈದ್ಯರಲ್ಲಿ ತೋರಿಸು.'' ನನಗೆ ವೈದ್ಯರಲ್ಲಿ ಹೋಗಲು ನಾಚಿಕೆ. ಈ ಬಗ್ಗೆ ನನ್ನ ಸ್ನೇಹಿತೆಯರಲ್ಲಿ ಚರ್ಚಿಸಿದಾಗ, ''ಎಲ್ಲಾ ಹುಡುಗರು ಬ್ರೆಸ್ಟ್‌ನ್ನು ಲೈಕ್ ಮಾಡ್ತಾರೆ. ಆದೇ ನಿನಗೆ ಇಲ್ಲ'' ಎಂದು ರೇಗಿಸುತ್ತಾರೆ. ನನಗೆ ನನ್ನ ಮೊಲೆಗಳ ಗಾತ್ರ ಹೆಚ್ಚಾಗಬೇಕು. ಮೊಲೆ ತೊಟ್ಟುಗಳು ಎಲ್ಲ ಹೆಂಗಸರಂತೆ ಎದ್ದುಕಾಣಬೇಕು. ಆದಕ್ಕಾಗಿ ಏನು ಮಾಡಬೇಕು? ನನ್ನ ತೂಕ 45 ಕೆ.ಜಿ. ನಾನು ಶುದ್ಧ ಶಾಕಾಹಾರಿ. ನೀವು ಕೂಡಲೇ ಉತ್ತರಿಸದಿದ್ದರೆ ನನ್ನ ಮದುವೆ ರದ್ದುಪಡಿಸಿಕೊಳ್ಳುವೆ.

-ಹೆಸರು ಬೇಡ, ಬೆಂಗಳೂರು.

ಸಲಹೆ

ಚಿಕ್ಕಮೊಲೆಗಳೇ ಹೆಚ್ಚು ಆಕರ್ಷಕ ಎಂದು ನಿಮಗೆ ತಿಳಿದಿಲ್ಲವೆಂದು ಕಾಣುತ್ತದೆ. ಗಂಡ, ಹೆಂಡತಿಯರ ಮಧ್ಯೆ ಪ್ರೀತಿ ಹಾಗೂ ಲೈಂಗಿಕ ಭಾವನೆಗಳು ಮೂಡುವುದಕ್ಕೆ ಮೊಲೆಗಳ ಗಾತ್ರ ಖಂಡಿತ ಅಡ್ಡಿಯಾಗಲಾರದು. ಒಬ್ಬರಿಗೊಬ್ಬರು ಸರಸ ಸಂಭಾಷಣೆ, ಚುಂಬನ, ಆಲಿಂಗನಗಳಿಂದ ಆನಂದ ಅನುಭವಿಸಬಹುದು. ಇನ್ನು ಮೊಲೆ ತೊಟ್ಟು ನೀವು ಮದುವೆಯಾಗಿ ಗರ್ಭಿಣಿಯಾದ ಮೇಲೆ ತನ್ನಿಂದ ತಾನೇ ಎದ್ದು ಕಾಣುತ್ತದೆಯಲ್ಲದೇ, ಮೊಲೆಗಳು ಗಾತ್ರದಲ್ಲಿ ಸ್ವಲ್ಪ ದೊಡ್ಡವಾಗುತ್ತವೆ. ಆದಷ್ಟು ಬೇಗ ಮದುವೆಯಾಗಿ ಸುಖಕರವಾಗಿ ಬಾಳಿ.

ಸುರಕ್ಷಿತ ದಿನಗಳು

ಕಾಮವನ್ನು ಹತೋಟಿಯಲ್ಲಿಡಲು ಏನು ಮಾಡಬೇಕು? ಹೆಂಡತಿ ಮುಟ್ಟಾದ ನಂತರ ಯಾವ ದಿನಗಳಲ್ಲಿ ಸಮಾಗಮ ನಡೆಸಿದರೆ ಮಕ್ಕಳಾಗುತ್ತವೆ? ಮಕ್ಕಳಾಗದಂತೆ ನೋಡಿಕೊಳ್ಳಲು ಸುರಕ್ಷಿತ ದಿನಗಳಾವುವು?

-ಶ್ರೀಪಾದ ಅನವಾಲ, ಬಾಗಲಕೋಟೆ.

ಸಲಹೆ

ಯೋಗ, ಧ್ಯಾನ ಮುಂತಾದವುಗಳಿಂದ ಕಾಮವನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು. ನಿಮ್ಮ ಪತ್ನಿಗೆ ತಿಂಗಳಿಗೊಮ್ಮೆ ನಿಯಮಿತವಾಗಿ ಮಾಸಿಕ ಸ್ರಾವವಾಗುತ್ತಿದ್ದರೆ ಮುಟ್ಟಾದ ನಂತರ 12 ನೆಯ ದಿನದಿಂದ 18 ದಿನ

ದವರೆಗಿನ ಸಮಯದಲ್ಲಿ ಸಮಾಗಮ ಹೊಂದಿದಲ್ಲಿ ಮಕ್ಕಳಾಗುವ ಸಾಧ್ಯತೆ ಇರುತ್ತದೆ. ಆ ದಿನಗಳನ್ನು ಹೊರತು ಪಡಿಸಿ ಉಳಿದ ದಿನಗಳಲ್ಲಿ ಸಮಾಗಮ ಮಾಡಿದಲ್ಲಿ ಮಕ್ಕಳಾಗುವುದಿಲ್ಲ.

ಏಡ್ಸ್ ಬರಬಹುದೇ?

ನಾನು ಒಬ್ಬ ಹುಡುಗಿಯನ್ನು ಪ್ರೀತಿಸುತ್ತಿದ್ದೇನೆ. ಆ ಹುಡುಗಿಯ ಜತೆ ಸಂಪರ್ಕ ಇರಿಸಿಕೊಂಡಿದ್ದೇನೆ. ಇದರಿಂದ ಏಡ್ಸ್ ಬರುತ್ತದೆಯೇ?

–ಹೆಸರು–ಊರು ಬೇಡ.

ಸಲಹೆ

ಪ್ರೀತಿಸುತ್ತಿರುವ ಹುಡುಗಿಯ ಜೊತೆಗೆ ಮದುವೆಗೆ ಮೊದಲೇ ಲೈಂಗಿಕ ಸಂಪರ್ಕ ಹೊಂದಿರುವುದು ಎಳ್ಳಷ್ಟೂ ಸರಿಯಲ್ಲ. ಬೇಗನೆ ಮದುವೆಯಾಗಿ, ಇಲ್ಲದಿದ್ದರೆ ಮದುವೆಯಾಗುವವರೆಗೂ ದೂರವಿರಿ. ಆಕೇಗೇನಾದ್ರೂ ಹೆಚ್.ಐ.ವಿ. ವೈರಸ್ ಸೋಂಕು ತಗುಲಿದ್ದರೆ ಮಾತ್ರ ನಿಮಗೆ ಏಡ್ಸ್ ಬರುತ್ತದೆ. ಇದೇ ರೀತಿ ಆ ಹುಡುಗಿಯೂ ನಿಮ್ಮ ಬಗ್ಗೆ ಯೋಚಿಸುತ್ತಿದ್ದರೆ? ಹಾಗೆಲ್ಲ ಯಾರ ಮೇಲೂ ವೃಥಾ ಅನುಮಾನ ಪಡಬಾರದು.

ಏಕಾಗ್ರತೆಗೆ ಔಷಧಿ

ಅಕ್ಕ, ನನಗೆ ಈಗ 20 ವರ್ಷ. ಪಿ.ಯು.ಸಿ. ಕಲಿಯುತ್ತಿದ್ದೇನೆ. ನಾನು ಓದುವಾಗ ನನ್ನ ಮನಸ್ಸು ಒಂದೇ ಕಡೆ ಇರುವುದಿಲ್ಲ. ಓದಿದ್ದು ನೆನಪಿರುವುದಿಲ್ಲ. ಮನಸ್ಸನ್ನು ಏಕಾಗ್ರಗೊಳಿಸುವ ಔಷಧಿಗಳೇನಾದರೂ ಇದ್ದರೆ ತಿಳಿಸಿ.

–ಗಿರೀಶ್ ಕಾಜ, ಬೀದರ

ಸಲಹೆ

ಮನಸ್ಸನ್ನು ಏಕಾಗ್ರಗೊಳಿಸುವ ಔಷಧಿಗಳಾವುವೂ ಇಲ್ಲ. ನೀವು ಓದುವಾಗ ಒಂದೇ ಸಮನೆ ಗಂಟೆಗಟ್ಟಲೇ ಓದದೇ 45 ನಿಮಿಷಗಳ ಕಾಲ ಓದಿ, ನಂತರ ಓದಿದ್ದನ್ನು ಮನನ ಮಾಡಿಕೊಂಡು ಅದನ್ನು ಬರೆಯುವುದರಿಂದ ಇಲ್ಲವೇ ಇನ್ನೊಬ್ಬರೊಡನೆ ಚರ್ಚೆ ಮಾಡುವುದರಿಂದ ಖಂಡಿತ ನೆನಪಿನಲ್ಲಿ ಉಳಿಯುತ್ತದೆ. ಮೆದುಳನ್ನು ನಾವು ಎಷ್ಟು ಉಪಯೋಗಿಸುತ್ತೇವೆಯೋ ಅಷ್ಟು ಮತ್ತೆ ಹೊಸ ಹೊಸ ಜೀವಕೋಶಗಳು ಹುಟ್ಟುತ್ತವೆ.

ಹತ್ತಿರದ ಸಂಬಂಧಿ

ತುಮಕೂರಿನಲ್ಲಿ ಇಂಜಿನಿಯರಿಂಗ್ ಓದುತ್ತಿರುವೆ. ಪಿಯುಸಿ ಮಾಡುವಾಗ ಕೆಟ್ಟ ಸ್ನೇಹಿತರ ಸಹವಾಸದಿಂದ ವಯಸ್ಕರ ಸಿನಿಮಾ ನೋಡಲು ಶುರುಮಾಡಿದೆ. ನಂತರ ಹಸ್ತ ಮೈಥುನ ಚಟ ಬೆಳೆಯಿತು. ಇದರಿಂದ ವಿದ್ಯಾಭ್ಯಾಸದ ಕಡೆ ಗಮನ ಕಡಿಮೆಯಾಗಿ ಅನುತ್ತೀರ್ಣನಾಗಿದ್ದೆ. ಹೀಗಿರುವಾಗ ಒಂದು ಹೆಣ್ಣಿನ ಸಂಗ ಬೆಳೆಸಿಕೊಂಡೆ. ಆಕೆ ನನ್ನ ಹತ್ತಿರದ ಸಂಬಂಧಿ. 30 ವರ್ಷದ ಆಕೆಗೆ ಮದುವೆಯಾಗಿ ಮಕ್ಕಳಿವೆ. ನನ್ನ ಸಮಸ್ಯೆಯೇನೆಂದರೆ, ಸಂಭೋಗ ಸಮಯದಲ್ಲಿ ಬಹಳ ಬೇಗ ವೀರ್ಯ ಹೊರಬರುತ್ತದೆ ಹಾಗೂ ಜನನಾಂಗ ಕೂಡಲೇ ಮೊದಲಿನಂತೆ ನಿಗುರುವುದಿಲ್ಲ. ನಾನು ಮೊದಲು ಬಹಳ ಚೆನ್ನಾಗಿ ಮಾತನಾಡುತ್ತಿದ್ದೆ. ಈಗ ಮಾತನಾಡುವಾಗ ತೊದಲು ಉಂಟಾಗುತ್ತದೆ. ಈ ಎರಡೂ ಸಮಸ್ಯೆಗಳಿಗೆ ಪರಿಹಾರ ನೀಡಿ.

–ಹೆಸರು ಬೇಡ, ಹರಿಹರ.

ಸಲಹೆ

ಹಸ್ತಮೈಥುನ ಕೆಟ್ಟ ಚಟವಲ್ಲ. ಆದರೆ ನೀವು ಮದುವೆಯಾದ ಹೆಣ್ಣಿನೊಂದಿಗೆ ಸಂಬಂಧ ಬೆಳೆಸಿರುವುದು ಬಹಳ ದೊಡ್ಡ ತಪ್ಪು. ಅದು ಅನೈತಿಕ ಸಂಬಂಧ ಎನಿಸಿಕೊಳ್ಳುತ್ತದೆ. ಆದರಿಂದಾಗಿ ನಿಮ್ಮಲ್ಲಿ ಮಾನಸಿಕ ಸ್ಥೈರ್ಯ ಕಡಿಮೆಯಾಗಿ ಭಯ, ಆತಂಕಗಳು ಹೆಚ್ಚಿ ಶೀಘ್ರ ಸ್ಖಲನವಾಗುತ್ತಿರಬಹುದು. ನೀವು ಆಕೆಯಿಂದ ದೂರವಿರಿ. ನಿಮ್ಮ ವಿದ್ಯಾಭ್ಯಾಸದ ಕಡೆಗೆ ಗಮನಹರಿಸಿ ಚೆನ್ನಾಗಿ ಓದಿ. ಮೊದಲು ಚೆನ್ನಾಗಿ ಮಾತಾಡುತ್ತಿದ್ದ ನಿಮಗೆ ಈಗ ತೊದಲು ಆರಂಭವಾಗಿದೆಯೆಂದರೆ ಮನಸ್ಸಿನ ಆತಂಕ, ಉದ್ವೇಗಗಳು ಕಾರಣವಿರಬಹುದು. ಒಮ್ಮೆ ಮನೋವೈದ್ಯರನ್ನು ಭೇಟಿಯಾಗಿ ಸಲಹೆ ಪಡೆಯಿರಿ.

ಮುಂದೊಗಲು ಸರಿದಿಲ್ಲ

ನಾನೊಬ್ಬ 23 ವರ್ಷದ ಯುವಕ. ನನ್ನ ಶಿಶ್ನದ ಮುಂದೊಗಲು ಹಿಂದಕ್ಕೆ ಸರಿದಿಲ್ಲ. ನನಗೆ ಅಪರೂಪಕ್ಕೊಮ್ಮೆ ಹಸ್ತ ಮೈಥುನ ಮಾಡಿಕೊಳ್ಳುವ ಅಭ್ಯಾಸ ಉಂಟು. ಆಗ ವೀರ್ಯ ಬೇಗ ಸ್ಖಲಿಸುತ್ತದೆ. ಆದ್ದರಿಂದ ದಯವಿಟ್ಟು ಶಿಶ್ನದ ಚರ್ಮ ಹಿಂದೆ ಸರಿಯಲು ಶಸ್ತ್ರಚಿಕಿತ್ಸೆ, ಇಲ್ಲವೆ ಬೇರೆ ಮಾರ್ಗ ತಿಳಿಸುವಿರೆಂದು ನಂಬುತ್ತೇನೆ.

ನನ್ನ ಇನ್ನೊಂದು ಸಮಸ್ಯೆಯೆಂದರೆ ನನಗೆ ಮುಖದ ತುಂಬಾ ಗಡ್ಡ ಬಂದಿಲ್ಲ. ಬಾಯಿಯ ಕೆಳಗೆ ಮಾತ್ರ ಸ್ವಲ್ಪ ಕೂದಲು ಬಂದಿವೆ. ಮುಖದಲ್ಲಿ ಪೂರ್ಣ ಪ್ರಮಾಣದ ಗಡ್ಡ ಬರಲು ಏನು ಮಾಡಬೇಕು?

–ಹೆಸರು ಬೇಡ, ಉಡುಪಿ

ಸಲಹೆ

ನಿಮ್ಮ ಶಿಶ್ನದ ಚರ್ಮ ತುಂಬ ಬಿಗಿಯಾಗಿದ್ದರೆ ಶಸ್ತ್ರಚಿಕಿತ್ಸೆ ತಜ್ಞ(Surgeon) ರನ್ನು ಭೇಟಿಯಾಗಿ ಸರ್‌ಕಮ್‌ಸಿಶನ್ ಮಾಡಿಸಿಕೊಳ್ಳಿ. ಹಾರ್ಮೋನಿನ ಕಾರಣದಿಂದಾಗಿ ನಿಮ್ಮ ಮುಖದಲ್ಲಿ ಕೂದಲು ಬೆಳೆದಿಲ್ಲದಿರಬಹುದು. ಅದಕ್ಕಾಗಿ ಚಿಂತಿಸಬೇಡಿ.

ಹೆಂಡತಿಯ ಅತಿಯಾಸೆ

ಮೂವತ್ತು ವರ್ಷದ ಯುವಕ. ಮದುವೆಯಾಗಿ ಒಂದು ವರ್ಷವಾಗಿದೆ. ಆದರೆ ನನಗೆ ನನ್ನ ಹೆಂಡತಿಯನ್ನು ಸಂಪೂರ್ಣ ತೃಪ್ತಿಪಡಿಸಲು ಸಾಧ್ಯವಾಗುತ್ತಿಲ್ಲ. ನನ್ನ ಹೆಂಡತಿ ಪ್ರತಿ ದಿನ ಆಸೆಯಿಂದ ಹತ್ತಿರ ಬಂದು ಮರ್ಮಾಂಗವನ್ನು ಹಿಡಿದು ಯೋನಿಯೊಳಗೆ ಇಟ್ಟುಕೊಳ್ಳಲು ಪ್ರಯತ್ನಿಸುತ್ತಾಳೆ. ಹಸಿದ ಹೆಬ್ಬುಲಿಯಂತೆ ಆದನ್ನು ಪದೇ ಪದೇ ಚೀಪುತ್ತಾಳೆ. ನನ್ನ ಕೈಯನ್ನು ಬ್ರಾದೊಳಗೆ ಇರಿಸಿ ಕೊಂಡು ಹಿಸುಕಲು ಹೇಳುತ್ತಾಳೆ. ಇಷ್ಟಾದರೂ ನನಗೆ ರತಿಕ್ರೀಡೆಯಲ್ಲಿ ಸಂಪೂರ್ಣ ತೊಡಗಿಸಿ ಕೊಳ್ಳಲು ಸಾಧ್ಯವಾಗಿಲ್ಲ. ಒಮ್ಮೆ ತನ್ನ ಅಕ್ಕನ ಮನೆಗೆ ಹೋಗಿದ್ದ ನನ್ನಾಕೆ ಆಕೆಯ ಭಾವನ ಪೌರುಷದ ಬಗ್ಗೆ ಅಕ್ಕನಿಂದ ತಿಳಿದುಕೊಂಡು ಬಂದು ನನ್ನನ್ನು ಸತಾಯಿಸುತ್ತಾಳೆ. ಭಾವನ ಪರಾಕ್ರಮದಿಂದ ಅವಳ ಅಕ್ಕನಿಗೆ ನಾಲ್ಕು ದಿನ ಅಡ್ಡಾಡಲು ಬಾರದಷ್ಟು ನೋವಾಗಿತ್ತಂತೆ. ಆಕೆ ನನ್ನಿಂದಲೂ ಇದನ್ನೇ ನಿರೀಕ್ಷಿಸುತ್ತಾಳೆ. ಇದರಿಂದ ನನಗೆ ಜೀವನದಲ್ಲಿ ಜುಗುಪ್ಸೆ ಉಂಟಾಗಿ ಆತ್ಮಹತ್ಯೆಯೇ ಪರಿಹಾರವೆನಿಸುತ್ತಿದೆ. ವೈದ್ಯಕೀಯ ದಲ್ಲಿ ಇದಕ್ಕೇನಾದರೂ ಪರಿಹಾರ ಸಿಕ್ಕರೆ ನನಗೆ ಮರುಜೀವ ಬಂದಂತಾಗುತ್ತದೆ.

–ಹೆಸರು–ಊರು ಬೇಡ

ಸಲಹೆ

ನೀವು ಸಂಭೋಗಕ್ಕೆ ಮುನ್ನ ಪೂರ್ವ ಸಿದ್ಧತೆ ಅಂದರೆ ಚುಂಬನ, ಆಲಿಂಗನ, ಸರಸ ಸಂಭಾಷಣೆ ಮುಂತಾದವುಗಳಲ್ಲಿ ಹೆಚ್ಚು ಹೊತ್ತು ಕಳೆಯಿರಿ. ಸಂಭೋಗದ ನಂತರವೂ ಸ್ವಲ್ಪ ಹೊತ್ತು ಸರಸ ಸಂಭಾಷಣೆ ನಡೆಸಿ. ತೃಪ್ತಿ ಎನ್ನುವುದು ಮನಸ್ಸಿಗೆ ಸಂಬಂಧಪಟ್ಟಿದೆಯೇ ಹೊರತು ಬರೀ ದೇಹಕ್ಕಲ್ಲ. ನೀವು ಹಾಗೂ ನಿಮ್ಮ ಪತ್ನಿ ಲೈಂಗಿಕ ಕ್ರಿಯೆ ಹಾಗೂ ಲೈಂಗಿಕ ಸಮಸ್ಯೆಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಡಾ. ಸಿ.ಆರ್. ಚಂದ್ರಶೇಖರ್ ಬರೆದಿರುವ 'ದಾಂಪತ್ಯ ಸಮಸ್ಯೆಗಳು' ಪುಸ್ತಕ ಓದಿ. ಮುಖ್ಯವಾಗಿ ನೀವು ಅರಿತುಕೊಳ್ಳಬೇಕಾದ್ದೆಂದರೆ ಸಂಭೋಗದ ಸಮಯದಲ್ಲಿ ಯಾವುದೇ ಭಯ, ಆತಂಕಗಳು ಇರಕೂಡದು. ನಿಮ್ಮ ಪತ್ನಿಗೆ ಲೈಂಗಿಕ ಕ್ರಿಯೆಯ ಬಗ್ಗೆ ವಿಪರೀತ ಅತಿರಂಜಿತ ಕಲ್ಪನೆಗಳನ್ನಿಟ್ಟುಕೊಳ್ಳುವುದೂ ಸರಿಯಲ್ಲವೆಂದು ತಿಳಿಸಿ.

ನಾನು ಹುಟ್ಟುವಾಗಲೇ ತಾಯಿಯನ್ನು ಕಳೆದುಕೊಂಡದ್ದು ಸೇರಿದಂತೆ ಇನ್ನಿತರ ಕಾರಣಗಳಿಂದಾಗಿ ನನ್ನ ಬೆಳವಣಿಗೆ ಸಾಕಷ್ಟು ಕುಂಠಿತವಾಗಿದೆ. ನನಗೀಗ 17 ವರ್ಷ; ಎತ್ತರ 3 ಅಡಿ, ಮೈಕಟ್ಟು ಬಹಳ ಸಣ್ಣದು. ಪ್ರಥಮ ಪಿ.ಯು.ಸಿ. ಓದುತ್ತಿರುವೆ. ನನ್ನನ್ನು ನೋಡಿದವರು, "ಮ್ಯೂಜಿಯಂನಲ್ಲಿ ಇರಬೇಕಾದ ಈ ಹುಡುಗ ಇಲ್ಲಿಗೇಕೆ ಬಂದ?" ಎಂಬಂತೆ ನೋಡುತ್ತಾರೆ. ಇದರಿಂದ ನನಗೆ ವಿಪರೀತ ಬೇಜಾರಾಗಿದೆ. ನಾನು ಎಲ್ಲರಂತೆ ಏಕಿಲ್ಲ? ಎಲ್ಲರಂತೆ ಸದೃಢವಾಗಿ ಬೆಳೆಯಲು ಏನು ಮಾಡಬೇಕು?

-ಸಂತೋಷ್, ಊರಿಲ್ಲ.

ಸಲಹೆ

ರೂಪ, ಎತ್ತರ, ಬಣ್ಣ ಅನುವಂಶೀಯವಾಗಿ ಬರುವಂತಹದು. ಆದಕ್ಕಾಗಿ ಕೊರಗುವುದು ಸರಿಯಲ್ಲ. ಕೆಲವರಲ್ಲಿ ಪಿಟ್ಯುಟರಿ ಹಾರ್ಮೋನಿನ ವ್ಯತ್ಯಾಸದಿಂದಾಗಿಯೂ ಬೆಳವಣಿಗೆ ಕುಂಠಿತವಾಗುವುದು. ನೀವು ಒಮ್ಮೆ ಎಂಡೋಕ್ರೈನಾಲಿಜಿಸ್ಟ್‌ರನ್ನು ಭೇಟಿಯಾಗಿ ಚಿಕಿತ್ಸೆ ಪಡೆಯಬಹುದು. ಈಜುವುದು, ಸ್ಕಿಪ್ಪಿಂಗ್ ಮುಂತಾದವುಗಳಿಂದ ಸ್ವಲ್ಪ ಮಟ್ಟಿಗೆ ಎತ್ತರವಾಗಬಹುದು. ಪ್ರೋಟಿನ್‌ಯುಕ್ತ ಆಹಾರವನ್ನು ಅಂದರೆ ಕಾಳುಗಳು, ಹಾಲು, ಮೊಸರು, ಮೊಟ್ಟೆ ಹೆಚ್ಚಾಗಿ ಸೇವಿಸಿ.

ನಾನು 20 ವರ್ಷದ ಬಿ.ಎ. ವಿದ್ಯಾರ್ಥಿ. ನನಗೆ ಕೋರೆ ಹಲ್ಲುಗಳು ದೊಡ್ಡದಾಗಿ ಬೆಳೆದಿವೆ. ನಕ್ಕಾಗ ವಿಕಾರವಾಗಿ ಕಾಣುತ್ತದೆ. ಗೆಳೆಯರೆಲ್ಲ ಗೇಲಿ ಮಾಡಿ ನಗುತ್ತಾರೆ. ಇದರಿಂದ ನನಗೆ ನಗಲೇಬಾರದೆನ್ನಿಸಿದೆ. ದಯವಿಟ್ಟು ಸಲಹೆ ನೀಡಿ.

-ಗಾಳೇಶ್, ತಾವರಗೆರೆ.

ಸಲಹೆ

ನೀವು ದಂತವೈದ್ಯರನ್ನು ಭೇಟಿಯಾಗಿ ಚಿಕಿತ್ಸೆ ಪಡೆಯಿರಿ. ನಕ್ಕಾಗ ನಿಮ್ಮದೊಬ್ಬರದೇ ಅಲ್ಲ ಎಲ್ಲರ ಹಲ್ಲುಗಳೂ ಕಾಣುತ್ತವೆ. ನೀವು ಅದರ ಬಗ್ಗೆ ಚಿಂತಿಸದೇ ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ನಿಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಿ, ಈಗ ನಿಮ್ಮನ್ನು ನೋಡಿ ನಗುವವರೇ ಆಗ ನಿಮ್ಮನ್ನು ನೋಡಿ ಬೆರಗಾಗುತ್ತಾರೆ.

ನನಗೆ 23 ವರ್ಷ. ನಾನು ಪ್ರತಿದಿನ ವಿಭೂತಿ ಹಾಗೂ ದೇವಾಲಯದಲ್ಲಿನ ಪವಿತ್ರ ಬೂದಿಯನ್ನು ಬಹಳ ತಿನ್ನುತ್ತೇನೆ. ಅದನ್ನು ತಿನ್ನಲು ನನಗೆ ಅತೀವ ಆಸಕ್ತಿ. ಅದನ್ನು ತಿಂದಾಗಲೇ ಸಮಾಧಾನವಾಗುತ್ತದೆ. ಇದರಿಂದ ತೊಂದರೆ ಇದೆಯೇ? ಯಾವುದಾದರೂ ರೋಗ ತಗುಲಬಹುದೇ? ಇದನ್ನು ಹೇಗೆ ಬಿಡಲಿ?

-ಹೆಸರು ಬೇಡ, ಊರು ಬೇಡ.

ಸಲಹೆ

ನಿಮಗೆ ಕ್ಯಾಲ್ಸಿಯಂ ಕೊರತೆಯಿದೆಯಾದ್ದರಿಂದ ವಿಭೂತಿ ತಿನ್ನುವ ಬಯಕೆಯಾಗುತ್ತಿರಬಹುದು. ಆಹಾರದಲ್ಲಿ ಸೊಪ್ಪು, ಹಾಲು ಯಥೇಚ್ಛವಾಗಿ ಸೇವಿಸಿ, ಜೊತೆಗೆ ಕ್ಯಾಲ್ಸಿಯಂ ಮಾತ್ರೆಯನ್ನು ಸೇವಿಸಿ. ಇಂದಿನಿಂದಲೇ ಮನಸ್ಸು ಗಟ್ಟಿ ಮಾಡಿಕೊಂಡು ವಿಭೂತಿ ತಿನ್ನುವುದು ನಿಲ್ಲಿಸಿಬಿಡಿ.

ನನಗೆ 20 ವರ್ಷ. ಬಹಳ ನಾಚಿಕೆ ಸ್ವಭಾವ. ವಿಪರೀತ ಅಂಜಿಕೆ. ಯಾರಾದರೂ ನೋಡುತ್ತಿದ್ದರೆ ನಡೆಯುವಾಗ ಹೆಜ್ಜೆ ತಪ್ಪುತ್ತದೆ. ಲವಲವಿಕೆಯಿಂದ ಎಲ್ಲರ ಜೊತೆ ಬೆರೆತು ಮಾತನಾಡಬೇಕೆಂದು ಆಸೆ. ಆದರೆ ಸಾಧ್ಯವಾಗುತ್ತಿಲ್ಲ. ಜತೆಗೆ ಬಾಯಿಯಲ್ಲಿ ಕೈ ಇಟ್ಟುಕೊಳ್ಳುವ ಚಟ ಬಿದ್ದಿದೆ. ಹೋಗಲಾಡಿಸಲು ಏನು ಮಾಡಬೇಕು?

- ಕಲಾವಿದ, ರಾಯಚೂರು.

ಸಲಹೆ

ನಿಮ್ಮಲ್ಲಿ ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತಿದೆ. ಬೇರೆಯವರು ನಮ್ಮನ್ನು ಗಮನಿಸುತ್ತಿರುವರೇನೋ ಎಂಬ ಆತಂಕ ಬಿಟ್ಟುಬಿಡಿ. ಎಲ್ಲರಿಗೂ ಅವರವರದೇ ಕೆಲಸಗಳು ಸಾಕಷ್ಟಿರುತ್ತವೆ. ಬಾಯಲ್ಲಿ ಕೈ ಇಟ್ಟುಕೊಳ್ಳುವ ಚಟವನ್ನು ಬಿಡಿ. ನಿಮ್ಮಲ್ಲಿರುವ ಕೀಳರಿಮೆಯನ್ನು ಹೋಗಲಾಡಿಸಿಕೊಂಡು ಎಲ್ಲರೊಡನೆ ಸಹಜವಾಗಿ ಬೆರೆಯಿರಿ- ಜೊತೆಗೆ ಸಾಹಿತ್ಯ, ಸಂಗೀತದಂತಹ ಆರೋಗ್ಯಕರ ಹವ್ಯಾಸಗಳನ್ನು ರೂಢಿಸಿಕೊಳ್ಳಿ, ನಾಚಿಕೆ, ಸಂಕೋಚಗಳನ್ನು ಬದಿಗೊತ್ತಿ ಧೈರ್ಯದಿಂದ ಎಲ್ಲರೊಂದಿಗೆ ಗೆಳೆತನ ಬೆಳೆಸಿಕೊಳ್ಳಿ.

ನಾವು 15-16 ವರ್ಷದ ನಾಲ್ಕು ಜನ ಆತ್ಮೀಯ ಗೆಳೆಯರು ನಾವೆಲ್ಲ ಒಂದೇ ಎಂಬ ಭಾವನೆ ಬೆಳೆಸಿಕೊಂಡಿದ್ದೇವೆ. ಒಟ್ಟಾಗಿಯೇ ಎಸ್.ಎಸ್.ಎಲ್.ಸಿ. ಅಭ್ಯಾಸ ಮಾಡುತ್ತಿದ್ದೇವೆ. ಆದರೆ ಇತ್ತೀಚೆಗೆ ನಮ್ಮೊಬ್ಬ ಗೆಳೆಯ ನಮ್ಮ ಗುಂಪು ತ್ಯಜಿಸಿದ್ದಾನೆ. 'ಏಕೆ?' ಎಂದು ಕೇಳಿದರೆ ಉತ್ತರಿಸುವುದಿಲ್ಲ. ನಮ್ಮ ನಡುವೆ ಮನಸ್ತಾಪವಾಗುವ ಯಾವ ಘಟನೆಯೂ ನಡೆದಿಲ್ಲ. ಆದರೂ ಆತ ನಮ್ಮೊಂದಿಗೆ ಸರಿಯಾಗಿ ಮಾತನಾಡುವುದಿಲ್ಲ. ಬಹುಶಃ ನಮಗಾಗದ ಯಾರೋ ಅವನಿಗೆ ಕಿವಿಯೂದಿರಬೇಕು. ನಾವು ಮತ್ತೆ ಜೀವದ ಗೆಳೆಯರಾಗಿ ಮುಂದುವರಿಯಲು ಏನು ಮಾಡಬೇಕು?

-ಗೆಳೆಯರು, ಮುದ್ದೇಬಿಹಾಳ.

ಸಲಹೆ

ಅವನು ದೂರವಾಗಿದ್ದಾನೆ ಎಂದು ನೀವೂ ದೂರವಾಗಬೇಡಿ. ಅವನೊಂದಿಗೆ ಮಾತಾಡಿ ಸಹಜವಾಗಿಯೇ ಇದ್ದು ಬಿಡಿ. ಪ್ರೀತಿ ಸ್ನೇಹಗಳಿಂದ ನಾವು ಯಾರನ್ನು ಬೇಕಾದರೂ ಗೆಲ್ಲಬಹುದು. ಬೇರೆಯವರ ಮಾತು ಕೇಳಿ ತಾನು ನಿಮ್ಮಿಂದ ದೂರವಾಗಿದ್ದು ತಪ್ಪೆಂದು ಅರಿವಾದಾಗ ಅವನೇ ಎಲ್ಲವನ್ನೂ ಹೇಳಿಕೊಳ್ಳಬಹುದು. ನಂತರ ಮೊದಲಿನಂತೇ ನಿಮ್ಮ ಆತ್ಮೀಯ ಗೆಳೆಯನಾಗಿ ಮುಂದುವರೆಯುತ್ತಾನೆ.

ನಾನು ಈ ಹಿಂದೆಯೇ ನನ್ನ ಸಮಸ್ಯೆ ತೋಡಿಕೊಂಡಿದ್ದೆ. ನೀವು ಉತ್ತರಿಸದೆ ನಿರಾಶೆಗೊಳಿಸಿದ್ದೀರಿ. ಈಗಲಾದರೂ ನನ್ನ ಸಮಸ್ಯೆಗೆ ಪರಿಹಾರ ನೀಡಿ. ನಾನು 24 ವರ್ಷದ ಯುವಕ. ಅವಿವಾಹಿತ. ನಾನು ನನ್ನ 18ನೇ ವರ್ಷದಿಂದ ದೊಡ್ಡಮ್ಮನ ಮಗನ ಹೆಂಡತಿಯನ್ನು ಇಟ್ಟುಕೊಂಡಿದ್ದೇನೆ. ನಮ್ಮ ಸಂಬಂಧ ಶುರುವಾಗಿ 6 ವರ್ಷಗಳು ಕಳೆದವು. ಈಗಲೂ ನಮ್ಮ ನಡುವೆ ಲೈಂಗಿಕ ಸಂಪರ್ಕವಿದೆ. ಅವಳಿಗೆ ಮೂರು ಮಕ್ಕಳಾಗಿವೆ. ನಮ್ಮದು ದೊಡ್ಡ ಕುಟುಂಬ. ಮನೆಯವರೆಲ್ಲರೂ ನನ್ನನ್ನು ತುಂಬಾ ಒಳ್ಳೆಯ ಹುಡುಗನೆಂದು ತಿಳಿದಿದ್ದಾರೆ. ನಮ್ಮ ಸಂಬಂಧವೇನಾದರೂ ಬಹಿರಂಗಗೊಂಡರೆ, ನಾನು ಅವಳು ಬದುಕಲಾರೆವು. ಇದು ತಪ್ಪು ಎಂದು ಗೊತ್ತಿದ್ದರೂ ನಮಗೆ ಪರಸ್ಪರ ಬೇರೆಯಾಗಲು ಸಾಧ್ಯವಾಗುತ್ತಿಲ್ಲ. ನೀವೇ ಒಂದು ಮಾರ್ಗ ತೋರಿಸಿ.

- ಊರುಬೇಡ, ಹೆಸರು ಬೇಡ.

ಸಲಹೆ

ನೀವು ಬಹಳ ದೊಡ್ಡ ತಪ್ಪು ಮಾಡಿದ್ದೀರಿ. ಇನ್ನೂ ಮಾಡುತ್ತಲೇ ಇದ್ದೀರಿ. ನಿಮ್ಮದು ಅನೈತಿಕ ಸಂಬಂಧ. ಮನೆಯವರೆಲ್ಲ ನಿಮ್ಮ ಬಗ್ಗೆ ಇಟ್ಟುಕೊಂಡಿರುವ ನಂಬಿಕೆಗೆ ನೀವು ಅನರ್ಹರಾಗಿರುವಿರಿ. ನೀವು ಈ ಕ್ಷಣದಿಂದಲೇ ನಿಮ್ಮ

ಸಂಬಂಧವನ್ನು ನಿಲ್ಲಿಸಿ ಅವರಿಂದ ದೂರವಾಗಿ. ನೀವು ಆದಷ್ಟು ಬೇಗ ಮದುವೆ ಮಾಡಿಕೊಳ್ಳಿ (ಆರ್ಥಿಕವಾಗಿ ಸ್ವಾವಲಂಬಿಯಾಗಿದ್ದರೆ).

○

ನಾನೀಗ ಪಿ.ಯು.ಸಿ ಓದುತ್ತಿರುವೆ. ನನ್ನ ಹೆಸರು ಇಂಗ್ಲಿಷ್ ಭಾಷೆಯ 'ಆರ್' ಪದದಿಂದ ಪ್ರಾರಂಭವಾಗುತ್ತದೆ. ನನ್ನನ್ನು ಹಿಂಬಾಲಿಸುತ್ತಿರುವ ನನ್ನ ಪ್ರಿಯತಮೆ ಈಗ 7ನೇ ವರ್ಗದಲ್ಲಿದ್ದಾಳೆ. ಅವಳ ಹೆಸರು ಇಂಗ್ಲಿಷ್ ಭಾಷೆಯ 'ಸಿ' ಪದದಿಂದ ಪ್ರಾರಂಭವಾಗಿದೆ. ಅವಳು ಯಾವಾಗಲೂ ನನ್ನನ್ನು ನೋಡುವುದು, ನಗುವುದು, ಮಾತನಾಡುವುದು ಮಾಡುತ್ತಾಳೆ. ಆದರೆ ನನ್ನ ಬಾಳ ಸಂಗಾತಿ 'ಆರ್' ಅಕ್ಷರದಿಂದ ಪ್ರಾರಂಭವಾಗುವ ಹೆಸರುಳ್ಳವಳಾಗಿರಬೇಕೆಂದು ಬಯಸಿರುವೆ. ಆದ್ದರಿಂದ 'ಸಿ' ಅಕ್ಷರದವಳನ್ನು ಪ್ರೀತಿಸಲೋ, ಬೇಡವೋ?

- ಆರ್.ಎಸ್.ಎಂ., ಊರುಬೇಡ.

ಸಲಹೆ

ನಿಮ್ಮ ಪ್ರಶ್ನೆ ಹಾಗೂ ಯೋಚನೆ ಎರಡೂ ತುಂಬ ಬಾಲಿಶವಾಗಿವೆ. 7ನೇ ವರ್ಗದಲ್ಲಿರುವ ಪುಟ್ಟ ಹುಡುಗಿ ನಿಮ್ಮನ್ನು ಹಿಂಬಾಲಿಸುವುದೆಂದರೇನು? ಅವಳೇನೋ ನಗುನಗುತ್ತ ಮಾತಾಡಿದರೆ ಅದನ್ನೇ ನೀವು ಪ್ರೀತಿಯೆಂದುಕೊಂಡು ಅವಳನ್ನು ಪ್ರಿಯತಮೆಯೆಂದು ಕರೆದಿರುವುದು ನಿಮ್ಮ ಮುರ್ಖತನವಲ್ಲದೇ ಬೇರೇನೂ ಅಲ್ಲ. ಇನ್ನು 'ಸಿ' ಅಕ್ಷರದವಳನ್ನು ಪ್ರೀತಿಸಲೋ ಬೇಡವೋ ಎಂದು ಕೇಳಿದ್ದೀರಿ. ಪ್ರೀತಿ ತನ್ನಿಂದ ತಾನೇ ಹುಟ್ಟಬೇಕೇ ಹೊರತು ಮೊದಲೆ ಪೂರ್ವನಿರ್ಧಾರಿತವಾದುದು ಪ್ರೀತಿ ಎನಿಸಲಾರದು. ಅಲ್ಲದೇ ನೀವು ಇನ್ನೂ ಪಿ.ಯು.ಸಿ. ಓದುತ್ತಿರುವ ವಿದ್ಯಾರ್ಥಿಯಾದುದರಿಂದ ಪ್ರೀತಿ, ಪ್ರೇಮ ಎಂದು ಮನಸ್ಸು ಕೆಡಿಸಿಕೊಳ್ಳದೇ ಚೆನ್ನಾಗಿ ಅಧ್ಯಯನ ಮಾಡಿ ಒಳ್ಳೆಯ ಅಂಕ ಗಳಿಸುವುದರತ್ತ ಗಮನ ಕೊಡಿ.

○

ನಾನು ಒಂದು ಹೆಣ್ಣನ್ನು 3 ವರ್ಷದಿಂದ ಪ್ರೀತಿ ಮಾಡುತ್ತಿದೇನೆ. ಆಕೆಯ ಗಂಡ ತೀರಿಕೊಂಡಿದ್ದಾನೆ. ಅವಳಿಗೆ 35 ವರ್ಷ ವಯಸ್ಸು. ಒಂಟಿ ಹೆಣ್ಣಿಗೆ ಬಾಳನ್ನು ಕೊಡಬೇಕೆಂದು ನಾನು ಅವಳನ್ನು ಪ್ರೀತಿ ಮಾಡುತ್ತಿದ್ದೇನೆ. ಆ ಹೆಣ್ಣಿಗೆ ಪ್ರೀತಿ ಎಂಬುದೇ ಗೊತ್ತಿಲ್ಲ. ಆಕೆ ಎಂದೂ ನಗುವುದಿಲ್ಲ. ನಾನು ಮತ್ತು ಅವಳು ಒಂದೇ ಜಾತಿಯವರು. ನಾವು ಅವಳ ಮನೆಯಲ್ಲಿ 3 ತಾಸುಗಳಷ್ಟು ಮಾತನಾಡುತ್ತೇವೆ. ಆದರೆ ಲೈಂಗಿಕ ಕ್ರಿಯೆಯ ಬಗ್ಗೆ ಮಾತನಾಡಿದರೆ ಬಯ್ಯುತ್ತಾಳೆ. ಬೇಕಾದಷ್ಟು ಸಲ ನನ್ನನ್ನು ಬಯ್ದು ಮನೆಯಿಂದ ಹೊರಗೆ ಕಳುಹಿಸಿದ್ದಾಳೆ. ಮತ್ತೆ ಹೊರಗಡೆ ಬಂದಾಗ ನನ್ನನ್ನು ಚೆನ್ನಾಗಿ ಮಾತನಾಡಿಸುತ್ತಾಳೆ. ಮನೆಗೆ ಬರುತ್ತೇನೆ ಎಂದರೆ ಬಾ ಎನ್ನುತ್ತಾಳೆ. ಮನೆಯಲ್ಲಿ ಊಟ, ಚಹಾ, ತಿಂಡಿ ಮಾಡಿಕೊಡುತ್ತಾಳೆ. ನಾನು ಮನೆಯಲ್ಲಿ ಬಲಾತ್ಕಾರ ಮಾಡಬಹುದು. ಆದರೆ ನನಗೆ ಬಲಾತ್ಕಾರ ಮಾಡುವ ಆಸೆ ಇಲ್ಲ. ಆದ್ದರಿಂದ ಅವಳನ್ನು ಪ್ರೀತಿಯಿಂದ ಗೆಲ್ಲಬೇಕು. ಅವಳನ್ನು ಬಿಟ್ಟು ಇರಲು ನನ್ನಿಂದ ಸಾಧ್ಯವಿಲ್ಲ ಏನು ಮಾಡಲಿ?

- ಜಿ.ಎಂ.ಕೆ.ಕೆ., ಊರುಬೇಡ.

ಸಲಹೆ

ನಿಮಗೆ ನಿಜಕ್ಕೂ ಆಕೆಯ ಬಗ್ಗೆ ಪ್ರೀತಿ, ಕಾಳಜಿಯಿದ್ದರೆ ಆಕೆಗೊಂದು ಬಾಳು ಕೊಡಬೇಕೆಂಬ ಆದರ್ಶವಿದ್ದರೆ ನೀವು ನೇರವಾಗಿ ಮದುವೆಯ ಬಗ್ಗೆ ಆಕೆಯ ಬಳಿ ಪ್ರಸ್ತಾಪಿಸಿ. ಆಕೆಗೂ ಒಪ್ಪಿಗೆ ಇದ್ದರೆ ಮದುವೆಯಾಗಿ. ಅದಕ್ಕಿಂತ ಒಳ್ಳೆಯ ಕೆಲಸ ಬೇರೊಂದಿಲ್ಲ. ಅದನ್ನು ಬಿಟ್ಟು ಕಾಮವನ್ನೇ ಪ್ರೀತಿಯೆಂದು ನೀವು ಭಾವಿಸಿ ಆಕೆಯೊಡನೆ ಅಸಭ್ಯವಾಗಿ ವರ್ತಿಸಿದರೆ ಬಯ್ಯದೆ ಇನ್ನೇನು ಮಾಡಿಯಾಳು. ಬೇರೆ ಹೆಣ್ಣಾಗಿದ್ದರೆ ಮತ್ತೆ ನಿಮ್ಮನ್ನು ಖಂಡಿತ ಆದರಿಸುತ್ತಿದ್ದಿಲ್ಲ.

○

ನಾನು 18 ವರ್ಷದವಳಾಗಿದ್ದು, ಒಬ್ಬ ಲಂಬಾಣಿ ಜಾತಿಯ ಹುಡುಗನನ್ನು ತುಂಬಾ ಅಂದರೆ ನನ್ನ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದೇನೆ. ಆದರೆ ಆ ಹುಡುಗ ನನ್ನನ್ನು ಕಂಡು ಒಮ್ಮೆ ನಗುತ್ತಾನೆ ಮತ್ತೊಮ್ಮೆ ಸಿಡುಕುತ್ತಾನೆ. ನಾನು ಅವನನ್ನು ಪ್ರೀತಿಸುತ್ತಿದ್ದೇನೆ ಎಂದು ಹೇಳಲು ಹೆದರಿಕೆಯಾಗುತ್ತಿದೆ. ಒಂದು ಕಡೆ ಹೀಗಿದ್ದರೆ, ಇನ್ನೊಂದು ಕಡೆ ನಮ್ಮ ತಾಯಿ ತುಂಬಾ ಸಿಡುಕು ಮುಖದವಳು. ನನಗೆ ಯಾವಾಗಲೂ ಹಿಂಸೆ, ನೋವು ನೀಡುತ್ತಾಳೆ. ಇವುಗಳನ್ನು ಸಹಿಸಲು ನನಗೆ ಆಗುತ್ತಿಲ್ಲ. ಒಂದು ಕಡೆ ಹಾಗೆ. ಇನ್ನೊಂದು ಕಡೆ ಹೀಗೆ. ನಾನು ಏನು ಮಾಡಲಿ? ನಾನು ಈ ಲೋಕವನ್ನೇ ಬಿಟ್ಟು ಹೋಗಬೇಕೆಂದಿದ್ದೆ. ಒಂದು ದಿನ ತಮ್ಮ ಪತ್ರಿಕೆ ನೋಡಿ, ನಿಮ್ಮಿಂದ ಸಲಹೆ ಸಿಕ್ಕರೆ, ನನ್ನ ಮುಂದಿನ ಜೀವನಕ್ಕೆ ದಾರಿಯಾಗಬಹುದೆಂದು ನಿಮಗೆ ತಿಳಿಸಿದ್ದೇನೆ.

- ತಮ್ಮ ಸ್ನೇಹಿತೆ, ಊರುಬೇಡ.

ಸಲಹೆ

ನೀವು ಪ್ರೀತಿಸುತ್ತಿರುವ ಹುಡುಗನಿಗೆ ಪ್ರೀತಿಯ ಬಗ್ಗೆ ತಿಳಿಸಿಬಿಡಿ. ಅವನಿಗೂ ಪ್ರೀತಿಯಿದ್ದರೆ ಮದುವೆಯಾಗಿ. ನಿಮ್ಮ ತಾಯಿ ನಿಮಗೆ ಯಾವ ಕಾರಣದಿಂದ ಹಿಂಸೆ, ನೋವು ಕೊಡುತ್ತಿದ್ದಾರೆಂಬುದನ್ನು ಸ್ಪಷ್ಟವಾಗಿ ತಿಳಿಸಿಲ್ಲ. ಸಮಸ್ಯೆಗಳು ಪ್ರತಿಯೊಬ್ಬರಿಗೂ ಇದ್ದದ್ದೇ. ಪ್ರತಿಯೊಂದು ಸಮಸ್ಯೆಗೂ ಪರಿಹಾರವೂ ಇದ್ದೇ ಇರುತ್ತದೆ. ನಿಮ್ಮ ಸಮಸ್ಯೆಗೆ ಪರಿಹಾರ ಆತ್ಮಹತ್ಯೆಯೊಂದೇ ಅಲ್ಲ. ಮೊದಲು ಆ ಯೋಚನೆಯನ್ನು ಮನಸ್ಸಿನಿಂದ ತೆಗೆದು ಹಾಕಿ.

ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ '**ಆಪ್ತ ಸಮಾಲೋಚನೆ**' ಹಾಗೂ ವೈದ್ಯಕೀಯ ಸಮಸ್ಯೆಗಳನ್ನು ಪರಿಹರಿಸುವ "**ವಯಸ್ಕರ ಸಂದೇಹ ಸಲಹೆ**" ಅಂಕಣಗಳನ್ನು ಪ್ರತಿ ತಿಂಗಳು ನಿಗದಿತ ಮಧ್ಯ ಪುಟಗಳಲ್ಲೇ ಪ್ರಕಟಿಸಲಾಗುವುದು. ಓದುಗರು ಈ ಪುಟಗಳಲ್ಲಿನ ಮಾಹಿತಿಯನ್ನು ಸಮಯಾನುಸಾರ ಬಳಸಿಕೊಳ್ಳಲು ಅನುವಾಗುವಂತೆ ಬಿಡಿಸಿಟ್ಟುಕೊಳ್ಳಬಹುದು.

ನಿಮ್ಮ ಸಮಸ್ಯೆಗಳನ್ನು
ಈ ವಿಳಾಸಕ್ಕೆ ಕಳಿಸಿ :
ಸಂಪಾದಕರು, ಬಿಸಿಲ ಬದುಕು,
ಅಂಕುರ ಪ್ರಕಾಶನ ಅಂಚೆ ಪೆಟ್ಟಿಗೆ : 7951
ಬಸವೇಶ್ವರನಗರ,
ಬೆಂಗಳೂರು - 560 079.

ಕಾರು ಕೊಳ್ಳಬೇಕೆ ಬನ್ನಿ ಫುಟ್‌ಪಾತ್‌ಗೆ!



ಕಾರು ಶ್ರೀಮಂತರ ಸೊತ್ತು ಸರ್ವಥಾ ಅಲ್ಲ, ನೀವೂ ನಿರಾಯಾಸವಾಗಿ ಕಾರು ಕೊಳ್ಳಬಹುದು

ರಸ್ತೆಯಲ್ಲಿ ಬಣ್ಣ ಬಣ್ಣದ ಕಾರು ನೋಡುವ ಯಾರಿಗಾದರೂ ನಮಗೊಂದು ಕಾರು ಇದ್ದರೆಷ್ಟು ಚೆನ್ನ ಎಂದು ಅನ್ನಿಸುವುದು ಸಹಜ. ಆದರೇನು ಮಾಡುವುದು ಕಾರು ಕೇವಲ ಶ್ರೀಮಂತರ ವಸ್ತು ಎಂದು ನಿಮಗೆ ನೀವೇ ಸಮಾಧಾನ ಮಾಡಿಕೊಳ್ಳುತ್ತೀರಿ ಅಲ್ಲವೇ?

'ಆದರೆ ಕಾರು ಶ್ರೀಮಂತರ ಸೊತ್ತು ಸರ್ವಥಾ ಅಲ್ಲ, ನೀವೂ ನಿರಾಯಾಸವಾಗಿ ಕಾರು ಕೊಳ್ಳಬಹುದು' ಎನ್ನುತ್ತಾರೆ ''ಸಂಡೆ ಕಾರ್‌ಬಜಾರ್'' ಆಯೋಜಕರು.

ಏನಿದು ಸಂಡೆ ಕಾರ್ ಬಜಾರ್?

ಬೆಂಗಳೂರಿನ ಮೆಜೆಸ್ಟಿಕ್ ಬಳಿ ಫುಟ್‌ಪಾತ್‌ನಲ್ಲಿ ನಿಮಗೆ ಬೇಕಾದ ವಸ್ತುವನ್ನು ಚೌಕಾಸಿ ಮಾಡಿ ಹೇಗೆ ಕೊಂಡು ತರುತ್ತೀರೋ ಅದೇ ರೀತಿ ನೀವು ಕಾರುಗಳನ್ನು ಕೊಳ್ಳಬಹುದು! ಇದುವೆ ಸೆಕೆಂಡ್ ಹ್ಯಾಂಡ್ ಕಾರುಗಳ ಮೇಳ ''ಸಂಡೆ ಕಾರ್ ಬಜಾರ್''.

ಒಂದು ದ್ವಿಚಕ್ರ ವಾಹನ ಕೊಳ್ಳುವಷ್ಟು ಹಣ ನಿಮ್ಮಲ್ಲಿದ್ದರೆ ಸಾಕು. ಕೆಲವೇ ಕ್ಷಣಗಳಲ್ಲಿ ನೀವು ಪ್ರತಿಷ್ಠಿತ ಮಾರುತಿ ಕಾರ್‌ನಿಂದ ಹಿಡಿದು ಅಂಬಾಸಿಡರ್ ಕಾರ್‌ವರೆಗೆ ವಿವಿಧ ಬಗೆಯ, ವರ್ಣಗಳ ಕಾರುಗಳಲ್ಲಿ ಆಸೀನರಾಗಬಹುದು.

ಈ ಕಾರುಗಳ ವಹಿವಾಟಗೆ ಅಲಂಕೃತ ವ್ಯಾಪಾರ ಮಳಿಗೆ (ಷೋರೂಂ)ಗಳೇ ಆಗಬೇಕೆಂದಿಲ್ಲ. ರಸ್ತೆ ಬದಿಯ ಫುಟ್‌ಪಾತ್ ಸಾಕು. ಬೆಂಗಳೂರಿನ ಅನೇಕ ಕಡೆಗಳಲ್ಲಿ ಸೆಕೆಂಡ್ ಹ್ಯಾಂಡ್ ಎಂಬ ಹಣೆಪಟ್ಟಿ ಹೊತ್ತ ಚೆಡಗಿನ ಕಾರುಗಳು ಭಾನುವಾರದಂದು ಗ್ರಾಹಕರನ್ನು ಕೈ ಬೀಸಿ ಕರೆಯುತ್ತಿವೆ.

ನೀವು ಮಾಡಬೇಕಿರುವುದಿಷ್ಟೆ. ಅಲ್ಲಿರುವ ಮೇಜಿನ ಮೇಲೆ ಕಾರುಗಳ ಕೀ ಹಾಗೂ ಅದರ ಜಾತಕ (ದಾಖಲೆ)ಗಳಿರುತ್ತವೆ. ನಿಮ್ಮ ಜೇಬಿನ ತುಂಬ ದುಡ್ಡಿದ್ದರೆ, ನೀವು ಮನಸ್ಸು ಮಾಡಿದರೆ ಕೆಲವೇ ಕ್ಷಣಗಳಲ್ಲಿ ಕಾರಿನ ವ್ಯಾಪಾರ ಕುದುರುತ್ತದೆ.

ಪ್ರತಿಷ್ಠಿತ ಕಾರು ಕಂಪನಿಗಳ ಮಧ್ಯದ ತೀವ್ರ ಪೈಪೋಟಿಯ ಪರಿಣಾಮವಾಗಿ ಕಾರು ಕೊಳ್ಳಬೇಕೆಂಬ ಮಧ್ಯಮ ವರ್ಗದವರ ಕನಸು ನನಸಾಗುವ ಕಾಲ ಇದೀಗ ಸಮೀಪಿಸಿದೆ. 1995ರ ಮಾಡೆಲ್ ಕಾರುಗಳ ಬೆಲೆಯಂತೂ ಈಗ ಗಣನೀಯವಾಗಿ ಕಡಿಮೆಯಾಗಿದೆ. ಈ ವರ್ಷದ ಪ್ರಾರಂಭದಲ್ಲಿ 95ರ ಮಾಡೆಲ್ 'ಮಾರುತಿ 800' ಕಾರಿನ ಬೆಲೆ 1.60 ಲಕ್ಷ ರೂಪಾಯಿ ಇದ್ದದ್ದು ಮೇ ಹೊತ್ತಿಗೆ ರೂ. 1.25 ಲಕ್ಷಕ್ಕೆ ಇಳಿದಿದೆ. 'ಮಾರುತಿ ಝೆನ್' ಬೆಲೆ 2.5 ಲಕ್ಷದಿಂದ ರೂ. 2.2 ಲಕ್ಷಕ್ಕೆ ಕುಸಿದಿದೆ. ಹೊಂಡಾಯ್, ಸ್ಯಾಂಟ್ರೋ ಕಾರುಗಳು ಸೇರಿದಂತೆ ಇನ್ನೂ ಎರಡು ವಿದೇಶಿ ಕಂಪನಿಗಳು ಗ್ರಾಹಕರಿಗೆ ನಿಲುಕುವ ಸುಲಭ ಬೆಲೆಯಲ್ಲಿ ಇಷ್ಟರಲ್ಲೇ ಮಾರುಕಟ್ಟೆಗೆ ಪ್ರವೇಶಿಸಲಿರುವುದರಿಂದ ಡಿಸೆಂಬರ್ ಹೊತ್ತಿಗೆ ಹಳೆ ಕಾರುಗಳ ಬೆಲೆ ಇನ್ನೂ ಪಾತಾಳಕ್ಕೆ ಕುಸಿಯಲಿದೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ.

ನಲ್ವತ್ತು-ಐವತ್ತು ಸಾವಿರ ರೂಪಾಯಿಗಳಿಗೂ ಐದಾರು ವರ್ಷ ಹಳೆಯದಾದ ಮಾರುತಿ ಕಾರು ಸಿಗುವಾಗ ಮಧ್ಯಮ ವರ್ಗದವರ ಕಣ್ಣಲ್ಲಿ ಕಾರಿನ ಹೊಂಗನಸು ಮೂಡುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ. ತಮ್ಮ ಬಳಿ ಇರುವ ದ್ವಿಚಕ್ರ ವಾಹನವನ್ನು 20 ಸಾವಿರ ರೂಪಾಯಿಗೆ ಮಾರಿ ಅದಕ್ಕೆ ಮತ್ತೆ 20-30 ಸಾವಿರ ರೂಪಾಯಿ ಸೇರಿಸಿ ಮಾರುತಿ ಕಾರು ಕೊಂಡು ಕಾರು ಇಟ್ಟವರ ಸಾಲಿಗೆ ಸೇರುವ ವರೂ ಇದ್ದಾರೆ. ಕೆಲವರಿಗೆ ಕಾರು ಅಗತ್ಯವಾದರೆ ಇನ್ನೂ ಹಲವರಿಗೆ ಅದು ಪ್ರತಿಷ್ಠೆಯ ಸಂಕೇತವಾಗಿದೆ.

ಕಾರ್ ಬಜಾರ್‌ನಲ್ಲಿ ದಲ್ಲಾಳಿಗಳು ಪಡೆಯುವ ಕಮೀಷನ್ ಶೇ. 2ರಿಂದ 3 ರಷ್ಟು. ಇವರು ಯಾವುದೇ ಅಧಿಕೃತ ಲೈಸನ್ಸ್ ಪಡೆದಿಲ್ಲವಾದರೂ ಇವರ ವ್ಯವಹಾರವೆಲ್ಲ ವಿಶ್ವಾಸದ ಮೇಲೆಯೇ ನಡೆಯುತ್ತದೆ. ಚೆಕ್-ಡಿ.ಡಿ.ಗೆ ಇಲ್ಲಿ ಅವಕಾಶವಿಲ್ಲ. ನಗದಿಗೆ ಮಾತ್ರ ಅವಕಾಶ. ಕೆಲವೊಮ್ಮೆ ಕಾರುಗಳ ಮೇಲೆ ಕೇಸುಗಳಿದ್ದರೆ ಅಥವಾ ಸಾಲ ಇದ್ದರೆ ಕೊಂಡವರು ಗುಂಡಿಗೆ ಬೀಳುವುದೂ ಉಂಟು. ಆದ್ದರಿಂದ ಗ್ರಾಹಕರು ಸಾಕಷ್ಟು ಕೂಲಂಕಶವಾಗಿ ಪರೀಕ್ಷಿಸಿ ವ್ಯವಹಾರದಲ್ಲಿ ತೊಡಗುವುದು ಅವಶ್ಯ.

''ಪರಸ್ಪರ ವಿಶ್ವಾಸ ನಂಬಿಕೆಯೇ ಈ ವಹಿವಾಟಿನ ಬೆನ್ನೆಲುಬು. ಕಾರನ್ನು ಕೊಳ್ಳುವವರಿಗೆ ಅದನ್ನು ಓಡಿಸಿ ಸರಿಯಾಗಿ ತಪಾಸಣೆ ಮಾಡಲು ಸಾಕಷ್ಟು ಕಾಲಾವಕಾಶ ನೀಡುವುದರಿಂದ ಇಲ್ಲಿ ಗ್ರಾಹಕರಿಗೆ ಮೋಸವಾಗುವ ಪ್ರಶ್ನೆಯೇ ಇಲ್ಲ'' ಎನ್ನುತ್ತಾರೆ, 1993ರಲ್ಲಿಯೇ ಬೆಂಗಳೂರಿನಲ್ಲಿ ಪ್ರಥಮ ಬಾರಿಗೆ ಸಂಡೆ ಕಾರ್ ಬಜಾರ್ ಆರಂಭಿಸಿದ ರಿಚ್ಮಂಡ್ ರಸ್ತೆಯ ಸ್ಟ್ಯಾಂಡರ್ಡ್ ಆಟೋಮೊಬೈಲ್‌ನ ಮಾಲಿಕ ಮುನಾವರ ಶರೀಫ್.

''ಕೆಲವರಿಗೆ ಆಗಾಗ ಕಾರು ಬದಲಾಯಿಸುತ್ತ ಇರುವುದೇ ಶೋಕಿ. ಇದರಿಂದ ಹಳೆ ಕಾರುಗಳ ವಹಿವಾಟು ನಿರಂತರವಾಗಿ ನಡೆಯುತ್ತಿದೆ'' ಎಂಬುವುದು ಶರೀಫ್ ಅವರ ವಿಶ್ಲೇಷಣೆ.

ಆಧುನಿಕತೆಯ ಪೈಪೋಟಿ ಭೋಗವಸ್ತುಗಳ ಪೊರೆಯನ್ನು ಹರಿಯುವುದರ ಜೊತೆಗೆ ಐಶಾರಾಮಿ ಜೀವನದ ಕನಸನ್ನು ಸಾರ್ವತ್ರಿಕಗೊಳಿಸುತ್ತಿರುವುದಕ್ಕೆ ಇಂಥ 'ಕಾರ್ ಬಜಾರ್'ಗಳೇ ಸಾಕ್ಷಿ.

■ ಎಂ. ವಿಶ್ವನಾಥ್

SSLC SSLC SSLC SSLC SSLC SSLC SSLC SSLC SSLC SSLC

ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗಾಗಿ

ರಾಷ್ಟ್ರೀಯ ಪ್ರತಿಭಾನ್ವೇಷಣಾ

ಪರೀಕ್ಷೆ (N.T.S.E) 1998-99

SSLC SSLC SSLC SSLC SSLC SSLC SSLC SSLC SSLC SSLC

ಈ ಪರೀಕ್ಷೆಯ ಮೂಲ ಧ್ಯೇಯ, ರಾಷ್ಟ್ರದ ಎಲ್ಲೆಡೆ ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ, ಆ ವಿದ್ಯಾರ್ಥಿಗಳು ತಮ್ಮ ವ್ಯಾಸಂಗವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮುಂದುವರಿಸಿಕೊಂಡು ಹೋಗಲು ಅವರಿಗೆ ಆರ್ಥಿಕ ನೆರವು ನೀಡುವ ದೃಷ್ಟಿಯಿಂದ ಕೇಂದ್ರ ಸರಕಾರ ಈ ರೀತಿಯ ಉತ್ತಮ ಕಾರ್ಯಯೋಜನೆಯನ್ನು ಜಾರಿಗೆ ತಂದಿದೆ.

ಪರೀಕ್ಷಾ ವಿಧಾನ:

ಈ ಪರೀಕ್ಷೆಯು ಎರಡು ಹಂತಗಳಲ್ಲಿ ನಡೆಯುತ್ತದೆ. ಮೊದಲ ಹಂತದ ಪರೀಕ್ಷೆಗಳನ್ನು ಆಯಾ ರಾಜ್ಯ ಸರಕಾರಗಳು ನಡೆಸುತ್ತವೆ. ರಾಜ್ಯ ಮಟ್ಟದ ಮೊದಲ ಹಂತದ ಪರೀಕ್ಷೆಯು ರಾಜ್ಯದ 33 ಪರೀಕ್ಷಾ ಕೇಂದ್ರಗಳಲ್ಲಿ ದಿನಾಂಕ 13.12.1998ರಂದು ನಡೆಯಲಿದೆ. ಮೊದಲ ಹಂತದ ಈ ಪರೀಕ್ಷೆಯನ್ನು "ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬಿ.ಪಿ.ವಾಡಿಯಾ ರಸ್ತೆ, ಬೆಂಗಳೂರು -4" ಇವರು ನಡೆಸಲಿದ್ದಾರೆ.

ಮೊದಲ ಹಂತದ ಈ ಪರೀಕ್ಷೆಯು ಎರಡು ಪ್ರಶ್ನೆ ಪತ್ರಿಕೆಗಳನ್ನು ಒಳಗೊಂಡಿರುತ್ತದೆ.

ಭಾಗ-1
ಸಾಮಾನ್ಯ ಮಾನಸಿಕ ಸಾಮರ್ಥ್ಯ ಪರೀಕ್ಷೆ:

ಈ ಪತ್ರಿಕೆಯು ನೂರು ಪ್ರಶ್ನೆಗಳಿಂದ ಕೂಡಿದ್ದು, ಪ್ರತಿಪ್ರಶ್ನೆಗೆ ಒಂದೊಂದು ಅಂಕಗಳನ್ನು ನಿಗದಿ ಪಡಿಸಲಾಗಿರುತ್ತದೆ. ಪ್ರಶ್ನೆ ಪತ್ರಿಕೆಯನ್ನು ಉತ್ತರಿಸಲು 90 ನಿಮಿಷಗಳ ಕಾಲಾವಕಾಶ ನೀಡಲಾಗಿರುತ್ತದೆ.

ಭಾಗ-2
ವ್ಯಾಸಂಗ ಪ್ರವೃತ್ತಿ ಪರೀಕ್ಷೆ:

ಇದು ನೂರು ಪ್ರಶ್ನೆಗಳಿಂದ ಕೂಡಿದ್ದು, ಒಟ್ಟು 7 ವಿಷಯಗಳನ್ನು ಒಳಗೊಂಡಿರುತ್ತದೆ. (ಭೌತ ಶಾಸ್ತ್ರ 1 ರಿಂದ 14, ರಸಾಯನ ಶಾಸ್ತ್ರ 15 ರಿಂದ 27, ಜೀವ ವಿಜ್ಞಾನ 28ರಿಂದ 40, ಇತಿಹಾಸ 41ರಿಂದ 54, ಭೂಗೋಳಶಾಸ್ತ್ರ 55ರಿಂದ 67, ಪೌರಶಾಸ್ತ್ರ 68ರಿಂದ 80, ಗಣಿತ 81ರಿಂದ 100) ಪ್ರತಿಯೊಂದು ವಿಷಯವು ಕಡ್ಡಾಯವಾಗಿದ್ದು, ಅಭ್ಯರ್ಥಿಗಳು ಯಾವುದೇ ವಿಷಯವನ್ನು ಬಿಡುವ ಆಗಿಲ್ಲ.

ಎರಡೂ ಪತ್ರಿಕೆಗಳು ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪ್ರಶ್ನೆಗಳಿಂದ ಕೂಡಿರುತ್ತವೆ. ಮೊದಲ ಹಂತದ ರಾಜ್ಯಮಟ್ಟದ ಪರೀಕ್ಷೆಯಲ್ಲಿ ಒಟ್ಟು 170 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಇವರು 2ನೇ ಹಂತದ ರಾಷ್ಟ್ರಮಟ್ಟದ ಪರೀಕ್ಷೆಗೆ ಅರ್ಹರಾಗುತ್ತಾರೆ.

2ನೇ ಹಂತದ ಈ ಪರೀಕ್ಷೆಯನ್ನು ನವದೆಹಲಿಯಲ್ಲಿರುವ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು ನಡೆಸುತ್ತದೆ. ಇದು ಸಹ ಎರಡು ಪ್ರಶ್ನೆ ಪತ್ರಿಕೆಗಳನ್ನು ಒಳಗೊಂಡಿರುತ್ತದೆ. ಈ ಪರೀಕ್ಷೆಯು 1999ರ ಮೇ ತಿಂಗಳಿನಲ್ಲಿ ಬೆಂಗಳೂರಿನಲ್ಲಿರುವ ಆರ್.ವಿ. ಬಾಲಕಿಯರ ಪ್ರೌಢಶಾಲೆ, ಜಯನಗರ ಇಲ್ಲಿ ನಡೆಯುತ್ತದೆ. ಸಾಮಾನ್ಯವಾಗಿ ಪ್ರತಿವರ್ಷ ಮೇ ತಿಂಗಳ 2ನೇ ಭಾನುವಾರದಂದು ನಡೆಯುತ್ತದೆ.

ಸಂದರ್ಶನ:

ಎರಡೂ ಹಂತಗಳ ಪರೀಕ್ಷೆಯ ನಂತರ ರಾಷ್ಟ್ರಮಟ್ಟದಲ್ಲಿ ಅರ್ಹ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುತ್ತದೆ. ಸಂದರ್ಶನದ ನಂತರ ಅಂತಿಮವಾಗಿ ಅಭ್ಯರ್ಥಿಗಳನ್ನು ವಿದ್ಯಾರ್ಥಿ ವೇತನಕ್ಕೆ ಆಯ್ಕೆ ಮಾಡಲಾಗುತ್ತದೆ. ಈ ಎರಡೂ ಹಂತಗಳ ಪರೀಕ್ಷೆಯನ್ನು ಅಭ್ಯರ್ಥಿಗಳು ಕನ್ನಡದಲ್ಲಿಯೂ ಬರೆಯಬಹುದು.

ಅರ್ಹತೆ:

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಮಾನ್ಯತೆ ಪಡೆದ ಶಾಲೆಯಲ್ಲಿ 10ನೇ ತರಗತಿಯಲ್ಲಿ ಓದುತಿದ್ದು, 1999ರ ಏಪ್ರಿಲ್ ತಿಂಗಳಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯುವ ಅಭ್ಯರ್ಥಿಗಳು ಅರ್ಹರು. ಅಲ್ಲದೇ 9ನೇ ತರಗತಿಯ ಪರೀಕ್ಷೆಯಲ್ಲಿ ಕನಿಷ್ಠ ಶೇ.55 ರಷ್ಟು (ಸಾಮಾನ್ಯ ಅಭ್ಯರ್ಥಿಗಳು) ಹಾಗೂ ಶೇ.45 ರಷ್ಟು (ಪ.ಜಾ. ಪ.ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು) ಅಂಕಗಳನ್ನು ಪಡೆದಿರಬೇಕು.

ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರ ಕಚೇರಿ ಹಾಗೂ ತಾಲೂಕು ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗಳಲ್ಲಿ ಕಾಲ ಕಾಲಕ್ಕೆ ಅರ್ಜಿ ನಮೂನೆಗಳು ದೊರೆಯುತ್ತವೆ.

ರಾಷ್ಟ್ರ ಮಟ್ಟದಲ್ಲಿ ದೊರೆಯುವ ವಿದ್ಯಾರ್ಥಿ ವೇತನ

ಪಿ.ಯು.ಸಿ. ಹಂತದಲ್ಲಿ: ತಿಂಗಳಿಗೆ 200 ರೂ. ನಂತೆ 2ವರ್ಷಗಳು + ವರ್ಷಕ್ಕೆ 500 ರೂಗಳ ಪುಸ್ತಕ ಭತ್ಯೆ.
ಪದವಿ ಹಂತದಲ್ಲಿ: ತಿಂಗಳಿಗೆ 300ರೂ + ವರ್ಷಕ್ಕೆ

ತರಬೇತಿ

ಮೊದಲ ಹಂತದ ರಾಜ್ಯಮಟ್ಟದ ಪರೀಕ್ಷೆಯಲ್ಲಿ ಆಯ್ಕೆಯಾಗಿ ಎರಡನೇ ಹಂತದ ರಾಷ್ಟ್ರಮಟ್ಟದ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳಿಗೆ ಹೆಚ್ಚಿನ ಮಾರ್ಗದರ್ಶನ ನೀಡುವ ದೃಷ್ಟಿಯಿಂದ "ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬಿ.ಪಿ.ವಾಡಿಯಾ ರಸ್ತೆ, ಬೆಂಗಳೂರು-4" ಇವರು ಉಚಿತ ತರಬೇತಿ ನೀಡುತ್ತಾರೆ. ಆಯಾ ವಿಷಯಗಳ ಪರಿಣಿತ ತಜ್ಞರನ್ನು ಕರೆಸಿ ಅಭ್ಯರ್ಥಿಗಳಿಗೆ ರಾಷ್ಟ್ರಮಟ್ಟದ ಪರೀಕ್ಷೆಯ ಬಗ್ಗೆ ತರಗತಿಗಳನ್ನು ನಡೆಸುತ್ತಾರೆ. ಅಲ್ಲದೇ ಇಲ್ಲಿ ಪ್ರತ್ಯೇಕವಾಗಿ ಪ್ರತಿಯೊಬ್ಬ ಅಭ್ಯರ್ಥಿಗೂ ವಿಶೇಷ ಗಮನಕೊಟ್ಟು ಅವರನ್ನು 2ನೇ ಹಂತದ ಪರೀಕ್ಷೆಗೆ ಸಜ್ಜುಗೊಳಿಸಲಾಗುತ್ತದೆ. ವಿದ್ಯಾರ್ಥಿಗಳು ಸಂದರ್ಶನ ಎದುರಿಸುವ ಬಗ್ಗೆ ತಜ್ಞರು ಸಲಹೆ ಸೂಚನೆಗಳನ್ನು ಕೊಡುವುದಲ್ಲದೇ, ಮಾದರಿ ಸಂದರ್ಶನ ಹಾಗೂ ಪರೀಕ್ಷೆಗಳನ್ನು ತರಬೇತಿ ಸಮಯದಲ್ಲಿ ನಡೆಸುತ್ತಾರೆ.

1000 ರೂ ಪುಸ್ತಕ ಭತ್ಯೆ

ಸ್ನಾತಕೋತ್ತರ ಪದವಿ ಹಂತದಲ್ಲಿ: ತಿಂಗಳಿಗೆ 500 ರೂ + ವರ್ಷಕ್ಕೆ 1000 ರೂ ಪುಸ್ತಕ ಭತ್ಯೆ

ಪಿ.ಹೆಚ್.ಡಿ. (4 ವರ್ಷಗಳು): ತಿಂಗಳಿಗೆ 1000 ರೂ+ ವರ್ಷಕ್ಕೆ 3000 ರೂ ಸಂಭವ ಭತ್ಯೆ.

ಪೋಷಕರ ವಾರ್ಷಿಕ ಆದಾಯ ರೂ. 50,000/- ಕ್ಕಿಂತ ಕಡಿಮೆ ಇರುವವರಿಗೆ ಮೇಲೆ ತಿಳಿಸಿರುವ ವಿದ್ಯಾರ್ಥಿ ವೇತನ ದೊರೆಯುತ್ತದೆ.

ಪೋಷಕರ ವಾರ್ಷಿಕ ಆದಾಯ ರೂ. 50,000/- ಮೀರಿದವರಿಗೆ ಮೇಲೆ ತಿಳಿಸಿರುವ ವಿದ್ಯಾರ್ಥಿ ವೇತನದ ಶೇ. 50 ರಷ್ಟು ದೊರೆಯುತ್ತದೆ.

ರಾಜ್ಯ ಮಟ್ಟದಲ್ಲಿ:

ಪ್ರಥಮ ಹಂತದ ರಾಜ್ಯಮಟ್ಟದ ಪರೀಕ್ಷೆಯಲ್ಲಿ ಆಯ್ಕೆಯಾಗಿ ಎರಡನೇ ಹಂತದ ರಾಷ್ಟ್ರ ಮಟ್ಟದ ಪರೀಕ್ಷೆಯಲ್ಲಿ ಆಯ್ಕೆಯಾಗದ ಅಭ್ಯರ್ಥಿಗಳಿಗೆ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕಲ್ಯಾಣ ನಿಧಿಯಿಂದ ತಿಂಗಳಿಗೆ 150 ರೂನಂತೆ ಪಿ.ಯು.ಸಿ ಹಂತದಲ್ಲಿ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.

ಸಾಮಾನ್ಯವಾಗಿ ಈ ಪರೀಕ್ಷೆಯಲ್ಲಿ ಬರುವ ಪ್ರಶ್ನೆಗಳು ಅಭ್ಯರ್ಥಿಯು ಹತ್ತನೇ ತರಗತಿಯವರೆಗೆ ಕಲಿತಿರುವ ವಿಷಯಗಳಿಗೆ ಸಂಬಂಧಿಸಿರುತ್ತವೆ. ವಿದ್ಯಾರ್ಥಿಗಳು ತಮ್ಮಲ್ಲಿರುವ ಪ್ರತಿಭೆಯನ್ನು ಗುರುತಿಸಿಕೊಳ್ಳಲು ಇದೊಂದು ಉತ್ತಮ ಅವಕಾಶ.

ರಾಜ್ಯಮಟ್ಟದ ಈ ಪರೀಕ್ಷೆಯಲ್ಲಿ ಬಹುತೇಕ 8, 9 ಮತ್ತು 10ನೇ ತರಗತಿಗಳ ಪಠ್ಯ ವಿಷಯಗಳಿಂದ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಸಾಮಾನ್ಯವಾಗಿ ಶೇ.40ರಷ್ಟು 8ನೇ ತರಗತಿಯ ಪಠ್ಯ ವಿಷಯಗಳಿಂದ, ಶೇ.40 ರಷ್ಟು 9ನೇ ತರಗತಿಯ ಪಠ್ಯ ವಿಷಯಗಳಿಂದ ಹಾಗೂ ಶೇ. 20ರಷ್ಟು 10ನೇ ತರಗತಿಯ ಪಠ್ಯವಿಷಯಗಳಿಂದ ಆರಿಸಲಾಗಿರುತ್ತದೆ. ಆದುದರಿಂದ ಅಭ್ಯರ್ಥಿಯು ಮೂರು ವರ್ಷಗಳ ಸಮಾಜ, ವಿಜ್ಞಾನ, ಗಣಿತ ವಿಷಯಗಳನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡಿದರೆ ಸುಲಭವಾಗಿ ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಬಹುದು.

1997-98ನೇ ಸಾಲಿನ ಮೊದಲ ಹಂತದ ಪರೀಕ್ಷೆಯಲ್ಲಿ ಒಟ್ಟು 170 ಮಂದಿ ಆಯ್ಕೆಯಾಗಿ, 2ನೇ ಹಂತದ ಪರೀಕ್ಷೆಗೆ ಕುಳಿತುಕೊಂಡಿದ್ದರು. ಇವರಲ್ಲಿ 86 ಮಂದಿ ವಿದ್ಯಾರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಅನಂತರ ಅಂತಿಮವಾಗಿ ಸಂದರ್ಶನ ಎದುರಿಸಿ ಕರ್ನಾಟಕದಿಂದ ಒಟ್ಟು 54 ವಿದ್ಯಾರ್ಥಿಗಳು ರಾಷ್ಟ್ರಿಯಾ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದರು.

ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ, ಅವರನ್ನು ಪ್ರೋತ್ಸಾಹಿಸಲು ಕೇಂದ್ರ ಸರಕಾರ ಜಾರಿಗೆ ತಂದಿರುವ ಈ ಯೋಜನೆ ಅತ್ಯಂತ ಶ್ಲಾಘನೀಯವಾದುದು. ಆದರೆ ಬಹಳ ದುಃಖದ ಸಂಗತಿಯೆಂದರೆ ಗ್ರಾಮೀಣ ಪ್ರದೇಶದ ಎಷ್ಟೋ ಮಂದಿ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಇದರ ಬಗ್ಗೆ ಅರಿವು ಇಲ್ಲದಿರುವುದು. ಹಿಂದಿನ ವರ್ಷಗಳ ಫಲಿತಾಂಶವನ್ನು ಅವಲೋಕಿಸಿದಾಗ ಬಹುತೇಕ ವಿದ್ಯಾರ್ಥಿಗಳು ನಗರ ಪ್ರದೇಶದ ಹಾಗೂ ಇಂಗ್ಲಿಷ್ ಮಾಧ್ಯಮದವರೆ ಆಯ್ಕೆಯಾಗುತ್ತಾ ಬಂದಿದ್ದಾರೆ.

ಗ್ರಾಮೀಣ ಅಭ್ಯರ್ಥಿಗಳಿಗೆ ಇದೇನು ಕೈಗೆಟುಕದ ನಕ್ಷತ್ರವೇನಲ್ಲ. ಅವರಿಗೆ ಸರಿಯಾದ ಮಾರ್ಗದರ್ಶನ ನೀಡಿ, ಪರೀಕ್ಷೆಯ ಬಗ್ಗೆ ಅರಿವು ಮೂಡಿಸಿದಲ್ಲಿ ಅವರೂ ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುತ್ತಾರೆ. ಪರೀಕ್ಷೆಯು ಕನ್ನಡ ಮಾಧ್ಯಮದಲ್ಲಿಯೂ ಇರುವುದರಿಂದ ನಮ್ಮ ಗ್ರಾಮೀಣ ಅಭ್ಯರ್ಥಿಗಳು ವಿಚಲಿತರಾಗ ಬೇಕಾಗಿಲ್ಲ. ಈ ಪರೀಕ್ಷೆಗೆ ಸಂಬಂಧ ಪಟ್ಟಂತೆ ಅವರಿಗೆ ಶಿಕ್ಷಕರು, ಪೋಷಕರು ಸಂಘ ಸಂಸ್ಥೆಗಳು ಪ್ರೋತ್ಸಾಹ ನೀಡಬೇಕು. ಸಮೂಹ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ಹಾಗೂ ಗ್ರಾಮೀಣ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ಪರೀಕ್ಷೆಯ ಬಗ್ಗೆ ಪಾಠಗಳನ್ನು ಪ್ರಸಾರ ಮಾಡುವುದರಿಂದ ಹೆಚ್ಚು ಅನುಕೂಲವಾಗಬಹುದು.

■ ಎ.ಎಂ.ಸುರೇಶ್

ಅಭ್ಯರ್ಥಿಗಳಿಗೆ ಸೂಚನೆಗಳು:

- ಉತ್ತರಗಳನ್ನು ಪ್ರತ್ಯೇಕ ಉತ್ತರ ಪತ್ರಿಕೆಯಲ್ಲೇ ಬರೆಯಬೇಕು.
- ಪ್ರವೇಶ ಪತ್ರದಲ್ಲಿ ಕೊಟ್ಟಿರುವ ರೀತಿಯಲ್ಲಿ ಕೇಂದ್ರದ ಸಂಕೇತ ಸಂಖ್ಯೆಯನ್ನು ಮತ್ತು ಪ್ರವೇಶ ಪತ್ರದ ಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಬೇಕು. ಒಂದು ಚೌಕದಲ್ಲಿ ಒಂದು ಅಂಕಿಯನ್ನು ಮಾತ್ರ ಬರೆಯಬೇಕು.
- ಜಾತಿ ಮತ್ತು ಲಿಂಗದ ಬಗ್ಗೆ ಉತ್ತರ ಪತ್ರಿಕೆಯಲ್ಲಿ ನಮೂದಿಸಬೇಕು.
- ಎಲ್ಲಾ ವಿಷಯಗಳೂ ಮತ್ತು ಎಲ್ಲಾ ಪ್ರಶ್ನೆಗಳೂ ಕಡ್ಡಾಯವಾಗಿವೆ.
- ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಅಥವಾ ಐದು ಉತ್ತರಗಳನ್ನು ಕೊಟ್ಟಿರುತ್ತಾರೆ. ಅವುಗಳಲ್ಲಿ ಒಂದು ಮಾತ್ರ ಸರಿಯಾದ ಉತ್ತರವಾಗಿರುತ್ತದೆ. ಆದ್ದರಿಂದ ಸರಿಯಾದ ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
- ಕೇಂದ್ರದ ಸಂಕೇತ ಸಂಖ್ಯೆ ಮತ್ತು ಪ್ರವೇಶಪತ್ರದ ಸಂಖ್ಯೆಯನ್ನು ಬಿಟ್ಟು ಬೇರೆ ಏನನ್ನೂ ಉತ್ತರ ಪತ್ರಿಕೆಯಲ್ಲಿ ಅಥವಾ ಪ್ರಶ್ನೆ ಪತ್ರಿಕೆಯಲ್ಲಿ ಬರೆಯಬಾರದು.
- ಎಲ್ಲಾ ಪ್ರಶ್ನೆಗಳೂ ಕಡ್ಡಾಯವಾಗಿರುವುದರಿಂದ ಪ್ರಶ್ನೆ ಪತ್ರಿಕೆಗೆ ಉತ್ತರ ಬರೆಯಬೇಕು. ಆರಂಭಿಸುವ ಮುನ್ನ ಇಡೀ ಪತ್ರಿಕೆಯನ್ನು ಓದುವ ಪ್ರಯತ್ನ ಮಾಡಬೇಡಿ.
- ಮೊದಲನೆ ಪ್ರಶ್ನೆಯಿಂದ ಪ್ರಾರಂಭಿಸಿ ಒಂದರ ಬಳಿಕ ಇನ್ನೊಂದು ಪ್ರಶ್ನೆಯಂತೆ ಎಲ್ಲಾ ಪ್ರಶ್ನೆಗಳನ್ನು ಪ್ರಯತ್ನಿಸಿ ಪೂರ್ತಿಗೊಳಿಸಿ.
- ಯಾವುದೇ ಪ್ರಶ್ನೆಗೆ ಉತ್ತರ ತೋಚದಿದ್ದಲ್ಲಿ ಅದರ ಮೇಲೆ ಹೆಚ್ಚು ವೇಳೆ ಕಳೆಯಬೇಡಿ. ಮುಂದಿನ ಪ್ರಶ್ನೆಗಳಿಗೆ ಹೋಗಿ, ವೇಳೆ ಉಳಿದಲ್ಲಿ ಮೊದಲು ಬಿಟ್ಟ ಪ್ರಶ್ನೆಗಳಿಗೆ ಮರಳಿ ಬಂದು ಅವನ್ನು ಉತ್ತರಿಸಲು ಪ್ರಯತ್ನಿಸಿ.

■ಶಂಕರಗೌಡ ವೈ. ಪಾಟೀಲ

NTSE ಮಾದರಿ ಪ್ರಶ್ನೆ ಪತ್ರಿಕೆ

■ಶಂಕರಗೌಡ ವೈ. ಪಾಟೀಲ

ಭಾಗ - 1

ಸಾಮಾನ್ಯ ಮಾನಸಿಕ ಸಾಮರ್ಥ್ಯ ಪರೀಕ್ಷೆ

ಸೂಚನೆ :

ಈ ಕೆಳಗಿನ ಪ್ರಶ್ನೆಗಳು ಸಂಖ್ಯೆಗಳನ್ನು ಆಧರಿಸಿವೆ. ಪ್ರತಿಯೊಂದರಲ್ಲಿಯೂ ಒಂದು ಶ್ರೇಣಿಯನ್ನು ಕೊಟ್ಟಿದೆ. ಪ್ರತಿಯೊಂದು ಶ್ರೇಣಿಯಲ್ಲಿಯೂ ಒಂದು ಸಂಖ್ಯೆಯು ಬಿಟ್ಟು ಹೋಗಿದೆ. ಆಯಾ ಪ್ರಶ್ನೆಗಳ ಕೆಳಗೆ ಕೊಟ್ಟಿರುವ ಪರ್ಯಾಯಗಳಿಂದ ಸರಿಯಾದ ಉತ್ತರವನ್ನು ಕಂಡುಹಿಡಿಯಿರಿ.

1. 74, 97, 122, 149, 178, 209,?
   1) 242, 2) 262 3) 296
   4) 367 5) 387
2. 729, 243, 81, 27, 9, 3,?
   1) 6 2) 5 3) 3 4) 2 5) 1
3. 9, 6, 15, 21, 36, 57,?
   1) 123, 2) 93 3) 83
   4) 81 5) 79
4. 6, 6, 12, 24, 20, 60,?
   1) 90 2) 70 3) 50
   4) 30 5) 25
5. 8, 20, 45, 96, 199,?
   1) 295 2) 395 3) 406
   4) 407 5) 420
6. 93, 76, 95, 74, 97,?
   1) 112 2) 102 3) 91 4) 72 5) 68
7. 840, 168, 42, 14, 7, 2,?
   1) 12 2) 9 3) 7 4) 6 5) 1
8. 3, 3, 6, 18, 72,?
   1) 80 2) 90 3) 280 4) 320 5) 360
9. 600, 540, 660, 480, 720,?
   1) 360 2) 420, 3) 960
   4) 1120 5) 1206
10. 4, 4, 7, 11, 12, 30,?
    1) 42 2) 36 3) 28 4) 19 5) 18
11. 6, 16, 36, 76,?
    1) 96 2) 134 3) 155
    4) 156 5) 236
12. 81, 9, 121, 11, 169,?
    1) 196 2) 13 3) 14 4) 15 5) 225
13. 234, 225, 216, 207, 198,?
    1) 180 2) 199 3) 207
    4) 189 5) 280
14. 4, 7, 8, ?. 12,?
    1) 11- 15 2) 11- 13 3) 9- 15
    4) 9- 13 5) 11- 14
15. 36, 31, 30, 25, 24,?
    1) 20 2) 18 3) 19 4) 23 5) 13

ಸೂಚನೆ :

ಈ ಕೆಳಗಿನ ಪ್ರಶ್ನೆಗಳು ಸಮಸ್ಯೆಗಳ ರೂಪದಲ್ಲಿವೆ. ಸರಿಯಾದ ಉತ್ತರವನ್ನು ಗುರುತಿಸಿರಿ.

16. ಮೂರು ಕಿಲೋಮೀಟರ್ ಅಂತರದಲ್ಲಿರುವ ಎರಡು ನಿಲ್ದಾಣಗಳ ನಡುವಿನ ದೂರವನ್ನು ಕ್ರಮಿಸಲು ರೈಲೊಂದು 6 ನಿಮಿಷಗಳನ್ನು ತೆಗೆದುಕೊಂಡರೆ, ಆ ರೈಲಿನ ಸರಾಸರಿ ವೇಗವೆಷ್ಟು?
    1. 20 ಕಿ.ಮೀ/ಗಂ
    2. 25 ಕಿ.ಮೀ/ಗಂ
    3. 30 ಕಿ.ಮೀ/ಗಂ
    4. 35 ಕಿ.ಮೀ/ಗಂ
    5. 40 ಕಿ.ಮೀ/ಗಂ
17. ಐದು ಕಿ.ಮೀ ದೂರದಲ್ಲಿ ನಡೆದ ಅಪಘಾತ ಸ್ಥಳದಿಂದ ಅಂಬ್ಯುಲೆನ್ಸ್ ಒಂದಕ್ಕೆ ಕರೆ ಬರುತ್ತದೆ. ಆ ವಾಹನವನ್ನು ಗಂಟೆಗೆ 40 ಕಿ.ಮೀ. ವೇಗದಲ್ಲಿ ಓಡಿಸಿದರೆ, ಅಪಘಾತ ಸ್ಥಳವನ್ನು ತಲುಪಲು ತೆಗೆದುಕೊಳ್ಳುವ ಸಮಯವೆಷ್ಟು?
    1. 3 ನಿಮಿಷಗಳು
    2. 7.5 ನಿಮಿಷಗಳು 3. 10 ನಿಮಿಷಗಳು
    4. 13.5 ನಿಮಿಷಗಳು 5. 15 ನಿಮಿಷಗಳು
18. ಒಂದು ವಸ್ತುವಿನ ಬೆಲೆಯು ಅದರ ಮೂಲ ಬೆಲೆಯ ಶೇಕಡಾ 90 ರಷ್ಟು ಇರುತ್ತದೆ. ಈ ರಿಯಾಯಿತಿ ದರಕ್ಕೆ 90 ಪೈಸೆ ಸೇರಿಸಿದರೆ ವಸ್ತುವಿನ ಮೂಲ ಬೆಲೆಗೆ ಸಮನಾಗುತ್ತದೆ. ಹಾಗಾದರೆ ಆ ವಸ್ತುವಿನ ಮೂಲ ಬೆಲೆ ಎಷ್ಟು?
    1. ರೂ. 0.09 2. ರೂ.0.90
    3. ರೂ. 9.00 4. ರೂ. 9.90
    5. ರೂ. 9.99
19. 50 ಬಾಲಕಿಯರು ಹಾಗೂ 70 ಬಾಲಕರು ಇರುವ ತರಗತಿಯೊಂದು ಒಂದು ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸುತ್ತದೆ. ಅದರಲ್ಲಿ ಶೇಕಡಾ 40 ರಷ್ಟು ಬಾಲಕಿಯರು ಹಾಗೂ ಶೇಕಡಾ 50 ರಷ್ಟು ಬಾಲಕರು ಭಾಗವಹಿಸಿದರೆ, ತರಗತಿಯ ಶೇಕಡಾ ಎಷ್ಟು ವಿದ್ಯಾರ್ಥಿಗಳು ಭಾಗವಹಿಸಿದ ಹಾಗೆ ಆಗುತ್ತದೆ?
    1) 40 2) 42 3) 44 4) 46 5) 48
20. ಮೆಟ್ಟಿಲುಗಳ ಬಳಿ ನಿಂತಿರುವ ಒಬ್ಬ ವ್ಯಕ್ತಿಯು 4 ಮೆಟ್ಟಿಲುಗಳನ್ನು ಇಳಿದು 3 ಮೆಟ್ಟಿಲುಗಳನ್ನು ಹತ್ತಿ, 6 ಮೆಟ್ಟಿಲುಗಳನ್ನು ಇಳಿದ, 2 ಮೆಟ್ಟಿಲುಗಳನ್ನು ಹತ್ತಿ, 9 ಮೆಟ್ಟಿಲುಗಳನ್ನು ಹತ್ತಿ, 2 ಮೆಟ್ಟಿಲುಗಳನ್ನು ಇಳಿಯುತ್ತಾನೆ. ಈಗ ಅವನು ಮೊದಲಿಗೆ ನಿಂತಿದ್ದ ಮೆಟ್ಟಿಲಿನಿಂದ ಎಲ್ಲಿ ನಿಂತಿದ್ದಾನೆ.
    1. ಎರಡು ಮೆಟ್ಟಿಲು ಕೆಳಗೆ
    2. ಒಂದು ಮೆಟ್ಟಿಲು ಕೆಳಗೆ
    3. ಅದೇ ಜಾಗದಲ್ಲಿರುತ್ತಾನೆ
    4. ಒಂದು ಮೆಟ್ಟಿಲು ಮೇಲೆ
    5. ಎರಡು ಮೆಟ್ಟಿಲು ಮೇಲೆ

ಸೂಚನೆ :

ಒಂದು ಸಾಂಕೇತಿಕ ಭಾಷೆಗೆ ಅನುಗುಣವಾಗಿ 1ನೇ ಸ್ತಂಭದ ಕೆಳಗೆ ದೊಡ್ಡ ಅಕ್ಷರಗಳಲ್ಲಿ ಕೊಟ್ಟಿರುವ ಪದಗಳನ್ನು 2ನೇ ಸ್ತಂಭದ ಕೆಳಗೆ ಕೊಟ್ಟಿರುವ ಚಿಕ್ಕ ಅಕ್ಷರಗಳಲ್ಲಿ ಬರೆದಿದೆ. ಆದರೆ 2ನೇ ಸ್ತಂಭದ ಕೆಳಗಿನ ಪದಗಳ ಕ್ರಮ 1ನೇ ಸ್ತಂಭದಲ್ಲಿನ ಪದಗಳಿಗೆ ಅನುಗುಣವಾಗಿಲ್ಲ. ಮತ್ತು 2ನೇ ಸ್ತಂಭದಲ್ಲಿನ ಪದಗಳಲ್ಲಿನ ಅಕ್ಷರಗಳ ಕ್ರಮವೂ ಸಹ ಅನುಗುಣವಾಗಿಲ್ಲ. ಸಾಂಕೇತಿಕ ಭಾಷೆಯನ್ನು ಕಂಡುಹಿಡಿದು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

COLUMN - 1	COLUMN - 2
1. NEVER	rcmg
2. LEAN	ynlr
3. NEWS	ldmp
4. WARM	gxlm
5. MERCY	mghmy
6. CHROME	pmcil
7. HATE	moydnz
8. BEAST	zmuyn
9. DOG	kgm
10. FED	oks

21. BROWN
   1. byogr
   2. iroyh
   3. iyorg
   4. yirog
   5. iyrog

22. SHORT
   1. codpy
   2. ycdop
   3. cdpyo
   4. doycp
   5. cdoyp

23. CLEAN
   1. xglzm
   2. zxmlg
   3. zınxgl
   4. znxlg
   5. mzlxn

24. MOTHER
   1. ydponm
   2. podnym
   3. dpoynm
   4. nopdmy
   5. mpodny

25. VALE
   1. lxhn
   2. xhml
   3. hgxm
   4. hlxm
   5. xnlh

26. NESTLE
   1. gmcpxm
   2. ggpcmx
   3. pcgxmm
   4. gcxpmp
   5. xpmgcm

27. WRONG
   1. gsyro
   2. osgyr
   3. ryogs
   4. ygrso
   5. sygor

28. HOME
   1. node
   2. donm
   3. onds
   4. ndos
   5. odmn

29. DON
   1. xok
   2. gox
   3. mok
   4. kog
   5. sog

30. CLASS
   1. xlczz
   2. zxicc
   3. lxczz
   4. zxlcc
   5. xlZcc

ಸೂಚನೆ:

ಈ ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದು ಪ್ರಶ್ನೆಯಲ್ಲಿಯೂ ಒಂದು ಪ್ರಶ್ನಾರ್ಥಕ ಚಿಹ್ನೆಯಿಂದ ಸೂಚಿಸಿರುವ ಖಾಲಿ ಜಾಗವಿದೆ. ಆಯಾ ಪ್ರಶ್ನೆಯ ಕೆಳಗೆ ಕೊಟ್ಟಿರುವ ಐದು ಪರ್ಯಾಯಗಳ ಪೈಕಿ ಒಂದು ಮಾತ್ರ ಸರಿಯಾಗಿದೆ. ಅದನ್ನು ಆರಿಸಿ ಬರೆಯಿರಿ.

31. HKJM : LONQ : : PSRU : ?
   1. TXYV
   2. XWTY
   3. TWVY
   4. WTXY
   5. XYTW

32. WOUD: UESF : : ? : MIKJ
   1. GOMH
   2. HMGO
   3. GOHM
   4. HGOM
   5. OGMH

33. LLNM :? : : TPVQ : XRZS
   1. HHJK
   2. PPRO
   3. PNRO
   4. JJHK
   5. JNRO


34. ? : FIHK : : JMLO: NQPS
   1. BEDG
   2. CEDG
   3. CGDE
   4. BDGE
   5. CDGE

35. HLPTXB: DZVRNJ:: BGLQVA:?
   1. CXNSID
   2. CXNISD
   3. CXSNDI
   4. CXSNID
   5. CSXNDI


ಸೂಚನೆ :

ಈ ಕೆಳಗಿನ ಪ್ರಶ್ನೆಗಳಲ್ಲಿ ಕೆಲವು ಸಂಖ್ಯೆಗಳುಳ್ಳ ಐದು ಚಿತ್ರಗಳಿವೆ. ಪ್ರತಿಯೊಂದರಲ್ಲಿಯೂ, ನಾಲ್ಕು ಚಿತ್ರಗಳಲ್ಲಿರುವ ಸಂಖ್ಯೆಗಳು ಒಂದೊಂದು ಸೂತ್ರಕ್ಕನುಗುಣವಾಗಿವೆ. ಆದರೆ ಒಂದು ಚಿತ್ರದಲ್ಲಿರುವ ಸಂಖ್ಯೆಗಳು ಇವಕ್ಕೆ ಅನುಗುಣವಾಗಿಲ್ಲ. ಪ್ರತಿಯೊಂದು ಪ್ರಶ್ನೆಯಲ್ಲಿ ಸೂತ್ರಕ್ಕೆ ಅನುಗುಣವಾಗಿಲ್ಲದ ಚಿತ್ರವನ್ನು ಗುರುತಿಸಿರಿ.


36.




37.




38.



39.



40.



ಸೂಚನೆ :

ಈ ಕೆಳಗಿನ ಪ್ರಶ್ನೆಗಳು ಸಮಾನುಪಾತಕ್ಕೆ ಸಂಬಂಧಿಸಿವೆ. Xನ ಬೆಲೆ ಹೇಳಿ

41. 1:2=3 : X
 1) 1 2) 4 3) 6 4) 8

42. 3:6=X : 4
 1) 2 2) 8 3) 18 4) 0

43. 12:X=36 :3
 1) 12 2) 1 3) 4 4) 8

44. 2:4=4 : X
 1) 3 2) 6 3) 71 4) 8

45. X:3=3:9
 1) 9 2) 1 3) 4 4) 5

46. X:7=2:14
 1) 2 2) 3 3) 1 4) 8

47. 3:10=X:20
 1) 6 2) 12 3) 8 4) 18

48. 3:X=X:3
 1) 3 2) 5 3) 10 4) 8

49. 16:X=32:2
 1) 8 2) 3 3) 4 4) 1

50. X:5=6:15
 1) 2 2) 4 3) 6 4) 8

(ಈ ರೀತಿಯಾಗಿ ಈ ಪತ್ರಿಕೆಯಲ್ಲಿ ಒಟ್ಟು 100 ಪ್ರಶ್ನೆಗಳು ಇರುತ್ತವೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಒಟ್ಟು 50 ಮಾದರಿ ಪ್ರಶ್ನೆಗಳನ್ನು ನೀಡಲಾಗಿದೆ)

ಉತ್ತರಗಳು

1.(1)	2.(5)	3.(2)	4.(4)	5.(3)
6.(4)	7.(3)	8.(5)	9.(2)	10(4)
11.(4)	12.(2)	13.(4)	14.(1)	15.(3)
16.(3)	17.(2)	18.(2)	19.(4)	20.(5)
21.(3)	22.(5)	23. (2)	24.(4)	25.(4)
26.(1)	27.(3)	28.(2)	29.(4)	30.(4)
31.(3)	32.(5)	33.(3)	34. (1)	35.(4)
36.(3)	37.(1)	38.(1)	39.(1)	40.(4)
41.(3)	42.(1)	43.(2)	44. (4)	45.(2)
46.(3)	47.(1)	48.(1)	49. (4)	50.(1)

ಭಾಗ - 2

ವ್ಯಾಸಂಗ ಪ್ರವೃತ್ತಿ ಪರೀಕ್ಷೆ

1. ಪ್ರೆಷರ್ ಕುಕ್ಕರ್‌ನಲ್ಲಿ ಆಹಾರ ಬೇಗನೆ ಬೇಯಲು ಕಾರಣವೇನು?
 ಎ) ಉಗಿಯ ಶಕ್ತಿಯಿಂದ ಬೇಗನೆ ಬೇಯುವುದು
 ಬಿ) ಪಾತ್ರೆಗಾಗಿ ಉಪಯೋಗಿಸಿದ ಲೋಹದ ಕಾರಣದಿಂದ
 ಸಿ) ದ್ರವಗಳ ಮೇಲೆ ಒತ್ತಡ ಹೆಚ್ಚಿದಂತೆ ಕುದಿಯುವ ಬಿಂದು ಕಡಿಮೆಯಾಗುತ್ತದೆ
 ಡಿ) ನೀರು ಉಗಿಯಾಗುವಾಗ ಹೀರಿಕೊಂಡ ಶಕ್ತಿ ಬಿಡುಗಡೆಯಾಗುವುದರಿಂದ

2. ಸೂರ್ಯನನ್ನು ಬಿಟ್ಟರೆ ಭೂಮಿಗೆ ಅತೀ ಸಮೀಪದ ನಕ್ಷತ್ರ ಯಾವುದು?
 ಎ) ಸೆಂಟೆನರಿ ಬಿ) ಪ್ರಾಕ್ಸಿನ್
 ಸಿ) ಮಾಕ್ಸಿಮಾ ಡಿ) ಪ್ರಾಕ್ಸಿಮಾ ಸೆಂಟಾರಿ

3. ಮರಳುಗಾಡಿನಲ್ಲಿ ಮರೀಚಿಕೆಗಳು ಈ ಕಾರಣದಿಂದ ಉಂಟಾಗುವುವು.
 ಎ) ಬೆಳಕಿನ ವಕ್ರೀಭವನದಿಂದ
 ಬಿ) ಗಾಳಿಯ ಪದರುಗಳಿಂದ
 ಸಿ) ಬಿಸಿಲಿನ ಹೆಚ್ಚಳದಿಂದ
 ಡಿ) ಪೂರ್ಣಾಂತರಿಕ ಪ್ರತಿಫಲನದಿಂದ

4. ಪುಸ್ತಕದ ಹಾಳೆಯ ದಪ್ಪ ಅಳೆಯಲು ಉಪಯೋಗಿಸುವ ಉಪಕರಣ ಯಾವುದು?
 ಎ) ಕ್ಯಾಲಿಪರ್ಸ್ ಬಿ) ಸ್ಕ್ರೂಗೇಜ್
 ಸಿ) ಸ್ಪೆರೋಮೀಟರ್ ಡಿ) ಯಾವುದೂ ಅಲ್ಲ.

5. ಪೃಥ್ವಿಯು ಸೂರ್ಯನ ಸುತ್ತಲೂ ತಿರುಗುವಾಗ ತನ್ನ ಅಕ್ಷಕ್ಕೆ ಎಷ್ಟು ಕೋನ ಮಾಡಿದೆ?
 ಎ) 23 $1/4^0$ ಬಿ) 23^0
 ಸಿ) 23 $1/2^0$ ಡಿ 23 $3/4^0$

6. ಅಣುಶಕ್ತಿಯ ಬಲದ ಮೂಲಮಾನವು ಯಾವುದಾಗಿದೆ?
 ಎ) ಕೂಲಾಂಬ್ ಬಿ) ನ್ಯೂಟನ್
 ಸಿ) ಮೆಗಾನ್ ಡಿ) ಯಾವುದೂ ಅಲ್ಲ

7. ಭೂಮಿಯ ಮೇಲೆ 6 ಕಿ.ಗ್ರಾಂ. ತೂಗುವ ವಸ್ತುವು ಚಂದ್ರನ ಮೇಲೆ ಎಷ್ಟು ತೂಗುತ್ತದೆ?
 ಎ) 1 ಕಿ.ಗ್ರಾಂ ಬಿ) 2 ಕಿ.ಗ್ರಾಂ
 ಸಿ) 3 ಕಿ.ಗ್ರಾಂ ಡಿ) 4 ಕಿ.ಗ್ರಾಂ

8. ವಾತಾವರಣದ ಒತ್ತಡ ಅಳೆಯಲು ಉಪಯೋಗಿಸುವ ಸಾಧನ ಯಾವುದು?
 ಎ) ಲ್ಯಾಕ್ಟೋಮೀಟರ್
 ಬಿ) ಮೊನೋಮೀಟರ್
 ಸಿ) ಬ್ಯಾರೋಮೀಟರ್
 ಡಿ) ಯಾವುದೂ ಅಲ್ಲ

9. ಸೂಜಿರಂಧ್ರ ಕ್ಯಾಮೆರಾದ ತತ್ವವು ಇದರ ಮೇಲೆ ಆಧರಿಸಿದೆ.
 ಎ) ಬೆಳಕಿನ ಪ್ರತಿಫಲನ

ಬಿ) ಬೆಳಕಿನ ವಕ್ರೀಭವನ
ಸಿ) ಬೆಳಕಿನ ಸರಳ ರೇಖಾ ಪ್ರಸರಣ
ಡಿ) ಬೆಳಕಿನ ಬಾಗುವಿಕೆ

10. ಈ ಕೆಳಗಿನವುಗಳಲ್ಲಿ ಯಾವ ಗುಂಪು ಮೂಲ ಬಣ್ಣಗಳನ್ನು ಹೊಂದಿದೆ?
ಎ) ಹಳದಿ, ಕೆಂಪು, ನೀಲಿ
ಬಿ) ಹಳದಿ, ಕೆಂಪು ಹಸಿರು
ಸಿ) ನೀಲಿ, ಹಳದಿ, ಹಸಿರು
ಡಿ) ಕರಿ, ಹಳದಿ, ಹಸಿರು

11. ನೀಲಿ ಗಾಜಿನ ಮೂಲಕ ಕೆಂಪು ಗುಲಾಬಿಯನ್ನು ನೋಡಿದಾಗ ಅದು ಕಾಣುವ ಬಣ್ಣ ಯಾವುದು?
ಎ) ಹಸಿರು ಬಿ) ಕಪ್ಪು
ಸಿ) ನೀಲಿ ಡಿ) ಹಳದಿ

12. ಕೆಳಗಿನವುಗಳಲ್ಲಿ ಇದು ಮೂರನೇ ವರ್ಗದ ಸನ್ನೆಗೆ ಉದಾಹರಣೆಯಾಗಿದೆ.
ಎ) ಕತ್ತರಿ ಬಿ) ಅಡಿಕೆ ಕತ್ತರಿ
ಸಿ) ಚಿಮ್ಮಟ ಡಿ) ಸನ್ನೆ ಕೋಲು

13. ಸೋನಾರ ಯಂತ್ರದಲ್ಲಿ ಈ ಕೆಳಗಿನವುಗಳ ಉಪಯೋಗವಾಗಿಲ್ಲ.
ಎ) ಧ್ವನಿ ತರಂಗಗಳು ಬಿ) ಧ್ವನಿ ಸ್ಪಂದನಗಳು
ಸಿ) ರೇಡಿಯೋ ತರಂಗಗಳು
ಡಿ) ಶ್ರವಣಾತೀತ ಧ್ವನಿ ತರಂಗಗಳು

14. ಈ ಹೆಸರಿನ ವಿಜ್ಞಾನಿಯು ನ್ಯೂಕ್ಲಿಯಸ್ ಭಾಗದಲ್ಲಿ ನ್ಯೂಟ್ರಾನುಗಳು ಮತ್ತು ಪ್ರೋಟಾನುಗಳು ಇವೆಯೆಂಬುದನ್ನು ತೋರಿಸಿಕೊಟ್ಟನು.
ಎ) ಡಾಲ್ಟನ್ ಬಿ) ಬೆಕ್ವೆರಲ್
ಸಿ) ಮಾಸ್ಲಿ ಡಿ) ಚಾಡ್‌ವಿಕ್

15. ಒಂದು ಪರಮಾಣುವಿನ ಅತ್ಯಂತ ಹೊರ ಕವಚದಲ್ಲಿರುವ ಇಲೆಕ್ಟ್ರಾನುಗಳನ್ನು
ಎ) ಭ್ರಮಣ ಕ್ವಾಂಟಮ್ ಸಂಖ್ಯೆ ಎಂದು ಕರೆಯುತ್ತಾರೆ.
ಬಿ) ಸಂಯೋಗ ಶಕ್ತಿಯ ಇಲೆಕ್ಟ್ರಾನುಗಳೆಂದು ಕರೆಯುತ್ತಾರೆ.
ಸಿ) ಆರ್ಬಿಟಲ್ ಇಲೆಕ್ಟ್ರಾನುಗಳೆನ್ನುತ್ತಾರೆ.
ಡಿ) ಸಂಯುಕ್ತ ಇಲೆಕ್ಟ್ರಾನುಗಳೆಂದು ಕರೆಯುತ್ತಾರೆ.

16. ಆವರ್ತಕ ಕೋಷ್ಟಕದಲ್ಲಿನ ಮೊದಲಿನ ಶ್ರೇಣಿಯಲ್ಲಿ ಈ ಮೂಲವಸ್ತುಗಳು ಇವೆ.
ಎ) ಲೀಥಿಯಮ್, ಬೆರೀಲಿಯಂ
ಬಿ) ಜಲಜನಕ, ಹೀಲಿಯಮ್
ಸಿ) ಟ್ರಾನ್ಸಿಷನ್ ಮೂಲವಸ್ತುಗಳು
ಡಿ) ಲ್ಯಾಂಥನೈಡುಗಳು

17. ಈ ಕೆಳಗೆ ಕಾಣಿಸಿದವುಗಳಲ್ಲಿ ಅತ್ಯಂತ ಹೆಚ್ಚಿನ ಕೊರೆಯುವ ಶಕ್ತಿಯುಳ್ಳದ್ದು.
ಎ) ಅಲ್ಫಾ ಕಣಗಳು ಬಿ) ಬೀಟಾ ಕಣಗಳು
ಸಿ) ಗಾಮಾ ಕಣಗಳು ಡಿ) ನ್ಯೂಟ್ರಾನ್‌ಗಳು

18. ಕಂದುಬಣ್ಣದ ಉಂಗುರದ ಪರೀಕ್ಷೆಯು ಇದನ್ನು ಸೂಚಿಸುತ್ತದೆ.
ಎ) ಅಮೋನಿಯಾದ ಇರುವಿಕೆಯನ್ನು
ಬಿ) ರಂಜಕದ ಇರುವಿಕೆಯನ್ನು
ಸಿ) ಸಾರಜನಕದ ಅಸ್ತಿತ್ವವನ್ನು
ಡಿ) ನೈಟ್ರೇಟ್ ಪರೀಕ್ಷೆಯನ್ನು

19. ಈ ಕೆಳಗಿನವುಗಳಲ್ಲಿ ಹೆಚ್ಚಿನ ಪರಮಾಣು ಸಂಖ್ಯೆ ಇರುವ ಮೂಲ ವಸ್ತು ಯಾವುದು?
ಎ) ಕಾರ್ಬನ್ ಬಿ) ಕ್ಯಾಲ್ಸಿಯಮ್
ಸಿ) ಹೈಡ್ರೋಜನ್ ಡಿ) ಸೋಡಿಯಮ್

20. ಈ ಕೆಳಗಿನ ಮೂಲ ವಸ್ತುಗಳಲ್ಲಿ ಅತ್ಯಂತ ಹೆಚ್ಚಿನ ಇಲೆಕ್ಟ್ರೋನೆಗೆಟವಿಟಿ ಯಾವುದರಲ್ಲಿದೆ?
ಎ) ಸೋಡಿಯಂ ಬಿ) ಪೊಟ್ಯಾಸಿಯಂ
ಸಿ) ಕ್ಲೋರಿನ್ ಡಿ) ಫ್ಲೋರಿನ್

21. ಗಾಜುಗಳ ತಯಾರಿಕೆಯಲ್ಲಿ ಹೆಚ್ಚು ಉಪಯುಕ್ತ ಪದಾರ್ಥ ಯಾವುದು?
ಎ) ಕ್ಯಾಲ್ಸಿಯಮ್ ಕಾರ್ಬೋನೇಟ್
ಬಿ) ಸುಣ್ಣದ ಕಲ್ಲು ಸಿ) ಮರಳು
ಡಿ) ಸಿಲಿಕೇಟುಗಳು

22. ಈ ಕೆಳಗಿನವುಗಳಲ್ಲಿ ಯಾವುದು ದುರ್ಬಲ ಎಲೆಕ್ಟ್ರೋಲೈಟ್ ಆಗಿದೆ.
ಎ) ಸೋಡಿಯಂ ಹೈಡ್ರಾಕ್ಸೈಡ್
ಬಿ) ಸೋಡಿಯಂ ಕ್ಲೋರೈಡ್
ಸಿ) ಪೊಟ್ಯಾಸಿಯಂ ಹೈಡ್ರಾಕ್ಸೈಡ್
ಡಿ) ಅಮೋನಿಯಂ ಹೈಡ್ರಾಕ್ಸೈಡ್

23. ಲವಣದ ದ್ರಾವಣದಲ್ಲಿ ವಿದ್ಯುತ್ ವಿಶ್ಲೇಷಣೆ ಮಾಡಿದಾಗ ವಿದ್ಯುತ್-ಪ್ರವಾಹವು ಈ ಕೆಳಗಿನದರಿಂದ ಹೊತ್ತೊಯ್ಯಲಾಗುತ್ತದೆ.
ಎ) ಅಯಾನುಗಳು ಬಿ) ನ್ಯೂಟ್ರಾನುಗಳು
ಸಿ) ಇಲೆಕ್ಟ್ರಾನುಗಳು ಡಿ) ಪ್ರೊಟಾನುಗಳು

24. ಶುದ್ಧ ನೀರಿನ PH ಮೌಲ್ಯ ಎಷ್ಟು ಇರುತ್ತದೆ?
ಎ) 7 ಬಿ) 8 ಸಿ) 9 ಡಿ) 10

25. ಟೆಂಡಾಲ್ ಪರಿಣಾಮವೆಂದು ಇದಕ್ಕೆ ಕರೆಯುತ್ತಾರೆ.
ಎ) ದ್ರಾವಣ ತಯಾರಿಸುವ ವಿಶಿಷ್ಟ ವಿಧಾನ
ಬಿ) ಲೋಹಗಳ ಶುದ್ಧೀಕರಣ
ಸಿ) ದ್ರಾವಣದ ಪ್ರಬಲತೆಯನ್ನು ಸೂಚಿಸುವ ವಿಧಾನ
ಡಿ) ಕಲಾಯ್ಡು ಬೆಳಕಿನ ಕಿರಣಗಳನ್ನು ಚದುರಿಸುವ ವಿಧಾನ

26. ಅಲ್ಯೂಮಿನಿಯಂ ಅನ್ನು ಈ ಕೆಳಗಿನ ಅದಿರಿನಿಂದ ತಯಾರಿಸುತ್ತಾರೆ.
ಎ) ಕಬ್ಬಿಣದ ಪೈರೇಟು ಬಿ) ಬಾಕ್ಸೈಟ್
ಸಿ) ಸಿನ್ನೇಬಾರ ಡಿ) ಹೆಮಟೈಟ್.

27. ಹೇಬರನ ವಿಧಾನದಿಂದ ಅಮೋನಿಯ ತಯಾರಿಸುವಾಗ ಉಪಯೋಗಿಸುವ ತತ್ವ ಯಾವುದು?
ಎ) ಲಿಚಟೇರಿಯರ್‌ನ ತತ್ವ
ಬಿ) ಗುಲ್ಡಬರ್ಗ್‌ನ ತತ್ವ
ಸಿ) ವೇಗಪರಿವರ್ತಕ ತತ್ವ
ಡಿ) ಪರಾವರ್ತಕ್ರಿಯೆಯ ತತ್ವ

28. ನ್ಯೂಕ್ಲಿಯರ್ ಯಂತ್ರದಲ್ಲಿ ಉಪಯೋಗಿಸುವ ಇಂಗಾಲದ ಬಹುರೂಪ ಯಾವುದು?
ಎ) ಗ್ರಾಫೈಟ್ ಬಿ) ವಜ್ರ
ಸಿ) ಎಲುಬಿನ ಇದ್ದಿಲು ಡಿ) ಕಲ್ಲಿದ್ದಲು

29. ನಮಗೆ ಜ್ವರ ಬರಲು ಪ್ರಮುಖ ಕಾರಣ ಯಾವುದು?
ಎ) ನೆಗಡಿ ಹಾಗು ಕೆಮ್ಮನ್ನು ಅಲಕ್ಷ್ಯ ಮಾಡುವುದರಿಂದ
ಬಿ) ತಣ್ಣೀರಿನಲ್ಲಿ ಆಟವಾಡಿ ಮೈ ಒರಿಸದೇ ಇರುವುದರಿಂದ
ಸಿ) ದೇಹದ ಜೀವಕಣದಲ್ಲಿ ಪೈರೋಜೀನ್ ಉತ್ಪತ್ತಿಯಾಗುವುದರಿಂದ
ಡಿ) ಕರುಳಿನಲ್ಲಿ ಬಾವು ಬರುವುದರಿಂದ

30. ಬೀಜರಹಿತ ದ್ರಾಕ್ಷಿಯ ಹಣ್ಣುಗಳನ್ನು ಉತ್ಪಾದಿಸಲು ಬಳಸುವ ಕೃತಕ ರಸಾಯನ ಯಾವುದು?
ಎ) ಸೈಟೋಕೈನಿನ್ ಬಿ) ಆಕ್ಸಿನ್
ಸಿ) ನ್ಯಾಸ್ತಾಲಿನ್ ಡಿ) ಜಿಬ್ಬರ್‌ಲಿನ್

31. ಮಾನವಶರೀರದ ನರಮಂಡಲವು ದೊಡ್ಡ ಪ್ರಮಾಣದ ಈ ವಸ್ತುಗಳ ಸಮೂಹದಿಂದಾಗಿದೆ
ಎ) ಮೆದುಳಿನ ಬಿಳಿಭಾಗ
ಬಿ) ಸಣ್ಣ ಮೆದುಳಿನ ಭಾಗ
ಸಿ) ನರಾಗ್ರಗಳು ಡಿ) ನ್ಯೂರಾನುಗಳು

32. ಆರ್ಯಭಟನ ಪ್ರಕಾರ 'ಪೈ'(π)ದ ಬೆಲೆ ಎಷ್ಟು?
ಎ) 22/7 ಬಿ) 3.1416 ಸಿ) 3.15
ಡಿ) ಯಾವುದೂ ಅಲ್ಲ

33. 'ರೇಖಾಗಣಿತದ ಜನಕ' ಎಂದು ಯಾರನ್ನು

ಕರೆಯುತ್ತಾರೆ.
ಎ) ಆರ್ಯಭಟ ಬಿ) ಆರ್ಕಿಮಿಡೀಸ್
ಸಿ) ಯುಕ್ಲಿಡ್
ಡಿ)ಶ್ರೀನಿವಾಸ್ ರಾಮನುಜನ್

34. 65^0 ಕೋನದ ಸಮಕೋನ ಪೂರಕ ಯಾವುದು?
ಎ) 65^0 ಬಿ) 90^0 ಸಿ) 25^0 ಡಿ) 35^0

35. 110^0 ಕೋನದ ಸರಳಕೋನ ಪೂರಕ ಯಾವುದು?
ಎ) 70^0 ಬಿ) 80^0 ಸಿ) 91^0 ಡಿ) 100^0

36. $(a+b)^2$ ಸಮೀಕರಣದ ಸೂತ್ರವು ಈ ಕೆಳಗಿನಂತಿದೆ
a) a^2-b^2 b) a^2+b^2
c) a^2+b^2+2ab d) a^2+b^2-2ab

37. ಸೊನ್ನೆಯನ್ನು ಕಂಡುಹಿಡಿದ ದೇಶ ಯಾವುದು?
ಎ) ರಶಿಯಾ ಇ) ಅಮೇರಿಕಾ
ಬಿ) ಇಂಗ್ಲೆಂಡ್ ಡಿ) ಭಾರತ

38. ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಉದ್ದೇಶ ಯಾವುದು?
ಎ)ಬಹುಮನಿ ರಾಜ್ಯವನ್ನು ನಾಶ ಪಡಿಸುವುದು
ಬಿ) ಮಹ್ಮದ್ ತುಘಲಕ್‌ನ ದಕ್ಷಿಣದಲ್ಲಿಯ ರಾಜ್ಯ ವಿಸ್ತಾರವನ್ನು ಬಂದ್‌ಮಾಡುವುದು
ಸಿ) ಹಿಂದೂ ಧರ್ಮ ಮತ್ತು ನಾಗರೀಕತೆಯನ್ನು ರಕ್ಷಿಸುವುದು
ಡಿ) ಬಲಶಾಲಿಯಾದ ಹಿಂದೂ ರಾಜ್ಯವನ್ನು ಸ್ಥಾಪಿಸುವುದು

39. ವಿಜಯನಗರ ಸಾಮ್ರಾಜ್ಯದ ಶ್ರೇಷ್ಠ ದೊರೆ ಯಾರು?
ಎ)ಹರಿಹರ ಬಿ) ಕೃಷ್ಣದೇವರಾಯ
ಬಿ)ಅಚ್ಯುತರಾಯ ಡಿ) ಮೇದಿನಿರಾಯ

40. ಲಾರ್ಡ್ ವಿಲಿಯಮ್ ಬೆಂಟಿಂಕ್‌ನ ಆರ್ಥಿಕ ಸುಧಾರಣೆಯ ಗುರಿ ಏನಾಗಿತ್ತು?
ಎ)ಆಡಳಿತದಲ್ಲಿ ಪರಿಣಿತಿಯನ್ನು ಪಡೆಯುವುದು
ಬಿ)ಲಂಚಗುಳಿತನವನ್ನು ನಿರ್ಮೂಲನೆ ಮಾಡುವುದು
ಸಿ) ಆಡಳಿತದಲ್ಲಿ ಭಾರೀ ಕೇಂದ್ರೀಕರಣ ಮಾಡುವುದು
ಡಿ) ಆಡಳಿತದಲ್ಲಿ ಮಿತವ್ಯಯ ಸಾಧಿಸುವುದು.

41. ಲೆನಿನ್‌ನ ಹೊಸ ಆರ್ಥಿಕ ಯೋಜನೆಯ ಉದ್ದೇಶ ಏನಾಗಿತ್ತು?
ಎ) ರಶಿಯಾದಲ್ಲಿ ಬಂಡವಾಳಶಾಹಿ ಪದ್ಧತಿಯ ನಿರ್ಮೂಲನೆ
ಬಿ) ಖಾಸಗಿ ವ್ಯಾಪಾರಸ್ಥರಿಗೆ ಸಹಾಯ ಮಾಡುವುದು
ಸಿ) ಪಾಶ್ಚಿಮಾತ್ಯ ದೇಶಗಳ ಜತೆ ವ್ಯಾಪಾರ ನಿಷೇಧಿಸುವುದು
ಡಿ) ವ್ಯಾಪಾರಸ್ಥರಿಗೆ ಸ್ವಾತಂತ್ರ್ಯ ಕೊಡುವುದು

42. ಸ್ವತಂತ್ರ ಭಾರತದ ಮೊದಲನೆಯ ಗವರ್ನರ್ ಜನರಲ್ ಯಾರು?
ಎ) ಲಾರ್ಡ್ ಮೌಂಟ್‌ಬ್ಯಾಟನ್
ಬಿ) ಲಾರ್ಡ್ ಡಾಲ್‌ಹೌಸಿ
ಸಿ) ರಾಜಗೋಪಾಲಚಾರಿ
ಡಿ) ಲಾರ್ಡ್ ಕರ್ಜನ್

43. ಗ್ರಾಮಪಂಚಾಯಿತಿಯ ಪ್ರಮುಖ ಕರ್ತವ್ಯ ಯಾವುದು?
ಎ)ಗ್ರಾಮದ ಸರ್ವಾಂಗೀಣ ಸುಧಾರಣೆ ಮಾಡುವುದು
ಬಿ)ಗ್ರಾಮದ ಒಕ್ಕಲುತನದ ಸುಧಾರಣೆ ಮಾಡುವುದು
ಸಿ)ಗ್ರಾಮದ ನೀರಾವರಿ ಯೋಜನೆ ಕೈಗೊಳ್ಳುವುದು
ಡಿ)ಗ್ರಾಮದ ಜನನ-ಮರಣದ ದಾಖಲೆಗಳನ್ನಿಡುವುದು.

44. ಜಾವಾದಲ್ಲಿ ಜನಸಂಖ್ಯೆಯ ಸಾಂದ್ರೀಕರಣಕ್ಕೆ ಕಾರಣ
ಎ) ಬುಡಕಟ್ಟು ಜನರ ಇರುವಿಕೆ
ಬಿ) ಪ್ಲಾಂಟೇಶನ್ ಬೇಸಾಯದ ಆರಂಭ
ಸಿ) ನಗರಗಳ ಶೀಘ್ರ ಬೆಳವಣಿಗೆ
ಡಿ)ಒಳ್ಳೆಯ ಭೂಮಿ

45. ಪ್ರಪಂಚದಲ್ಲಿನ ಅತಿ ದೊಡ್ಡದಾದ ಮಹಾಸಾಗರ ಯಾವುದು?
ಎ) ಅಟ್ಲಾಂಟಿಕ್ ಮಹಾಸಾಗರ
ಬಿ) ಫೆಸಿಫಿಕ್ ಮಹಾಸಾಗರ
ಸಿ) ಹಿಂದೂ ಮಹಾಸಾಗರ
ಡಿ) ಅಂಟಾರ್ಕ್‌ಟಿಕ್ ಮಹಾಸಾಗರ

46. ಮುಂಬೈಯಲ್ಲಿ ಹತ್ತಿ ಬಟ್ಟೆಯ ಕಾರ್ಖಾನೆಗಳು ಹೆಚ್ಚಾಗಿರುವ ಕಾರಣ
ಎ)ದೊಡ್ಡ ಪ್ರಮಾಣದ ಬಂಡವಾಳದ ಪೂರೈಕೆ
ಬಿ) ಔದ್ಯಮಿಕ ಬೆಳವಣಿಗೆ
ಸಿ) ಕಚ್ಚಾ ಸರಕುಗಳ ಭಾರೀ ಪೂರೈಕೆ
ಡಿ) ಒಳ್ಳೆಯ ಮಾರ್ಗಗಳ ಅನುಕೂಲತೆ

47. ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳಿಂದ ಆದ ಉಪಯೋಗವೇನು?
ಎ) ಆಮದು ಕಡಿಮೆಯಾಗಿ ರಫ್ತು ಹೆಚ್ಚಾಗಿದೆ
ಬಿ) ರಫ್ತು ಕಡಿಮೆಯಾಗಿ ಆಮದು ಹೆಚ್ಚಾಗಿದೆ
ಸಿ) ಕೇವಲ ಯಂತ್ರೋಪಕರಣಗಳ ಆಮದು ಹೆಚ್ಚಾಗಿದೆ
ಡಿ) ವ್ಯಾಪಾರ ಕಡಿಮೆಯಾಗಿದೆ

48. ಜಗತ್ತಿನಲ್ಲಿ ಅತೀ ಹೆಚ್ಚು ರಬ್ಬರ್ ಉತ್ಪಾದಿಸುವ ದೇಶ ಯಾವುದು?
ಎ) ಬ್ರೆಝಿಲ್ ಬಿ) ಥೈಲ್ಯಾಂಡ್
ಸಿ) ಮಲಯಾ ಡಿ) ಬೊಲಿವಿಯಾ

49. ಭಾರತದಲ್ಲಿ ಮೊದಲನೆಯ ನೀರಾವರಿ ಯೋಜನೆ ಶುರುವಾದದ್ದು?
ಎ) ಭಾಕ್ರಾನಂಗಲ್ ಅಣೆಕಟ್ಟು
ಬಿ) ದಾಮೋದರ ಯೋಜನೆ ಅಣೆಕಟ್ಟು
ಸಿ) ಕೋಶಿ ಯೋಜನೆ
ಡಿ) ಹಿರಾಕುಡ್ ಅಣೆಕಟ್ಟು

50. ಪಶ್ಚಿಮ ಭಾರತ ಹಾಗೂ ದಕ್ಷಿಣ ಭಾರತದಲ್ಲಿ ಸಿಮೆಂಟ್ ಕಾರ್ಖಾನೆಗಳು ವೃದ್ಧಿಯಾಗಿರುವುದಕ್ಕೆ ಅತ್ಯಂತ ಸುಸಂಗತವಾದ ಕಾರಣ ಯಾವುದು?
ಎ) ಅಗ್ಗದ ಕುಶಲ ಕೆಲಸಗಾರರು ಇರುವುದು
ಬಿ) ಅತಿ ಹೆಚ್ಚಿನ ನಗರೀಕರಣ
ಸಿ) ಉನ್ನತ ಗುಣಮಟ್ಟದ ಸುಣ್ಣಕಲ್ಲಿನ ಲಭ್ಯತೆ
ಡಿ) ಜಲವಿದ್ಯುಚ್ಛಕ್ತಿಯ ಲಭ್ಯತೆ

ಈ ರೀತಿಯಾಗಿ ಪತ್ರಿಕೆಯಲ್ಲಿ ಒಟ್ಟು 100 ಪ್ರಶ್ನೆಗಳು ಇರುತ್ತವೆ. ಇಲ್ಲಿ ನಾವು ಮಾದರಿಗಾಗಿ 50 ಪ್ರಶ್ನೆಗಳನ್ನು ನೀಡಿದ್ದೇವೆ.

ಉತ್ತರಗಳು

1.(ಸಿ)	2.(ಡಿ)	3.(ಡಿ)	4(ಬಿ)
5.(ಸಿ)	6.(ಬಿ)	7.(ಎ)	8.(ಸಿ)
9.(ಸಿ)	10.(ಸಿ)	11.(ಬಿ)	12.(ಸಿ)
13.(ಸಿ)	14.(ಡಿ)	15(ಬಿ)	16.(ಬಿ)
17.(ಬಿ)	18.(ಡಿ)	19.(ಬಿ)	20.(ಡಿ)
21.(ಡಿ)	22.(ಡಿ)	23.(ಎ)	24.(ಎ)
25.(ಡಿ)	26.(ಬಿ)	27.(ಎ)	28.(ಎ)
29.(ಸಿ)	30.(ಡಿ)	31.(ಡಿ)	32.(ಡಿ)
33.(ಸಿ)	34.(ಸಿ)	35.(ಎ)	36.(ಸಿ)
37.(ಡಿ)	38.(ಸಿ)	39.(ಬಿ)	40.(ಡಿ)
41.(ಬಿ)	42.(ಸಿ)	43.(ಎ)	44.(ಬಿ)
45.(ಬಿ)	46.(ಸಿ)	47.(ಎ)	48.(ಸಿ)
49.(ಸಿ)	50.(ಸಿ).		

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ

ಕೇಂದ್ರ ಜವಳಿ ಸಚಿವಾಲಯದಿಂದ ಮಾನ್ಯತೆ ಪಡೆದಿರುವ ಈ ಸಂಸ್ಥೆಯು 1986ರಲ್ಲಿ ಸ್ಥಾಪನೆಯಾಯಿತು. ಈಗ ಇದೊಂದು ಸಂಪೂರ್ಣ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿರುವ ನಿಫ್ಟ್ ದೇಶದಲ್ಲಿ ಒಟ್ಟು ಏಳು ಕಾಲೇಜುಗಳನ್ನು ಹೊಂದಿದೆ. ಇಲ್ಲಿ ಮುಖ್ಯವಾಗಿ ನಿರ್ವಹಣೆ, ತಾಂತ್ರಿಕತೆ ಮತ್ತು ವಿನ್ಯಾಸ ಈ ವಿಷಯಗಳಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಇದು ಹಲವಾರು ವಿಷಯಗಳಲ್ಲಿ ಪೂರ್ಣಾವಧಿ ಡಿಪ್ಲೊಮಾ ಮತ್ತು ವೃತ್ತಿಪರ ಶಿಕ್ಷಣವನ್ನು ನೀಡುತ್ತಿದೆ. ಇದರ ಮುಖ್ಯ ಗುರಿ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡುವುದು.

ಸಂಸ್ಥೆಯ ಧ್ಯೇಯಗಳು

ನಿಫ್ಟ್‌ನ ಮುಖ್ಯ ಧ್ಯೇಯ ಭಾರತ ಸರ್ಕಾರದ ಫ್ಯಾಷನ್ ಉದ್ಯಮವು ಅಂತರಾಷ್ಟ್ರೀಯ ಮಟ್ಟದಲ್ಲಿ ಪೈಪೋಟಿಯನ್ನು ಎದುರಿಸಿ ಇತರ ರಾಷ್ಟ್ರಗಳೊಂದಿಗೆ ಉತ್ತಮ ವ್ಯಾಪಾರ ಸಂಪರ್ಕ ಹಾಗೂ ವಿದೇಶಿ ವಿನಿಮಯ ಗಳಿಸುವುದಲ್ಲದೇ ಉನ್ನತ ಉದ್ಯೋಗಾವಕಾಶಗಳನ್ನು ಒದಗಿಸುವುದಾಗಿದೆ. ಅಷ್ಟೇ ಅಲ್ಲದೇ.

- ಶಿಕ್ಷಣ, ಸಂಶೋಧನೆ ಮತ್ತು ವೃತಿಪರತೆಯಲ್ಲಿ ತಾಂತ್ರಿಕ ಬೆಳವಣಿಗೆಯನ್ನು ಸಾಧಿಸುವುದು.
- ವಿವಿಧ ಹಂತಗಳಲ್ಲಿ ವಿದ್ಯಾರ್ಥಿಗಳಿಗೆ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸು ಗಳನ್ನು ನಡೆಸುವುದು.
- ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಗೌರವಿಸುವುದು.
- ವಿವಿಧ ವಲಯಗಳಲ್ಲಿ ಫ್ಯಾಷನ್ ಉದ್ಯಮವನ್ನು ಅಭಿವೃದ್ಧಿ ಪಡಿಸಿ ಸ್ಥಳೀಯವಾಗಿ ತಯಾರಾಗುವ ವಸ್ತುಗಳಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಮಾರುಕಟ್ಟೆಯನ್ನು ಒದಗಿಸುವುದು.
- ಭಾರತದ ಫ್ಯಾಷನ್ ಉದ್ಯಮಕ್ಕೆ ಬೇಕಾಗಿರುವ ತಾಂತ್ರಿಕತೆ, ಮಾಹಿತಿ ಸಂಶೋಧನೆ ಮುಂತಾದ ವಿಷಯಗಳಲ್ಲಿ ನೆರವು ನೀಡುವುದು.
- ಉತ್ಪಾದಕರಿಗೆ, ವಿನ್ಯಾಸಕಾರರಿಗೆ ಕಲಾಗಾರರಿಗೆ ತಾಂತ್ರಿಕ ನೆರವನ್ನು ಒದಗಿಸುವುದು.

ಬೆಂಗಳೂರು ಕೇಂದ್ರ

ಕೇಂದ್ರ ಜವಳಿ ಸಚಿವಾಲಯ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯಾ ಮಟ್ಟದಲ್ಲಿ ಗಾರ್ಮೆಂಟ್ ಉದ್ಯಮವನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿಯನ್ನು ಸ್ಥಾಪಿಸಿದೆ. ಇಂದು ರಾಷ್ಟ್ರದಲ್ಲಿ ಒಟ್ಟು 7 ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಅವುಗಳೆಂದರೆ ದೆಹಲಿ, ಹೈದರಾಬಾದ್, ಚೆನ್ನೈ, ಗಾಂಧೀನಗರ, ಕಲ್ಕತ್ತಾ, ಮುಂಬೈ ಹಾಗೂ ಬೆಂಗಳೂರು.

ದೇಶದಲ್ಲಿ ಏಳನೇ ಕೇಂದ್ರವಾಗಿ 18.8.97 ರಂದು ಬೆಂಗಳೂರಿನಲ್ಲಿ ನಿಫ್ಟ್‌ನ ಕೇಂದ್ರ ಸ್ಥಾಪನೆಯಾಯಿತು. ಈ ಕೇಂದ್ರವು ಎರಡು ಕೋರ್ಸುಗಳನ್ನು ಹೊಂದಿದೆ.

1. Fashion Design
2. Apparel Marketing and Merchandising

ಬೆಂಗಳೂರಿನಲ್ಲಿ ಸ್ಥಾಪನೆಯಾಗಿರುವ ಸಂಸ್ಥೆಯು ಪ್ರಸ್ತುತ ಕನ್ನಿಂಗ್ ಹ್ಯಾಂ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳಿ, ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ರಾಜ್ಯ ಸರ್ಕಾರ ಉಚಿತವಾಗಿ ಕಟ್ಟಡವನ್ನು ನೀಡಿದೆ. ಅಲ್ಲದೇ ರಾಜ್ಯ ಸರ್ಕಾರವು ಹಲವಾರು ರೀತಿಯಿಂದ ನೆರವು ನೀಡುತ್ತಿದೆ.

ಸಂಸ್ಥೆಯ ಶೈಕ್ಷಣಿಕ ಕೋರ್ಸ್‌ಗಳು

ಬೆಂಗಳೂರಿನಲ್ಲಿ ಪದವಿ ಹಂತದ ಮೂರು ವರ್ಷಗಳ **ಫ್ಯಾಷನ್ ಡಿಸೈನ್** ಕೋರ್ಸ್ ಇದೆ. ಇದು ಆರು ಸೆಮಿಸ್ಟರ್‌ಗಳನ್ನು ಒಳಗೊಂಡಿದೆ.

ಅರ್ಹತೆ : ಈ ಕೋರ್ಸ್‌ಗೆ ಸೇರಲು ಪಿಯುಸಿಯಲ್ಲಿ ಶೇ. 50 ರಷ್ಟು ಸಾಮಾನ್ಯ ವರ್ಗ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಶೇ. 45 ರಷ್ಟು ಅಂಕಗಳನ್ನು ಪಡೆದಿರಬೇಕು.

ವಿಜಯನಗರ ವಿಪ್ರ ವೃಂದ, 1997-98 ನೇ ಸಾಲಿಗೆ ವಿಪ್ರ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ವೇತನ ಮತ್ತು ಪ್ರತಿಭಾ ಪುರಸ್ಕಾರ ನೀಡಲು ವಿಜಯನಗರ ವ್ಯಾಪ್ತಿಯಲ್ಲಿರುವ ಅರ್ಹ ಬ್ರಾಹ್ಮಣ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಪ್ರತಿಭಾ ಪುರಸ್ಕಾರಕ್ಕೆ ಎಸ್.ಎಸ್.ಎಲ್.ಸಿ. ಮತ್ತು ನಂತರದ ತರಗತಿಗಳ ವ್ಯಾಸಂಗ ಮಾಡುತ್ತಿರುವ ಎಲ್ಲ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಪ್ರತಿಭಾ ಪುರಸ್ಕಾರಕ್ಕೆ ಮಾತ್ರ ಕಳೆದ ಬಾರಿ ಪುರಸ್ಕೃತರಾದವರನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಗಳನ್ನು ಡಿ.28ರ ಒಳಗೆ ಸಹ ಕಾರ್ಯದರ್ಶಿ, ವಿಜಯನಗರ ವಿಪ್ರ ವೃಂದ, ನಂ.477, 2ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು- 40, (ದೂರವಾಣಿ 3386552) ಇಲ್ಲಿ ಸಂಪರ್ಕಿಸಬಹುದು. ■

ಹೆಜ್ಜೆ-17

■ ಕೃಶಾಂಗ

ವ್ಯಕ್ತಿತ್ವ ಬಿಂಬಿಸುವ ಪೋಷಾಕು

ನಿಮ್ಮತ್ತ ಹೋಗಬೇಕಾದ ಗಮನವನ್ನು ನಿಮ್ಮ ಬಟ್ಟೆಗಳು ಅಪಹರಿಸದಿರಲಿ. ನೀವು ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸುವ ಬಟ್ಟೆಯನ್ನಾಯ್ದುಕೊಳ್ಳಿ. ನಿಮ್ಮ ಸನಿಹದಲ್ಲಿ ನಿಂತ ವ್ಯಕ್ತಿ ಈರುಳ್ಳಿ ಮೆದ್ದದ್ದು ಕೂಡಲೇ ತಿಳಿಯುತ್ತದಲ್ಲವೆ? ಅದೇ ರೀತಿ, ನಿಮ್ಮ ಪೋಷಾಕೂ ಸಹ ನಿಮ್ಮ ವ್ಯಕ್ತಿತ್ವ ಕುರಿತು ಕೆಲವು ವಿಷಯಗಳನ್ನು ಜಾಹೀರು ಪಡಿಸಬಹುದು.

ನಮ್ಮ ಮೈಮೇಲಿನ ಸವಕಲಾದ, ಮಾಸಿದ ಬಟ್ಟೆಗಳ ಬಗೆಗೆ ಮನೆಯಲ್ಲಿಯ ಹರಿದ ಪೀಠೋಪಕರಣಗಳ ಬಗೆಗೆ ನಾಚಿಕೆ ಪಟ್ಟು ಕೊಳ್ಳುವುದಕ್ಕಿಂತ ಹೆಚ್ಚಾಗಿ ನಮ್ಮ ಸವಕಲಾದ ವಿಚಾರಗಳು ಮತ್ತು ನಿರುಪಯೋಗಿ ತತ್ವಾದರ್ಶಗಳಿಗಾಗಿ ನಾವು ನಾಚಿಕೆ ಪಟ್ಟುಕೊಳ್ಳಬೇಕು ಎಂದು ಐನ್‌ಸ್ಟೀನ್ ಹೇಳಿದ್ದು ನಿಜ. ಆದರೆ ಬೇರೆಯವರ ಗಮನವನ್ನು ನಿಮ್ಮತ್ತ ಸೆಳೆಯುವುದರಲ್ಲಿ, ನಿಮ್ಮ ಸ್ನೇಹಿತೆಯರನ್ನು ಬದಲಿಸುವುದರಲ್ಲಿ, ನಿಮ್ಮ ಮನಃಶಾಂತಿಯನ್ನು ಕದಡುವಲ್ಲಿ ಬಟ್ಟೆಗಳ ಪಾತ್ರವಿದೆ ಎಂದರೆ ನಿಮಗೆ ನಂಬಿಕೆಯಾಗುವುದಿಲ್ಲವೇ?

''ವ್ಯಕ್ತಿ ತೊಡುವ ಬಟ್ಟೆಗಳಿಂದ ಆತನ ಬಗೆಗೆ ಅರಿಯಬಹುದು; ಪೋಷಾಕು ವ್ಯಕ್ತಿತ್ವದ ಅಭಿವ್ಯಕ್ತಿ ಮತ್ತು ವ್ಯಕ್ತಿತ್ವ ನಿರ್ಮಾಣಕ್ಕೆ ಕಾಣಿಕೆ ನೀಡುತ್ತದೆ'' ಮುಂತಾದ ಹೇಳಿಕೆಗಳಲ್ಲಿ ತುಸು ಉತ್ಪ್ರೇಕ್ಷೆ ಇರಬಹುದು. ಆದರೂ ಸಿರಿವಂತರು ಬಗೆಬಗೆಯ ಬೆಲೆಯುಳ್ಳ ಬಟ್ಟೆಗಳಿಗಾಗಿ ಹಪಹಪಿಸುವುದು, ಬಡವರೂ ಸಹ 'ಸಂತೆ', 'ಸೇಲ್'ಗಳಲ್ಲಿ ಬಟ್ಟೆ ಕೊಳ್ಳಲು ದಡಬಡಿಸುವುದು ಈ ಹೇಳಿಕೆಗಳಲ್ಲಿಯ ಸತ್ಯಾಂಶವನ್ನು ಬಹಿರಂಗಗೊಳಿಸುತ್ತದೆ.

ಪೋಷಾಕಿನ ಬಗ್ಗೆ ಅನಗತ್ಯ ಮಹತ್ವ ನೀಡುವುದರಲ್ಲಿ ಅನಾನುಕೂಲಗಳಿಲ್ಲವೆಂದಲ್ಲ. ಬಹು ಬೆಲೆಯುಳ್ಳ ಬಟ್ಟೆಯನ್ನು ಕೊಳ್ಳಲೇ ನಿಮ್ಮ ಎಲ್ಲ ಹಣವನ್ನೂ ಸುರಿದರೆ ಅನ್ನಕ್ಕೆಲ್ಲಿಂದ ಹಣ ತರುವಿರಿ? ಹೀಗಾಗಬಾರದಲ್ಲವೆ? ಅದೇ ರೀತಿ, ಅಗತ್ಯಕ್ಕಿಂತ ಹೆಚ್ಚಿನ ಬೆಲೆಯನ್ನು ಬಟ್ಟೆಗಳಿಗೆ ನೀಡಿದರೆ ವ್ಯಕ್ತಿತ್ವಕ್ಕೆ ಹಾನಿಯಾಗುತ್ತದೆಯೆಂಬುದು ಅನೇಕರಿಗೆ ತಿಳಿಯದು. ಹೊಟ್ಟೆ ಕಟ್ಟಿ, ಮನೋರಂಜನೆಯ ವೆಚ್ಚವನ್ನು ಕಡಿತಗೊಳಿಸಿ ಆ ಹಣವನ್ನು ಬಟ್ಟೆಗಳ ಮೇಲೆ ವ್ಯಯಿಸಿದರೆ ದೈಹಿಕ, ಮಾನಸಿಕ ಆರೋಗ್ಯ ಹಾಳಾಗದೇ? ಹಾಗೆಯೇ, ನೀವು ಸೇರಿರುವ ಸಾಮಾಜಿಕ ಗುಂಪಿನ ಇತರರಿಗಿಂತ ನಿಮ್ಮ ಮೈಮೇಲಿನ ಬಟ್ಟೆಗಳು ಎದ್ದು ಕಂಡರೆ ನೀವು ಅವರ ಹೊಟ್ಟೆಯುರಿಗೆ ಕಾರಣರಾಗುತ್ತೀರಲ್ಲವೇ?

ಬಹಳಷ್ಟು ಸ್ತ್ರೀಯರು ತಮ್ಮ ಬಟ್ಟೆಗಳ ಬಗೆಗೆ ವ್ಯಾಮೋಹಿತರಾಗಿರುವುದು ಕಾಣುತ್ತದೆ. ಬೇರೆಯವರ ಕಣ್ಣುಗಳನ್ನು ತಮ್ಮತ್ತ ತಿರುಗಿಸಿಕೊಂಡು ಅವುಗಳನ್ನು ಅಲ್ಲಿಯೇ ಕೀಲಿಸುವಂತೆ ಮಾಡುವುದೇ ಬಟ್ಟೆಗಳನ್ನು ಧರಿಸುವುದರ ಉದ್ದೇಶ ಎಂದು ಅವರು ತಿಳಿದಿರುತ್ತಾರೆ. ಆದರೆ ಒಮ್ಮೊಮ್ಮೆ ಹೀಗೂ ಆಗಬಹುದು: ಜನ ನಿಮ್ಮ ಬಟ್ಟೆಗಳನ್ನಷ್ಟೇ ಮೆಚ್ಚಿ ನಿಮ್ಮನ್ನು ಮರೆತುಬಿಡ ಬಹುದು; ಇವಳಲ್ಲಿ ಪ್ರದರ್ಶಿಸಲು ಬೇರೇನೂ ಇಲ್ಲದಿರುವುದರಿಂದ ತನ್ನ ಬಟ್ಟೆಗಳನ್ನೇ ಪ್ರದರ್ಶಿ ಸುತ್ತಿದ್ದಾಳೆ ಎಂದೂ ಅಂದುಕೊಳ್ಳಬಹುದು.

ಹಣ ಗಳಿಸಿದ ನಂತರ ಅದನ್ನು ಮರೆತು ಬಿಡುವುದಿಲ್ಲವೇ? ಹಾಗೆಯೇ, ಬಟ್ಟೆಧರಿಸಿದ ನಂತರ ಅವುಗಳನ್ನು ಮರೆತುಬಿಡುವ ಸ್ವಭಾವ ನಮ್ಮದಾಗಬೇಕು. ನಿಜ, ಉತ್ತಮವಾಗಿ ಸಿದ್ಧಪಡಿಸಿದ ಒಳ್ಳೆಯ ಗುಣಮಟ್ಟದ ಬಟ್ಟೆಗಳು ನಮಗೆಲ್ಲರಿಗೂ ಬೇಕು. ಆದರೆ ನಮ್ಮ ವಿಚಾರಗಳು ಮತ್ತು ಬೇರೆಲ್ಲರ ದೃಷ್ಟಿ ಅವುಗಳಲ್ಲೇ ನೆಟ್ಟಂತಿದ್ದರೆ ವ್ಯಕ್ತಿತ್ವದ ಮೇಲೆ ದುಷ್ಪರಿಣಾಮವಾಗಬಹುದು.



ಆದುದರಿಂದ ನಿಮ್ಮತ್ತ ಹೋಗಬೇಕಾದ ಗಮನವನ್ನು ನಿಮ್ಮ ಬಟ್ಟೆಗಳು ಅಪಹರಿಸದಿರಲಿ. ನೀವು ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸುವ ಬಟ್ಟೆಯನ್ನಾಯ್ದುಕೊಳ್ಳಿ.

ನಿಮ್ಮ ಸನಿಹದಲ್ಲಿ ನಿಂತ ವ್ಯಕ್ತಿ ಈರುಳ್ಳಿ ಮೆದ್ದದ್ದು ಕೂಡಲೇ ತಿಳಿಯುತ್ತದಲ್ಲವೆ? ಅದೇ ರೀತಿ, ನಿಮ್ಮ ಪೋಷಾಕೂ ಸಹ ನಿಮ್ಮ ವ್ಯಕ್ತಿತ್ವ ಕುರಿತು ಕೆಲವು ವಿಷಯಗಳನ್ನು ಜಾಹೀರು ಪಡಿಸಬಹುದು.

ಎಳೆವಯಸ್ಸಿನಲ್ಲಿ ಮಗು ತನ್ನ ಪೋಷಾಕು ತನ್ನ ಸಮವಯಸ್ಕರಂತೆಯೇ ಇರಬೇಕೆಂದು ಬಯಸುತ್ತದೆ. ಎಲ್ಲರೂ ತನ್ನನ್ನು ಒಪ್ಪಬೇಕು, ತನ್ನ ಬಗೆಗೆ ಅಸಹ್ಯಪಟ್ಟುಕೊಳ್ಳಬಾರದು ಎಂದು ಇಚ್ಛಿಸುತ್ತದೆ. ಚಿಕ್ಕ ವಯಸ್ಸಿನಲ್ಲಿಯೇ ಪೋಷಾಕಿನ ಮೂಲಕ ಬೇರೆಯವರ ಲಕ್ಷ್ಯವನ್ನು ಸೆಳೆಯುವ ಅಭ್ಯಾಸವಾಗುವುದರಿಂದ ಸ್ವಪ್ರಾಮುಖ್ಯವನ್ನು ಹೆಚ್ಚಿಸಿಕೊಳ್ಳಲು ಹೊಸ ಬಟ್ಟೆ ಧರಿಸಲು ಮಗು ಬಯಸುತ್ತದೆ. ಆದರೆ ವಯಸ್ಸು ಹೆಚ್ಚುತ್ತ ಹೋದಂತೆ ಸ್ವಪ್ರಾಮುಖ್ಯ ಶರೀರದ ಮುಖಾಂತರ ವ್ಯಕ್ತವಾಗುತ್ತ ಹೋಗುತ್ತದಾದ್ದರಿಂದ, ಬಟ್ಟೆಗಳ ಬಗೆಗಿನ ಲಕ್ಷ್ಯ ಕ್ಷೀಣಿಸತೊಡಗುತ್ತದೆ.

ಬಾಲ್ಯ ಮತ್ತು ಹದಿಹರೆಯದಲ್ಲಿ ಪಾಲಕರ ಇಚ್ಛೆಗೆ ವಿರುದ್ಧವಾಗಿ ಬಟ್ಟೆತೊಟ್ಟು ಸ್ವಾಯತ್ತತೆ ಮೆರೆಯುವ ಆಸೆ ಪ್ರಬಲವಾಗಿರುತ್ತದೆ. ತಾವು ಸೇರಿದ ಸಾಮಾಜಿಕ ಗುಂಪಿಗೆ ಹೊಂದದ ಶರೀರ ಲಕ್ಷಣಗಳನ್ನು ಹೊಂದಿದ ತರುಣ-ತರುಣಿಯರೂ ವಿಶಿಷ್ಟ ಪೋಷಾಕುಗಳಿಗೆ ಶರಣುಹೋಗಬಹುದು. ಬಟ್ಟೆಯು ಮುಖ್ಯವಾಗಿ ನೀವು ಯಾವ ಗುಂಪಿನ ಸದಸ್ಯರೆಂಬುದನ್ನು ತಿಳಿಸಿದರೂ, ವ್ಯಕ್ತಿ ವಿಶೇಷದ ಕುರುಹಾಗಿಯೂ, ಆಕರ್ಷಣೆಯ ಕೇಂದ್ರಬಿಂದುವಾಗಿಯೂ, ಬೇರೆಯವರ ಲಕ್ಷ್ಯ ಸೆಳೆಯುವ ಸಾಧನವಾಗಿಯೂ, ಇತರರ ಅಸೂಯೆಯ ಕಾರಣವಾಗಿಯೂ ಕಂಗೊಳಿಸುತ್ತದೆ.

ಹದಿವಯಸ್ಸಿನವರು ಯಶಸ್ಸನ್ನು ತಮ್ಮದೇ ರೀತಿಯಲ್ಲಿ ಅರ್ಥೈಸುತ್ತಾರೆ. ಆಟೋಟಗಳಲ್ಲಿಯ ಯಶಸ್ಸಿಗೆ ತರುಣರೂ, ಸಾಮಾಜಿಕ ಸಾಂಸ್ಕೃತಿಕ ಯಶಸ್ಸಿಗೆ ತರುಣಿಯರೂ ಮಾರುಹೋಗುತ್ತಾರೆ. ತರುಣರು ಕ್ರೀಡಾ ಪೋಷಾಕುಗಳ ಮುಖಾಂತರ, ತರುಣಿಯರು ತಮ್ಮ ಅತ್ಯುತ್ತಮ ಬಟ್ಟೆಗಳ ಮುಖಾಂತರ ಇಂಥ 'ಯಶಸ್ಸನ್ನು' ಜಾಹೀರು ಪಡಿಸುತ್ತಾರೆ.

ಮಧ್ಯ ವಯಸ್ಕರು ಮತ್ತು ವೃದ್ಧರು ಪೋಷಾಕುಗಳ ಮುಖಾಂತರ ತಮ್ಮ ತಾರುಣ್ಯ ಪ್ರೀತಿ ಮತ್ತು ಇತರರ ಲಕ್ಷ್ಯ ಸೆಳೆಯುವ ಬಟ್ಟೆಗಳನ್ನು ಧರಿಸಿದರೆ ಅದರ ಗುರಿ, ವೃದ್ಧರ ಬಗೆಗಿನ ಸಾಮಾಜಿಕ ನಡಾವಳಿಯ ವಿರುದ್ಧ ಪ್ರತಿಭಟನೆ ಸೂಚಿಸುವುದಾಗಿರಬಹುದು.

ನಿಮ್ಮ ಪೋಷಾಕು ನೀವು ತೊಡಗಿಕೊಂಡಿರುವ ವೃತ್ತಿಯನ್ನು ಸೂಚಿಸಬಹುದು. ಕಾರಖಾನೆಯ ಕಾರ್ಮಿಕನನ್ನು ಆತನ ಸಮವಸ್ತ್ರದಿಂದ, ವಿಜ್ಞಾನಿಯನ್ನು ಆಕೆಯ ಬಿಳಿಯ ನಿಲುವಂಗಿಯಿಂದ ಗುರುತಿಸುವುದಿಲ್ಲವೇ? ಬಟ್ಟೆಗಳು ಸ್ವಭಾವ ಸೂಚಕವೂ ಹೌದು. ಅಲಂಕಾರಿಕವಾಗಿ ಪೋಷಾಕು ಧರಿಸುವ ಮಹಿಳೆಯರು ಬಹ್ವಂಶ ಪರಂಪರಾಪ್ರಿಯರು, ಸಮಾಜಪ್ರಿಯರು, ಸಹಾನುಭೂತಿಪರರು, ಸೋತುಗೆಲ್ಲುವವರು, ಬುದ್ಧಿಮತ್ತೆಯನ್ನು ಕಡೆಗಣಿಸುವವರಾಗಿರುತ್ತಾರೆಂದು ತಿಳಿದಿದೆ. ಕೆಲವೇ ಪೋಷಾಕುಗಳನ್ನು ಹೊಂದಿ ಅವುಗಳನ್ನು ಜೋಪಾನವಾಗಿ ಬಳಸುವವರು ಸಂಯಮಿಗಳು, ದಕ್ಷರು, ಜವಾಬ್ದಾರಿಯುತರು, ಸಹಕಾರಿಗಳು, ಶರೀರ ಸುಖದತ್ತ ಗಮನವೀಯುವವರೆಂದು ತಿಳಿಯಲಾಗಿದೆ. ಜಾಹೀರಾತುಗಳಲ್ಲಿ ಹೊಸ ಹೊಸ ಪೋಷಾಕು ಶೈಲಿಗಳನ್ನು ಹುಟ್ಟುಹಾಕುವರು ತಾನೇ? ಕ್ರಮೇಣ ಈ ಶೈಲಿಗಳ ಅನುಯಾಯಿಗಳ ಸೃಷ್ಟಿಯಾಗುತ್ತದೆ. 'ಹೊಸ ದಾರಿ ತುಳಿಯುವ' ಈ ಪೋಷಾಕು ಪ್ರಿಯರಿಗೆ ಸಂಕೋಚವುಂಟಾಗುವುದರ ಬದಲು ತಮ್ಮ 'ಸಾಹಸ ಪ್ರಿಯತೆ'ಯನ್ನು ಬಟ್ಟೆಗಳ ಮುಖಾಂತರ ಪೋಷಿಸುವ ಅವಕಾಶ ದೊರಕುತ್ತದೆ.

ನಾವು ಸೇರಿದ ಸಾಮಾಜಿಕ ಗುಂಪಿಗೆ ಹೊಂದದ ಬಟ್ಟೆಗಳನ್ನು ತೊಟ್ಟರೆ ಅಂಥ ವ್ಯಕ್ತಿಯ ವ್ಯಕ್ತಿತ್ವದ ಬಗ್ಗೆ ಸಹಜವಾಗಿ ಸಂಶಯ ಮೂಡುತ್ತದೆ. ಈ ವಿಷಯ ಕುರಿತು ಮೂರು ವಿಷಯಗಳನ್ನು ಗಮನಿಸಬಹುದು: ವ್ಯಕ್ತಿ, ಸಂದರ್ಭ, ಬಟ್ಟೆಗಳು. ಇವು ಒಂದಕ್ಕೊಂದು ಪೂರಕವಾಗಿರಬೇಕು. ವ್ಯಕ್ತಿತ್ವದ ಲಕ್ಷಣಗಳನ್ನು ಬಟ್ಟೆಗಳ ಮುಖಾಂತರ ತಿಳಿಯುವ ಪ್ರಯತ್ನ ಮಾಡುವಾಗ ನೆನಪಾಗುವುದು ಇವೇ. ಪೋಷಾಕಿನಲ್ಲಿಯ ವಿಸಂಗತಿಯು ವ್ಯಕ್ತಿಯ ಅಪೂರ್ಣ ಸಾಮಾಜಿಕ ಮಾಹಿತಿಯನ್ನೋ, ಸಂಪ್ರದಾಯದ ಬಗೆಗೆ ಔದಾಸೀನ್ಯವನ್ನೋ, ಸಾಮಾಜಿಕ ನಿಯಮಗಳ ಉಲ್ಲಂಘನೆಯ ಪ್ರಯತ್ನವನ್ನೋ ಸೂಚಿಸಬಹುದು. ಅನುಚಿತ ಬಟ್ಟೆಗಳು ಸೂಕ್ತವಾದುವುಗಳನ್ನು ಕೊಳ್ಳುವಲ್ಲಿ ವ್ಯಕ್ತಿಗಿರುವ ಆರ್ಥಿಕ ಅಸಾಮರ್ಥ್ಯ ಸೂಚಕವಾಗಿರಬಹುದು. ನೀವು ಸರಿಯಾದ ಬಣ್ಣ, ಶೈಲಿಗಳನ್ನಾಯ್ದುಕೊಳ್ಳುವಲ್ಲೂ ಅಸಫಲರಾಗಿರಬಹುದು. ಮೈಮುಚ್ಚುವುದಷ್ಟೇ ಬಟ್ಟೆಗಳ ಕಾರ್ಯವಲ್ಲ ಎಂಬುದು ಈಗ ತಿಳಿಯಿತಲ್ಲವೇ?

ಅರಿವೆಯನ್ನು ಪೋಷಾಕಿನಲ್ಲಿ ಪರಿವರ್ತಿಸುವ ಕಲೆ ಉಗಮಿಸುವುದಕ್ಕಿಂತ ಮೊದಲು ಸೌಂದರ್ಯವರ್ಧಕವಾಗಿ ಸಾಮಾಜಿಕ ಸ್ತರ ಪ್ರದರ್ಶನಕ್ಕಾಗಿ, ಸಂದರ್ಭಸೂಚಕವಾಗಿ ವಿಧವಿಧದ ಬಣ್ಣಗಳನ್ನು ಮೈಗೆ ಬಳಿದುಕೊಳ್ಳಲಾಗುತ್ತಿತ್ತಂತೆ! ಹವಾಮಾನದ ಏರುಪೇರುಗಳಿಂದ ಶರೀರವನ್ನು ರಕ್ಷಿಸುವುದು ಬಟ್ಟೆಯ ಆದ್ಯ ಕರ್ತವ್ಯವಾದರೂ, ಸಾಮಾಜಿಕ ಪ್ರಜ್ಞೆಯ ಬೆಳವಣಿಗೆಯೊಂದಿಗೆ ಆಯಾ ಕಾಲದ ಸಾಮಾಜಿಕ ನಿಯಮಗಳನ್ವಯ ಅಶ್ಲೀಲವೆಂದು ತಿಳಿಯಲಾದ ಸಾರ್ವಜನಿಕವಾದ ಅಂಗಪ್ರದರ್ಶನವನ್ನು ಮರೆಮಾಚುವುದು ಅದರ ಎರಡನೆಯ ಗುರಿಯಾಯಿತು. ಈಗ ಉಳಿದ ಉದ್ದೇಶಗಳು ಗೌಣವಾಗಿ ಬಟ್ಟೆಗಳ ಸಾಂದರ್ಭಿಕ ಮಹತ್ವ ಮುಖ್ಯವಾಗಿದೆಯಲ್ಲದೆ ಅದು ಕ್ಲಿಷ್ಟಗೊಳ್ಳುತ್ತಲೂ ನಡೆದಿದೆ.

ವ್ಯಕ್ತಿತ್ವದ ಮೇಲೆ ವಿಪರೀತ ಪರಿಣಾಮ ಬೀರುವುದು ಪೋಷಾಕುಗಳಿಗೆ ಸಾಧ್ಯವೇ? ಹೌದು. ಪೋಷಾಕು ಅದನ್ನು ಧರಿಸುವವನ ಮಹತ್ವದ ಲಕ್ಷಣಗಳ ಸಂಕೇತವಾಗಿರುವಂತೆಯೇ ಇತರರು ಆತನ ವ್ಯಕ್ತಿತ್ವದ ಮಟ್ಟವನ್ನು ನಿರ್ಣಯಿಸುವುದರಲ್ಲಿ ತನ್ನ ಪ್ರಭಾವ ಬೀರುತ್ತದೆ. ಸಾಮಾಜಿಕ ಪರಿಸರದ ಮೇಲೆ ನಾವು ಪ್ರಭಾವ ಬೀರಬೇಕಾದರೆ ನಾವು ಗ್ರಾಹ್ಯವಾಗಿರಬೇಕಲ್ಲದೆ ಆತ್ಮವಿಶ್ವಾಸದಿಂದ ಬೀಗುತ್ತಿರಬೇಕು. ಆಗ ನಾವು ನಮ್ಮ ಸಾಮಾಜಿಕ ಪರಿಸರದ ಸಂಪ್ರದಾಯಗಳನ್ನುಲ್ಲಂಘಿಸಬಾರದು. ನಮ್ಮ ಬಟ್ಟೆಗಳ ಬಗೆಗೆ ಅತಿ ಕಾಳಜಿ, ಅತಿ ನಿರ್ಲಕ್ಷ್ಯ, ಅತಿ ಕಡಿಮೆ ಮೌಲ್ಯದ, ಅತಿ ದುಬಾರಿಯ ಬಟ್ಟೆಗಳನ್ನು ತೊಡುವುದು, ಬಟ್ಟೆಗಳನ್ನು ಸುಸ್ಥಿತಿಯಲ್ಲಿ ಇರಿಸದಿರುವುದು - ಇವೆಲ್ಲವೂ ನಮ್ಮನ್ನು ಸಾಮಾಜಿಕ ನಿರ್ಲಕ್ಷ್ಯ, ಅಸೂಯೆ, ಟೀಕೆಗಳಿಗೆ ಗುರಿಮಾಡಬಹುದು.

ತಾನು ತೊಟ್ಟ ಬಟ್ಟೆಗಳ ಬಗೆಗೆ ಇತರರ ಪ್ರತಿಕ್ರಿಯೆಯನ್ನು ಅರಿಯುವುದು ಕೂಡಲೇ

ಎಚ್ಚರಿಕೆ

ಇಲ್ಲಿ ನಾಯಿಗಳಿವೆ ಎಚ್ಚರಿಕೆ
ಎಂಬ ಬೋರ್ಡನ್ನು ಓದಿಕೊಂಡೆ
ಅಯ್ಯೋ! ಇಂಥ ಬಂಗಲೆಯಲಿ
ಮನುಷ್ಯರೇ ಇಲ್ಲವೇನೊ
ಎಂದುಕೊಂಡೆ.

-ವಿ.ಜಿ ಭಂಡಾರಿ

ಸಾಧ್ಯ. ಇಂಥ ಅರಿವು ತನ್ನ ಮತ್ತು ತನ್ನ ಬಟ್ಟೆಗಳ ಬಗೆಗಿನ ಆಕೆಯ ದೃಷ್ಟಿಕೋನವನ್ನು ಬದಲಿಸಲೂ ಬಹುದು. ಗಟ್ಟಿಗೊಳಿಸಲೂಬಹುದು. ಒಟ್ಟಿನಲ್ಲಿ ಜೀವನದ ಅನೇಕ ಚಟುವಟಿಕೆಗಳಲ್ಲಿ ವ್ಯಕ್ತಿಯ ಆಗುಹೋಗುಗಳನ್ನು ರೂಪಿಸುವಲ್ಲಿ ಬಟ್ಟೆಗಳ ಪಾತ್ರ ಕಡೆಗಣಿಸಲಾರದಂಥದು ಎಂಬುದು ಸತ್ಯ.

ಹದಿಹರೆಯದವರು ಇತರರ ಮೇಲೆ ಪ್ರಭಾವ ಬೀರುವಲ್ಲಿ ಬಟ್ಟೆಗಳ ಪಾತ್ರವನ್ನು ಚೆನ್ನಾಗಿ ಗುರುತಿಸುತ್ತಾರೆ. ದಪ್ಪದೇಹದ ತರುಣಿಯರು ತಮ್ಮ ಬೊಜ್ಜನ್ನು ಗಾಢವರ್ಣದ, ಕಲೆಗಾರಿಕೆಯಿಲ್ಲದ ವಸ್ತ್ರಗಳಲ್ಲಿ ಬಚ್ಚಿಡಬಹುದು. ಬೇರೆಯವರ ಲಕ್ಷ್ಯಕ್ಕಾಗಿ ಹಪಿಹಪಿಸುವ ಸಮಾಜಪ್ರಿಯರು ಪ್ರಖರ ಬಣ್ಣಗಳ ಆಡಂಬರಪೂರ್ಣ ನಕ್ಷೆಗಳ ಬಟ್ಟೆಗಳನ್ನುಪಯೋಗಿಸಬಹುದು. ಬೇರೆಲ್ಲ ಸುಖವನ್ನು ತ್ಯಾಗಮಾಡಿ ಒಳ್ಳೆಯ ಬಟ್ಟೆ ಧರಿಸುವತ್ತ ಬಹಳಷ್ಟು ಯುವಕ ಯುವತಿಯರು ಲಕ್ಷ್ಯವಹಿಸುತ್ತಾರೆ. ತಾನು ಎಂಥ ವ್ಯಕ್ತಿ ಎಂಬುದನ್ನು ತನ್ನ ಬಟ್ಟೆಗಳು ಸಾರಲಿ ಎಂದು ಪ್ರತಿಯೊಬ್ಬ ಯುವತಿ- ಇಚ್ಛಿಸುತ್ತಾಳೆ. ತಾನು ಇಚ್ಛಿಸಿದ ಬಟ್ಟೆಗಳು ದೊರೆಯದಿದ್ದಾಗ ಅವುಗಳನ್ನು 'ಯಾವ ಮಾರ್ಗದಿಂದಾದರೂ' ಕೊಳ್ಳಲೂ ಹಲವರು ಹಿಂಜರಿಯಲಿಕ್ಕಿಲ್ಲ!

ಗುಂಪಿನಲ್ಲಿಯ ನಮ್ಮ ನಡತೆಯನ್ನು ಸಹ ನಮ್ಮ ಪೋಷಾಕು ಪ್ರಭಾವಿತಗೊಳಿಸಬಲ್ಲದು. ನೀವು 'ಉತ್ತಮ ಪೋಷಾಕು ವ್ಯಕ್ತಿ' ಎಂದು ನಿಮ್ಮ ಗುಂಪಿನಲ್ಲಿ ಗುರುತಿಸಲ್ಪಡುತ್ತಿದ್ದರೆ, ವಾಚಾಳಿಗಳೂ, ಸ್ನೇಹಶೀಲರೂ, ಉತ್ಸಾಹಿಗಳೂ ಆಗಿರುತ್ತೀರಿ. ನಿಮ್ಮ ನಡಾವಳಿ ಸ್ವಾಭಾವಿಕವೂ, ಆಕರ್ಷಕವೂ ಆಗಿರುತ್ತದೆ. ಆದರೆ ಬಟ್ಟೆಗಳ ವಿಷಯಕ್ಕೆ ಅತೃಪ್ತರಾದವರು, ಹೀನಪ್ರಜ್ಞೆಯುಳ್ಳವರೂ, ಮುಖಹೀನರೂ ಆಗುವ ಅಪಾಯವಿದೆ. ಬೇರೆಯವರೊಂದಿಗೆ ಬೆರೆಯಲು ಅವರಿಗೆ, ಮುಜುಗರ; ಅವರು ಪ್ರಮುಖ ಪಾತ್ರವಹಿಸಲು ಹಿಂಜರಿಯುತ್ತಾರೆ; ಮೌನಿಗಳಾದ ಅವರಲ್ಲಿ ಸ್ವ-ತಿರಸ್ಕಾರ ಸೇರಿಕೊಂಡು ಒಂದು ರೀತಿಯ ಅಳುಕು ಅವರ ನಡೆ-ನುಡಿಗಳಲ್ಲಿ ತೋರುತ್ತದೆ.

ನೀವು ಧರಿಸಿದ ಬಟ್ಟೆ ಅಸಾಂದರ್ಭಿಕವೆಂದು ಬೇರೆಯವರು ಪ್ರತಿಕ್ರಿಯಿಸುವ ಮೊದಲೇ ನಿಮಗೆ ಆ ಸತ್ಯ ಗೋಚರಿಸಿದರೆ, ಬೆವರತೊಡಗುವಿರಿ; ಗಲಿಬಿಲಿಗೊಳ್ಳುವಿರಿ; ಅಧೀರರಾಗುವಿರಿ. ನಿಮ್ಮ ಮುನ್ನುಗ್ಗುವ ಸ್ವಭಾವ ಕುಗ್ಗಿ ಪರಪ್ರೀತಿವಂಚಿತರಾಗಬಹುದು. ಆದುದರಿಂದ ನೀವು ಬಟ್ಟೆ ಧರಿಸಿದ ವೈಖರಿಯ ಬಗೆಗೆ ನಿಮ್ಮಲ್ಲಿ ಭಾವನೆಗಳ ಕಾದಾಟ ಶುರುವಾಗದಷ್ಟಕ್ಕೆ ಮಾತ್ರ ನಿಮಗೆ ಬಟ್ಟೆಗಳ ಮೇಲಿನ ಮೋಹ ಮಿತಗೊಳ್ಳಲಿ. ಇದು ನಿಮ್ಮ ವ್ಯಕ್ತಿತ್ವದ ರಕ್ಷಣೆಗೆ ಸಹಕಾರಿ.

ಆದರೆ ನಮ್ಮ ಸುತ್ತಮುತ್ತಲಿನ ಅನೇಕ ಖ್ಯಾತನಾಮರು ತಮಗೆ ಹೊಂದದ ಅಸ್ತವ್ಯಸ್ತ ಬಟ್ಟೆಗಳನ್ನು ತೊಟ್ಟುಕೊಂಡರೂ ಅವರಲ್ಲಿ ಅಥವಾ ಸುತ್ತಲಿನವರಲ್ಲಿ ವಿಶೇಷ ಪ್ರತಿಕ್ರಿಯೆಗಳು ಕಾಣಬರುವುದಿಲ್ಲವಲ್ಲ ಎಂಬ ಸಂದೇಹ ನಿಮಗುಂಟಾಗುವುದು ಸಹಜ. ಹೌದು, ಇದು ನಿಜ. ಏಕೆಂದರೆ ಸಮಾಜದಲ್ಲಿ ಇಂಥವರು ಗಳಿಸಿದ ಖ್ಯಾತಿ ಅವರನ್ನು ಎತ್ತಿ ಹಿಡಿದು ಅವರ ಬಟ್ಟೆಗಳ ಪಾತ್ರವನ್ನು ಮಂಕುಗೊಳಿಸುತ್ತದೆ. ಆದರೆ ಅವರ 'ಈ ಖ್ಯಾತಿ'ಯ ಪರಿಚಯವಿಲ್ಲದವರಲ್ಲಿ ಅವರ ಬಟ್ಟೆಯೇ ಅವರ ವ್ಯಕ್ತಿತ್ವದ ಅಳತೆಗೋಲಾಗುವುದು ನಿಶ್ಚಿತ. ಈಶ್ವರಚಂದ್ರ ವಿದ್ಯಾಸಾಗರರ ಜೀವನದಲ್ಲಿ ನಡೆದ ಘಟನೆ ನೆನಪಿಸಿಕೊಳ್ಳಿ. ಇದು ವೈಜ್ಞಾನಿಕ ಸತ್ಯವಲ್ಲ; ಸಾಮಾಜಿಕ ಸತ್ಯ, ಒಟ್ಟಿನಲ್ಲಿ ವ್ಯಕ್ತಿತ್ವ ಸುಧಾರಣೆಯ ನಿಮ್ಮ ನಿರಂತರ ಪ್ರಯತ್ನಕ್ಕೆ ನಿಮ್ಮ ಉಡುಪು ಪೂರಕವಾಗಿರಬೇಕು, ಅಷ್ಟೇ. ■



ದೂರದ ಇಂಗ್ಲೆಂಡಿನಿಂದ ಕರ್ನಾಟಕಕ್ಕೆ ಬಂದ ಡಾ. ಫ್ಲೀಟ್ ಅವರು ಕನ್ನಡ ಭಾಷೆ ಕಲಿತು ಶಾಸನ ಓದಿದರು. ಆದರೆ ಈಗಿನ ಅನೇಕ ಕನ್ನಡಿಗರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳಿಸುವುದು ಅವಮಾನಕರ ಎಂದು ಭಾವಿಸುತ್ತಾರೆ!

ಕೂಗುವ ಕಲ್ಲುಗಳಿಗೆ ಕಿವಿಕೊಟ್ಟ ಡಾ. ಜೆ. ಎಫ್. ಫ್ಲೀಟ್

ಒಂದು ಕಾಲದಲ್ಲಿ ಬರೆದ ಬರಹಗಳನ್ನು ಅದೇ ಕಾಲದ ಅಕ್ಷರಸ್ಥರು ಓದಬಹುದು. ಆದರೆ ಹಿಂದಿನ ಕಾಲದ ಬರಹಗಳನ್ನು ಓದಲಿಕ್ಕೆ ಸ್ವಲ್ಪ ಕಷ್ಟವೇ ಆಗುತ್ತದೆ; ಪರಿಶ್ರಮ ಬೇಕಾಗುತ್ತದೆ. ಈ ಮಾತು ಶಾಸನ ಸಾಹಿತ್ಯಕ್ಕೆ ಪೂರಕವಾಗುತ್ತದೆ. ನಮ್ಮ ಶಾಸನಗಳು ನಮ್ಮ ನಾಡಿನ ಅಪೂರ್ವ ಸಂಪತ್ತು ಹಾಗೂ ಅಮೂಲ್ಯ ನಿಧಿಗಳು. ಕಳೆದುಹೋದ ಧನ-ಧಾನ್ಯ ಭೂಮಿ ಪಡೆಯಬಹುದು. ಆದರೆ ಶಾಸನಗಳು ಕಳೆದರೆ ಅಳಿದರೆ ಇಡೀ ಸಂಸ್ಕೃತಿಯೇ ಅಳಿದಂತೆ. ಏಕೆಂದರೆ ಶಾಸನಗಳೆಂದರೆ ಜ್ಞಾನದೀಪದ ಬೆಳಕಿನ ಕಿಡಿಗಳು.

ಕನ್ನಡ ನಾಡಿನಲ್ಲಿ ಶಾಸನಗಳಿಂದ ಚರಿತ್ರೆಗೆ ಆದ ಉಪಕಾರ ಅಷ್ಟಿಷ್ಟಲ್ಲ. ಇವು ಚರಿತ್ರೆಯ ವಿಚಾರದಲ್ಲಿ ದಿವ್ಯದೃಷ್ಟಿಯನ್ನು ಭವ್ಯಾನುಭವವನ್ನು ದಯಪಾಲಿಸುವ ಜ್ಞಾನೇಂದ್ರಿಯಗಳಾಗಿವೆ. ಭಾರತದಲ್ಲಿ ತಮಿಳು ನಾಡನ್ನು ಬಿಟ್ಟರೆ ಕರ್ನಾಟಕವು ಶಾಸನಗಳನ್ನು ಸಾಕಷ್ಟು ಹೊಂದಿದ ರಾಜ್ಯವಾಗಿದೆ. ಈ ಶಾಸನಗಳ ಕೂಗಿಗೆ ಕಿವಿ ಕೊಡುವವರಾರೂ ಇಲ್ಲದಾಗ ವಿದೇಶಿಗನೊಬ್ಬನು ಬಂದು ಕರ್ನಾಟಕದಲ್ಲಿನ ಶಾಸನಗಳ ಬಗ್ಗೆ ಕಾಳಜಿವಹಿಸಿ ಅಭ್ಯಸಿಸಿ ನಮಗೆ ದೊಡ್ಡ ಉಪಕಾರ ಮಾಡಿದ್ದಾರೆ. ಅವರೇ ಪ್ರಾತಃ ಸ್ಮರಣೀಯರಾದ ಡಾ. ಜೆ. ಎಫ್. ಫ್ಲೀಟ್ ಅವರು.

ಅಲ್ಲಿಂದ ಇಲ್ಲಿಗೆ

ಕನ್ನಡ ಸಾಹಿತ್ಯಕ್ಕೆ ವಿದೇಶಿಗರ ಕೊಡುಗೆ ಅಪಾರ. ಅದು ಶಾಸನಕ್ಕೂ ಕೂಡಾ ಅನ್ವಯಿಸುತ್ತದೆ. ಶಾಸನಗಳನ್ನು ಸಮರ್ಪಕವಾಗಿ ಓದಿ ಅವುಗಳನ್ನು ವಿವರವಾದ ಟಿಪ್ಪಣಿಗಳೊಂದಿಗೆ ಪ್ರಕಟಿಸಿದವರಲ್ಲಿ ವಿದೇಶಿ ವಿದ್ವಾಂಸರಾದ ಜಾನ್ ಫೇತ್‌ಫುಲ್ ಫ್ಲೀಟ್ ಅವರದು ದೊಡ್ಡ ಹೆಸರು. ಅವರು ಭಾರತೀಯ ಶಾಸನ ಶಾಸ್ತ್ರಕ್ಕೆ ಅಡಿಪಾಯ ಹಾಕಿದವರು. ಅದರಲ್ಲೂ ಸದಾ ತುಳಿತಕ್ಕೊಳಗಾದ ಕನ್ನಡ ಭಾಷೆಯ ಬಗ್ಗೆ ಅವರಿಗೆ ಅಪಾರ ಒಲವು. ಅವರ ಕಾರ್ಯವ್ಯಾಪ್ತಿ ಇಡೀ ಭಾರತವಾದರೂ ಕರ್ನಾಟಕದೊಂದಿಗೆ ಅವರ ಸಂಬಂಧ ಅತಿ ನಿಕಟ. ದೂರದಿಂದ ಬಂದು 1872ರಲ್ಲಿ ದಕ್ಷಿಣ ಭಾಗದ ವಿದ್ಯಾಧಿಕಾರಿಯಾಗಿ ಕನ್ನಡ ಭಾಷೆ ಕಲಿತರು. ಆದರೆ ಕರ್ನಾಟಕದಲ್ಲಿನ ಕನ್ನಡಿಗರಿಗೆ ಕನ್ನಡ ಕಲಿಕೆ ಮಾತ್ರ ಅಲರ್ಜಿ!

ಭಾರತೀಯ ಶಾಸನ ಶಾಸ್ತ್ರ ಇಂದು ದೃಢವಾಗಿ ವೈಜ್ಞಾನಿಕ ತಳಹದಿಯ ಮೇಲೆ ನಿಲ್ಲುವುದಕ್ಕೆ ಕಾರಣರಾದ ಫ್ಲೀಟ್‌ರವರು ಜಾನ್ ಜಾರ್ಜ್ ಫ್ಲೀಟ್ ಹಾಗೂ ಎಸ್ತರ್ ಫೇತ್‌ಫುಲ್ ದಂಪತಿಗಳಿಂದ 1847ರಲ್ಲಿ ಇಂಗ್ಲೆಂಡ್‌ನಲ್ಲಿ ಜನಿಸಿದರು. ಲಂಡನ್ ವಿಶ್ವವಿದ್ಯಾಲಯದ ಪ್ರತಿಭಾವಂತ ವಿದ್ಯಾರ್ಥಿಯಾಗಿ ಫ್ಲೀಟ್ ಅವರು ವಿದ್ಯಾಭ್ಯಾಸವನ್ನು ಪೂರೈಸಿ ಅಲ್ಲಿನ ಸಂಸ್ಕೃತ ವಿದ್ವಾಂಸರಾದ ಥಿಯೋಡರ್ ಗೋಲ್ಡಸ್ಟಕರ್ ಅವರಿಂದ ಸಂಸ್ಕೃತದ ಅಪಾರ ಪಾಂಡಿತ್ಯವನ್ನು ಗಳಿಸಿಕೊಂಡರು. 1865ರಲ್ಲಿ ಐ.ಸಿ.ಎಸ್.ಗೆ ನೇಮಕಗೊಂಡರು. ಮುಂದೆ 1867ರಲ್ಲಿ ಮುಂಬೈಗೆ ಬಂದು ಕಂದಾಯ ಇಲಾಖೆಯ ಸಹಾಯಕ ಅಧಿಕಾರಿಯಾಗಿ ಕಾರ್ಯಾರಂಭ ಮಾಡಿದರು. ಈ ಸಂದರ್ಭದಲ್ಲಿ ಇಡೀ ಭಾರತೀಯ ಸಾಹಿತ್ಯ ಸಂಸ್ಕೃತಿಯನ್ನು ಅಭ್ಯಾಸ ಮಾಡಿದರು. 1872ರಲ್ಲಿ ಬಡ್ತಿ ಹೊಂದಿ ದಕ್ಷಿಣ ವಿಭಾಗದ ವಿದ್ಯಾಧಿಕಾರಿಯಾಗಿ, 1875ರಲ್ಲಿ ಕೊಲ್ಲಾಪುರ ಮತ್ತು ದಕ್ಷಿಣ ಮರಾಠ ಪ್ರಾಂತ್ಯದಲ್ಲಿ ಸಹಾಯಕ ರಾಜಕೀಯ ಏಜೆಂಟರಾಗುವ ಪೂರ್ವದಲ್ಲಿ ಅವರು ಕರ್ನಾಟಕದೊಂದಿಗೆ ನಿಕಟ ಸಂಬಂಧವನ್ನಿರಿಸಿಕೊಂಡರಲ್ಲದೇ, ವಿದ್ಯಾಧಿಕಾರಿಯಾದ ಕಾಲದಲ್ಲಿ ಕನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದರು. ಅದೇ ಸಂದರ್ಭದಲ್ಲಿ ಶಾಸನ ಶಾಸ್ತ್ರದ ಬಗ್ಗೆ ಆಳವಾದ ಅಧ್ಯಯನ ಮಾಡಿ, ಕನ್ನಡದ ನೂರಾರು ಶಾಸನಗಳನ್ನು ಪ್ರಕಟಿಸಿದರಲ್ಲದೇ, ಅವುಗಳಿಗೆ ಟೀಕೆ ಟಿಪ್ಪಣಿ ಬರೆದು ಪ್ರಕಟಿಸಿದರು. ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಹುದುಗಿದ ಅನೇಕ ವಿಷಯಗಳನ್ನು ಹೊರಗೆಡವಿದರು. ''ಸಂಗೊಳ್ಳಿ ರಾಯಣ್ಣ'' ''ನರಗುಂದದ

ಬಂಡಾಯ'' ದಂತಹ ಕನ್ನಡದಲ್ಲಿನ ಲಾವಣಿಗಳನ್ನು ಸಂಗ್ರಹಿಸಿ ಅವುಗಳನ್ನು ಇಂಗ್ಲೀಷಿಗೆ ಅನುವಾದಿಸಿ ಪ್ರಕಟಿಸುವ ಮೂಲಕ ಕನ್ನಡದ ಹಿರಿಮೆಯನ್ನು ಆಂಗ್ಲರಿಗೆ ತಿಳಿಯುವಂತೆ ಮಾಡಿದರು. ಶಾಸನ ಶಾಸ್ತ್ರದೊಂದಿಗೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಆದ್ಯರಾದ ಕೀರ್ತಿ ಡಾ.ಫ್ಲೀಟ್‌ರಿಗೆ ಸೇರುತ್ತದೆ. ಪ್ರಾಚೀನ ಸಾಹಿತ್ಯವಾದ 'ಕವಿರಾಜಮಾರ್ಗ'ದಂತಹ ಕೃತಿಯ, ಕೃತಿಕಾರನ ಬಗ್ಗೆ ಇದ್ದ ಚರ್ಚೆಯನ್ನು ಅವರು ಸಾಕಷ್ಟು ವಿವೇಚಿಸಿದ್ದರು. ಅದು ಇಂದಿಗೂ ವಿಚಾರಾರ್ಹವಾದ ಸಂಶೋಧನೆಯಾಗಿದೆ.

ಕಾರ್ಯಕ್ಷೇತ್ರ

ಶಾಸನ ಶಾಸ್ತ್ರದ ಬಗೆಗಿನ ಅವರ ಅಪಾರ ಒಲವನ್ನು ಕಂಡ ಅಂದಿನ ಬ್ರಿಟಿಷ್ ಸರಕಾರವು 1883ರಲ್ಲಿ ಭಾರತ ಸರಕಾರದ ಶಾಸನಶಾಸ್ತ್ರಜ್ಞನನ್ನಾಗಿ ನೇಮಕಮಾಡಿತು. ಮುಂದೆ ಅದರಿಂದ ಬಡ್ತಿಹೊಂದಿದ ಪರಿಣಾಮವಾಗಿ, 1886ರಲ್ಲಿ ಜ್ಯೂನಿಯರ್ ಕಲೆಕ್ಟರ್ ಮ್ಯಾಜಿಸ್ಟ್ರೇಟ್ ಮತ್ತು ಸೊಲ್ಲಾಪುರದ ರಾಜಕೀಯ ಏಜೆಂಟರಾಗಿ, 1891ರಲ್ಲಿ ದಕ್ಷಿಣ ಮತ್ತು ಕೇಂದ್ರ ವಿಭಾಗಗಳ ಕಮೀಶನರಾಗಿ, 1893ರಲ್ಲಿ ಸುಂಕಾಧಿಕಾರಿಗಳಾಗಿ ಸರಕಾರಿ ಸೇವೆಗಳೊಂದಿಗೆ, ಸಾಹಿತ್ಯ ಶಾಸನಗಳ ಸೇವೆ ಮಾಡಿದರು. ಅವಿರತವಾಗಿ 30 ವರ್ಷಗಳ ಕಾಲ ಉತ್ತಮ ಅಧಿಕಾರಿಯಾಗಿದ್ದ ಫ್ಲೀಟ್‌ರು 1897ರಲ್ಲಿ ನಿವೃತ್ತಿ ಹೊಂದಿದರು. ಅವಿರತವಾಗಿ ತಮ್ಮ ಸರಕಾರಿ ಸೇವೆಯೊಂದಿಗೆ ಅಧ್ಯಯನದ ಗೀಳು ಬೆಳೆಸಿಕೊಂಡರು. ಅವರು ಮಾಡಿದ ಮೇರು ಸದೃಶವಾದ ಕಾರ್ಯಕ್ಕಾಗಿ ಕನ್ನಡಿಗರಿಗೆ; ಅದರಲ್ಲೂ ಉತ್ತರ ಕರ್ನಾಟಕ ಜನತೆಯ ಪಾಲಿಗೆ ಪ್ರಾತಃಸ್ಮರಣೀಯರಾಗಿದ್ದಾರೆ. ಸುಮಾರು 70 ವರ್ಷಗಳ ಕಾಲ 'ಅಹುದು ಅಹುದು' ಎನ್ನುವಂತಹ ಸಾರ್ಥಕ ಬದುಕು ನಡೆಸಿದ ಡಾ.ಫ್ಲೀಟ್‌ರು ಶ್ವಾಸಕೋಶದ ತೊಂದರೆಯಿಂದ 1917ರ ಫೆಬ್ರುವರಿ 21 ರಂದು ಕಾಲನ ಗರ್ಭಸೇರಿದರೂ, ಇಂದಿಗೂ ಅವರು ಮಾಡಿದ ಕಾರ್ಯದಿಂದ ಜನಮನದಲ್ಲಿ ಜೀವಂತರಾಗಿದ್ದಾರೆ. ಅವರೇ ತಮ್ಮ ಅಂತ್ಯಕಾಲದಲ್ಲಿ ''ತಾವು ಮಾಡಿದ ಕೆಲಸಗಳಿಂದ ತಮಗೆ ತೃಪ್ತಿಯಾಗಿದೆ'' ಎಂದು ಹೇಳಿದ್ದಾರೆ. ಹಳೆಯ ಮೈಸೂರು ಕ್ಷೇತ್ರ ಬಿ.ಎಲ್. ರೈಸರಿಗೆ ಸೀಮಿತವಾಗಿ ಅಲ್ಲಿನ ಶಾಸನಗಳು ಅವರಿಗೆ ಸ್ನೇಹಿತರಾದರೆ, ಫ್ಲೀಟರು ಮಾತ್ರ ಉತ್ತರಕರ್ನಾಟಕವನ್ನೇ ಹೆಚ್ಚು ಕಾಲ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡಿದ್ದರು.

ಶಾಸನ ಕ್ಷೇತ್ರದಲ್ಲಿ ಸೇವೆ

1872ರಲ್ಲಿ 'ಇಂಡಿಯನ್ ಆ್ಯಂಟಿಕ್ವರಿ' ಎಂಬ ಪತ್ರಿಕೆಯನ್ನು ವಿದ್ವಾಂಸರಾದ ಬರ್ಗೆಸ್‌ರವರು ಆರಂಭಿಸಿದಾಗ ತಾವು ಸಂಗ್ರಹಿಸಿರುವ ಶಾಸನ ಸಾಹಿತ್ಯವನ್ನು ಅದರಲ್ಲಿ ಪ್ರಕಟಿಸಲು ಆರಂಭಿಸಿದರು. 14ನೇ ಸಂಪುಟದಿಂದ 20ನೇ ಸಂಪುಟದವರೆಗೆ ಸುಮಾರು 7 ವರ್ಷಗಳ ಕಾಲ (1885-1891) - ಪತ್ರಿಕೆಯ ಸಂಪಾದಕರಲ್ಲೊಬ್ಬರಾಗಿ ಉತ್ತಮವಾದ ಬರಹಗಳನ್ನು ಪ್ರಕಟಿಸಿದರು. ಇವರೇ 1878ರಲ್ಲಿ ಸಂಪಾದಿಸಿದ ಪಾಳಿ ಭಾಷಾ ಸಾಹಿತ್ಯವನ್ನು ಸ್ಯಾನ್‌ಸ್ಕ್ರಿಟ್ ಆ್ಯಂಡ್ ಓಲ್ಡ್ ಕ್ಯಾನರೀಸ್ ಇನ್‌ಸ್ಕ್ರಿಪ್ಷನ್ಸ್ ಫ್ರಂ ದಿ ಬಾಂಬೆ ಪ್ರೆಸಿಡೆನ್ಸಿ ಆ್ಯಂಡ್ ಪಾರ್ಟ ಆಫ್ ದಿ ಮದ್ರಾಸ್ ಪ್ರೆಸಿಡೆನ್ಸಿ, ಆ್ಯಂಡ್ ಮೈಸೂರ್ ಎಂಬ ಸಂಪುಟಗಳನ್ನು ಇಂಡಿಯಾ ಆಫೀಸ್ ಪ್ರಕಟಿಸಿತು.

1878ರಲ್ಲಿ ಅವರ ''ಪಾಳಿ, ಸಂಸ್ಕೃತ ಮತ್ತು ಹಳೆಗನ್ನಡ ಶಾಸನಗಳು'' ಎಂಬ ಕೃತಿ ಪ್ರಕಟವಾಯಿತು. 1888ರಲ್ಲಿ ''ಪ್ರಾಚೀನ ಗುಪ್ತರಾಜರ ಮತ್ತು ಅವರ ಉತ್ತರಾಧಿಕಾರಿಗಳ ಶಾಸನಗಳು'' ಎಂಬ ಅಮೂಲ್ಯ ಕೃತಿಯು ಗುಪ್ತರ ಚರಿತ್ರೆಯ ಮೇಲೆ ಬೆಳಕು ಚೆಲ್ಲಿ ''ಗುಪ್ತರ ಯುಗ ಕ್ರಿ.ಶ. 320ರಲ್ಲಿ ಪ್ರಾರಂಭ''ವಾಯಿತೆಂದು ಈ ಕೃತಿ ಸಾಬೀತು ಪಡಿಸಿತು. ಇದೇ ತಳಹದಿ, ಹಿನ್ನೆಲೆಯಲ್ಲಿ 1895ರಲ್ಲಿ ''ಬೊಂಬಾಯಿ ಪ್ರಾಂತ್ಯದ ಕನ್ನಡ ಜಿಲ್ಲೆಯ ರಾಜವಂಶಗಳು'' ಎಂಬ ಅಮೂಲ್ಯವಾದ ಕೃತಿಯನ್ನು ಹೊರತಂದರು.

''ಎಪಿಗ್ರಾಫಿಯಾ ಇಂಡಿಕಾ'' ಹಾಗೂ 'ಇಂಪೀರಿಯಲ್ ಗೆಜೆಟಿಯರ್' ಸಂಪುಟಗಳಿಗೆ ಶಾಸನ ವಿಷಯ ಬರೆದ ಫ್ಲೀಟರು ತಮ್ಮ ನಿವೃತ್ತಿ ನಂತರ ಇಂಗ್ಲೆಂಡಿಗೆ ಮರಳಿದರೂ, ಅಲ್ಲೂ ಶಾಸನಗಳನ್ನು ಶ್ರದ್ಧೆಯಿಂದ ಅಧ್ಯಯನ ಮಾಡಿದರು. 1907ರಲ್ಲಿ ಅವರು ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡಿನ 'ರಾಯಲ್ ಏಷ್ಯಾಟಿಕ್ ಸೊಸೈಟಿಯ' ಗೌರವ ಕಾರ್ಯದರ್ಶಿಯಾದರು. ಈ ಸಂಸ್ಥೆ ಅವರಿಗೆ, ಅವರ ಸಾಧನೆಗಾಗಿ 1912ರಲ್ಲಿ ಸುವರ್ಣ ಪದಕವನ್ನಿತ್ತು ಗೌರವಿಸಿತು. ತಮ್ಮ 70 ವರ್ಷದ ಸಾರ್ಥಕ ಬದುಕಿನಲ್ಲಿ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಅಗಾಧ ಸಾಮಗ್ರಿಯನ್ನು, ಶಾಸನಗಳನ್ನು ಸಂಗ್ರಹಿಸಿದ ಅಗ್ರಪಟ್ಟ ಫ್ಲೀಟ್‌ರಿಗೆ ಸಲ್ಲುತ್ತದೆ.

> ಅವಳ ದನಿ
> ನನಗಾಯ್ತು ಜೇನಹನಿ
> ಅವಳಿಗೆ ಸಿಟ್ಟು ಬಂದಾಗ
> ನನಗಾಯ್ತು ಮಾನ ಹಾನಿ.
>
> **- ಯು.ವಿ.ತಾರಿಣಿರಾವ್**

ಭಾಷಾಭಿಮಾನ

ಭಾರತೀಯ ಭಾಷೆಗಳಲ್ಲಿ 'ಕನ್ನಡ' ಭಾಷೆಗೆ ಇರುವಷ್ಟು ಮಧುರತೆ ಬೇರೆ ಭಾಷೆಗೆ ಇಲ್ಲ. ಭಾರತೀಯ ಭಾಷೆಗಳಲ್ಲೇ ಇದು ಶ್ರೀಮಂತವಾದ ಭಾಷೆ. ಇದು ಮೌಲ್ಯದಲ್ಲಿ ಕೂಡಾ ಇತರ ಭಾಷೆಗಳನ್ನು ಮೀರಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಭಾಷೆ ತುಂಬಾ ಪ್ರಾಚೀನವಾದದ್ದೆಂದು ಅವರು 'ಕನ್ನಡ'ದ ಬಗ್ಗೆ ಅಭಿಮಾನ ತುಂಬಿ ಸ್ಮರಿಸಿದ್ದಾರೆ. ವಿದೇಶಿಗರಾದರೂ ಫ್ಲೀಟರರು ನಮ್ಮವರಾಗಿ ನಮಗೆ 'ನಮ್ಮತನ'ದ ಅರಿವು ನೀಡಿ ಪ್ರಾತಃಸ್ಮರಣೀಯರಾಗಿದ್ದಾರೆ.

■ ಮಲ್ಲಿಕಾರ್ಜುನ ಕುಂಬಾರ

ವೈವಾಹಿಕ

ವಧು ಬೇಕು

ಎಲ್.ಐ.ಸಿ. ನೌಕರಿಯಲ್ಲಿರುವ ವರನಿಗೆ (ವೇತನ 6 ಸಾವಿರ, ಎತ್ತರ 5'.2", 35 ವರ್ಷ) ಪದವಿ ಪಡೆದಿರುವ ವಧು ಬೇಕಾಗಿದೆ. ಸರಳ ವಿವಾಹಕ್ಕೆ ಆದ್ಯತೆ.

ಸಂಪರ್ಕಿಸಿ:

ಜಾಹೀರಾತು ಸಂಖ್ಯೆ: 0013. C/o ಅಂಕುರ ಪ್ರಕಾಶನ, 473, ವಾಟರ್ ಟ್ಯಾಂಕ್ ಬಸ್‌ಸ್ಟಾಪ್ ಬಳಿ, ಬಸವೇಶ್ವರ ನಗರ ಮೈನ್‌ರೋಡ್, ಬೆಂಗಳೂರು-79

ವೈವಾಹಿಕ

ವಧು ಬೇಕು

ಬಿ.ಇ. ಪಡೆದು ಸ್ವಂತ ಉದ್ದಿಮೆ ನಡೆಸುತ್ತಿರುವ ವರನಿಗೆ (ವಯಸ್ಸು 31, ಎತ್ತರ 5'.3") ಬಿ.ಇ. ಅಥವಾ ಎಂ.ಬಿ.ಬಿ.ಎಸ್. ಮಾಡಿರುವ ವಧು ಬೇಕಾಗಿದೆ.

ಸಂಪರ್ಕಿಸಿ:

ಜಾಹೀರಾತು ಸಂಖ್ಯೆ: 0014. C/o ಅಂಕುರ ಪ್ರಕಾಶನ, 473, ವಾಟರ್ ಟ್ಯಾಂಕ್ ಬಸ್‌ಸ್ಟಾಪ್ ಬಳಿ, ಬಸವೇಶ್ವರ ನಗರ ಮೈನ್‌ರೋಡ್, ಬೆಂಗಳೂರು-79

ವೈವಾಹಿಕ

ವರ ಬೇಕಾಗಿದೆ

ಪದವಿ ಪಡೆದು ಮನೆಯಲ್ಲಿರುವ ಕನ್ಯೆಗೆ (26 ವರ್ಷ, ಎತ್ತರ 5'.1") ಸರ್ಕಾರಿ ನೌಕರಿ ಅಥವಾ ಸ್ವಂತ ಬಿಸಿನೆಸ್ ಹೊಂದಿರುವ ವರಬೇಕು.

ಸಂಪರ್ಕಿಸಿ:

ಜಾಹೀರಾತು ಸಂಖ್ಯೆ: 0015. C/o ಅಂಕುರ ಪ್ರಕಾಶನ, 473, ವಾಟರ್ ಟ್ಯಾಂಕ್ ಬಸ್‌ಸ್ಟಾಪ್ ಬಳಿ, ಬಸವೇಶ್ವರ ನಗರ ಮೈನ್‌ರೋಡ್, ಬೆಂಗಳೂರು-79

ಔಷಧಿ

Wish you speedy recovery

SRI GURU KOTTURESHWAR
MEDICAL STORES
Opp. to K.E.B
P.B. Road
Ranebennur

AND

Raghavendra Textiles
Ranebennur

Ramesh P.T
Vishwanath P.T
Ph. No. 69539, 67531, 68887

ಶುಭ ವಿವಾಹ

ಡಿಸೆಂಬರ್ 4ರಂದು ವಿವಾಹವಾಗುತ್ತಿರುವ ರಮೇಶ್- ವನಿತಾ ರವರ ದಾಂಪತ್ಯ ಜೀವನ ಸುಖಕರವಾಗಲಿ ಎಂದು ಹಾರೈಸುವ

ಸ್ನೇಹಿತರಾದ ಮಂಜು, ರಮೇಶ್, ನಾಗರಾಜ್, ರಜನೀಶ್

ಗಡಿಯಾರಗಳು

ನವನವೀನ ಗಡಿಯಾರಗಳಿಗೆ
ಒಮ್ಮೆ ಭೇಟಿ ನೀಡಿ

R.V. TIME CENTRE
J.R. Shopping Complex
B.B. Road, Yelahanka
BANGALORE - 560 064

HMT & TITAN
Authorised
Sales & Service
Centre

ಶುಭಾಶಯಗಳು

With best compliments from

For all Requirement of Books
Please contact

MAHALAXMI ENTERPRISES
Importers, Book Sellers
& Library Suppliers

66, 6th Main, IV Block
Rajajinagar
Bangalore - 560 010
Telefax : 335 7433

A Reliable source
for your requirements

ಹುಟ್ಟುಹಬ್ಬ


ಅಕ್ಕರೆಯ
ಪವಿತ್ರಾ,
ನಿನ್ನ
4ನೇ
ಹುಟ್ಟು ಹಬ್ಬಕ್ಕೆ
ಸಕ್ಕರೆಯ
ಹಾರೈಕೆಗಳು

ನಿನ್ನ
ಅಪ್ಪ, ಅಮ್ಮ
ಅಜ್ಜ, ಅಜ್ಜಿ
ದಾವಣಗೆರೆ

ವಿದೇಶ ಪ್ರಯಾಣ

ಹೆಚ್ಚಿನ ವ್ಯಾಸಂಗಕ್ಕಾಗಿ ವಿದೇಶ ಪ್ರವಾಸ ಕೈಗೊಳ್ಳುತ್ತಿರುವ ಮನೋಹರನ ಪ್ರಯಾಣ ಸುಖಕರವಾಗಲಿ ಎಂದು ಹಾರೈಸುವ

ಅಪ್ಪ, ಅಮ್ಮ, ಸಹೋದರರು
ಮೈಸೂರು



ಭಾರತೀಯ ಬ್ಯಾಡ್ಮಿಂಟನ್‌ಗೆ 'ಹೊನ್ನಿನ ದಿನ'ಗಳ ನಿರೀಕ್ಷೆ

■ ವಸಂತ ಮುರ್ಡೇಶ್ವರ

ಭಾರತೀಯ ಬ್ಯಾಡ್ಮಿಂಟನ್ ಈಗಿನಷ್ಟು ಸಂತಸದ ದಿನಗಳನ್ನು ಬಹುಶಃ ಹಿಂದೆಂದೂ ಕಂಡಿರಲಿಕ್ಕಿಲ್ಲ. ಸ್ವತಃ ಪ್ರಕಾಶ್ ಪಡುಕೋಣೆ ಹಾಗೂ ಸೈಯದ್ ಮೋದಿ ಭಾರತದ ಸೆಣಸಾಟದ ಮುಂಚೂಣಿಯಲ್ಲಿ ಇದ್ದಾಗಲೂ ಸಹ ಅದು ಇಂದಿನ ಅನುಭವ ಸವಿದಿರಲಿಕ್ಕಿಲ್ಲ. ಇತ್ತೀಚೆಗಷ್ಟೇ ಕೌಲಾಲಂಪುರದಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದ ಬ್ಯಾಡ್ಮಿಂಟನ್ ಸ್ಪರ್ಧೆಗಳ ತಂಡ ವಿಭಾಗದಲ್ಲಿ ಭಾರತದ ಪುರುಷರು ಬೆಳ್ಳಿಯ ಹಾಗೂ ಮಹಿಳೆಯರು ಕಂಚಿನ ಪದಕ ಗಿಟ್ಟಿಸಿಕೊಂಡಿದ್ದು, ಅಂತಾರಾಷ್ಟ್ರೀಯ ಅಂಕಣದಲ್ಲಿ ಅದರ ಶೀಘ್ರಗತಿಯ ಬೆಳವಣಿಗೆಗೊಂದು 'ಹೊನ್ನಿನ' ಉದಾಹರಣೆಯೇ ಸರಿ!

ಇತ್ತೀಚಿನ ದಿನಗಳಲ್ಲಂತೂ ಭಾರತೀಯ ಬ್ಯಾಡ್ಮಿಂಟನ್ ಇಷ್ಟು ಮಿಂಚಿದ್ದೇ ಇಲ್ಲ ಎಂದರೆ ಉತ್ಪ್ರೇಕ್ಷೆಯಾಗಲಾರದೇನೋ. ಹಳೆಯ ದಿನಗಳ ನೆನಪುಗಳನ್ನು ಕೆದಕಿದರೆ, 16 ವರ್ಷಗಳಷ್ಟು ಹಿಂದೆ, ಅಂದರೆ ಹೊಸದಿಲ್ಲಿಯಲ್ಲಿ ನಡೆದ 1982ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯ ಬ್ಯಾಡ್ಮಿಂಟನ್ ಪಟುಗಳು ಮೂರು ಕಂಚಿನ ಪದಕಗಳಿಸಿದ್ದು ನೆನಪಿಗೆ ಬರುತ್ತದೆ. ಆದರೆ ಇವೆಲ್ಲವೂ ತಂಡ ಸ್ಪರ್ಧೆಯಲ್ಲಿ ಬರದೇ ವೈಯಕ್ತಿಕ ಸ್ಪರ್ಧೆಗಳಲ್ಲೇ ಬಂದವುಗಳು. ಸೈಯದ್ ಮೋದಿ ಪುರುಷರ ಸಿಂಗಲ್ಸ್‌ನಲ್ಲಿ, ಲೀರಾಯ್ ಡೀಸಾ ಹಾಗೂ ಪ್ರದೀಪ್ ಗಂಧೆ ಪುರುಷರ ಡಬಲ್ಸ್‌ನಲ್ಲಿ ಮತ್ತು ಲೀರಾಯ್ ಡೀಸಾ-ರಾಧಿಕಾ ಜೋಡಿ ಮಿಶ್ರ ಡಬಲ್ಸ್‌ನಲ್ಲಿ ಕಂಚಿನ ಸಾಧನೆಗೈದಿದ್ದರು.

ಹಾಗೆ ನೋಡಿದರೆ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ನಮ್ಮವರ ಸಾಧನೆ ಅದ್ಭುತ. ಇದನ್ನು ವಿಶ್ಲೇಷಿಸಿದ್ದೇ ಆದರೆ ಇದು ಒಂದು ರೀತಿಯಲ್ಲಿ ಭಾರತೀಯ ಬ್ಯಾಡ್ಮಿಂಟನ್‌ನ 'ಪುನರುತ್ಥಾನ'ವೇನೋ ಎಂದೆನಿಸದೇ ಇರದು. ಪುರುಷರಂತೂ ಯುರೋಪಿನ ಅತ್ಯಂತ ಬಲಿಷ್ಠ ತಂಡವೆಂದೆನಿಸಿಕೊಳ್ಳುವ ಇಂಗ್ಲೆಂಡ್ ಎದುರು 3-2ರ ಅನಿರೀಕ್ಷಿತ, ಅಷ್ಟೇ ಸ್ಮರಣೀಯ ಗೆಲುವು ದಾಖಲಿಸಿದರು. ಅವರು ಮಣಿದಿದ್ದು 1996 ಥಾಮಸ್ ಕಪ್ ವಿಜೇತ ಮಲೇಷ್ಯಾದ ಎದುರು ಮಾತ್ರ. ಭಾರತದ ಮಹಿಳೆಯರ ಸಾಧನೆಯೂ ಕಡಿಮೆಯದೇನಲ್ಲ. ಅಂತಿಮವಾಗಿ ಚಿನ್ನದ ಪದಕ ಸಂಪಾದಿಸಿದ ಇಂಗ್ಲೆಂಡ್‌ಗೆ ಆಘಾತ ನೀಡಿದ ಹಿರಿಮೆ ನಮ್ಮ ವನಿತೆಯರದು. ಆದರೆ ಮಲೇಷ್ಯಾದ ಎದುರು ಸೋತು 'ಬೆಳ್ಳಿ'ಯ ಆಸೆಯನ್ನು ಕೈಬಿಡಬೇಕಾಯಿತಷ್ಟೇ. ಆದರೆ ಭಾರತದ ಬ್ಯಾಡ್ಮಿಂಟನ್‌ಗೆ ಇದೊಂದು ಅಪೂರ್ವ ಸಂತಸದ ಸಮಯ. ಮಹತ್ವದ ಸ್ಪರ್ಧೆಯೊಂದರ ಪುರುಷ ಹಾಗೂ ಮಹಿಳೆಯರ ತಂಡ ಸ್ಪರ್ಧೆಗಳೆರಡರಲ್ಲೂ ಭಾರತ ಹಿಂದೆಂದೂ ಇಂಗ್ಲೆಂಡ್ ಎದುರು ಗೆದ್ದಿರುವ ದಾಖಲೆಯೇ ಇದ್ದಿಲ್ಲ! ಅಂತಾ ರಾಷ್ಟ್ರೀಯ ಬ್ಯಾಡ್ಮಿಂಟನ್ ಫೆಡರೇಶನ್ (ಐ.ಬಿ.ಎಫ್) ರ್‍ಯಾಂಕಿಂಗ್ ಪಟ್ಟಿಯ ಮೊದಲ ಐವತ್ತು ಆಟಗಾರರ ಪೈಕಿ ಒಬ್ಬರನ್ನೂ ಹೊಂದಿರದ ಭಾರತೀಯ ತಂಡದ ಈ ಸಾಧನೆಗೆ ಏನೆನ್ನೋಣ? ಭಾರತದ ಪಿ.ಗೋಪಿಚಂದ್ ಸದ್ಯ ವಿಶ್ವದಲ್ಲಿ 71ನೇ ಶ್ರೇಯಾಂಕ ಹೊಂದಿದ್ದರೆ, ವನಿತೆಯರ ವಿಭಾಗ ದಲ್ಲಿ ಭಾರತದ ಪ್ರಮುಖ 'ಬೆಟ್' ಅಪರ್ಣಾ ಪೋಪಟ್ ಮೊದಲ ಐವತ್ತು ಆಟಗಾರರ ಪಟ್ಟಿಯ ಲ್ಲಂತೂ ಸ್ಥಾನ ಪಡೆದಿಲ್ಲ. (ಹಾಗೆ ನೋಡಿದರೆ ವಿಶ್ವದ ಅಗ್ರ ಸಿಂಗಲ್ಸ್ ಆಟ ಗಾರರೆಂದು ಪರಿ ಗಣಿಸಲ್ಪಡುವ ಡರನ್ ಹಾಲ್ ಹಾಗೂ ಪೀಟರ್ ನೋಲೆಸ್ ಆಂಗ್ಲ ತಂಡದಲ್ಲಿದ್ದರು).

ಮೊಣಕಾಲು ಗಾಯದಿಂದ ತೊಂದರೆಗೆ ಒಳಗಾಗಿದ್ದ ಪಿ.ಗೋಪಿಚಂದ್ ತಮ್ಮ ಎಂದಿನ 'ಫಾರಂ'ಗೆ ಮರಳಿದ್ದು ಭಾರತದ ಪಾಲಿಗೆ ಸಂತಸದ ವಿಷಯವೇ ಸರಿ. ಬಹಳ ದಿನಗಳ ನಂತರ ಕೌಲಾಲಂಪುರದಲ್ಲಿ ತಮ್ಮ ಮೊದಲ ಅಂತಾ

ರಾಷ್ಟ್ರೀಯ ಪಂದ್ಯಾವಳಿಯಲ್ಲಿ ಆಡಿದ ಗೋಪಿ, ತಂಡ ಸ್ಪರ್ಧೆಗಳಲ್ಲಂತೂ ಅಜೇಯರಾಗುಳಿದರು. ಹಿಂದಿನ ಯುರೋಪಿಯನ್ ಚಾಂಪಿಯನ್ ಇಂಗ್ಲೆಂಡಿನ ಡರನ್ ಹಾಲ್ ಎದುರು ಅವರು ದಾಖಲಿಸಿದ ಗೆಲುವು ಅಭೂತಪೂರ್ವ.

ಪ್ರತಿಭಾನ್ವಿತ ನಿಖಿಲ್ ಕಾನಿಟ್ಕರ್ ಹಾಗೂ ಅಭಿನ್ ಶ್ಯಾಮ್ ಗುಪ್ತಾ ಅವರಿಗೂ ಇದು ಮಹತ್ವದ ತಿರುವು ನೀಡಿದ ಪಂದ್ಯಾವಳಿಯೆಂದರೆ ತಪ್ಪಾಗಲಾರದೇನೋ. ಭವಿಷ್ಯದಲ್ಲಿ ಪಿ.ಗೋಪಿ ಚಂದ್ ಅವರ ನಂತರ 'ಭಾರತದ ಬೆಟ್' ಎಂದೆನಿಸಿಕೊಂಡಿರುವ ಈ ಇಬ್ಬರು ಕಿರಿಯರಿಗೆ ಕೌಲಾಲಂಪುರದಲ್ಲಿ ದೊರೆತ ಅನುಭವ, ಅವರ ಪಾಲಿಗೊಂದು 'ವರ'ವೇ ಸರಿ. ಶಕ್ತಿಯುತ ಸರ್ವೀಸ್ ಹೊಂದಿರದ ಹಿನ್ನೆಲೆಯಲ್ಲಿ ಅಭಿನ್‌ರನ್ನು ತೀವ್ರವಾಗಿ ಯಾರೂ ಪರಿಗಣಿಸಿಯೇ ಇರಲಿಲ್ಲ. ಆದರೆ ಇಂಗ್ಲೆಂಡಿನ ಪೀಟರ್ ನೋಲೆಸ್ ಎದುರಿನ ಮಹತ್ವದ ಐದನೇ ಪಂದ್ಯದಲ್ಲಿ ಅವರು ತಮ್ಮ ಅದ್ಭುತ ಆಟದಿಂದ 'ಪಂಡಿತ'ರನ್ನು ದಂಗು ಬಡಿಸಿದ್ದು ಈಗ ಇತಿಹಾಸದ ಪುಟ ಸೇರಿರುವ ವಿಷಯ. ನೋಲೆಸ್ ಎದುರು ಆ ನಿರ್ಣಾಯಕ ಪಂದ್ಯದಲ್ಲಿ 1-1 ಸೆಟ್‌ಗಳ ಸಮಸ್ಥಿತಿಯಲ್ಲಿದ್ದು, ತೃತೀಯ ಹಾಗೂ ಅಂತಿಮ ಸೆಟ್‌ನಲ್ಲಿ 1-9ರಿಂದ ಹಿಂದಿದ್ದಾಗ ಪಂದ್ಯದ ಫಲಿತಾಂಶ ಹೀಗೇ ಆಗಬಹುದೆಂಬ ನಿರೀಕ್ಷೆಯಲ್ಲಿ ಅಂಕಣ ಬಿಟ್ಟು ನಡೆದವರೆಷ್ಟೋ. ಆದರೆ ಕೊನೆಯಲ್ಲಿ ಆದದ್ದೇ ಬೇರೆ! ಸೋಲೊಪ್ಪಲು ಒಲ್ಲದ 19 ವರ್ಷ ವಯಸ್ಸಿನ ಈ 'ಅಲಹಾಬಾದ್ ಹುಡುಗ' ಅತ್ಯದ್ಭುತ ಹೋರಾಟ ಪ್ರದರ್ಶಿಸಿ, ಭಾರತೀಯ ಬ್ಯಾಡ್ಮಿಂಟನ್ ಇತಿಹಾಸದಲ್ಲಿಯೇ ಅತ್ಯಂತ ಸ್ಮರಣೀಯ ಗೆಲುವೊಂದನ್ನು ದಾಖಲಿಸಿದ್ದೇ ಅಲ್ಲದೇ, ಭಾರತ ಆಂಗ್ಲ ತಂಡಕ್ಕೆ ಆಘಾತ ನೀಡಿ ರಜತ ಪದಕ ಪಡೆಯಲು ನೆರವಾದರು.

21 ವರ್ಷ ವಯಸ್ಸಿನ ನಿಖಿಲ್ ಅತ್ಯಂತ ಪ್ರತಿಭಾನ್ವಿತ ಆಟಗಾರ. ಎಲ್ಲ ತರಹದ ಹೊಡೆತ ಹಾಗೂ ಆಟವನ್ನು ಕರಗತ ಮಾಡಿಕೊಂಡಿರುವ ಈ ಎಡಗೈ ಆಟಗಾರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾತ್ರ ನಿರೀಕ್ಷೆ ಮಟ್ಟದ ಸಾಧನೆಯನ್ನಿನ್ನೂ ಗೈದಿಲ್ಲ. ಈ ಕಾಮನ್‌ವೆಲ್ತ್ ಕ್ರೀಡೆಗಳು ಅವರ ಭವಿಷ್ಯಕ್ಕೆ ಹೊಸದೊಂದು ತಿರುವು ನೀಡುವುದೆಂಬ ನಿರೀಕ್ಷೆ, ಭರವಸೆ ಎಲ್ಲರದು.


ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಈ ಸಲ ವಿಶ್ವ ಬ್ಯಾಡ್ಮಿಂಟನ್ ಗಮನ ಸೆಳೆದಿದ್ದು ನಮ್ಮ ಅಪರ್ಣಾ ಪೋಪಟ್‌ರ ಅದ್ಭುತ ಸಾಧನೆ. ಪ್ರಕಾಶ ಪಡುಕೋಣೆ ಅವರ ಪ್ರಕಾರ ಅಪರ್ಣಾ ವಿಶ್ವದ 'ಟಾಪ್ ಟೆನ್'ನಲ್ಲಿರಬೇಕಾದ ಸರ್ವ ಸಾಮರ್ಥ್ಯ ಹೊಂದಿದವರು. ಮುಂಬಯಿಯ 19 ವರ್ಷದ ಈ ಪ್ರತಿಭಾನ್ವಿತೆ ತಂಡಕ್ಕೆ ಕಂಚಿನ ಪದಕ ದೊರಕಿಸಿಕೊಟ್ಟ ನಂತರ ಸಿಂಗಲ್ಸ್‌ನಲ್ಲಿ ರಜತ ಪದಕಕ್ಕೂ ಲಗ್ಗೆ ಹಾಕಿದರು. ಪ್ರಕಾಶ ಪಡುಕೋಣೆ ಹಾಗೂ ಸೈಯದ್ ಮೋದಿ ಅವರ ನಂತರ ಅಪರ್ಣಾ, ಕಾಮನ್‌ವೆಲ್ತ್ ಕ್ರೀಡೆಗಳ ಬ್ಯಾಡ್ಮಿಂಟನ್‌ನಲ್ಲಿ ಫೈನಲ್ಸ್ ಪ್ರವೇಶಿಸಿದ ಕೇವಲ ಮೂರನೆಯವರು, ಹಾಗೂ ಮೊಟ್ಟ ಮೊದಲ ಭಾರತೀಯ ವನಿತೆ! ಇದಕ್ಕೂ ಮೊದಲಿನ ಭಾರತದ ಆಟಗಾರ್ತಿಯೋರ್ವರಿಂದ ಅತ್ಯುತ್ತಮ ಸಾಧನೆ ಬಂದಿದ್ದು 1990ರಲ್ಲಿ. ಆ ಸಲದ ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ದೀಪ್ತಿ ಥಾಣೇಕರ ಸಿಂಗಲ್ಸ್ ಸೆಮಿಫೈನಲ್ಸ್ ಪ್ರವೇಶಿಸುವಲ್ಲಿ ಸಫಲರಾಗಿದ್ದರು.

ಈ ಸಲ ಕೌಲಾಲಂಪುರದಲ್ಲಿ ಅಪರ್ಣಾರಿಂದ ಬಂದಿದ್ದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೂಡಿಬರುವ ಅಪರೂಪದ ಸಾಧನೆ. ಅಲ್ಲಿ ಎರಡು ಸಲ ವಿಶ್ವದ 10ನೇ ಶ್ರೇಯಾಂಕದ ಆಟಗಾರ್ತಿ ಕೆಲ್ಲಿ ಮಾರ್ಗನ್ ಎದುರು ಸೋತ ಅಪರ್ಣಾ (ಮಾರ್ಗನ್ ಅಂತಿಮವಾಗಿ ಚಿನ್ನ ಗೆದ್ದರು) ಉಪಾಂತ್ಯದಲ್ಲಿ ಇಂಗ್ಲೆಂಡಿನ ಜೂಲಿಯನ್ ಮೂನ್ ಎದುರು ದಾಖಲಿಸಿದ ಗೆಲುವು ಮಾತ್ರ ಹಲವು ವರ್ಷಗಳ ಕಾಲ ನೆನಪಿನಲ್ಲಿ ಹಚ್ಚ ಹಸುರಾಗಿ ಉಳಿಯುವಂತ ಹುದು. 1-1 ಸೆಟ್‌ಗಳ ಸಮಸ್ಥಿತಿಯ ನಂತರ ಅಪರ್ಣಾ ನಿರ್ಣಾಯಕ ತೃತೀಯ ಸೆಟ್‌ನಲ್ಲಿ 3-10ರಿಂದ ಹಿಂದೆ ಬಿದ್ದಾಗ ಪಂದ್ಯದ ಫಲಿತಾಂಶ ನಿರ್ಧಾರವಾಗೇ ಬಿಟ್ಟಿತು ಎಂದವರೆಷ್ಟೋ. ಆದರೆ ಸೋಲಿನ ದವಡೆಯಲ್ಲೂ ಅತ್ಯುದ್ಭುತ ಸೆಣಸಾಟ ಪ್ರದರ್ಶಿಸಿದ ಅಪರ್ಣಾ ಅಂತಿಮವಾಗಿ 11-0, 12-13 13-11ರಿಂದ ಜಯಿಸಿ ಫೈನಲ್ಸ್ ಪ್ರವೇಶಿಸಿದ್ದರು.


ಕಾಮನ್‌ವೆಲ್ತ್ ಕ್ರೀಡೆಗಳ ಈ ರಜತ ಪದಕ ಅಪರ್ಣಾರ ಮುಂದಿನ ಸಾಧನೆಗೆ ನಾಂದಿಯಾಗಬೇಕು. ಪ್ರಕಾಶ ಪಡುಕೋಣೆ ಸಹ 1978ರ ಎಡ್ಮಂಟನ್ ಕ್ರೀಡೆಗಳಲ್ಲಿ ಚಿನ್ನ ಜಯಿಸಿದ ನಂತರವೇ ಅಂತಾರಾಷ್ಟ್ರೀಯ ಖ್ಯಾತಿಗೇರಿದರು ಎನ್ನುವುದನ್ನು ಮರೆಯುವಂತಿಲ್ಲ. ವಿಶ್ವದ 'ಟಾಪ್ ಟೆನ್' ಪ್ರವೇಶಿಸುವ ಅಪರ್ಣಾರ ಪ್ರಯತ್ನದ ಪ್ರಾರಂಭಕ್ಕೆ ಕೌಲಾಲಂಪುರದ 'ರಜತ'ದ ಸಾಧನೆ ಚಾಲನೆ ನೀಡಬೇಕು.

ಪಂದ್ಯಾವಳಿಯ ಪದ್ಧತಿಯಲ್ಲಿ ಆದ ಬದಲಾವಣೆಯೂ ಸಹ ಭಾರತೀಯರ ಉತ್ತಮ ಸಾಧನೆಗೆ ನೆರವಾಯಿತೆಂದರೆ ತಪ್ಪಿಲ್ಲ. ಎರಡು ಸಿಂಗಲ್ಸ್ (ಒಂದು ಪುರುಷರ ಹಾಗೂ ಇನ್ನೊಂದು ಮಹಿಳೆಯರ ಮತ್ತು ಮೂರು ಡಬಲ್ಸ್, ಒಂದು ಪುರುಷರ, ಒಂದು ಮಹಿಳೆಯರ ಹಾಗೂ ಇನ್ನೊಂದು ಮಿಶ್ರ) ಸ್ಪರ್ಧೆಗಳ ಬದಲು ಪ್ರತ್ಯೇಕ ಸ್ಪರ್ಧೆಗಳನ್ನು ಏರ್ಪಡಿಸಿದ್ದು ಭಾರತೀಯರ ಸಮಸ್ಯೆಯನ್ನು ಪರಿಹರಿಸಿತು. ಡಬಲ್ಸ್ ಪಂದ್ಯಗಳು ಹಿಂದಿನಿಂದಲೂ ನಮ್ಮವರಿಗೆ ತಲೆ ನೋವೊಡ್ಡಿದ್ದೇ ಹೆಚ್ಚು. ಫಲಿತಾಂಶಗಳೇ ತೋರಿಸುವಂತೆ ಈ ಸಲದ ನಮ್ಮ ಅಧಿಕ ಜಯ ದಾಖಲಾಗಿದ್ದು ಸಿಂಗಲ್ಸ್ ಪಂದ್ಯಗಳಲ್ಲೇ.

ಭಾರತೀಯ ಬ್ಯಾಡ್ಮಿಂಟನ್ ಬೆಳವಣಿಗೆಯಲ್ಲಿನ ಈ ತ್ವರಿತ ಬದಲಾವಣೆಗೆ ಕಾರಣವೇನೆನ್ನುವ ಪ್ರಶ್ನೆ ಏಳುವುದು ತೀರ ಸಹಜ. ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ತೆರಳುವ ಮೊದಲು ಬೆಂಗಳೂರಿನಲ್ಲಿರುವ ಪ್ರಕಾಶ ಪಡುಕೋಣೆ, ಉದಯ ಪವಾರ ಹಾಗೂ ಎಸ್.ಎಂ.ಆರೀಫ್‌ರ ಹಿರಿತನದಲ್ಲಿ ನಡೆಸಿದ ತರಬೇತಿ ಹಾಗೂ ಸಿದ್ಧತಾ ಶಿಬಿರ ಭಾರತೀಯರ ಚಾತುರ್ಯ, ಕೌಶಲ್ಯಗಳಿಗೆ 'ಮೊನಚು' ನೀಡಿದ್ದು ಸರ್ವವಿದಿತ. ಶಿಬಿರ ನಡೆದ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ, ಎಲ್ಲ ಸೌಲಭ್ಯಗಳ ಹೊರತಾಗಿ 'ಕ್ರೀಡಾವೈದ್ಯ' ಎಸ್.ಕೆ.ಖಾನ್ ಅವರ ಉಪಸ್ಥಿತಿ ಭಾರತೀಯ ಆಟಗಾರರನ್ನು ಸೆಣಸಾಟಕ್ಕೆ ಮಾನಸಿಕವಾಗಿಯೂ ಸಿದ್ಧಗೊಳಿಸಿದ್ದು ಸ್ಪಷ್ಟ. ■



ಪದ ಬಂಧ 11



ಪದಬಂಧ 10 ರ ಸರಿಯುತ್ತರ

ಎಡದಿಂದ ಬಲಕ್ಕೆ:

೧.ತಪೋವನ ೪.ಪಾರಿವಾಳ ೬.ಯಜ ೮.ಕಾಲು ೯.ದಯೆ ೧೦.ನಗಾರಿ ೧೨.ರ್ತವಾ ೧೫.ಮಹಾನವಮಿ ೧೮.ಹಾರ ೧೯.ಸರಕು ೨೧. ನೆಪ ೨೨.ನವ ೨೩.ಮತ ೨೫.ಅಧಿಕಾರಿ ೨೬.ತಾರತಮ್ಯ

ಮೇಲಿನಿಂದ ಕೆಳಕ್ಕೆ :

೨.ಪೋರಬಂದರ ೩.ನಯ ೪.ಪಾಲು ೫.ವಾದವಿವಾದ ೭.ಜನನ ೮.ಕಾವೇರಿ ೧೧.ಗಾಯನಕಾರ ೧೩.ಡಮರು ೧೪.ನಮಿಸು. ೧೬.ಮಹಾತ್ಮಾಗಾಂಧಿ ೧೭.ಅಪರಿಚಿತ ೧೯.ಸಚಿವ ೨೦.ಕುಸುಮ ೨೨.ನರಿ ೨೪. ತತಾ.

ಎಡದಿಂದ ಬಲಕ್ಕೆ

೧. ಆಡಂಬರದಿಂದ ಮುಕ್ತಾಯವಾದ ವರ್ಷದ ಕೊನೆಯ ತಿಂಗಳು . (೪)
೪. ತಬರನು ತೋರ್ಪಡಿಸಿದ ಡಂಬಾಚಾರ.......................... (೪)
೬. ಮೂರು ಕಾಸಿಗೆ ಕಳೆದುಕೊಂಡ ಮರ್ಯಾದೆ.................... (೨)
೮. ಭಕ್ತಿ ಪೂರ್ವಕವಾಗಿ ಕಟ್ಟಿಸಿದ ಜೈನ ಧರ್ಮದ ದೇವಸ್ಥಾನ .... (೨)
೯. ಸತಿಗೆ ತಕ್ಕ ಗಂಡ .... (೨)
೧೦. ಕನಸು ಕಂಡ ಅರುಣೋದಯ ಕಾಲ .... (೩)
೧೨. ಕಾಡು ಸುಡಲು ಕಾರಣವಾದ ಕಿಚ್ಚಿನ ಸಣ್ಣ ಕಣ .... (೨)
೧೫. ಸುವರ್ಣೋತ್ಸವದ ದಿನದಂದು ಹಾರಾಡಿದ ಮೂರು ಬಣ್ಣದ ಬಾವುಟ.. (೫)
೧೮. ಮಹಾಪೂರ ಬಂದಾಗ ಅನುಭವಿಸಿದ ನಷ್ಟ .... (೨)
೧೯. ಹರಣ ಮಾಡಲು ಬೇಕಾದ ನೆಪ ತಿರುಗಿದೆ .... (೩)
೨೧. ಅಶಕ್ತನಾದವನಿಗೆ ಅವಶ್ಯವಾಗಿ ಬೇಕಾದ ನೆತ್ತರು .... (೨)
೨೨. ಮರಣ ಕಾಲಕ್ಕೆ ಯಥಾವತ್ತಾಗಿ ಬಂದ ಮೃತ್ಯುದೇವ.............. (೨)
೨೩. ಕಾರಣ ಕೇಳದೆ ಸರಕಾರ ವಸೂಲಿ ಮಾಡಿದ ಸುಂಕ .... (೨)
೨೫. ಅಪರೂಪಕ್ಕೆ ಸುತ್ತಾಡಿ ಬಂದ ಅನ್ಯರಾಷ್ಟ್ರ........................ (೪)
೨೬. ಕಟ್ಟಿಗೆ ಕೊರೆಯಲು ಬಳಸಿದ ಸಾಧನ ತಿರುಗಿದೆ .... (೪)

ಮೇಲಿನಿಂದ ಕೆಳಕ್ಕೆ

೨. ಶಂಕರನ ಕೃಪೆಯಿಂದ ಆರಂಭಗೊಂಡ ಅಡಿಗಲ್ಲು ಸಮಾರಂಭ... (೫)
೩. ವಿಜೃಂಭಣೆಯಿಂದ ಪೂಜೆಗೊಂಡ ವಿಷ್ಣುವಿನ ಮಡದಿ ಲಕ್ಷ್ಮೀ.... (೨)
೪. ಆಸಕ್ತಿಯಿಂದ ಗಳಿಸಿದ ಸಂಪತ್ತು .... (೨)
೫. ಗರಬಡಿದಾಗ ನಿದ್ದೆಯಲ್ಲಿ ಅರಿವಿಲ್ಲದೆ ಮಾತನಾಡು............. (೫)
೭. ವಿನೂತನ ಪದ್ಧತಿಯಿಂದ ಮಾಡಿದ ನಾಟ್ಯ .... (೩)
೮. ಬೇಕು-ಬೇಡಗಳ ನಡುವೆ ಅನುಭವಿಸಿದ ಜೀವನ .... (೩)
೧೧. ಸುಂದರವಾಗಿ ಬಂಗಾರದ ಕೆಲಸ ಮಾಡುವ ಅಕ್ಕಸಾಲಿಗ.......... (೫)
೧೩. ಮಂಕು ಕವಿಯುವ ಹಾಗೆ ಆಟ ತೋರಿಸುವ ಜಾದುಗಾರ .... (೩)
೧೪. ಬನದ ನಡುವೆ ಕುಳಿತು ಜನರು ಮಾಡಿದ ದೇವರ ಸ್ತುತಿ .... (೩)
೧೬. ಮರದ ನಡುವೆ ನಡೆದ ಅತೀ ದೊಡ್ಡ ಯುದ್ಧ .... (೫)
೧೭. ಮಣ್ಣಿನ ಮಡಿಕೆ ಮಾಡುತ್ತ ದೇವರ ಸ್ಮರಣೆ ಮಾಡಿದ, ವಿಠ್ಠಲನ ಪೂಜಿಸಿದಾತ .... (೫)
೧೯. ಮಣ ಬಂಗಾರ ಗಳಿಸಿದರೂ ತಪ್ಪದೇ ಬರುವ ಸಾವು ತಿರುಗಿದೆ ... (೩)
೨೦. ಷಣ್ಮುಖನ ಹೆಸರಿನಿಂದ ಬರುವ ಈ ತಿಂಗಳು, ಆಶ್ವಿಜದ ನಂತರ ಬಂದಿದೆ.. (೩)
೨೨. ಯಮನೊಂದಿಗೆ ಹೋರಾಡಿ ಗಳಿಸಿದ ಜಯ .... (೨)
೨೪. ಹಣ್ಣು ಹಿಂಡಿದಾಗ ಹೊರಬಂದ ಸವಿಯಾದ ದ್ರವ. .... (೨)

■ ಜವಳಿ ವೀರಣ್ಣ

(ಉತ್ತರ : ಮುಂದಿನ ಸಂಚಿಕೆಯಲ್ಲಿ)

ಬಹಳ ಹಿಂದೆ ಒಬ್ಬ ರೈತನಿದ್ದ. ಹೊಲವನ್ನು ಉತ್ತು ಬಿತ್ತಲು ಸಿದ್ಧತೆ ನಡೆಸಿದ್ದ. ಆದರೆ ಹೊಲದಲ್ಲಿ ಕಳೆ ತುಂಬಾ ಬೆಳೆದಿತ್ತು. ಹೀಗಾಗಿ ಆದೊಂದು ದಿನ ಅವನು ಸಂಜೆಯವರೆಗೂ ಕಳೆಯನ್ನು ಕಿತ್ತನು. ಮಾರನೆಯ ದಿನ ನೊಗದೊಂದಿಗೆ ಹೊಲಕ್ಕೆ ಬಂದಾಗ ಅವನಿಗೆ ಆಶ್ಚರ್ಯಕಾದಿತ್ತು. ಕಾರಣ, ಹೊಲದಲ್ಲಿ ಈ ಹಿಂದಿನಂತೆಯೇ ಕಳೆ ನಿಂತಿತ್ತು! ರೈತ ಮತ್ತೆ ಅದನ್ನೂ ಕಿತ್ತ, ಆದರೆ ಅದರ ಮರು ದಿನವೂ ಕಳೆ ಹೊಲದಲ್ಲಿ ನಿಂತಿತ್ತು. ಎಷ್ಟು ದಿನ ಕಿತ್ತರೂ ಪ್ರಯೋಜನವಾಗಲಿಲ್ಲ. ಕಡೆಗೆ ಒಂದು ದಿನ ರಾತ್ರಿ ಹೊಲದ ಬಳಿ ಅಡಗಿ ಕೂತ. ಅರ್ಧ ರಾತ್ರಿಗೆ ಒಂದು ಮೊಲ ಮಾಯದ ಬೆತ್ತ ಹಿಡಿದು ಹೊಲದಲ್ಲಿ ಸುತ್ತುತ್ತಿರುವುದನ್ನು ಕಂಡ. ಮೊಲ ಹೋದಲ್ಲೆಲ್ಲಾ ಮಾಯದ ಬೆತ್ತದ ಪ್ರಭಾವದಿಂದಾಗಿ ಕಿತ್ತ ಕಳೆ ಮತ್ತೆ ಪ್ರತ್ಯಕ್ಷವಾಗಿ ಬಿಡುತ್ತಿತ್ತು. ರೈತನಿಗೆ ತುಂಬಾ ಸಿಟ್ಟು ಬಂದಿತು. ಅವನು ಮೊಲಕ್ಕೆ ''ನೀನ್ಯಾಕೆ ಹೀಗೆ ಮಾಡುತ್ತಿರುವೆ?'' ಎಂದು ಗದರಿಸಿದ.

''ನೀನು ವ್ಯರ್ಥವಾಗಿ ಶ್ರಮ ವಹಿಸುತ್ತಿರುವೆ. ಪ್ರಪಂಚ ಪ್ರಳಯವಾಗುವುದರಲ್ಲಿದೆ. ಎಲ್ಲಾ ನಾಶವಾಗಿ ಹೋಗುತ್ತೆ'' ಎಂದು ಮೊಲ ಹೇಳಿತು.

ರೈತ ಮೊಲದ ಮಾತನ್ನು ನಂಬಲಿಲ್ಲ, ಆದರೆ ಮೊಲ ಪದೇ ಪದೇ ಹೇಳಿದಾಗ ನಂಬಿದ.

''ಪ್ರಳಯದಿಂದ ಪಾರಾಗುವ ಉಪಾಯ ಯಾವುದು?'' ರೈತ ಮೊಲವನ್ನು ಪ್ರಶ್ನಿಸಿದ.

''ನೀನೊಂದು ದೊಡ್ಡ ಮರದ ಪೆಟ್ಟಿಗೆಯನ್ನು ಮಾಡಿಸು. ಅದು ಒಂದು ಕೋಣೆಯಂತಿರಲಿ, ಅದರ ಮೇಲ್ಭಾಗದಲ್ಲಿ ಒಂದು ರಂಧ್ರವನ್ನು ಗಾಳಿಯಾಡುವಂತೆ ಕೊರೆಸು. ತಿನ್ನಲು ಸಾಕಷ್ಟು ಆಹಾರವನ್ನೂ ಒಳಗಿಟ್ಟುಕೋ. ಆಗ ನಾವು ಪ್ರಳಯದಿಂದ ಪಾರಾಗಬಲ್ಲೆವು'' ಎಂದು ಮೊಲ ಉಪಾಯ ಹೇಳಿತು.



ರೈತ ಮೊಲದ ಮಾತಿನಂತೆಯೇ ಮರದ ಒಂದು ದೊಡ್ಡ ಪೆಟ್ಟಿಗೆಯನ್ನು ಮಾಡಿಸಿದ. ಆಗಲೇ ಆಕಾಶದಲ್ಲಿ ಮಿಂಚು ಮಿಂಚಿತು. ಧಾರಾಕಾರ ಮಳೆಯೂ ಪ್ರಾರಂಭವಾಯಿತು. ಭೂಮಿಯ ಮೇಲೆ ನೀರಿನ ಮಟ್ಟ ಏರಲಾರಂಭಿಸಿತು. ರೈತ ತನ್ನ ಪರಿವಾರ ಮತ್ತು ಮೊಲದೊಂದಿಗೆ ಪೆಟ್ಟಿಗೆಯಲ್ಲಿ ಕೂತ. ನೀರು ಏರುತ್ತಿದ್ದಂತೆ ಅದರ ಮೇಲಿದ್ದ ಆ ಪೆಟ್ಟಿಗೆಯೂ ಮೇಲೇರಲಾರಂಭಿಸಿತು. ಪೆಟ್ಟಿಗೆ ಆಕಾಶದವರೆಗೆ ಏರಿತು. ಭೂಮಿಯ ಮೇಲಿದ್ದ ಜೀವಜಂತುಗಳೆಲ್ಲವೂ ಸತ್ತುಹೋದವು.

ಕೆಲವು ದಿನಗಳ ನಂತರ ನೀರಿನ ಮಟ್ಟ ಕಡಿಮೆಯಾಗಲಾರಂಭಿಸಿತು. ಕ್ರಮೇಣ ಆ ಪೆಟ್ಟಿಗೆಯೂ ಕೆಳಗೆ ಬರಲಾರಂಭಿಸಿತು. ನೀರೆಲ್ಲಾ ಬತ್ತಿಹೋದ ಮೇಲೆ ಪೆಟ್ಟಿಗೆ ಭೂಮಿಯ ಮೇಲೆ ಬಂದು ಭದ್ರವಾಗಿ ನೆಲೆಯೂರಿತು. ಪೆಟ್ಟಿಗೆಯಿಂದ ರೈತ ಅವನ ಪರಿವಾರ ಮತ್ತು ಮೊಲ ಹೊರ ಬಂದು ಸುತ್ತಲೂ ನೋಡಿದರು.

ಎಲ್ಲೆಲ್ಲೂ ಶವಗಳೇ ಬಿದ್ದಿದ್ದವು. ಪೆಟ್ಟಿಗೆಯಲ್ಲಿದ್ದ ಆಹಾರವೆಲ್ಲಾ ಮುಗಿದು ಹೋಗಿತ್ತು. ಹೀಗಾಗಿ ಬೆಂಕಿ ಹಚ್ಚಿ ತಿನ್ನಲು ಪ್ರಾಣಿಯ ಶವವೊಂದನ್ನು ಸುಡಲಾರಂಭಿಸಿದರು. ಅದರ ಹೊಗೆ ಸ್ವರ್ಗವನ್ನು ತಲುಪಿದಾಗ ದೇವರು ದೇವದೂತರನ್ನು ಕರೆದು ಹೇಳಿದ, 'ಭೂಮಿಗೆ ಹೋಗಿ ನೋಡಿ, ಈ ಹೊಗೆ ಇಲ್ಲಿಗೇಕೆ ಬರುತ್ತಿದೆ? ಆದರೆ ಎಚ್ಚರ, ಅಲ್ಲಿಗೆ ಹೋಗಿ ಏನೂ ತಿನ್ನಬೇಡಿ''.

ದೇವದೂತರು ಭೂಮಿಗೆ ಬಂದಾಗ ರೈತ ತನ್ನ ಪರಿವಾರದೊಂದಿಗೆ ಮಾಂಸ ಬೇಯಿಸಿ ತಿನ್ನುತ್ತಿದ್ದ. ರೈತ ಅವರಿಗೆ ಮತ್ತು ಮೊಲಕ್ಕೆ ಮಾಂಸವನ್ನು ತಿನ್ನುವಂತೆ ಹೇಳಿದ.

ಮೊಲ ಅವನ ಮಾತನ್ನು ಅಲ್ಲಗಳೆಯುತ್ತಾ ತಾನು ಹುಲ್ಲು-ಎಲೆ-ಹಣ್ಣುಗಳನ್ನು ತಿನ್ನುವೆ ಎಂದಿತು. ಆದರೆ ದೇವದೂತರ ಮನಸ್ಸು ಮಾಂಸ ನೋಡಿ ಮರುಳಾಯಿತು. ಅವರು ರೈತ ಕೊಟ್ಟ ಮಾಂಸವನ್ನು ತಿಂದರು. ದೇವರಿಗೆ ತಿಳಿಯಬಾರದೆಂದು, ಮಾಂಸ ತಿಂದ ನಂತರ ತಮ್ಮ-ತಮ್ಮ ಬಾಯಿಯನ್ನು ಚೆನ್ನಾಗಿ ಒರೆಸಿಕೊಂಡರು. ಆದರೂ ಮಾಂಸದ ವಾಸನೆ ಬಾಯಿಂದ ಹೋಗಲೇ ಇಲ್ಲ. ಅವರೆಲ್ಲಾ ದೇವರ ಬಳಿಗೆ ಹೋದಾಗ ದೇವರಿಗೆ, ತಾನು ಬೇಡವೆಂದಿದ್ದರೂ ಅವರು ಮಾಂಸ ತಿಂದು ಬಂದಿರುವ ವಿಷಯ ತಿಳಿಯಿತು. ದೇವರಿಗೆ ಸಿಟ್ಟು ಬಂದಿತು. ಅವನು ಅವರಿಗೆಲ್ಲಾ ''ನೀವು ಮಾಂಸ ತಿಂದು ಬಂದಿದ್ದೀರಿ, ಹೀಗಾಗಿ ಇಂದಿನಿಂದ ಮಾಂಸವೇ ನಿಮ್ಮ ಆಹಾರವಾಗಲಿ'' ಎಂದು ಶಾಪ ಕೊಟ್ಟ. ದೇವರ ಶಾಪದಿಂದ ಆ ದೂತರು ಆಗಲೇ ಹದ್ದುಗಳಾದರು.

■ **ರಾಜಶ್ರೀ ವಿನಾಯಕ ಗುಮಾಸ್ತೆ**

ನೀವು ಕಥೆಗಾರರಾಗಬೇಕೆ?..................

ನಿಮಗೂ ಕಥೆಗಾರರಾಗಬೇಕೆಂಬ ಆಸೆ ಇರಬಹುದಲ್ಲವೆ? ನಿಮ್ಮಂತಹ ಚಿಗುರು ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲಿಕ್ಕಾಗಿಯೇ ಈ ಅಂಕಣ ಮೀಸಲು. ನೀವು ಮಾಡಬೇಕಾದುದಿಷ್ಟೇ; ಈ ಕೆಳಗೆ ನಾವೊಂದು ಕಥೆ ನೀಡಿದ್ದೇವೆ. ಆದರೆ ಅದು ಅಪೂರ್ಣ. ಅದನ್ನು ಪೂರ್ಣಗೊಳಿಸಬೇಕಾದವರು ನೀವೇ!

ಅಪೂರ್ಣ ಕತೆ

ನಂದಿಯ ಶಾಲೆಯಲ್ಲಿ ಕಿಟ್ಟು, ಪುಟ್ಟು ಎಂಬ ಇಬ್ಬರು ಬಾಲಕರು ಓದುತ್ತಿದ್ದರು. ಬಹಳ ಬುದ್ಧಿವಂತರಾಗಿದ್ದ ಈ ಇಬ್ಬರೂ ಹುಡುಗರು ಚಿಕ್ಕಂದಿನಿಂದಲೂ ಮನೆಯಲ್ಲಿ ಮತ್ತು ಶಾಲೆಯಲ್ಲಿ ಸ್ವಾಮಿ ವಿವೇಕಾನಂದರು, ರಾಮಕೃಷ್ಣ ಪರಮಹಂಸರು ಮುಂತಾದ ಸಮಾಜ ಸುಧಾರಕರ ಕಥೆಗಳನ್ನು ಕೇಳುತ್ತಿದ್ದರು. ಮುಂದೆ ದೊಡ್ಡವರಾದ ಮೇಲೆ ನಾವೂ ಅವರಂತೆ ಸಮಾಜ ಸೇವೆಯಲ್ಲಿ ತೊಡಗಬೇಕೆಂದು ಕಿಟ್ಟು, ಪುಟ್ಟು ಯಾವಾಗಲೂ ಯೋಚಿಸುತ್ತಿದ್ದರು. ಒಂದು ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ಬಡವರಿಗೆ ನಿರ್ಗತಿಕರಿಗೆ ಸಹಾಯ ಮಾಡಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿದ್ದರು.

ಒಂದು ದಿನ ಶಾಲೆಯ ವತಿಯಿಂದ ಮಕ್ಕಳೆಲ್ಲ ಪ್ರವಾಸಕ್ಕೆಂದು ಹೊರಟರು. ಮಕ್ಕಳು ವಿವಿಧ ಪ್ರೇಕ್ಷಣಿಯ ಸ್ಥಳಗಳನ್ನು ವೀಕ್ಷಿಸಿ ಬಹಳ ಸಂತೋಷಗೊಂಡಿದ್ದರು. ಕೊನೆಯ ದಿವಸ ಪ್ರವಾಸದಿಂದ ಹಿಂತಿರುಗುವಾಗ ಸಹಪಾಟಿಯೊಬ್ಬ ಬಾಯಾರಿಕೆ ಎಂದು ನೀರು ಕೇಳಿದಾಗ, ಕಿಟ್ಟು ಹತ್ತಿರದಲ್ಲಿಯೇ ಇದ್ದ ಬಾವಿಗೆ ನೀರು ತರಲು ಹೋದನು. ಬಾವಿಯಿಂದ ಹತ್ತುವಾಗ ಆಕಸ್ಮಿಕವಾಗಿ ಕಾಲು ಜಾರಿ ನೀರಿನಲ್ಲಿ ಬಿದ್ದು ಬಿಟ್ಟನು.

ಸೂಚನೆಗಳು :

- ಹತ್ತನೆಯ ತರಗತಿಯವರೆಗಿನ ವಿದ್ಯಾರ್ಥಿಗಳು ಮಾತ್ರ ಈ ಕಥೆಯನ್ನು ಪೂರ್ಣಗೊಳಿಸಿ ಕಳುಹಿಸಲು ಅರ್ಹರು.
- ನಿಮ್ಮ ಬರವಣಿಗೆ ಅರ್ಧ ಫೂಲ್‌ಸ್ಕೇಪ್ ಹಾಳೆ ಮೀರದಿರಲಿ.
- ಆ ಹಾಳೆಯ ಹಿಂಬದಿಯಲ್ಲಿ 'ಕಿಲ ಕಿಲ ಕೂಪನ್' ಅಂಟಿಸಿರಬೇಕು.
- ಮುಂದಿನ ಸಂಚಿಕೆಯಲ್ಲಿ ಫಲಿತಾಂಶ.
- ನಿಮ್ಮ ಬರವಣಿಗೆ ನಮಗೆ ತಲುಪಲು ಅಂತಿಮ ದಿನಾಂಕ 15. 12. 98

ಕಿಲ ಕಿಲ ಕೂಪನ್ - (ಡಿಸೆಂಬರ್ 98)

ಹೆಸರು..

ತರಗತಿ............................ ವಯಸ್ಸು...................

ತಂದೆ..

ತಾಯಿ...

ವಿಳಾಸ..

....

....

....

ಹಕ್ಕಿಯ ಜಾಣ್ಮೆ

ಬೇಟೆಗೆ ಹೋದನು ನರಿಯಣ್ಣ
ಹೊಟ್ಟೆಗೆ ಸಿಗದೆ ಮರಳಿದನಣ್ಣ

ಬಳಲಿ ಮಲಗಿದ ನರಿಯಣ್ಣ
ಕಪಟದಲಿ ಮುಚ್ಚಿದ ಕಣ್ಣ

ಕಾಳನು ಅರಸುತ ಬಂದವು ಹಕ್ಕಿ
ಸತ್ತ ನರಿಯನು ಕಂಡು ಕುಳಿತವು ಪಕ್ಕ

ಮೂಗಿನ ಮೇಲೆ ಕುಳಿತಿತೊಂದು ಹಕ್ಕಿ
ತೆರೆಯಿತು ಇದರಿಂದ ಮುಚ್ಚಿದ ಕಣ್ಣ

ಹಿಡಿಯಿತು ಬಾಲ ಗಬಕ್ಕನೆಂದು
ಹೇಳಿದ ನರಿಯಣ್ಣ ಆಹಾರವಾದೆ
ನೀನಿಂದು

ಕಲಿಸುವೆ ಆಟ ನಿನಗೊಂದು
ಬುಟ್ಟಿಯಲಿ ನನ್ನನು ಮುಚ್ಚೆಂದು

ಹೇಳಿತು ಹಕ್ಕಿ ತಳ್ಳು ಬೆಟ್ಟದ ಮೇಲಿಂದ
ಸಿಗುವುದು ಬಲು ಮೋಜು ಇದರಿಂದ

ಬುಟ್ಟಿಯ ತಳ್ಳಿ ಕೇಕೆ ಹಾಕುತ ನಿಂದ
ಹಾರಿತು ಹಕ್ಕಿ ಸಂತಸದಿಂದ

ಪೆಚ್ಚುಮೋರೆ ನರಿಯಣ್ಣ
ಓಡಿಹೋದ ನಾಚಿಕೆಯಿಂದ

-ಪ್ರಕಾಶ್ ಆರ್.ಕಮ್ಮಾರ್
ಸಾಗರ

ಕಳೆದ ತಿಂಗಳ ಅಪೂರ್ಣ ಕಥೆಯ ಮುಕ್ತಾಯ

1

ತಂದೆ ತೀರಿಕೊಂಡ ಮೇಲೆ ಕಾವೇರಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಅವಳ ಸಾಧನೆಯ ಹುಮ್ಮಸ್ಸು ನುಚ್ಚು ನೂರಾಯಿತು. ಅವಳು ಓದಿಗೆ ಮುಕ್ತಾಯ ಹಾಡಿ, ಮನೆಯಲ್ಲಿ ತಾಯಿಗೆ ಸಹಾಯ ಮಾಡಬೇಕೆಂದು ನಿರ್ಧರಿಸಿದಳು. ಆದರೆ ಅವಳ ಚಿಕ್ಕಪ್ಪ ಹಾಗೂ ಗುರುಗಳು ಅವಳ ಮನಸ್ಸನ್ನು ಪರಿವರ್ತಿಸಿ ಹೆಚ್ಚಿನ ಸಾಧನೆಗೆ ಪ್ರೋತ್ಸಾಹ ನೀಡಿದರು. ಇವರ ಸಹಾಯದಿಂದ ಕಾವೇರಿ ಡಾಕ್ಟರ್ ಪದವಿ ಮುಗಿಸಿ ಆಸ್ಪತ್ರೆ ಇಲ್ಲದ ಅವಳ ಊರಿನಲ್ಲಿ ಚಿಕ್ಕ ಆಸ್ಪತ್ರೆಯೊಂದನ್ನು ತೆರೆದು ಹಳ್ಳಿಯ ಜನರ ಸೇವೆ ಮಾಡಿದಳು. ಅವಳ ಚಿಕ್ಕಪ್ಪ ಹಾಗೂ ಗುರುಗಳು ಅವಳ ಬೆನ್ನು ತಟ್ಟಿ ಊರಿನ ಜನರೊಂದಿಗೆ ಹರ್ಷಗೊಂಡರು.

- ವಾಣಿಶ್ರೀ, ನಿಂಬಾಳಕರ.

2

ಕಾವೇರಿಯು ದುರಾದೃಷ್ಟದಿಂದ ತಂದೆಯನ್ನು ಕಳೆದುಕೊಂಡು ಕಂಗಾಲಾದಾಗ ಆಕೆಯ ತಾಯಿ ತನ್ನ ದುಃಖ ಒತ್ತೆಯಿಟ್ಟು ಮಗಳನ್ನು ಓದಲು ಪ್ರೇರೆಪಿಸಿದಳು. ಒಂದು ಕಡೆ ತಂದೆಯ ಮರಣ ಇನ್ನೊಂದು ಕಡೆ ಹಣದ ಅಭಾವದೊಂದಿಗೆ ಉನ್ನತ ಶಿಕ್ಷಣ ಮುಗಿಸಿ ಉತ್ತಮ ಫಲಿತಾಂಶದಿಂದ ಸರಕಾರಿ ಕ್ಷೇತ್ರದಲ್ಲಿ ಉಪನ್ಯಾಸಕಿಯಾಗಿ ಖ್ಯಾತಿಗಳಿಸಿದಳು. ತನ್ನ ನೋವೆಲ್ಲ ಮರೆತು ವಿದ್ಯಾರ್ಥಿಗಳ ಜೀವನದ ಆಶಾಕಿರಣವಾಗಿ ಮಿಂಚಿದ ಕಾವೇರಿ ತನ್ನ ತಾಯಿಯೊಂದಿಗೆ ಬಾಳುತ್ತ ವಿದ್ಯಾರ್ಥಿಗಳ ಶ್ರೇಯಸ್ಸಿಗಾಗಿ ತನ್ನ ಬಾಳನ್ನೆ ಸವೆಸಿ ಶ್ರೇಷ್ಠ ಉಪನ್ಯಾಸಕಿಯಾಗಿ ಬೆಳೆದು ನಿಂತ ಕಾವೇರಿ, ಕಾವೇರಿ ನದಿಯಷ್ಟೆ ಖ್ಯಾತಿ ಗಳಿಸಿದಳು.

- ನಾಗರತ್ನ ಕೆ.ವೈ, ಶಹಾಪುರ.

3

ಕಾವೇರಿಯು ತನ್ನ ತಂದೆಯ ಆಸೆಯನ್ನು ಈಡೇರಿಸಲು ಎಸ್.ಎಸ್.ಎಲ್.ಸಿ. ಪಾಸಾಗಿ ಕಾಲೇಜಿಗೆ ಹೋಗುವಾಗ ಅವಳ ಅಮ್ಮನ ಹತ್ತಿರ ಹಣ ಇರಲಿಲ್ಲ. ಅವಳು ತನ್ನ ಚಿಕ್ಕಪ್ಪನ ಹತ್ತಿರ ಹೋಗಿ ಸಹಾಯ ಮಾಡಿ ಎಂದಳು. ಅವರ ಚಿಕ್ಕಪ್ಪ ಅವಳ ದುಃಖವನ್ನು ತಡೆಯಲಾರದೆ ಸಹಾಯ ಮಾಡಿದರು. ಹೀಗೆ ಅವಳು ಕಷ್ಟಪಟ್ಟು ಓದಿ ಇಂಜಿನಿಯರ್ ಆದಳು. ತನ್ನ ಸಂಬಂಧಿಕರು ಹಾಗೂ ಚಿಕ್ಕಪ್ಪನನ್ನು ಗೌರವ ಭಾವನೆಯಿಂದ ಕಾಣುತ್ತಿದ್ದಳು. ಸೌಮ್ಯ ಸ್ವಭಾವದ ಕಾವೇರಿ ಇತರರಿಗೆ ಪ್ರೀತಿ ಪಾತ್ರಳಾಗಿದ್ದಳು.

- ಮೀನಾಕ್ಷಿ ಕುಲಕರ್ಣಿ, ಕುರುಬಗೊಂಡ.

4

ಅವಳ ತಾಯಿಗೆ ಕಾವೇರಿಯನ್ನು ಹೇಗೆ ಓದಿಸುವುದು ಎಂದು ಚಿಂತೆಯಾಯಿತು. ಅವಳ ಮುಂದಿನ ವಿದ್ಯಾಭ್ಯಾಸಕ್ಕಾಗುವ ಖರ್ಚನ್ನು ಭರಿಸಲಾಗದೆ ಅಸಹಾಯಕಳಾದಳು. ಕಾವೇರಿಗೆ ಇದರಿಂದ ಬಹಳ ದುಃಖವಾಯಿತು. ಈ ವಿಷಯ ತಿಳಿದ ಕಾವೇರಿಯ ಚಿಕ್ಕಪ್ಪ ಹಾಗೂ ಶಾಲಾ ಗುರುಗಳು ಅವಳ ವಿದ್ಯಾಭ್ಯಾಸದ ಖರ್ಚನ್ನು ವಹಿಸಿಕೊಳ್ಳಲು ಮುಂದಾದರು. ಇದರಿಂದ ಅವಳ ತಾಯಿಗೆ ತುಂಬಾ ಸಂತೋಷವಾಯಿತು.

ಹೀಗೆ ಕಾವೇರಿಯ ವಿದ್ಯಾಭ್ಯಾಸಕ್ಕೆ ಬಂದಿದ್ದ ಗಂಡಾಂತರ ತಪ್ಪಿ ಹೋಯಿತು. ಎಲ್ಲರ ಅಪೇಕ್ಷೆಯಂತೆ ಅವಳು ಚೆನ್ನಾಗಿ ಓದಿ ತನ್ನ ಗ್ರಾಮಕ್ಕೆ ಶಾಲಾ ಅಧ್ಯಾಪಕಿಯಾಗಿ ಕೆಲಸ ನಿರ್ವಹಿಸಿದಳು.

- ಯು.ಬಿ.ಅಭಿಮನ್ಯು, ಬೆಂಗಳೂರು.

5

ಇದರಿಂದಾಗಿ ಕಾವೇರಿಗೆ ತುಂಬಾ ದುಃಖವಾಯಿತು. ಕಾವೇರಿಗೆ ಮುಂದೆ ಓದಲು ಹಣದ ತೊಂದರೆಯಾಯಿತು. ಆದರೆ ಕಾವೇರಿ 10ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದಿದ್ದರಿಂದ ಸರಕಾರದಿಂದ ಸ್ಕಾಲರ್‌ಶಿಪ್ ದೊರೆಯಿತು. ಇದರಿಂದ ಮುಂದೆ ಓದಲು ಅನುಕೂಲವಾಯಿತು. ಕಾವೇರಿ ಡಿಗ್ರಿಯಲ್ಲಿ ಉತ್ತೀರ್ಣಳಾಗಿ, ಮುಂದೆ ಐ.ಎ.ಎಸ್ ಪಾಸ್ ಮಾಡಿ ಜಿಲ್ಲಾಧಿಕಾರಿಯಾದಳು. ಆಗ ತಾಯಿಗೆ ತುಂಬಾ ಸಂತೋಷವಾಯಿತು.

- ಕೆ.ವರಗಪ್ಪ, ಶ್ರೀಧರಗಡ್ಡೆ.

6

ಆದರೂ ಅವಳು ಧೃತಿಗೆಡಲಿಲ್ಲ. ತನ್ನ ಅಭ್ಯಾಸವನ್ನು ಮುಂದುವರೆಸಿದಳು. ಓದಿ ಮುಂದೆ ಬರಬೇಕೆಂದು ಬಹಳ ಕಷ್ಟಪಟ್ಟಳು. ಅವಳ ಚಿಕ್ಕಪ್ಪನು ಸ್ವಲ್ಪ ಹಣ ಸಹಾಯವನ್ನು ಮಾಡಿದನು. ಎಲ್ಲದರಲ್ಲಿಯೂ ಪ್ರಥಮ ರ್‍ಯಾಂಕ್ ಇವಳಿಗೆ ಕಟ್ಟಿಟ್ಟ ಬುತ್ತಿ. ಶಿಕ್ಷಕರೂ ಸಹ ಇವಳ ಪ್ರತಿಭೆಯನ್ನು ಕಂಡು ಬೆರಗಾದರು. ಶಿಕ್ಷಕರಿಗೆ ಮಕ್ಕಳಿರಲಿಲ್ಲ. ಅವಳನ್ನೇ ಮಗಳೆಂದು ತಿಳಿದು ಹಣದ ಸಹಾಯ ಮಾಡಿದರು. ಅವಳು ತನ್ನ ಛಲವನ್ನು ಬಿಡದೇ ಐ.ಎ.ಎಸ್ ಅಧಿಕಾರಿಯಾಗಿ ತಮ್ಮ ಕುಟುಂಬಕ್ಕೆ ಕೀರ್ತಿ ತಂದಳು.

- ಬಸವರಾಜ ಎಚ್.ಮಸರಕಲ್, ಮಸ್ಕಿ.

7

ಪ್ರೌಢಶಾಲೆಯಲ್ಲಿ ಓದುತ್ತಿದ್ದ ಕಾವೇರಿ ಬುದ್ಧಿವಂತ ಹುಡುಗಿ ಆಗಿದ್ದರಿಂದ ಹೆತ್ತವರಿಗೂ ಗುರುಗಳಿಗೂ ಅಚ್ಚುಮೆಚ್ಚಿನವಳಾಗಿದ್ದಳು. 10ನೇ ತರಗತಿಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದಾಗ ತುಂಬ ಸಂತೋಷಗೊಂಡಿದ್ದ ಕಾವೇರಿ ತನ್ನ ತಂದೆಯ ಸಾವಿನಿಂದ ಅಷ್ಟೇ, ಆತಂಕ ದುಃಖಕ್ಕೆ ಒಳಗಾದಳು. ಆದರೆ ಅವಳ ಸಂಬಂಧಿಕರು ಗುರು ಗಳು ಇವಳಲ್ಲಿನ ಪ್ರತಿಭೆಯನ್ನು ಗುರುತಿಸಿ ಅವಳ ಮುಂದಿನ ವ್ಯಾಸಂಗಕ್ಕೆ ಎಲ್ಲಾ ರೀತಿಯಿಂದ ಸಹಾಯ ಪ್ರೋತ್ಸಾಹ ಕಲ್ಪಿಸಿದರು. ಕಾವೇರಿ ಕಷ್ಟಪಟ್ಟು ಅಭ್ಯಾಸ ಮಾಡಿ ನೌಕರಿಯನ್ನು ಗಿಟ್ಟಿಸಿಕೊಂಡು ತಮ್ಮ ತಂದೆಯ ಸ್ಥಾನದಲ್ಲಿ ನಿಂತು ಮನೆತನದ ಜವಾಬ್ದಾರಿ ಹೊರಬೇಕೆಂಬ ಮನೋಭಾವ ಹೊಂದಿ ಆ ಗುರಿಯನ್ನು ಯಶಸ್ವಿಯಾಗಿಸಿಕೊಳ್ಳುವಲ್ಲಿ ಸಫಲಳಾದಳು.

-ಮಂಜುಳಾ ಎನ್. ವೇದಪಾಠಕ್, ಕೊಪ್ಪಳ.

8

ಮನೆಯ ಒಡೆಯನನ್ನು ಕಳೆದುಕೊಂಡು ತಾಯಿ ಮಗಳು ಬಹಳ ದುಃಖಪಟ್ಟರು. ಮುಂದಿನ ಜೀವನ ಹೇಗೆಂದು ಚಿಂತಿತರಾದರು. ಆಗ ಗುರುಗಳು ಮನೆಗೆ ಬಂದು ಅವರನ್ನು ಸಂತೈಸುತ್ತಾ ಕಾವೇರಿಯನ್ನು ಕುರಿತು ''ನೀನು, ನಿನ್ನ ಹಾಗೂ ತಂದೆ ತಾಯಿಗಳ ಆಸೆಯನ್ನು ಪೂರೈಸು'' ಎಂದರು. ಆದರೆ ತಮ್ಮ ಜೀವನಕ್ಕೆ ಆಧಾರವಾದ ವ್ಯಕ್ತಿಯೇ ಮರಣಹೊಂದಿದಾಗ ವಿದ್ಯಾಭ್ಯಾಸ ಮುಂದುವರೆಸುವುದು ಅಸಾಧ್ಯವೆನಿಸಿತು.

ಕಾವೇರಿಯ ತಾಯಿಯು ಅವಳಲ್ಲಿ ಧೈರ್ಯ ತುಂಬಿ ''ನೀನು ವಿದ್ಯಾಭ್ಯಾಸವನ್ನು ಮುಂದುವರೆಸು ಹಣದ ಬಗ್ಗೆ ಚಿಂತೆ ಮಾಡಬೇಡ'' ಎಂದು ಹೇಳಿ ತಾನು ದುಡಿಯಬೇಕೆಂದು ತೀರ್ಮಾನಿಸಿದಳು. ಕಾವೇರಿಯು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರಿಂದ ಸರಕಾರದಿಂದ ಅವಳಿಗೆ ವಿದ್ಯಾರ್ಥಿ ವೇತನ ದೊರೆಯಿತು. ಬಿಡುವಿನ ವೇಳೆಯಲ್ಲಿ ಸಣ್ಣ ಪುಟ್ಟ ಕೆಲಸ ಮಾಡಿ ತಾನೂ ಹಣಗಳಿಸುತ್ತಿದ್ದಳು. ಹೀಗೆಯೇ ಅವಳು ವಿದ್ಯಾಭ್ಯಾಸ ಮುಂದುವರೆಸಿ ಸ್ನಾತಕೋತ್ತರ ಪದವಿ ಪಡೆದಳು.

ಮುಂದೆ ಸರಕಾರಿ ಕೆಲಸಕ್ಕೆ ಸೇರಿ ದೊಡ್ಡ ಅಧಿಕಾರಿಯಾಗಿ ತನ್ನ ತಂದೆ-ತಾಯಿಗಳ ಆಸೆಯನ್ನು ಈಡೇರಿಸಿದಳು.

-ಶೋಭಾ ದುಂ ಮಾರಿಹಾಳ, ಬೆಳಗಾವ.

ಮೋಸ ಹೋದ ಕನ್ನಡ ಪ್ರೇಕ್ಷಕರು!

ಸ್ಯಾಂಡಲ್‌ವುಡ್‌ನ ಇತ್ತೀಚಿನ ಸ್ಕೂಪ್ ಯಾವುದು?

ಉಪೇಂದ್ರ-ಪ್ರೇಮಾ ಮತ್ತೆ ಒಂದಾಗಿದ್ದಾರೆ. ಅಷ್ಟೇ ಅಲ್ಲ 'ಉಪೇಂದ್ರ' ಎಂಬ ಚಿತ್ರದಲ್ಲಿ ನಾಯಕ - ನಾಯಕಿಯಾಗಿ ನಟಿಸಲಿದ್ದಾರೆ.

ಇದರಿಂದ ಲಾಭ ಯಾರಿಗೆ?

'ಉಪೇಂದ್ರ' ಚಿತ್ರದ ನಿರ್ಮಾಪಕರಿಗೆ ಹಾಗೂ ಸ್ವತಃ ಉಪ್ರೇಂದ್ರರಿಗೆ. ಯಾಕೆಂದರೆ 'ಎ' ಚಿತ್ರ ನೋಡಿದ ಪ್ರೇಕ್ಷಕರು ಉಪೇಂದ್ರ - ಪ್ರೇಮಾ ಪ್ರೇಮಪ್ರಕರಣದಲ್ಲಿ ಉಪೇಂದ್ರರಿಗೆ ಅನ್ಯಾಯವಾಗಿದೆ ಅಂತ ನಂಬಿದ್ದರು. ರೀಲ್ ಲೈಫ್‌ನಲ್ಲಿ ರಿಯಲ್ ಲೈಫ್ ಇದೆ ಎಂಬ ಭ್ರಮೆಯೇ ಚಿತ್ರದ ಯಶಸ್ಸಿಗೆ ಕಾರಣವಾಯಿತು. ಈಗ ಆ ಸುದ್ದಿ ಹಳಸಲಾಗುತ್ತಿದ್ದಂತೇ ಹೊಸ ಚಿತ್ರದ ಪ್ರಚಾರಕ್ಕೆ ಇನ್ನೊಂದು 'ಗಿಮಿಕ್' ಉಪೇಂದ್ರರಿಗೆ ಬೇಕಾಗಿತ್ತು. ಅದಕ್ಕೆ ಈ ರಾಜಿ ನಾಟಕ.

ನಷ್ಟ ಯಾರಿಗೆ?

'ಝುಡ್' ಚಿತ್ರದ ನಿರ್ಮಾಪಕರಿಗೆ ಹಾಗೂ ನಿರ್ದೇಶಕ ಪ್ರವೀಣ್‌ನಾಯಕ್‌ಗೆ. 'ಎ' ಚಿತ್ರಕ್ಕೆ ಪ್ರತ್ಯುತ್ತರವೇ 'ಝುಡ್' ಎಂಬ ಪ್ರಚಾರದೊಂದಿಗೆ ಸೆಟ್ಟೇರಿದ್ದ ಈ ಚಿತ್ರಕ್ಕೆ ಈಗ ಬೇರುಗಳೇ ಇಲ್ಲದಂತಾಗಿದೆ.

ಮೋಸ ಹೋದವರು ಯಾರು?

ಕನ್ನಡದ ಮುಗ್ಧ ಪ್ರೇಕ್ಷಕರು. ಕಳೆದ ಒಂದು ವರ್ಷದಿಂದ ಈ ತೆರೆಮರೆ ನಾಟಕವನ್ನು ನಿಜವೆಂದೇ ನಂಬಿದ್ದವರಿಗೆ ಈಗ ಆಘಾತವಾಗಿದೆ.


ಒಮ್ಮೆ ಸುಮ್ಮನೇ ಈ ಪ್ರೇಮಪ್ರಸಂಗದ ಪುಟಗಳನ್ನು ತಿರುವಿನೋಡಿ. ಆಗ ಇಲ್ಲಿನ ಪಾತ್ರಧಾರಿಗಳ ತಂತ್ರ ಬಯಲಾಗುತ್ತದೆ. ಉಪೇಂದ್ರ ಮತ್ತು ಪ್ರೇಮ ಆತ್ಮೀಯರಾಗಿದ್ದು 'ಓಂ' ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿ. ತನ್ನ ಚಿತ್ರದ ನಾಯಕಿಯನ್ನೇ ಪೂಜಿಸುತ್ತಿದ್ದ ಅಥವಾ ಪ್ರೀತಿಸುತ್ತಿದ್ದ ಪುಟ್ಟಣ್ಣ ಕಣಗಾಲ್ ಸ್ಟೈಲಿನಲ್ಲೇ ಉಪೇಂದ್ರ 'ಪ್ರೇಮ' ಪರವಶರಾದರು. 'ಓಂ' ಚಿತ್ರದಲ್ಲಿ ನಾಯಕಿ ಆರಂಭದಲ್ಲಿ ನಾಯಕನನ್ನು ದ್ವೇಷಿಸಿ, ಆತನನ್ನು ಕೊಲ್ಲೋದಕ್ಕೂ ಯತ್ನಿಸಿ, ಕೊನೆಗೆ ಪ್ರೀತಿಯ ಮುಂದೆ ತಲೆಬಾಗುತ್ತಾಳೆ.

ಚಿತ್ರ ತೆರೆಕಂಡ ನಂತರ ಉಪೇಂದ್ರ - ಪ್ರೇಮಾ ನಡುವೆ ಬಿರುಕು ಮೂಡಿತು. ಇದಕ್ಕೆ ಆಕೆಯೇ ಕಾರಣ ಎಂದು ಉಪೇಂದ್ರರ ಆತ್ಮೀಯರು ಹೇಳಿದರು. ಭಗ್ನಪ್ರೇಮಿ ಉಪೇಂದ್ರ ತನ್ನ ನೋವನ್ನು ಸಮಸ್ತರಿಗೂ ತಿಳಿಸಬೇಕೆಂಬ ಹಠದಿಂದ 'ಎ' ಚಿತ್ರ ಶುರುಹಚ್ಚಿಕೊಂಡರು. ಇದೊಂದು ರೀತಿಯಲ್ಲಿ ಪ್ರೇಮಾ ವಿರುದ್ಧ ಸೇಡು ತೀರಿಸಿಕೊಳ್ಳುವ ಹುನ್ನಾರವೂ ಆಗಿತ್ತು. ಈ ಚಿತ್ರದ ಕಥೆ 'ಓಂ' ಚಿತ್ರದ ಕಥೆಯನ್ನೇ ತಿರುವು ಮುರುವು ಮಾಡಿದಂತಿದೆ. ಇಲ್ಲಿ ನಾಯಕಿ ಆರಂಭದಲ್ಲಿ ನಾಯಕನನ್ನು ಪ್ರೀತಿಸಿ, ಅನಂತರ ಆತನ ಕಣ್ಣಮುಂದೆಯೇ ಪರಪುರುಷರ ಜೊತೆ ಸರಸವಾಡುತ್ತಾಳೆ. ನಾಯಕ ಪ್ರೀತಿ ಪ್ರೇಮವೆಲ್ಲಾ ಬರೀ ಬೊಗಳೆ ಎಂಬ ಡೈಲಾಗ್ ಹೊಡೆಯುತ್ತಾ ಬದುಕಿಗೆ ವಿಮುಖನಾಗುತ್ತಾನೆ.

'ಎ' ಚಿತ್ರದ ನಾಯಕನ ಪಾತ್ರವೇ ಸಿನಿಮಾ ನಿರ್ದೇಶಕನದ್ದು. ಹೀಗಾಗಿ ಜನ ಉಪೇಂದ್ರರ ಪಾತ್ರದಲ್ಲಿ ಉಪೇಂದ್ರರನ್ನೇ ಕಂಡರು. ನಾಯಕನನ್ನು ನಂಬಿಸಿ ಮೋಸ ಮಾಡುವ ಹೆಣ್ಣಿನ ಮುಖದಲ್ಲಿ ಪ್ರೇಮಾಳನ್ನು ಕಂಡರು. ಈ ಸಿಂಪತಿಯೇ ಚಿತ್ರದ ಯಶಸ್ಸಿಗೆ ಮುನ್ನುಡಿ ಬರೆಯಿತು. ಹೀಗೆ ಚಿತ್ರದಲ್ಲಿ ನಟಿಸದೇ ಖಳನಾಯಕಿ ಹಣೆಪಟ್ಟಿಯನ್ನು ಕಟ್ಟಿಕೊಂಡ ಪ್ರೇಮಾಳ ರಕ್ಷಣೆಗೆ ಧಾವಿಸಿದವರು ಪ್ರವೀಣ್ ನಾಯಕ್. ಇವರು ಒಂದು ಕಾಲದಲ್ಲಿ ಉಪೇಂದ್ರರ ಜೊತೆಗೇ ಇದ್ದವರು. ಹಾಗಾಗಿ ಆತನ ವ್ಯಕ್ತಿತ್ವದ ಪರಿಚಯ ಇವರಿಗಿತ್ತು. ಎ ಚಿತ್ರವನ್ನೇ ಉಲ್ಟಾಪಲ್ಟಾ ಮಾಡಿ ನಾಯಕಿಯ ಮೇಲೆ ಪ್ರೇಕ್ಷಕರಿಗೆ ಸಿಂಪತಿ ಬರುವಂಥ ಪ್ರಯತ್ನವೇ ಝುಡ್ ಚಿತ್ರವೆನ್ನಲಾಗಿದೆ.

ಅದೇನೇ ಇರಲಿ, 'ಝುಡ್' ಚಿತ್ರ ಹೊರಬರುವ ಮುನ್ನವೇ 'ಉಪೇಂದ್ರ' ಸೆಟ್ಟೇರಿದೆ. ಚಿತ್ರದ ಮೂರು ನಾಯಕಿಯರಲ್ಲಿ ಪ್ರೇಮಾ ಕೂಡ

'ಪ್ರೇಮ' ಪಾಶ!



ರೀಲ್ ಲೈಫ್‌ನಲ್ಲಿ ರಿಯಲ್ ಲೈಫ್ ಇರುವುದು ನಿಜವೇ?

ಉಪೇಂದ್ರ, ಪ್ರೇಮಾ ಮತ್ತೆ ಒಂದಾಗಿದ್ದಾರೆ. ಅಷ್ಟೇ ಅಲ್ಲ 'ಉಪೇಂದ್ರ' ಎಂಬ ಚಿತ್ರದಲ್ಲಿ ನಾಯಕ ನಾಯಕಿಯಾಗಿ ನಟಿಸಲಿದ್ದಾರೆ. ಇದರಿಂದ ಲಾಭ ಯಾರಿಗೆ?

'ಪ್ರೇಮ' ಪರವಶ!



ಒಬ್ಬರು. ತಾನು ಈ ಚಿತ್ರದಲ್ಲಿ ಮಾಡೋದಿಲ್ಲ, ಉಪೇಂದ್ರ ತನ್ನನ್ನು ಸಂಪರ್ಕಿಸಿಯೇ ಇಲ್ಲ ಎಂದೆಲ್ಲಾ ಹೇಳಿಕೆ ನೀಡುತ್ತಿದ್ದ ಪ್ರೇಮಾ ಈಗ ಸುಮ್ಮನಾಗಿದ್ದಾರೆ. ಆಕೆಗೆ ನೀಡಿದ ಅಡ್ವಾನ್ಸ್ ಮೊತ್ತದ ಚೆಕ್ ಕ್ಯಾಶ್ ಆಗಿರುವ ಬಗ್ಗೆ ನಿರ್ಮಾ ಪಕರ ಬಳಿ ದಾಖಲೆಗಳಿವೆ.

'ಉಪೇಂದ್ರ' ಚಿತ್ರದ ಕಥೆಗೆ ಎರಡು ಆಯಾಮಗಳಿವೆ ಎಂದು ಉಪೇಂದ್ರ ಸಂದರ್ಶನವೊಂದರಲ್ಲಿ ಹೇಳಿದ್ದಾರೆ, ಕ್ಲೈಮಾಕ್ಸ್ ತನಕ ಚಿತ್ರ ಒಂದು ರೀತಿ ಹೋಗುತ್ತದೆ. ಅಲ್ಲಿ ಬಯಲಾಗುವ ಸತ್ಯ ಕಥೆಗೆ ಇನ್ನೊಂದು ಆಯಾಮ ನೀಡುತ್ತದಂತೆ. ಹಾಗಿದ್ದರೆ ಇದು ಪ್ರೇಕ್ಷಕನನ್ನು ಮತ್ತೆ ಗೊಂದಲಕ್ಕೆ ಹಚ್ಚಿ ಗೆಲ್ಲುವ ತಂತ್ರವೇ? ಚಿತ್ರ ಬಿಡುಗಡೆಯಾದ ನಂತರ ಈ ಪ್ರಶ್ನೆಗೆ ಉತ್ತರ.


ಕನ್ನಡದ ಸೌಭಾಗ್ಯ

ರಾಜ್ಯ ಫಿಲಂಛೇಂಬರ್ ಅಧ್ಯಕ್ಷ ಕೆ.ಸಿ.ಎನ್. ಚಂದ್ರು, ಇತ್ತೀಚೆಗೆ ಉಪ ಮುಖ್ಯಮಂತ್ರಿ ಸಿದ್ಧರಾಮಯ್ಯ ಮುಂದೆ ಒಂದು ವಿಚಿತ್ರ ಬೇಡಿಕೆಯನ್ನು ಸಲ್ಲಿಸಿದ್ದರು. ಸಬ್ಸಿಡಿ ಹಾಗೂ ಸಂಪೂರ್ಣ ತೆರಿಗೆ ವಿನಾಯಿತಿ ಸೌಲಭ್ಯವನ್ನು ರೀಮೇಕ್ ಚಿತ್ರಗಳಿಗೂ ವಿಸ್ತರಿಸಿ ಎನ್ನುವುದು ಆ ಬೇಡಿಕೆಯ ಸಾರಾಂಶ.

ಎಂದಿನಂತೆ ಸಚಿವರು ಆ ಬೇಡಿಕೆಯನ್ನು ಪರಿಶೀಲಿಸುವ ಭರವಸೆ ನೀಡಿದರು. ತಮಾಷೆಯೆಂದರೆ ಸಬ್ಸಿಡಿ ಅಥವಾ ತೆರಿಗೆವಿನಾಯಿತಿ ಸವಲತ್ತುಗಳ ಉದ್ದೇಶವನ್ನೇ ಎಲ್ಲರೂ ಮರೆತಂತಿದೆ. ಕನ್ನಡ ಚಿತ್ರಗಳು ಇಲ್ಲೇ ನೆಲೆಯಾಗಬೇಕು, ಇಲ್ಲಿನ ಕಲಾವಿದ ತಂತ್ರಜ್ಞರಿಗೆ ಕೆಲಸ ಸಿಗಬೇಕು, ಕನ್ನಡ ಚಿತ್ರಗಳಲ್ಲಿ ಕನ್ನಡ ಸಂಸ್ಕೃತಿಯೇ ಪ್ರತಿಬಿಂಬಿಸಬೇಕು ಎಂಬ ಹತ್ತಾರು ಕಾರಣಗಳಿಗೆ ಸರ್ಕಾರ ಈ ಸವಲತ್ತನ್ನು ನೀಡಿತ್ತು. ಈಗ ಅದು ಕನ್ನಡ ನಿರ್ಮಾಪಕರ ಉಳಿವಿಗಷ್ಟೆ ಬಳಕೆಯಾಗುತ್ತಿದೆ.

ಎರಡು ತಿಂಗಳ ಹಿಂದೆ ಸರ್ಕಾರ, ರಾಜ್ಯದ ಹೊರಗೆ ಚಿತ್ರೀಕರಣ ನಡೆಸುವ ಚಿತ್ರಗಳಿಗೂ ತೆರಿಗೆ ವಿನಾಯಿತಿ ಸೌಲಭ್ಯವನ್ನು ವಿಸ್ತರಿಸುವ ನಿರ್ಧಾರಕ್ಕೆ ಬಂತು. ಇದೀಗ ರೀಮೇಕ್ ಚಿತ್ರಗಳನ್ನೂ ಒಪ್ಪಿಕೊಂಡರೆ ಇದು ಪರಭಾಷಾ ಸಂಸ್ಕೃತಿಯನ್ನು ತೆರೆದ ತೋಳಿನಿಂದ ಆಹ್ವಾನಿಸಿದಂತೆ.

ರೀಮೇಕ್ ಚಂದ್ರನ್!



ಇವರ ಮನೆ ತುಂಬಾ ತಮಿಳು ಚಿತ್ರಗಳ ಕ್ಯಾಸೆಟ್ಟೇ ಹರಡಿಕೊಂಡಿವೆ.



ವಿಚಿತ್ರ ಬೇಡಿಕೆ

ಸಬ್ಸಿಡಿ ಹಾಗೂ ಸಂಪೂರ್ಣ ತೆರಿಗೆ ವಿನಾಯಿತಿ ಸೌಲಭ್ಯವನ್ನು ರೀಮೇಕ್ ಚಿತ್ರಗಳಿಗೂ ವಿಸ್ತರಿಸಿ ಎನ್ನುವುದು ಬೇಡಿಕೆಯ ಸಾರಾಂಶ.

ಇನ್ನೊಂದೆಡೆ ಸರ್ಕಾರ ರೀಮೇಕ್ ಚಿತ್ರಗಳನ್ನು ಮಾನ್ಯ ಮಾಡಲಿ, ಮಾಡದೇ ಇರಲಿ, ನಿರ್ಮಾಪಕರು ರಂಗೋಲಿ ಕೆಳಗೆ ತೂರ್ತಾನೇ ಇದ್ದಾರೆ. ಕಳೆದ ಮೂರು ತಿಂಗಳಲ್ಲಿ ತೆರೆಕಂಡ ಕನ್ನಡ ಚಿತ್ರಗಳ ಪೈಕಿ ಶೇ. 75 ರಷ್ಟು ಚಿತ್ರಗಳು ರೀಮೇಕ್. ಹಾಗಂತ ನಿರ್ಮಾಪಕರು ಹೇಳದೇ ಇರಬಹುದು. ಆದರೆ ತಮಿಳು ತೆಲುಗು ಚಿತ್ರಗಳನ್ನು ನೋಡುವ ಹವ್ಯಾಸವುಳ್ಳ ಪ್ರೇಕ್ಷಕನಿಗೆ ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ. ರೀಮೇಕ್ ಆದರೇನು, ಒರಿಜಿನಲ್ ಆದರೇನು. ಜನ ಮೆಚ್ಚುವುದು ಒಳ್ಳೇ ಚಿತ್ರಗಳನ್ನಷ್ಟೇ ತಾನೇ ಎನ್ನೋದು ರೀಮೇಕ್ ಪರ ನಿರ್ಮಾಪಕರ ವಾದ. ತಮ್ಮ ಯೋಗ್ಯತೆಯನ್ನು ತಾವೇ ಜಗಜ್ಜಾಹೀರು ಪಡಿಸುತ್ತಾ ಎಂಜಲು ಅನ್ನವನ್ನು ಉಣಬಡಿಸುವ ಪರಿಯಿದು.

> ಪ್ರೇಮಿಗಳ
> ಮಿಲನಕ್ಕೆ
> ಅಡ್ಡಿಯಾಗುವ
> ಮಾಮೂಲಿ
> ವಿರೋಧ
>
> **- ಉಮಾ ಬೆಳ್ತಂಗಡಿ**

> ಭಾವನೆಗಳು ಮೂಡಿದಂತೆ
> ಲೆಕ್ಕಣಿಕೆ ಓಡುತ್ತದೆ
> ಪ್ರೇಮ ಸಂದೇಶ ಬಾರದಿದ್ದರೆ
> ಮನಸ್ಸು ಮುದುಡುತ್ತದೆ.
>
> **- ಯು.ವಿ.ತಾರಿಣಿರಾವ್**

ಇಂಥವರ ಅಬ್ಬರದ ನಡುವೆ ಪ್ರೇಕ್ಷಕರೂ ಕನ್‌ಫ್ಯೂಸ್ ಆಗಿದ್ದಾರೆ. ಭೂಮಿತಾಯಿ, ಚೂಜ್ಜಲ ಮಗದಂಥ ಒಳ್ಳೇ ಚಿತ್ರ ಇಲ್ಲಿ ಯಶಸ್ಸು ಕಾಣೋದಿಲ್ಲ. ಯಾರೇ ನೀನು ಚೆಲುವೆಯಂಥ ಹಳಸಲು ಚಿತ್ರ ಕ್ಲಿಕ್ ಆಗುತ್ತದೆ. ಸಿಂಗಾಪುರ್, ಮಲೇಶಿಯಾ ನೋಡಿದವನಿಗೆ ಮತ್ತೆ ಚಿಕ್ಕಮಗಳೂರು ನೋಡುವುದು ಬೇಜಾರು. ಆತ ಅಮೆರಿಕಾ, ಸ್ವಿಜರ್ಲೆಂಡ್ ಸೊಬಗನ್ನೇ ಬಯಸುತ್ತಾನೆ ಎನ್ನುವುದು ನಮ್ಮ ನಿರ್ಮಾಪಕರಿಗೆ ಅರ್ಥವಾಗಬೇಕು. ಮಾರ್ಕೆಟ್‌ನ ಮಿತಿಯನ್ನು ಮೀರಿ ಖರ್ಚುಮಾಡಿ ಒಮ್ಮೆ ಚಿತ್ರ ಮಾಡಬಹುದು. ಆದರೆ ಈ ಜೂಜು ಬಹಳ ದಿನ ನಡೆಯುವುದಿಲ್ಲ.

ಉದಾಹರಣೆಗೆ ರವಿಚಂದ್ರನ್ ಅಥವಾ ರಾಕ್‌ಲೈನ್‌ರಂಥ ಅದ್ದೂರಿ ಚಿತ್ರಗಳ ವಕ್ತಾರರ ವರ್ತನೆಯನ್ನು ಗಮನಿಸಿ. ಇವರ ಮನೆ ತುಂಬಾ ತಮಿಳು ಚಿತ್ರಗಳ ಕ್ಯಾಸೆಟ್ಟೇ ಹರಡಿಕೊಂಡಿವೆ. ಹಾಗಾಗಿ ಅವರಿಗೆ ಆಯ್ಕೆ ಸ್ವಾತಂತ್ರ್ಯವಿದೆ! ರವಿಚಂದ್ರನ್ ಯಾವುದೋ ಒಂದು ಕ್ಯಾಸೆಟ್‌ನ್ನು ಒಪ್ಪಿದರೆ ಸಮಸ್ಯೆ ಮುಗಿದಂತೆ. ಅನಂತರ ಯಾವನೋ ಒಬ್ಬ ನಿರ್ದೇಶಕ ಆ ಚಿತ್ರ ಮಾಡುತ್ತಾನೆ. ರೀಮೇಕ್‌ಗೆ ಯಾರಾದರೇನು? ಅಲ್ಲೂ ರವಿಚಂದ್ರನ್ ಇಗೋಗೆ ತೃಪ್ತಿಯಾಗಬೇಕು. ಅವರ ಮಾತು ಕೇಳುವ ನಿರ್ದೇಶಕನಿಗೆ ಅವಕಾಶ.

ರೀಮೇಕ್ ಚಿತ್ರಗಳ ಜೊತೆಗೆ ಪರಭಾಷಾ ನಿರ್ದೇಶಕರೂ ಇಲ್ಲಿಗೆ ಬರುತ್ತಾರೆ. ಆಗ ಇಲ್ಲಿಯವರೆಲ್ಲಾ ಕೆಲಸವಿಲ್ಲದೆ ಕೂರಬೇಕಾಗುತ್ತೆ. ಯಾರಿಗೇನಾದರೇನಂತೆ ನಿರ್ಮಾಪಕ ಉಳಿಯಬೇಕು ಎನ್ನುವ ವಾದ ನಮ್ಮವರದ್ದು. ಸರ್ಕಾರದ ಬಳಿ ಇಂದು ರೀಮೇಕ್‌ಗೆ ರಿಯಾಯಿತಿ ಕೊಡಿ ಎಂದು ಬೇಡುವ ಮಂದಿ, ಮುಂದೊಂದು ದಿನ ಕನ್ನಡ ಚಿತ್ರಗಳನ್ನು ಎಲ್ಲಾ ಕನ್ನಡಿಗರು ಕಡ್ಡಾಯವಾಗಿ ನೋಡಲೇಬೇಕು ಎಂಬ ಕಾನೂನು ಮಾಡುವಂತೆ ಒತ್ತಡ ಹೇರುವುದಕ್ಕೆ ಹಿಂದುಮುಂದು ನೋಡುವುದಿಲ್ಲ.

ನಿರ್ಮಾಪಕನಿಗೆ ಈ ಮಾಧ್ಯಮ ಬಿಜಿನೆಸ್ ಇರಬಹುದು. ಆದರೆ ಪ್ರೇಕ್ಷಕನಿಗೆ ಇದು ರಂಜನೆ ಒದಗಿಸುವ ಮಾಧ್ಯಮ. ರಾಜ್ಯದಲ್ಲಿ ಅತಿವೃಷ್ಟಿ, ಅನಾವೃಷ್ಟಿಯಂಥ ನೂರಾರು ಸಮಸ್ಯೆಗಳಿವೆ. ಅವುಗಳಿಗೆ ನೆರವಾಗುವ ಬದಲು ಕನ್ನಡ ನಿರ್ಮಾಪಕನನ್ನು ಉಳಿಸುವುದೇ ತನ್ನ ಪರಮಧ್ಯೇಯ ಎಂದು ಸರ್ಕಾರ ಭಾವಿಸಿದರೆ ಅದಕ್ಕಿಂತ ದೊಡ್ಡ ಕೆಟ್ಟ ಜೋಕ್ ಇನ್ನಾವುದೂ ಇಲ್ಲ.

■ ಕೇಶವ ನಾಡಕರ್ಣಿ


ಈರುಳ್ಳಿ ಸ್ಪೆಶಲ್
* ಸೃಜನ್-98.
ಒಂದು ರೇಶ್ಮೆ ಸೀರೆ
ಕೊಂಡರೆ ಒಂದು ಕಿಲೋ ಈರುಳ್ಳಿ ಉಚಿತ
-ಸುದ್ದಿ.
ತುಂಬಾ ದಿವಸದಿಂದ ಕೇಳ್ತಾ ಇದ್ರಲ್ಲ.. ಈರುಳ್ಳಿ ಬಜ್ಜಿ ಮಾಡು ಅಂತ- ಅದಕ್ಕೆ ಬೆಳಗ್ಗೆ ಬಜಾರ್‌ಗೆ ಹೋಗಿ ನಾಲ್ಕು 'ರೇಶ್ಮೆ ಸೀರೆ' ತಂದು ಬಜ್ಜಿ ಮಾಡ್ದೇರಿ!!
ನೀವು ಆರ್ಡರ್ ಮಾಡಿದು ಸರಿಯಾಗಿದೆ ರಾಯರೇ! ಈ ಚಿತ್ರದಲ್ಲಿರೋದು 'ಈರುಳ್ಳಿ'- ಪ್ಲೇಟಲ್ಲಿರೋದು 'ದೋಸೆ'- 'ಈರುಳ್ಳಿ ದೋಸೆ'
ನನ್ನ ಮಗನದೇ ಮನೆ... ಈ ನಡುವೆ 'ಈರುಳ್ಳಿ ವ್ಯಾಪಾರ' ಶುರು ಮಾಡಿದಾನೆ.. ಅಂತ ಹೇಳ್ತಿದ್ನಲ್ಲ...... ಅವನ್ದೆ!!
ಚಿನ್ನ- ಒಡವೆ- ಕಾಸು.. ಎಲ್ಲ ಹಾಗೇ ಇವೆ ಸಾರ್.- ಬಳ್ಳಾರಿಯಿಂದ ಚೀಪ್ ಅಂತ 5 ಕೆ.ಜಿ. 'ಈರುಳ್ಳಿ' ತರಿಸಿದ್ದೆ- ಅದನ್ನು ಮಾತ್ರ ಕದ್ದಿದಾರೆ ಸಾರ್!!

WHO SAID? OWNING A FLAT IN BANGALORE IS IMPOSSIBLE

Ofcourse for an employee

WHEN ENGINEERS SYNDICATE STRIVES TO MAKE IT POSSIBLE

JANAPRIYA HEAVENS

504 FLATS

Allalsandra, near Jakkur Flying Club, 7 Km. from Mekhri Circle, Just 0.5 Km. from Bellary Main Road, adjacent to Dominion Club.

OWN A FLAT EVEN FOR Rs. 1, 76, 000/-

Loans can be arranged from Housing Financial Institutions



JANAPRIYA TOWNSHIP (780 FLATS)
on Magadi Road Bangalore, our Monumental Evidence, nearing completion.

Plans approved by competent authority. Construction already started

Floor	Super Built-up Area in Sq. ft	Position of Flat	Rateper Sq. ft.	Cost of Flat in Rs.	Booking Advance to be paid
3rd Floor	390 to * 560	Middle	Rs. 450/-	1,75,500 to 2,52,000	Rs. 5,000/- Rs. 10,000/-
	* 590 to * 660	Corner	Rs. 475/-		
2nd Floor	* 500 to * 660	Middle	Rs. 495/-	2,47,600 to 2,77,200	Rs. 15,000/-
	* 590 to * 660	Corner	Rs. 520/-	3,05,800 to 3,43,200	
Gr. & 1st Floor	* 500 to * 560	Middle	Rs. 520/-	2,60,000 to 2,91,200	Rs. 20,000/-
	* 590 to * 660	Corner	Rs. 550/-	3,24,500 to 3,63,000	

ABOVE CONCESSIONAL RATES ARE APPLICABLE UPTO 01-9-98 ONLY

* Two Bedrooms, Kitchen, Drawing-cum-Dining Hall, Toilets & Balcony

Co-Developers
Hara Housing & Land Development Co. (p) Ltd.

ENGINEERS SYNDICATE, a reliable name in the Building Industry for Quality and Purity, has unpararllel record of constructing about 6000 flats so far. Its capacity to offer the flats @ affordable rates lies in the fact that it is endowed with a well-knit organisation consisting of expert Engineers in all fields, self manufacturing units for Building Materials like Cement, Sand, Metal, Cement concrete blocks and Mosaic tiles, besides an efficient own Transport system.

ATTENTION :JANAPRIYA NIVAS, (200 Flats), near Peenya APPROVED by BDA -Construction commenced - possession of flats in one year Chikkasandra, Hesarghatta Road, The cost of Flats ranges from **Rs. 1,38,000 to Rs. 4,24,000**

BOOKING IS GOING ON FOR THE FOLLOWING VENTURES

1. **JANAPRIYA SHELTERS (350 Flats)** Junasandra Village, Just 0.5 Km. from Sarjapur Road, 16 Km from Vidhan Soudha
2. **JANAPRIYA LAKE VIEW APARTMENTS, (150 Flats)** Adjoining Madiwala Tank, Kodichikkanahalli Village, 2 Km. from Hosur Highway and Bannergatta Road, near Bommanahalli Industrial Estate, Begur Road
3. **JANAPRIYA ABODES (700 Flats)** on Mysore Road, Just behind Raja Rajeshwari Temple near BEML Layout

Working Hours on all week days 9.30 a.m. to 6.30 p.m.
You are Welcome on SUNDAYS also
Contact : © 2271381, 2210618

K. Ravinder Reddy, B.Tech, (Civil) MIE, MIGS.,
Chairman & Managing Director

ENGINEERS SYNDICATE (INDIA) PVT. LTD.

(Promoted by Janapriya Engineers Syndicate)

ADMN. OFFICE.: D. No. 468, 13th Cross, Wilson Garden, BANGALORE - 560 027.

MASTERS IN MASS HOUSING